ಶ್ರೀ ಸ್ವಾಮಿ ವಿವೇಕಾನಂದರ

# ಭಕ್ತಿಯೋಗ

ಅನುವಾದಕರು

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು



ಆಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೇನರಸೀಪುರ - 573 211

# ಈ ಪುಸ್ತಕವನ್ನು ಕುರಿತು

ಶ್ರೀವಿವೇಕಾನಂದ ಸ್ವಾಮಿಗಳವರು ನಮ್ಮ ದೇಶದಲ್ಲಿ ಖಿಲವಾಗುತ್ತಿದ್ದ ಧರ್ಮಾಭಿಮಾನವನ್ನು ಈಗಿನ ಕಾಲಕ್ಕೆ ಒಪ್ಪಾಗುವ ರೀತಿಯಲ್ಲಿ ಉದ್ಬೋದಗೊಳಿಸಿದ ಮಹಾಕೀರ್ತಿಗೆ ಪಾತ್ರರಾದ ಲೋಕಪೂಜ್ಯ ಮಹನೀಯರು. ಅವರ ಮಹಾಸಂಕಲ್ಪದ ಫಲವಾಗಿ ಭರತಖಂಡದ ಅಧ್ಯಾತ್ಮ ವೃಕ್ಷವು ಚಿಗುರಿ, ಹೂಬಿಟ್ಟು, ಭೂಮಂಡಲದ ನಾಗರೀಕ ಜನರೆಲ್ಲರೂ ಸವಿದು, ಚಪ್ಪರಿಸಿ, ತಲೆದೂಗುವಂಥ ಉತ್ತಮ ಫಲವನ್ನು ಬಿಟ್ಟಿತು. ಆಧುನಿಕರಿಗೆ ಚಿತ್ತಾಕರ್ಷಕವಾದ ರೀತಿಯಲ್ಲಿ ಹೊರಟಿರುವ ಸ್ವಾಮಿಗಳ ಅಮೋಘವಾಣಿಯಲ್ಲಿರುವ ಉತ್ತಮೋಪದೇಶಗಳು ನಮ್ಮ ದೇಶದ ಯುವಕರಿಗೆಲ್ಲ ಅಮೂಲ್ಯವಾದುದು.

ವೇದದಲ್ಲಿರುವ ಉಪಾಸನಾಜ್ಞಾನಗಳಲ್ಲಿ ಬೀಜರೂಪವಾಗಿ ಕಾಣುವ ಪರಮಾತ್ಮ ಪ್ರೇಮವನ್ನು ಭಕ್ತಿಯೆಂಬ ಹೆಸರಿನಿಂದ ಮೊಟ್ಟಮೊದಲು ಹೊರಕ್ಕೆ ಹಿಡಿದ ಗ್ರಂಥವೇ ಭಕ್ತಿಯೋಗವು. ಭಕ್ತಿಯೋಗಕ್ಕೆ ತೌರುಮನೆಯಾದ ಈ ಗೀತೆಯಲ್ಲಿ ಕರ್ಮವನ್ನು ಭಗವಂತನಿಗೆ ಅರ್ಪಣೆಮಾಡುವದೇ ಸಂಗತ್ಯಾಗಕ್ಕೂ, ಫಲತ್ಯಾಗಕ್ಕೂ ಮುಖ್ಯೋಪಾಯವೆಂಬ ಪ್ರಧಾನೋಪದೇಶವು ಕಂಡುಬರುತ್ತದೆ. ನಮ್ಮ ದೇಶದಲ್ಲಿ ಶೈವ ವೈಷ್ಣವರಿಬ್ಬರ ವಾಙ್ಮಯದಲ್ಲೂ ಭಕ್ತಿಗೆ ಹೆಚ್ಚಿನ ಸ್ಥಾನವನ್ನು ಕೊಟ್ಟಿರುತ್ತದೆಯಾದರೂ, ಭಕ್ತಿಪಂಥವು ವೈಷ್ಣವರಲ್ಲಿಯೇ ಹೆಚ್ಚಾಗಿ ಬೆಳೆದಿರುತ್ತದೆಯೆನ್ನಬೇಕು. ಉತ್ತರ ದೇಶದಲ್ಲಿಯಂತೂ ಭಕ್ತಿಯೇ ಹೆಚ್ಚಿನ ಸಾಧನವೆಂದು ನಂಬಿರುವ ಲಕ್ಷಗಟ್ಟಲೆ ಭಕ್ತಪಂಥದವರಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ, ದ್ವೈತಾದ್ವೈತ - ಈ ಎಲ್ಲಾ ಸಿದ್ಧಾಂತಗಳ ಪ್ರಭೇದಗಳೂ, ಹಲವಾರು ಸಂಪ್ರದಾಯಗಳೂ ಕಾಣಬರುತ್ತವೆ. ಶ್ರೀವಿವೇಕಾನಂದ ಸ್ವಾಮಿಗಳವರು ಈ ಮಾರ್ಗಗಳನ್ನೆಲ್ಲ ಒಟ್ಟುಗೂಡಿಸಿರುವರಲ್ಲದೆ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಉಪಾಸನಾ ಮಾರ್ಗಕ್ಕೂ ಇವುಗಳಿಗೂ ಇರುವ ಸಂಬಂಧವನ್ನೂ ಬೆಳಕಿಗೆ ಹಿಡಿದಿರುತ್ತಾರೆ.

ಅನುಭವವನ್ನೇ ಪ್ರಧಾನವಾಗಿ ಮಾಡಿರುವುದೇ ಅಲ್ಲದೆ ಅವರು ಅನುಸರಿಸಿರುವ ಒಂದಾನೊಂದು ವಿಶೇಷಕ್ರಮವೂ ಈಗಿನ ಕಾಲದವರಿಗೆ ಅವರ ಉಪದೇಶವು ಒಪ್ಪಾಗುವಂತೆ ಮಾಡಿರುತ್ತದೆ. ಪಾಶ್ಚಾತ್ಯ ದೇಶದವರಿಗೆ ಬೇಗನೆ ಅರ್ಥವಾಗುವಂತೆ ವಿವರಿಸಿರುವ (ಈಗಿನ ಜನಜೀವನವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಸರಳವಾದ ರೀತಿಯಲ್ಲಿ ಹೃದಯಂಗಮವಾಗಿರುವ) ಈ ಭಾಷಣಗಳು ಪಾಶ್ಚಾತ್ಯ ಪದ್ಧತಿಯಲ್ಲಿಯೇ ವಿದ್ಯಾಭ್ಯಾಸವನ್ನು ಹೊಂದುತ್ತಿರುವ ನಮ್ಮ ದೇಶದ ತರುಣರಿಗೆ ಸಹಜವಾಗಿಯೇ ಮನಮೆಚ್ಚಾಗುವಂತಿದೆ, ಜನಮನೋರಂಜಕವಾಗಿದೆ.

ಅಧ್ಯಾತ್ಮ ಗ್ರಂಥಾವಳಿ

ಶ್ರೀ ವಿವೇಕಾನಂದ ಸ್ವಾಮಿಗಳವರ

# ಭಕ್ತಿಯೋಗ

ಅನುವಾದಕರು

**ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು**
**(ವೈ. ಸುಬ್ಬರಾವ್)**

ಕ್ರಮಾಂಕ 225

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ - 573211
**2009**

ಸ್ವಾಮಿ ವಿವೇಕಾನಂದರ

# ಭಕ್ತಿಯೋಗ

ಅನುವಾದಕರು ವೈ. ಸುಬ್ಬರಾವ್
(ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು)

**ಪ್ರಕಾಶಕರು**

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

(ಸಾರ್ವಜನಿಕ ಧರ್ಮಾರ್ಥ ಸಂಸ್ಥೆ)(ರಿ) ಹೊಳೆನರಸೀಪುರ,

ಪ್ರಥಮ ಮುದ್ರಣ 1913

ಎರಡನೆಯ ಸಂಸ್ಕರಣ 1938

ಮೂರನೆಯ ಸಂಸ್ಕರಣ 2004

ನಾಲ್ಕನೇಯ ಮುದ್ರಣ 2009

ಪುಟಗಳು 16 + 112

**ಬೆಲೆ : 40 ರೂ.**

ಲಿಪಿ ಜೋಡಣೆ : ಅರ್ಕ ಕ್ರಿಯೇಶನ್ಸ್
171/ಬಿ-1, 12ನೇ ಕ್ರಾಸ್, 3 ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 28
ದೂರವಾಣಿ : 26766286

ಮುದ್ರಕರು : ಸ್ಟಾಂಡರ್ಡ್ ಪ್ರಿಂಟರ್ಸ್
ಶಂಕರ ಮಠದ ರಸ್ತೆ, ಬೆಂಗಳೂರು - 4
ದೂರವಾಣಿ : 26521527

# ಮುನ್ನುಡಿ

ಕರ್ನಾಟಕವು ಜಗತ್ತಿಗೆ ಆಧ್ಯಾತ್ಮಿಕತೆಯನ್ನು ಹರಡುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಸ್ವಾಮಿ ವಿವೇಕಾನಂದರ ಭವಿಷ್ಯವಾಣಿಯಾಗಿತ್ತು. ಈ ಕಾರ್ಯದಲ್ಲಿ ಪ್ರಥಮ ಹೆಜ್ಜೆಯಿಟ್ಟವರೆಂದರೆ ಅಗಾಧ ಪಾಂಡಿತ್ಯವನ್ನೂ, ಆಧ್ಯಾತ್ಮಿಕ ಜ್ಞಾನವನ್ನೂ ಪಡೆದಿದ್ದ ಸ್ವಾಮಿ ಸಚ್ಚಿದಾನಂದ ಸರಸ್ವತಿಯವರು. ೧೯೧೩ ನೇ ಇಸವಿಯಲ್ಲೇ ಸ್ವಾಮಿ ವಿವೇಕಾನಂದರ ಭಕ್ತಿಯೋಗವನ್ನು ಕನ್ನಡಕ್ಕೆ ತರ್ಜುಮೆಗೊಳಿಸಿ ಪ್ರಕಟಿಸಿದರು. ಅದಕ್ಕಿಂತ ಅವರು ಮಾಡಿರುವ ಮತ್ತೊಂದು ಸೇವೆಯೆಂದರೆ ೧೯೩೮ ರಲ್ಲಿ ಪುನರ್ಮುದ್ರಣ ಮಾಡುವಾಗ ಅವರು ಬರೆದಿರುವ ಪಾಂಡಿತ್ಯಪೂರ್ಣವಾದ ಪೀಠಿಕೆ. ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಉಪಾಸನಾ ಪದ್ಧತಿಗಳೂ ಮತ್ತು ವೇದಾಂತ ಶಾಸ್ತ್ರಗಳಲ್ಲಿರುವ ಭಕ್ತಿ ಸಾಧನೆ ಇವುಗಳು ಹೇಗೆ ಸ್ವಾಮಿ ವಿವೇಕಾನಂದರ ಭಕ್ತಿಯೋಗದಲ್ಲಿ ಅಳವಡಿಸಲ್ಪಟ್ಟಿದೆ ಎಂಬುದನ್ನು ಶಾಸ್ತ್ರಗಳ ಸಹಾಯದಿಂದ ಪ್ರತಿಪಾದಿಸಿ, ಈ ಭಕ್ತಿಯೋಗಕ್ಕೆ ಇನ್ನೂ ಮೆರಗನ್ನು ತಂದಿದ್ದಾರೆ. ಭಕ್ತಿ ಎನ್ನುವುದು ಯಾವುದೋ ಒಂದು ಯೋಗಕ್ಕೆ ಸೀಮಿತವಾದುದಲ್ಲ. ಎಲ್ಲಾ ಯೋಗಗಳಲ್ಲಿಯೂ ಭಕ್ತಿಯು ಒಂದಲ್ಲಾ ಒಂದು ರೀತಿಯಲ್ಲಿ ಪ್ರಕಾಶಗೊಳ್ಳುತ್ತಲೇ ಬಂದಿದೆ. ಆದಿ ಶಂಕರಾಚಾರ್ಯರು ವಿವೇಕ ಚೂಡಾಮಣಿಯಲ್ಲಿ ತಮ್ಮ ೩೧ ಮತ್ತು ೩೨ ನೇ ಶ್ಲೋಕಗಳಲ್ಲಿ -ಮೋಕ್ಷಕಾರಣ- ಸಾಮಗ್ರ್ಯಾಂ ಭಕ್ತಿರೇವ ಗರೀಯಸೀ - ಮತ್ತು - ಸ್ವಾತ್ಮತತ್ತ್ವಾನು ಸಂಧಾನಂ ಭಕ್ತಿರಿತ್ಯಪರೇ ಜಗುಃ - ಎಂದು ಭಕ್ತಿಗೆ ಹಿರಿಯ ಸ್ಥಾನವನ್ನು ಕೊಟ್ಟಿದ್ದಾರೆ. ಶ್ರೀ ರಾಮಕೃಷ್ಣರ ಅಭಿಪ್ರಾಯದಲ್ಲಿ ಶುದ್ಧ ಭಕ್ತಿ ಮತ್ತು ಶುದ್ಧ ಜ್ಞಾನ ಎರಡೂ ಒಂದೇ. ಅವುಗಳ ಸಾಮರಸ್ಯವನ್ನು ತಮ್ಮ ಜೀವನದಲ್ಲಿ ಸ್ವತಃ ಸಾಕ್ಷಾತ್ಕರಿಸಿ ತೋರಿಸಿದ್ದಾರೆ.

ಶ್ರೀಧರ ಸ್ವಾಮಿಗಳ ಅಭಿಪ್ರಾಯದಲ್ಲಿ ಭಗವದ್ಗೀತೆ ಒಂದು ಭಕ್ತಿ ಶಾಸ್ತ್ರ. ಅದರಲ್ಲಿ ಮೂರು ಭಾಗಗಳಿವೆ. ಮೊದಲ ಆರು ಅಧ್ಯಾಯಗಳು ಕರ್ಮಭಕ್ತಿಯನ್ನು, ಎರಡನೇ ಆರು ಅಧ್ಯಾಯಗಳು ಪ್ರೇಮಭಕ್ತಿಯನ್ನು, ಕೊನೆಯ ಆರು ಅಧ್ಯಾಯಗಳು ಜ್ಞಾನಭಕ್ತಿಯನ್ನು ಪ್ರತಿಪಾದಿಸುತ್ತವೆ ಎಂದು ಹೇಳಿದ್ದಾರೆ. ಸ್ವಾಮಿ ವಿವೇಕಾನಂದರ ಭಕ್ತಿಯೋಗ ಈ ಸರಣಿಯನ್ನೇ ಅನುಸರಿಸಿದೆ. ಸ್ವಾಮಿ ವಿವೇಕಾನಂದರು ಅನುಭಾವಿಗಳು. ಅವರ ಪ್ರವಚನ ಬರಿಯ ಪಾಂಡಿತ್ಯದ್ದಲ್ಲ, ಆತ್ಮಸಾಕ್ಷಾತ್ಕಾರದ ಅನುಭವದ ಆಧಾರದ ಮೇಲೆ ನಿಂತಿರುವುದು. ಭಕ್ತಿ ಮಾರ್ಗದಿಂದ ಒಬ್ಬ ಭಕ್ತ ಹೇಗೆ ಹಂತ ಹಂತವಾಗಿ ಗೌಣ ಭಕ್ತಿಯ ಸಾಧನೆಯಿಂದ ಮುಖ್ಯಭಕ್ತಿಯ ಸಾಕ್ಷಾತ್ಕಾರದವರೆಗೆ ಏರುತ್ತಾನೆ. ಸಾಧಕ ಹೇಗೆ ಅದರ ಸಾಕ್ಷಾತ್ಕಾರವನ್ನು ಪಡೆಯಬಹುದು ಎನ್ನುವುದನ್ನು ವೈಜ್ಞಾನಿಕ ರೀತಿಯಿಂದ, ಶಾಸ್ತ್ರಾಧಾರದಿಂದ, ಯುಕ್ತಿಯಿಂದ ಹಾಗೂ ಅನುಭವದಿಂದ ಪ್ರತಿಪಾದಿಸಿದ್ದಾರೆ. ಭಕ್ತಿಯನ್ನು

ಬರಿಯ ಬುದ್ಧಿಯಿಂದ ಅರಿಯಲಾಗುವುದಿಲ್ಲ. ಅದಕ್ಕೆ ಭಗವಂತನ ಪ್ರೀತಿಗೆ ಹೃದಯ ಮಿಡಿಯಬೇಕು. ಆಗ ಭಗವಂತನ ಅನುಗ್ರಹದಿಂದ ಪರಮಾತ್ಮನ ಸ್ವರೂಪವಾದ ಸಚ್ಚಿದಾನಂದದ ರಸ ನಾವೇ ಆಗಿದ್ದೇವೆ ಎನ್ನುವುದನ್ನು ಅರಿಯಲು ಸಾಧ್ಯವಾಗುತ್ತದೆ.

ಪರಮೇಶ್ವರನ ಕೃಪೆಯಿಂದ ಈ ಗ್ರಂಥವನ್ನು ಓದುವ ಎಲ್ಲಾ ಸದ್ಭಕ್ತರ ಮನಸ್ಸಿನಲ್ಲಿ ಇಂತಹ ಜ್ಞಾನಮೂಡಲಿ ಎಂದು ಸರ್ವಶಕ್ತನಾದ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ೬೫ ವರ್ಷಗಳ ನಂತರ ಈ ಪುಸ್ತಕ ಮತ್ತೆ ಬೆಳಕು ಕಾಣುತ್ತಿರುವುದು, ಇಂಥಾ ಗ್ರಂಥಗಳು ಪುರಾ ಅಪಿ ನವ ಎಂಬ ಉಕ್ತಿಗೆ ಸಾಕ್ಷಿಯಾಗಿದೆ. ಈ ಪುಸ್ತಕವು ಎಲ್ಲರ ಮೆಚ್ಚುಗೆಯನ್ನು ಪಡೆದು ಪ್ರಕಾಶರ ಶ್ರಮ ಸಾರ್ಥಕವಾಗಲಿ ಎಂದು ಹಾರೈಸುತ್ತೇನೆ.

ಸ್ವಾಮಿ ರಾಘವೇಶಾನಂದ
ಅಧ್ಯಕ್ಷರು, ವಿವೇಕಾನಂದ ಆಶ್ರಮ
ಅಲಸೂರು, ಬೆಂಗಳೂರು - ೦೮

## ಒಂದನೆಯ ಮುದ್ರಣದ ಪೀಠಿಕೆ

ಜಗತ್ಪ್ರಸಿದ್ಧರಾದ ಶ್ರೀ ವಿವೇಕಾನಂದಸ್ವಾಮಿಗಳವರ ಹೆಸರು ನಮ್ಮ ಕರ್ಣಾಟಕ ದೇಶದಲ್ಲಿಯೂ ಸಾಮಾನ್ಯರೂಪದಿಂದ ವಿಖ್ಯಾತವಾಗಿದ್ದರೂ ಅವರು ಮಾಡಿರುವ ಉಪಕಾರವನ್ನು ಅವರ ಗ್ರಂಥಾಸ್ವಾದನದಿಂದಲಾದರೂ ಸ್ಮರಣೆಮಾಡುತ್ತಾ ಕೃತಜ್ಞತೆಯನ್ನು ತೋರಿಸುವದಕ್ಕೆ ಅವಕಾಶವಿಲ್ಲದಿರುವದರಿಂದ ಅವರ ಮುಖ್ಯಗ್ರಂಥಗಳಲ್ಲಿ ಕೆಲವನ್ನಾದರೂ ಕನ್ನಡಕ್ಕೆ ಪರಿವರ್ತಿಸಬೇಕೆಂದು ನಾನು ಆ ಮಹೋಪಕರ್ತೃಗಳ ಹೃದಯದ ಪ್ರೇಮ ಪ್ರಗಾಢತೆಯನ್ನು ಸೂಚಿಸುವ ಈ ಭಕ್ತಿಯೋಗವೆಂಬ ಗ್ರಂಥವನ್ನೇ ಮೊದಲು ಯಥಾಮತಿಯಾಗಿ ಕನ್ನಡಿಸಿದೆನು.

ಭಕ್ತಿಮಾತ್ರದಿಂದ ಪ್ರೇರಿತನಾಗಿ ನಾನು ಬರೆದಿರುವ ಈ ಪರಿವರ್ತನದಲ್ಲಿ ಮೂಲದ ರಸವೆಲ್ಲವೂ ಬರುವದು ಸಾಧ್ಯವಲ್ಲವೆಂದು ನಾನು ತಿಳಿದೇ ಇರುವದರಿಂದ ಇಂಗ್ಲಿಷು ಭಾಷಾಪರಿಚಯವಿಲ್ಲದವರಿಗೆ ಸ್ವಾಮಿಗಳವರ ಮಹಾಯೋಗ್ಯತೆಯ ಪರಿಚಯವು ಕೊಂಚ ಮಟ್ಟಿಗಾದರೂ ಈ ಗ್ರಂಥದಿಂದಾದರೆ ಅದೇ ಪ್ರಯತ್ನಸಾರ್ಥಕ್ಯವೆಂದು ಎಣಿಸುವೆನು.

ಕ್ರಿ. ಶ. 1913. ಗ್ರಂಥಕರ್ತ

# ಎರಡನೆಯ ಸಂಸ್ಕರಣದ ಪೀಠಿಕೆ

## 1

ಶ್ರೀ ವಿವೇಕಾನಂದಸ್ವಾಮಿಗಳವರ ಭಕ್ತಿಯೋಗವನ್ನು ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ (1913ರಲ್ಲಿ) ಕನ್ನಡಿಸಿದ್ದೆನು. ಆ ಅನುವಾದವನ್ನು ಬರೆಯುವಾಗ ನಾನು ಅಲ್ಲಲ್ಲಿ ಸಂಚರಿಸುತ್ತಿದ್ದ ಕಾರಣ ಪ್ರಮಾಣಗ್ರಂಥಗಳು ನನ್ನ ಹತ್ತಿರದಲ್ಲಿರಲಿಲ್ಲ. ಅದನ್ನು ''ಪರಮಾರ್ಥ''ವೆಂಬ ತಮ್ಮ ಮಾಸಪತ್ರಿಕೆಯಲ್ಲಿ ಪ್ರಕಾಶಪಡಿಸಿದ ಶ್ರೀಯುತ ಹೊಸಕೆರೆಯ ಚಿದಂಬರಯ್ಯನವರು ಮುದ್ರಣಸ್ಥಳಕ್ಕೆ ಬಹುದೂರದಲ್ಲಿದ್ದರು. ಈ ಎರಡು ಕಾರಣಗಳಿಂದ ಕೆಲವು ಅಚ್ಚಿನ ತಪ್ಪುಗಳೂ ಕೆಲವು ಅನುವಾದದ ಕುಂದುಕೊರತೆಗಳೂ ಗ್ರಂಥದಲ್ಲಿ ಸೇರಿಕೊಂಡಿದ್ದವು. ಆದರೂ ಅಪರಿಪೂರ್ಣ ಸ್ಥಿತಿಯಲ್ಲಿದ್ದ ಆ ಅನುವಾದವನ್ನೇ ವಾಚಕರು ಸ್ವಾಮಿಗಳಲ್ಲಿ ತಮಗಿದ್ದ ನೈಜವಾದ ಭಕ್ತಿಯಿಂದ ಓದಿ ಸಂತೋಷಪಟ್ಟರು. ಈಚೆಗೆ ಗ್ರಂಥದ ಪ್ರತಿಗಳೆಲ್ಲವೂ ಮುಗಿದುಹೋಗಿ ಎಷ್ಟೋ ವರ್ಷಗಳಾದ ಮೇಲೆ ಅನೇಕರು ತಮಗೆ ಆ ಪುಸ್ತಕವನ್ನು ಕಳುಹಿಸಬೇಕೆಂದು ಪುಸ್ತಕವ್ಯಾಪಾರಿಗಳಿಗೆ ಮತ್ತೆ ಮತ್ತೆ ಬರೆಯುತ್ತಿದ್ದಾರೆಂದು ತಿಳಿದುಬಂತು. ಆದ್ದರಿಂದ ಈ ಎರಡನೆಯ ಮುದ್ರಣವು ಅವಶ್ಯವೆಂದು ತೋರಿತು. ಅನುವಾದವನ್ನು ಆದಷ್ಟು ಸಂಸ್ಕರಿಸಿ ಹೊರಕ್ಕೆ ತರುವದಕ್ಕೆ ಈ ಸಂದರ್ಭವನ್ನು ಉಪಯೋಗಿಸಿಕೊಂಡಿರುತ್ತೇನೆ.

ಈಗಿನ ಅನುವಾದದಲ್ಲಿ ಹಿಂದಿನದರ ಎಷ್ಟೋ ವಚನವ್ಯಕ್ತಿಗಳು ಕಾಣಬರುವವಾದರೂ ಇಲ್ಲಿ ಅದನ್ನೇ ಪಡಿಯಚ್ಚಾಗಿ ಮಾಡಿಕೊಂಡಿರುವದಿಲ್ಲ ; ಇದು ಬಹುಭಾಗದಲ್ಲಿ ಮತ್ತೊಮ್ಮೆ ಪರಿಶೀಲಿಸಿ ಮಾಡಿದ ಪರಿವರ್ತನೆಯೇ ಆಗಿರುತ್ತದೆ. ಈ **ಸಂಸ್ಕರಣ**ದಲ್ಲಿ ವಾಚಕರ ಕಣ್ಣು ಮುಂದೆ ನಿಲ್ಲುವ **ವಿಶೇಷ**ಗಳೇನೆಂದರೆ :

(೧) ಸ್ವಾಮಿಗಳವರ ಅಭಿಪ್ರಾಯವು ಹೆಚ್ಚು ಸ್ಪಷ್ಟವಾಗಿ ಗೊತ್ತಾಗುವಂತೆ ಆಯಾ ಅಧ್ಯಾಯದ ವಿಷಯಗಳನ್ನು ಹೊಸ ರೀತಿಯಲ್ಲಿ ಮಹಾವಾಕ್ಯಗಳಾಗಿ ವಿಂಗಡಿಸಿ ಅಲ್ಲಲ್ಲಿ ಕಾಣಬರುವ **ಸಂಕೇತನಾಮ**ಗಳನ್ನೂ **ಮುಖ್ಯಶಬ್ದ**ಗಳನ್ನೂ **ಕಪ್ಪಕ್ಷರ**ದಲ್ಲಿ ಅಚ್ಚು ಮಾಡಿಸಿರುವದು.

(2) ಸ್ವಾಮಿಗಳು ಉದಾಹರಿಸಿರುವ ಪ್ರಮಾಣವಚನಗಳನ್ನು ಮೂಲ ಗ್ರಂಥಗಳಿಗೆ ಹೋಲಿಸಿ ಮೊದಲಿಗಿಂತಲೂ **ಶುದ್ಧವಾಗಿ ಸರಳವಾದ ಭಾಷೆಯಲ್ಲಿ** ಕನ್ನಡಿಸಿರುವದು.

(3) ಪ್ರಮಾಣವಚನಗಳ **ಅನುವಾದಭಾಗ**ಗಳಿಗೆ ವಿಶೇಷಕಚಿಹ್ನೆಯನ್ನು ಕೊಟ್ಟು **ಮೂಲ ವಚನ**ಗಳನ್ನು ಸಂಗ್ರಹಿಸಿ ಸ್ಥಾನಸಮೇತವಾಗಿ ಪರಿಶಿಷ್ಟವಾಗಿ ಕೊಟ್ಟಿರುವದು.

(4) ಪುಟಗಳ ಅಡಿಯಲ್ಲಿರುವ **ಟಿಪ್ಪಣಿ**ಗಳನ್ನು ಪುನರ್ವಿಮರ್ಶೆಯಿಂದ ಬರೆದಿರುವದು.

ಸ್ವಾಮಿಗಳ ಅನುವಾದಕ್ಕೂ, ಮೂಲಗ್ರಂಥಕ್ಕೂ ಏನಾದರೂ ಹೆಚ್ಚು ಕಡಿಮೆಯು ಕಂಡು ಬಂದರೆ ಅದನ್ನೂ **ಸ್ವಾಮಿಗಳವರ ಅಭಿಪ್ರಾಯ** ವಿಶೇಷಗಳ **ವಿಮರ್ಶೆ**ಯನ್ನೂ ಸಂಕ್ಷೇಪವಾಗಿ ಟಿಪ್ಪಣಿಗಳಲ್ಲಿ ಸೂಚಿಸಿರುವದು.

(5)ಗ್ರಂಥದ ಕೊನೆಯಲ್ಲಿ **ಪ್ರಧಾನಶಬ್ದಗಳ ಅಕ್ಷರಾನುಕ್ರಮಣಿಕೆ**ಯೊಂದನ್ನು ಕೊಟ್ಟಿರುವದು.

(6) **ಹೆಚ್ಚುವಿಚಾರ**ಗಳಿಂದೊಡಗೂಡಿದ **ಪೀಠಿಕೆ**ಯೊಂದನ್ನು ಸೇರಿಸಿರುವದು.

(7) ಪ್ರಾರಂಭದಲ್ಲಿ **ಸ್ವಾಮಿಗಳ ಭಾವಚಿತ್ರ**ವನ್ನು ಜೋಡಿಸಿರುವದು.

## 2

ಶ್ರೀ ವಿವೇಕಾನಂದಸ್ವಾಮಿಗಳವರು ನಮ್ಮ ದೇಶದಲ್ಲಿ ಖಿಲವಾಗುತ್ತಿದ್ದ ಧರ್ಮಾಭಿಮಾನ ವನ್ನು ಈಗಿನ ಕಾಲಕ್ಕೆ ಒಪ್ಪಾಗುವ ರೀತಿಯಲ್ಲಿ ಉದ್ಬೋಧಗೊಳಿಸಿದ ಮಹಾಕೀರ್ತಿಗೆ ಪಾತ್ರರಾದ ಲೋಕಪೂಜ್ಯರಾದ ಮಹನೀಯರು. ಅವರ ಮಹಾಸಂಕಲ್ಪದ ಫಲವಾಗಿ ಭರತ ಖಂಡದ ಅಧ್ಯಾತ್ಮವೃಕ್ಷವು ಉತ್ಕೃಷ್ಟವಾಗಿ ಚಿಗುರಿ, ಹೂಬಿಟ್ಟು ಭೂಮಂಡಲದ ನಾಗರಿಕ ಜನರೆಲ್ಲರೂ ಸವಿದು, ಚಪ್ಪರಿಸಿ, ತಲೆದೂಗುವಂಥ ಉತ್ತಮ ಫಲವನ್ನು ಬಿಟ್ಟಿತು.

ಹೀಗಿದ್ದರೂ ಕಾಲಗತಿಯಿಂದ ನಮ್ಮ ತರುಣರಿಗೆ ಮತ್ತೊಮ್ಮೆ ಧಾರ್ಮಿಕ ವಿಚಾರಗಳಲ್ಲಿ ಔದಾಸೀನ್ಯವು ಉಂಟಾಗುತ್ತಿರುವದೆಂದು ಹಿರಿಯರು ಶಂಕೆಗೊಳ್ಳುತ್ತಿದ್ದಾರೆ. ಈ ಶಂಕೆಯಲ್ಲಿ ನಿಜದಂಶವು ಎಷ್ಟರಮಟ್ಟಿಗೆ ಇರುವದೆಂಬುದು ಪ್ರಕೃತವಲ್ಲ ; ಆಧುನಿಕರಿಗೆ ಚಿತ್ತಾಕರ್ಷಕ ವಾಗುವ ರೀತಿಯಲ್ಲಿ ಹೊರಟಿರುವ ಸ್ವಾಮಿಗಳ ಅಮೋಘವಾಣಿಯಲ್ಲಿರುವ ಗ್ರಂಥಗಳನ್ನು ವಿಮರ್ಶಕದೃಷ್ಟಿಯಿಂದ ಸಂಸ್ಕರಿಸಿ ಅವುಗಳಲ್ಲಿ ಅಮೂಲ್ಯವೆಂದು ಸಿದ್ಧವಾಗುವ ಉತ್ತಮೋ ಪದೇಶಗಳನ್ನು ನಮ್ಮ ದೇಶದ ಯುವಕರಿಗೆಲ್ಲ ಮನದಟ್ಟಾಗುವಂತೆ ದೇಶಭಾಷೆಗಳಿಗೂ ತಿರುಗಿಸುವದು ದೇಶಾಭಿಮಾನಿಗಳ ಕರ್ತವ್ಯವೆಂಬುದು ಸರ್ವಸಮ್ಮತವಾಗಿರುತ್ತದೆ. ಈ ದೃಷ್ಟಿಯಿಂದ ನೋಡುವವರ ಸೌಕರ್ಯಕ್ಕಾಗಿ ಸ್ವಾಮಿಗಳ **'ಭಕ್ತಿಯೋಗ'**ದಲ್ಲಿರುವ ಚರ್ಚಾ ಸ್ಪದವಾದ ಕೆಲವಭಿಪ್ರಾಯಗಳನ್ನು ಕುರಿತು ಈ ಮುನ್ನುಡಿಯಲ್ಲಿ ಒಂದೆರಡು ಮಾತುಗಳನ್ನು ಬಿನ್ನವಿಸಿಕೊಳ್ಳುವೆನು.

## 3

ಭಕ್ತಿಯೋಗವು ನಮ್ಮ ದೇಶದ ಧರ್ಮದ ಇತಿಹಾಸದಲ್ಲಿ ಯಾವಾಗ, ಹೇಗೆ ಹುಟ್ಟಿ ಯಾವ ಕ್ರಮದಿಂದ ಈಗಿನ ರೂಪವನ್ನು ತಳೆಯಿತೆಂಬ ಬಗ್ಗೆ ಭಿನ್ನಾಭಿಪ್ರಾಯಗಳಿರುವವು. ನನ್ನ ಅಲ್ಪಮತಿಗೆ

ತೋರುವದೇನೆಂದರೆ ವೇದದಲ್ಲಿರುವ ಉಪಾಸನಾಜ್ಞಾನಗಳಲ್ಲಿ ಬೀಜ ರೂಪವಾಗಿ ಕಾಣುವ ಪರಮಾತ್ಮಪ್ರೇಮವನ್ನು ಭಕ್ತಿಯೆಂಬ ಹೆಸರಿನಿಂದ ಮೊಟ್ಟಮೊದಲು ಹೊರಕ್ಕೆ ಹಿಡಿದ ಗ್ರಂಥವೇ ಭಗವದ್ಗೀತೆಯು. ಭಕ್ತಿಯೋಗಕ್ಕೆ ತೌರುಮನೆಯಾದ[1] ಈ ಗೀತೆಯಲ್ಲಿ ಕರ್ಮವನ್ನು ಭಗವಂತನಿಗೆ ಅರ್ಪಣೆಮಾಡುವದೇ ಸಂಗತ್ಯಾಗಕ್ಕೂ ಫಲತ್ಯಾಗಕ್ಕೂ ಮುಖ್ಯೋಪಾಯವೆಂಬ ಪ್ರಧಾನೋಪದೇಶವು ಕಂಡುಬರುತ್ತದೆ ; ಅದಕ್ಕೆ ಸಂಬಂಧಪಟ್ಟಂತೆ ಭಗವತ್ಸ್ವರೂಪ, ಆತನ ವಿಭೂತಿಗಳು, ಜೀವರಿಗೂ ಭಗವಂತನಿಗೂ ಇರುವ ಸಂಬಂಧ, ಭಕ್ತಿಯ ಮೇಲ್ಮೆ ಜ್ಞಾನನಿಷ್ಠೆಯೆಂಬ ಪರಭಕ್ತಿ - ಇವೆಲ್ಲವೂ ಗೀತೆಯಲ್ಲಿ ಕಂಡುಬರುತ್ತವೆ. ಈ ಗೀತಾರ್ಥವಾದ ಭಕ್ತಿವಾದವು 'ಅನುಗೀತೆ', 'ನಾರಾಯಣೀಯ', 'ಭಾಗವತ', 'ಬ್ರಹ್ಮವೈವರ್ತ' - ಇವುಗಳಲ್ಲಿ ಹೆಚ್ಚು ಪುಷ್ಟಿಯನ್ನು ಹೊಂದಿರುತ್ತದೆ. ಈಚೆಗೆ **ನಾರದಪಂಚರಾತ್ರ,** ನಾರದಭಕ್ತಿಸೂತ್ರ, ಶಾಂಡಿಲ್ಯ ಸೂತ್ರ -ಇವುಗಳಲ್ಲಿ ಕ್ರಮಪಟ್ಟಿರುತ್ತದೆ.

ನಮ್ಮ ದೇಶದಲ್ಲಿ ಶೈವವೈಷ್ಣವರಿಬ್ಬರ ವಾಙ್ಮಯದಲ್ಲಿಯೂ ಭಕ್ತಿಗೆ ಹೆಚ್ಚಿನ ಸ್ಥಾನವನ್ನೇ ಕೊಟ್ಟಿರುತ್ತದೆಯಾದರೂ ಭಕ್ತಿಪಂಥವು ವೈಷ್ಣವರಲ್ಲಿಯೇ ಹೆಚ್ಚಾಗಿ ಬೆಳೆದಿರುತ್ತದೆಯೆನ್ನಬೇಕು. ಭಕ್ತಿಯು ಜ್ಞಾನಕ್ಕಿಂತ ಹೆಚ್ಚಿನ ಸಾಧನವೆಂಬ ವಾದವನ್ನು ವೇದಾಂತದಲ್ಲಿಯೂ ಸೇರಿಸಿದ ಶ್ರೀರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು-ಇವರ ಸಂಪ್ರದಾಯದವರು ಈಗಲೂ ದಕ್ಷಿಣದೇಶದಲ್ಲಿ ಬಹಳ ಜನರಿರುತ್ತಾರೆ. ಉತ್ತರ ದೇಶದಲ್ಲಿಯಂತೂ ಭಕ್ತಿಯು ಕರ್ಮಯೋಗಜ್ಞಾನಗಳೆಲ್ಲಕ್ಕಿಂತಲೂ ಹೆಚ್ಚಿನ ಸಾಧನವೆಂದು ನಂಬಿರುವ ವೈಷ್ಣವರು ಲಕ್ಷಗಟ್ಟಲೆಯಾಗಿ ಇರುತ್ತಾರೆ. ಒಂದುಬಗೆಯಿಂದ ನೋಡಿದರೆ ಶ್ರೀರಾಮಾನುಜಾಚಾರ್ಯ ಶ್ರೀಮಧ್ವಾಚಾರ್ಯ-ಇವರ ಮತಗಳೇ ಉತ್ತರದೇಶದ ವೈಷ್ಣವಸಂಪ್ರದಾಯಗಳಿಗೂ ಉತ್ತೇಜಕವೆಂದು ಹೇಳಬೇಕಾಗುವದಾದರೂ ಅಲ್ಲಿ ವೈಷ್ಣವ ಸಂಪ್ರದಾಯವು ತನ್ನದೇ ಒಂದು ವೈಶಿಷ್ಟ್ಯವನ್ನು ಹೊಂದಿ ಜನಸಾಮಾನ್ಯವನ್ನು ತಮ್ಮ ಸೆಳೆತಕ್ಕೆ ಸಿಕ್ಕಿಸಿಕೊಂಡುಬಿಟ್ಟಿರುವದು. ಅಲ್ಲಿಯ ಭಕ್ತಿಪಂಥದವರಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ, ದ್ವೈತಾದ್ವೈತ - ಈ ಎಲ್ಲಾ ಸಿದ್ಧಾಂತಗಳ ಪ್ರಭೇದಗಳೂ ಕಂಡುಬರುತ್ತವೆ; ಕೆಲ ಕೆಲವು ಕಡೆಗಳಲ್ಲಿ ಇವು ಒಂದರಲ್ಲೊಂದು ಹೆಣೆದುಕೊಂಡು ಇರುವದೂ ಉಂಟು. ವಲ್ಲಭ, ರಾಮದಾಸ, ತುಕಾರಾಮ, ಚೈತನ್ಯ - ಮುಂತಾದ ಸಂಪ್ರದಾಯಗಳೂ ತಮ್ಮ ತಮ್ಮ ಸಿದ್ಧಾಂತವನ್ನು ತಮ್ಮ ದೃಷ್ಟಿಕೋನದಿಂದಲೇ ವಿವರಿಸಿರುವವಾದರೂ ಅವುಗಳಲ್ಲಿ ಉಪದೇಶಿಸಿರುವ ಭಕ್ತಿಯು ಪ್ರೇಮಯೋಗವೆಂಬ ಅಸಾಧಾರಣವಾದ ಹೆಸರನ್ನು ಧರಿಸುವದಕ್ಕೆ ತಕ್ಕದ್ದಾಗಿರುವದು ; ಏಕೆಂದರೆ ಅಲ್ಲಿರುವ ಭಕ್ತಿಯು ದಕ್ಷಿಣ ದೇಶದಲ್ಲಿರುವಂತೆ ವಿಧಿಯ ನಿಯಮಕ್ಕೆ ಅಷ್ಟು ಕಟ್ಟುಬಿದ್ದಿರುವದಿಲ್ಲ; ಸದ್ಯಕ್ಕೆ **ಭಜನೆ, ನಾಮಕೀರ್ತನೆ**-ಇವೆರಡೇ ಆ ಭಕ್ತಿಯ ಹೊರಗಿನ ರೂಪಗಳಾಗಿ ತೋರುತ್ತಲಿವೆ.

---

1. ಈ ವಿಷಯದಲ್ಲಿ ಹೆಚ್ಚಾಗಿ ತಿಳಿಯಬೇಕೆಂಬ ಕುತೂಹಲಿಗಳು ಇದು ಅ. ಪ್ರ. ಕಾ. ದಲ್ಲಿ ದೊರಕುವ 'ಭಗವದ್ಗೀತಾರ್ಥಸರ್ವಸ್ವ'ದಲ್ಲಿ ವಿಸ್ತಾರವಾಗಿ ಮಾಡಿರುವ **ಭಕ್ತಿಯೋಗ**ವಿಚಾರದ ಚರ್ಚೆಯನ್ನು ಓದಬೇಕು.

ಶ್ರೀವಿವೇಕಾನಂದಸ್ವಾಮಿಗಳವರು ಭಕ್ತಿಪಂಥದವರ ಮಾರ್ಗಗಳನ್ನೆಲ್ಲ ಒಟ್ಟುಗೂಡಿಸಿರುವ ರಲ್ಲದೆ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ **ಉಪಾಸನಾ ಮಾರ್ಗ**ಕ್ಕೂ ಇವುಗಳಿಗೂ ಇರುವ ಸಂಬಂಧವನ್ನೂ ಬೆಳಕಿಗೆ ಹಿಡಿದಿರುತ್ತಾರೆ. ವೇದಾಂತಕ್ಕೂ ಭಕ್ತಿಯೋಗಕ್ಕೂ ಇರುವ ಸಂಬಂಧವು ಎಷ್ಟು ನಿಕಟವಾಗಿರುವದೆಂಬುದು ಇದರಿಂದ ವ್ಯಕ್ತವಾಗುವಂತಾಗಿದೆ. ಭಕ್ತಿಮಾರ್ಗದವರು ಉಪಯೋಗಿಸಿರುವ **ಪರಿಭಾಷೆ**ಯನ್ನೇ ಸ್ವಾಮಿಗಳೂ ಉಪಯೋಗಿ ಸಿರುತ್ತಾರಾದರೂ ಆಯಾ ಪದಗಳಿಗೆ ಅವರು ಕೆಲಕೆಲವು ಸಂದರ್ಭಗಳಲ್ಲಿ ತಮ್ಮದೇ ಒಂದು ಅರ್ಥವನ್ನು ಕೊಟ್ಟಿರುತ್ತಾರೆ. ಇದನ್ನು ಅಲ್ಲಲ್ಲಿ ಅಡಿಯ ಟಿಪ್ಪಣಿಗಳಿಂದ ಸ್ಪಷ್ಟಗೊಳಿಸಿರುತ್ತೇನೆ. ಬೇರೆ ಬೇರೆಯ ಭಕ್ತಿಪಂಥದವರು ತಮ್ಮ ತಮ್ಮ ಮತಕ್ಕೆ ಒಂದೊಂದು ಬೇಲಿಯನ್ನು ಹಾಕಿಕೊಳ್ಳುವದಕ್ಕೆ ಪ್ರಯತ್ನಿಸಿದ್ದರೂ ಪ್ರೇಮವೆಂಬುದು ಮಾನವರೆಲ್ಲರಿಗೂ ಸಮಾನವಾದ ದ್ದಾದ್ದರಿಂದ ಭಕ್ತಿಯನ್ನು ಯಾರೊಬ್ಬರೂ ತಮ್ಮದೇ ಎಂದು ಮೀಸಲಾಗಿರಿಸಿಕೊಳ್ಳುವದಕ್ಕೆ ಬರುವಹಾಗಿಲ್ಲ ; ಮಾನವಹೃದಯಕ್ಕೆ ಸಹಜವಾಗಿರುವ ಈಶ್ವರಪ್ರೇಮವನ್ನೇ ಎಲ್ಲರೂ ಒಂದೊಂದು ರೀತಿಯಲ್ಲಿ ವ್ಯಕ್ತಗೊಳಿಸಿರುತ್ತಾರೆ. ಇದಲ್ಲದೆ ಈ ಪಂಥಗಳು ಮಿಕ್ಕವರನ್ನು ಬಿಟ್ಟು ತಾವುತಾವೇ ಬೇರೆಬೇರೆಯಾಗಿ ನಿಲ್ಲುವ ಹಾಗೂ ಇಲ್ಲ. ದ್ವೈತ, ವಿಶಿಷ್ಟಾದ್ವೈತ, ದ್ವೈತಾದ್ವೈತ, ಅದ್ವೈತ - ಎಂಬ ಸಿದ್ಧಾಂತಗಳು ಕೂಡ ಒಂದಕ್ಕೊಂದು ಹೊರಚ್ಚಾದವುಗಳಲ್ಲ; ಒಂದೊಂದು ಅಂತಸ್ತಿನಲ್ಲಿ ತೋರುವ ತತ್ತ್ವಭಾಗದ ವರ್ಣನೆಯನ್ನು ಒಂದೊಂದು ಸಿದ್ಧಾಂತವು ತೋರ್ಪಡಿಸಿರುತ್ತದೆ. ಈ ಸರ್ವಸಮನ್ವಯವನ್ನು ಸ್ವಾಮಿಗಳವರು ತಮ್ಮ ಭಾಷಣಗಳಲ್ಲೆಲ್ಲ ಆಗಾಗ್ಗೆ ಮಾಡಿಕೊಳ್ಳುತ್ತಾ ಹೋಗಿರುತ್ತಾರೆ. ಈ **ಸಮನ್ವಯಮಾರ್ಗ**ದ ಕೆಲವು ಹೆಗ್ಗುರುತು ಗಳನ್ನು ಈ **ಭಕ್ತಿಯೋಗ**ದಲ್ಲಿಯೂ ವಾಚಕರು ಕಾಣಬಹುದಾಗಿರುತ್ತದೆ.

## 4

ಅನುಭವವನ್ನೇ ಪ್ರಧಾನವಾಗಿಟ್ಟುಕೊಂಡು ವಿಷಯವನ್ನು ಪ್ರತಿಪಾದನೆ ಮಾಡಿರುವದೇ ಅಲ್ಲದೆ ಆ ಪ್ರತಿಪಾದನೆಯಲ್ಲಿ ಸ್ವಾಮಿಗಳವರು ಅನುಸರಿಸಿರುವ ಒಂದಾನೊಂದು **ವಿಶೇಷಕ್ರಮ**ವೂ ಈಗಿನ ಕಾಲದವರಿಗೆ ಅವರ ಉಪದೇಶವು ಒಪ್ಪಾಗುವಂತೆ ಮಾಡಿರುತ್ತದೆ. ಈ ಗ್ರಂಥದಲ್ಲಿರುವ ಬಹುಭಾಗವು ಸ್ವಾಮಿಗಳು ಪಶ್ಚಿಮದೇಶದ ಜನರಿಗಾಗಿಯೇ ಮೊದಲು ಏರ್ಪಡಿಸಿದ್ದ ಭಾಷಣಗಳಿಂದ ಆರಿಸಿರುವದಾಗಿದೆ. ಈ ಕಾರಣದಿಂದ ಸ್ವಾಮಿಗಳವರು ಆ ದೇಶದ ಜನಗಳಿಗೆ ಬೇಗನೆ ಅರ್ಥವಾಗುವ ಪದ್ಧತಿಯಿಂದ ವಿಷಯಪ್ರತಿಪಾದನೆಯನ್ನು ಮಾಡಿರುತ್ತಾರೆ. ಪಾಶ್ಚಾತ್ಯ ಪದ್ಧತಿಯಲ್ಲಿಯೇ ವಿದ್ಯಾಭ್ಯಾಸವನ್ನು ಹೊಂದುತ್ತಿರುವ ನಮ್ಮ ದೇಶದ ತರುಣರಿಗೆ ಈ ಪದ್ಧತಿಯು ಸಹಜವಾಗಿಯೇ ಮನಮೆಚ್ಚುಗುವಂತಾಗಿದೆ. ಇದಲ್ಲದೆ

ಸಂಪ್ರದಾಯಗ್ರಂಥಗಳು ಬಹು ಜನರಿಗೆ ಅರ್ಥವಾಗದ ಭಾಷೆಯಲ್ಲಿದ್ದು ಅತಿ ಪ್ರಾಚೀನ ಕಾಲದ ಜೀವನಪದ್ಧತಿಯ ದೃಷ್ಟಾಂತಗಳನ್ನೇ ಉಪಯೋಗಿಸುತ್ತಿದ್ದವು. ಇದಕ್ಕೆ ಅತ್ಯಂತ ವಿರುದ್ಧವಾಗಿ ಸ್ವಾಮಿಗಳು ಈಗಿನ ಜನಜೀವನವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಸರಳವಾದ ರೀತಿಯಲ್ಲಿ ಹೃದಯಂಗಮವಾಗಿ ವಿವರಿಸಿರುವ ವಿಷಯಗಳು ಜನಮನೋರಂಜಕವಾಗಿ ಪರಿಣಮಿಸಿದರೆ ಆಶ್ಚರ್ಯವೇನು ?

ಸನಾತನಧರ್ಮದ ಮುಖ್ಯಸಿದ್ಧಾಂತಗಳಂತೆಯೇ ಭರತಖಂಡದವರ ವಿಚಾರಕ್ರಮದ ಅಸಾಧಾರಣಪದ್ಧತಿಯನ್ನೂ ತಿಳಿಯಬೇಕೆನ್ನುವವರ ಉಪಯೋಗಕ್ಕಾಗಿ ಸ್ವಾಮಿಗಳ ಬರವಣಿಗೆಯಲ್ಲಿ ಯಾವಯಾವ ವಿಚಾರವು ಸಾಂಪ್ರದಾಯಿಕ ರೀತಿಗಿಂತ ಭಿನ್ನವಾಗಿ ಕಂಡು ಬರುವುದೋ ಅದೆಲ್ಲವನ್ನೂ ಸೂಚಿಸುತ್ತಾ ಹೋಗುವದು ಯುಕ್ತವೆಂದೆಣಿಸಿ ಈ ಸಂಸ್ಕರಣದಲ್ಲಿ ಅಲ್ಲಲ್ಲಿಯೇ ಈ ವಿಷಯದ ಟಿಪ್ಪಣಿಗಳನ್ನು ಸೇರಿಸಿರುತ್ತೇನೆ. ಇದೇ ಉದ್ದೇಶದಿಂದ ಗ್ರಂಥದ ವಿಷಯ ಪ್ರತಿಪಾದನೆಯ ಒಂದೆರಡು ಪ್ರಧಾನ ವಿಭಾಗಗಳನ್ನು ಕುರಿತು ನನ್ನ ಸ್ವಂತ ಅಭಿಪ್ರಾಯಗಳನ್ನು ಇಲ್ಲಿ ವಾಚಕರ ಮುಂದಿಡುವ ಸ್ವಾತಂತ್ರ್ಯವನ್ನೂ ತೆಗೆದುಕೊಂಡಿರುತ್ತೇನೆ. ಇಂಥ ವಿಭಾಗಗಳು ಯಾವವೆಂದರೆ :

(1) **ಭಕ್ತಿಜ್ಞಾನಗಳ ಸಂಬಂಧ** : ಭಕ್ತಿಮಾರ್ಗದವರಿಗೂ ಜ್ಞಾನಮಾರ್ಗದವರಿಗೂ ಈ ಎರಡರಲ್ಲಿ ಯಾವದು ಹೆಚ್ಚಿನ ಸಾಧನವೆಂಬ ಬಗ್ಗೆ ಭಿನ್ನಾಭಿಪ್ರಾಯವಿರುತ್ತದೆ. ಅದರಲ್ಲಿಯೂ ಉತ್ತರದೇಶದ ಭಕ್ತಿಪಂಥಗಳವರು ಜ್ಞಾನವನ್ನು ಸ್ವಲ್ಪ ಕೆಳಕ್ಕೆ ತಳ್ಳುವದು ಈಗೀಗ ಹೆಚ್ಚು ವಾಡಿಕೆಯಾಗಿಬಿಟ್ಟಿರುತ್ತದೆ. ಸ್ವಾಮಿಗಳು ಈ ತಾರತಮ್ಯವನ್ನು ಒಪ್ಪುವದಿಲ್ಲವಾದರೂ ಜ್ಞಾನವಾದಿಗಳು ಭಕ್ತಿಯನ್ನು ಕೇವಲ ಸಾಧನವೆಂದು ಮಾತ್ರ ಹೇಳುತ್ತಾರೆಂದೂ (ಪು. 5), ಜ್ಞಾನಭಾಷ್ಯಕಾರರು ಬ್ರಹ್ಮಸೂತ್ರಗಳನ್ನು ಅನವಶ್ಯವಾಗಿ ಶುಷ್ಕಜ್ಞಾನಪರವಾಗಿಯೇ ಅರ್ಥ ಮಾಡುವುದಕ್ಕೆ ಹವಣಿಸಿರುತ್ತಾರೆಂದೂ (ಪು.2) ಹೇಳಿರುತ್ತಾರೆ. ಈ ಅಭಿಪ್ರಾಯವು ಈಗಿನ ಕೆಲವರು ಜ್ಞಾನವಾದಿಗಳಿಗೆ ಅನ್ವಯಿಸಬಹುದು ; ಆದರೆ ಶ್ರೀ ಶಂಕರಾಚಾರ್ಯರವರಿಗೆ ಇದನ್ನು ಅನ್ವಯಿಸಲಾಗದೆಂದು ನನ್ನ ಸವಿನಯ ಸೂಚನೆ. ಏಕೆಂದರೆ ಆಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ (18-54) ಜ್ಞಾನನಿಷ್ಠೆಯನ್ನೇ ಪರಭಕ್ತಿಯೆಂದು ಕರೆದಿರುತ್ತಾರೆನ್ನುವದು ನಿರ್ವಿವಾದವಾಗಿರುತ್ತದೆ. ಉಪನಿಷತ್ತುಗಳಲ್ಲಿ ಉಪಾಸನಾವಾಕ್ಯಗಳೆಂದೂ ಬ್ರಹ್ಮಜ್ಞಾನ ವಾಕ್ಯಗಳೆಂದೂ ಎರಡು ಬಗೆಯ ವಾಕ್ಯಗಳಿರುವವೆಂತಲೂ ಈ ಎರಡು ಬಗೆಯ ವಾಕ್ಯಗಳಿಗೂ ಮಹಾತಾತ್ಪರ್ಯವು ಮೋಕ್ಷವೇ ಆದರೂ ಅವುಗಳ ಒಳತಾತ್ಪರ್ಯವನ್ನು ಬೇರೆ ಬೇರೆಯೆಂದೇ ಕಲ್ಪಿಸಬೇಕೆಂತಲೂ ಆಚಾರ್ಯರು ತಮ್ಮ ಬ್ರಹ್ಮಸೂತ್ರ (3-2-21) ಭಾಷ್ಯದಲ್ಲಿ ಕಂಠೋಕ್ತವಾಗಿ ಹೇಳಿರುತ್ತಾರೆ. ಯಾವದೊಂದು ನಿಮಿತ್ತವನ್ನೂ ಬಯಸದೆ ಪರಮಾತ್ಮನನ್ನೇ

ಪ್ರೀತಿಸುವ ಉತ್ತಮಭಕ್ತಿಯು ಜ್ಞಾನಿಗೆ ಮೀಸಲಾಗಿರುವದೆಂದು ಗೀತಾಭಾಷ್ಯ ದಲ್ಲಿ (7-18) ಹೇಳಿರುತ್ತಾರೆ. ಆದ್ದರಿಂದ ಭಕ್ತಿಯನ್ನು ಕೈಬಿಟ್ಟ ಜ್ಞಾನವೆಂಬುದು ಶಾಂಕರಸಿದ್ಧಾಂತಕ್ಕೆ ನಿಜವಾಗಿ ಸೇರಿದ್ದಲ್ಲವೆಂದೇ ನಿಶ್ಚಯಿಸಬೇಕಾಗುತ್ತದೆ.

(2) **ಸಗುಣನಿರ್ಗುಣೇಶ್ವರಲಕ್ಷಣಗಳು :** 'ಜನ್ಮಾದ್ಯಸ್ಯ ಯತಃ'(1-1-2) ಎಂಬುದು ಸಗುಣೇಶ್ವರನ ಲಕ್ಷಣವೆಂದೂ 'ನೇತಿ ನೇತಿ' ಎಂಬುದು ನಿರ್ಗುಣಬ್ರಹ್ಮದ ಲಕ್ಷಣವೆಂದೂ ಈ ಗ್ರಂಥದಲ್ಲಿ (ಪು. 10) ಹೇಳಿರುತ್ತದೆ. ಆದರೆ 'ಜನ್ಮಾದ್ಯಸ್ಯ', ಎಂಬ ಸೂತ್ರವಾಗಲಿ ಅದಕ್ಕೆ ಮೂಲವಾಗಿರುವ ತೈತ್ತಿರೀಯಶ್ರುತಿಯಾಗಲಿ ಸಗುಣಬ್ರಹ್ಮವನ್ನು ಹೇಳುವದಕ್ಕೆ ಬಂದಿರುವ ದೆಂದು ಶಂಕರಾಚಾರ್ಯರವರು ಒಪ್ಪಿರುವದಿಲ್ಲ. ''ಯತೋ ವಾ ಇಮಾನಿ ....'' ಎಂಬಲ್ಲಿಂದ ''ಆನಂದೋ ಬ್ರಹ್ಮೇತಿ ವ್ಯಜಾನಾತ್'' - ಎಂಬವರೆಗಿನ ಶ್ರುತಿಯು ಬ್ರಹ್ಮದ ಸ್ವರೂಪವನ್ನು ತಿಳಿಸುವದಕ್ಕೆ ಬಂದಿದೆಯೇ ಹೊರತು ಬ್ರಹ್ಮವನ್ನು ಹೀಗೆಂದು ಉಪಾಸನೆ ಮಾಡ ಬೇಕೆಂದೇನೂ ತಿಳಿಸುವದಿಲ್ಲ. ಆದರೂ ಬ್ರಹ್ಮವನ್ನು ಜಗತ್ಕಾರಣವೆಂದೂ ಈಶ್ವರನೆಂದೂ ಕರೆಯುವದೇನೋ ವ್ಯವಹಾರದೃಷ್ಟಿಯಿಂದಲೇ ಎಂಬುದು ನಿಜ. (ಬ್ರ. ಸೂ. ಶಾಂ. ಭಾ. 2-1-14ನ್ನು ನೋಡಿ.) ಇಷ್ಟರಮಟ್ಟಿಗೆ ಇದನ್ನು ಸಗುಣಬ್ರಹ್ಮದ ಲಕ್ಷಣವೆಂದರೂ ಸಾಗುತ್ತದೆ. ಈ ಸೂಕ್ಷ್ಮತಾರತಮ್ಯವನ್ನು ಲಕ್ಷ್ಯದಲ್ಲಿಡುವದು ಶಾಂಕರ ಸಿದ್ಧಾಂತವನ್ನು ತಿಳಿಯುವದಕ್ಕೆ ಅನುಕೂಲವಾಗುತ್ತದೆ; ಇಲ್ಲದಿದ್ದರೆ ಸಗುಣ ನಿರ್ಗುಣ ವಾಕ್ಯಗಳನ್ನು ವಿಂಗಡಿಸುವದು ಕಷ್ಟವಾಗುವ ಸಂಭವವುಂಟು. ಆದ್ದರಿಂದ ಇದನ್ನು ಇಲ್ಲಿ ಪ್ರಸ್ತಾಪಿಸಿರುತ್ತೇನೆ.

(3) **ಸ್ಫೋಟವಿಚಾರ :** ಸ್ಫೋಟವೆಂಬುದು ನಾಮಪ್ರಪಂಚದ ಮೂಲರೂಪವೆಂದೂ, ಪರಮೇಶ್ವರನ ಮೊದಲನೆಯ ವಿವರ್ತವೆಂದೂ ಸ್ವಾಮಿಗಳವರು ಇಲ್ಲಿ (ಪು.36) ಹೇಳಿರುತ್ತಾರೆ. ಈ ಅಭಿಪ್ರಾಯಕ್ಕೆ ಆಧಾರಗ್ರಂಥವು ಯಾವದೋ ತಿಳಿಯದು. ಸ್ಫೋಟವೆಂದ ರೇನೆಂಬ ಬಗ್ಗೆ (ಬ್ರ. ಸೂ. ಶಾಂ. ಭಾ.1 - 3 - 28ರಲ್ಲಿ) ಶಂಕರಾಚಾರ್ಯರೂ ಅವರ ಹಿಂದೆ ಪೂರ್ವ ಮೀಮಾಂಸಾಸೂತ್ರದ ಭಾಷ್ಯಕಾರರಾದ ಶಬರಸ್ವಾಮಿಗಳೂ ಬರೆದಿರುವದನ್ನು ನೋಡಿದರೆ ಸ್ಫೋಟದ ವಾದವು ವೈಯಾಕರಣರಿಗೆ ಒಪ್ಪಾದರೂ ಪೂರ್ವೋತ್ತರ ಮೀಮಾಂಸಕರಿಗೆ ಒಪ್ಪಲ್ಲವೆಂದು ಹೇಳಬೇಕಾಗುವದು. ಶಬ್ದಗಳಲ್ಲಿರುವ ಅಕ್ಷರಗಳಲ್ಲದೆ ಸ್ಫೋಟವೆಂಬ ಹೆಸರಿನ ಶಬ್ದವೊಂದು ಇರುವದೆಂದು ವೈಯಾಕರಣರು ಹೇಳುತ್ತಾರೆ. ನಿರವಯವವಾಗಿಯೂ ನಿತ್ಯವಾಗಿಯೂ ಇರುವ ಈ ಶಬ್ದವು ಬ್ರಹ್ಮವೇ ಎಂಬುದು ಅವರ ಮತವು ! ''ಅನಾದಿನಿಧನಂ ಬ್ರಹ್ಮ ಶಬ್ದತತ್ತ್ವಂ ತದಕ್ಷರಮ್ । ವಿವರ್ತತೇಽರ್ಥಭಾವೇನ ಪ್ರಕ್ರಿಯಾ ಜಗತೋ ಯತಃ ॥'' ಎಂಬ ವಾಕ್ಯಪದೀಯ ಶ್ಲೋಕದಲ್ಲಿ ಸ್ಫೋಟವೇ ಜಗತ್ತಿಗೆ

ಕಾರಣವಾದ ಬ್ರಹ್ಮವೆಂಬ ಮತವನ್ನು ಪ್ರತಿಪಾದಿಸಿರುತ್ತದೆ. ಸೂತ ಸಂಹಿತೆಯ ಯಜ್ಞವೈಭವ ಖಂಡದ ನಾಲ್ಕನೆಯ ಅಧ್ಯಾಯದಲ್ಲಿ ಏಳನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಮಾಧವಾಚಾರ್ಯರು ಹೀಗೆಂದು ಬರೆದಿರುತ್ತಾರೆ :

''ಅಕ್ಷರಗಳಿಗೆ ಸ್ಥೂಲವೆಂದೂ ಸೂಕ್ಷ್ಮವೆಂದೂ ಎರಡು ರೂಪವಿರುವದು. ಸ್ಥೂಲವೆಂದರೆ ಮತ್ತೊಬ್ಬರ ಕಿವಿಗೆ ಕೇಳಿಬರುವಂತೆ ವೈಖರೀರೂಪವನ್ನು ತಾಳಿರುವ ಅಕಾರಾದಿ ಕ್ಷಕಾರಾನ್ತವಾದ ವರ್ಣವು, ಮತ್ತು ಅದರಿಂದಾಗಿರುವ ಪದ, ವಾಕ್ಯ, ಮಂತ್ರ - ಮುಂತಾದ ಅನೇಕ ರೂಪದಲ್ಲಿರುವ ಅಕ್ಷರವು. ಸೂಕ್ಷ್ಮವೆಂದರೆ ಮಧ್ಯಮಾ ರೂಪವನ್ನು ಬಿಟ್ಟು ವೈಖರೀರೂಪವನ್ನು ತಾಳಲಿರುವ ಸ್ಥಿತಿಯಲ್ಲಿರುವ ನಾದಾತ್ಮಕವಾದ ಪ್ರಣವರೂಪವಾದ ಅಕ್ಷರವು. ಈ ಪ್ರಣವವು ಕಂಠ, ಓಷ್ಠ - ಮುಂತಾದವುಗಳಿಂದ ಹೊರತೋರಿ ಬಾಹ್ಯವು ಸ್ಥೂಲವೂ ನಾದಾತ್ಮಕವೂ ಆಗಿರುವದು; ಸಕಲ ಶಬ್ದಗಳಿಗೂ ಉಪಾದಾನವಾಗಿ ಮೂರ್ಧ ಪ್ರದೇಶದಲ್ಲಿ ತೋರಿಕೊಳ್ಳುವದಾಗಿ ಅಂತರವೂ ಸೂಕ್ಷ್ಮವೂ ಆಗಿರುವ ಅಕ್ಷರವಾಗಿರುವದು.''

ಇದೇ ವ್ಯಾಖ್ಯಾನಕಾರರು ಶಿವಮಾಹಾತ್ಮ್ಯಖಂಡದ ಐದನೆಯ ಅಧ್ಯಾಯದಲ್ಲಿ ಒಂಬತ್ತನೆಯ ಶ್ಲೋಕದ ಕೆಳಗೆ ಪ್ರಪಂಚಸಾರವೆಂಬ ಗ್ರಂಥದ ಆಧಾರದಿಂದ ಬರೆದಿರುವದರ ಸಾರಾಂಶವೇನೆಂದರೆ :

''ಪ್ರಾಣಿಗಳ ಕರ್ಮವಶದಿಂದ ಸೃಷ್ಟಿಯ ಆದಿಯಲ್ಲಿ ಸೃಷ್ಟಿಮಾಡಬೇಕೆಂಬ ಇಚ್ಛೆಯ ರೂಪವಾದ ಮಾಯಾವೃತ್ತಿಯೊಂದು ಉತ್ಪನ್ನವಾಗುವದು. ಪರಿಪಕ್ವಕರ್ಮಾಕಾರದಲ್ಲಿ ಪರಿಣತವಾದ ಮಾಯೆಯಿಂದೊಡಗೂಡಿದ ಚೈತನ್ಯವೇ ಬಿಂದುವೆನಿಸುವದು, ಇದು ಕಾಲಕ್ರಮದಲ್ಲಿ ಸ್ಥೂಲ, ಸೂಕ್ಷ್ಮ, ಪರ-ಎಂಬ ಮೂರು ಭಾಗವಾಗುವದು. ಸ್ಥೂಲವಾದ ಅಚಿದಂಶವು ಬೀಜವು ; ಚಿದಂಶ, ಅಚಿದಂಶ- ಎರಡೂ ಸೇರಿದ ಸೂಕ್ಷ್ಮಾಂಶವು ನಾದವು; ಚಿದಂಶವೇ ಪರ ಅಥವಾ ಈಶ್ವರ. ಹೀಗೆ ಮೂರು ಭಾಗವಾಗುವ ಸಮಯದಲ್ಲಿ ಶಬ್ದಬ್ರಹ್ಮವೆಂಬ ರವವು ಉತ್ಪನ್ನವಾಗುತ್ತದೆ ; ಇದೇ ಜಗತ್ತಿಗೆಲ್ಲ ಉಪಾದಾನವು.''

ಈ ಮೇಲಿನ ವಿಚಾರಗಳನ್ನು ಮನದಂದರೆ ಸ್ವಾಮಿಗಳವರು ಓಂಕಾರವನ್ನು ಸ್ಫೋಟಾತ್ಮಕವಾಗಿ ವರ್ಣಿಸಿರುವದು ವೈಯಾಕರಣರ ಮತ್ತು ತಾಂತ್ರಿಕರ ಮತಗಳ ಆಧಾರದಿಂದ - ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ಮತಾಂತರವನ್ನನುಸರಿಸಿ ವರ್ಣಿಸುವದು ಸಂಪ್ರದಾಯದ ವರಲ್ಲಿಯೂ ಅಲ್ಲಲ್ಲಿ ಕಂಡುಬರುತ್ತದೆಯಾದರೂ ಇದು ವೇದಾಂತದ ಪರಮಸಿದ್ಧಾಂತ ವಲ್ಲವೆಂಬುದನ್ನು ವಾಚಕರು ಲಕ್ಷ್ಯದಲ್ಲಿಡಬೇಕು. ಓಂಕಾರದ ಸ್ವರೂಪವನ್ನು ಶುದ್ಧವೇದಾಂತಿಗಳು ಹೇಗೆ ವರ್ಣಿಸಿರುವರೆಂಬುದನ್ನು ತಿಳಿಯಲು ಇಚ್ಛಿಸುವವರು ಮಾಂಡೂಕ್ಯೋಪನಿಷದ್ಭಾಷ್ಯವನ್ನು ನೋಡಬೇಕು.

(4) **ಭಕ್ತಿಯ ಪರಿಭಾಷೆ :** ಭಕ್ತಿಪಂಥವು ಶಂಕರ, ರಾಮಾನುಜ, ಮಧ್ವ, ಚೈತನ್ಯ, ವಲ್ಲಭ - ಮುಂತಾದ ಬೇರೆಬೇರೆ ಸಿದ್ಧಾಂತಗಳ ಆಚಾರ್ಯರುಗಳಿಂದ ಪ್ರತಿಪಾದಿತವಾಗಿ ಬೆಳೆದು ಕೊಂಡು ಬಂದಿರುತ್ತದೆ. ಆಯಾ ಆಚಾರ್ಯರು ತಮ್ಮ ಒಂದೊಂದು ಅಭಿಪ್ರಾಯವನ್ನು ತಿಳಿಸುವದಕ್ಕಾಗಿ ಒಂದೊಂದು ಪಾರಿಭಾಷಿಕಶಬ್ದವನ್ನು ಉಪಯೋಗಿಸಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಒಂದೇ ಶಬ್ದವನ್ನೇ ಒಬ್ಬೊಬ್ಬ ಆಚಾರ್ಯರು ಒಂದೊಂದು ಅರ್ಥದಲ್ಲಿ ಉಪಯೋಗಿಸಿರುವದೂ ಉಂಟು. ಸ್ವಾಮಿಗಳವರು ಭಕ್ತಿಯ ವಿಚಾರಗಳನ್ನು ಎಲ್ಲಾ ಆಚಾರ್ಯರುಗಳಿಂದಲೂ ತೆಗೆದುಕೊಂಡಿರುತ್ತಾರೆ; ಬಹುಮಟ್ಟಿಗೆ ಆಯಾ ಪರಿಭಾಷೆಯನ್ನು ಅವರವರ ಅರ್ಥದಲ್ಲಿಯೇ ಉಪಯೋಗಿಸಿರುತ್ತಾರೆ. ಆದರೂ ಕೆಲವು ಕಡೆಗಳಲ್ಲಿ ಮಾತ್ರ ಆ ಶಬ್ದಗಳಿಗೆ ತಾವೇ ಒಂದು ವಿಶಿಷ್ಟಾರ್ಥವನ್ನು ಕೊಟ್ಟು ಉಪಯೋಗಿಸಿರುವದೂ ಉಂಟು. ಉದಾಹರಣೆಗೆ : **ರಾಗಾನುಗ** ಎಂಬ ಹೆಸರನ್ನು ಚೈತನ್ಯಪಂಥದವರು ವೈಧೀಭಕ್ತಿಗಿಂತ ಹೆಚ್ಚಿನದಾದ ಸಾಧನಭಕ್ತಿಗೆ ಇಟ್ಟುಕೊಂಡಿರುತ್ತಾರೆ ; ಆದರೆ ಸ್ವಾಮಿಗಳವರು (ಪು. 75) ಇದನ್ನು ಪರಭಕ್ತಿಗೆ ಉಪಯೋಗಿಸಿದ್ದಾರೆ.

ಭಕ್ತಿಯನ್ನು ಶಾಸ್ತ್ರದಿಂದಲಾಗಲಿ ತರ್ಕದಿಂದಲಾಗಲಿ ಸಂಪಾದಿಸುವದಕ್ಕೆ ಆಗುವದೇ ಇಲ್ಲ; ಅದು ಭಾವಪ್ರಧಾನರಾದವರ ಹೃದಯದಲ್ಲಿ ಪರಮೇಶ್ವರನ ಅನುಗ್ರಹದಿಂದ ತಾನೇ ತೋರಿಕೊಳ್ಳಬೇಕಾದದ್ದಾಗಿದೆ. ಆದಕಾರಣ ಸ್ವಾಮಿಗಳವರ ಗ್ರಂಥದಿಂದ ನಮ್ಮಗಳ ಹೃದಯದಲ್ಲಿ ಪ್ರೇಮರಸವು ಉಕ್ಕುವದಕ್ಕೆ ಎಷ್ಟರಮಟ್ಟಿಗೆ ಸಹಾಯವಾಗುವದೆಂಬುದನ್ನು ನೋಡಿ ಅದರ ಬೆಲೆಯನ್ನು ಕಟ್ಟಬೇಕೇ ಹೊರತು ಅವರು ಕೊಟ್ಟಿರುವ ಅಭಿಪ್ರಾಯಗಳಿಗಿರುವ ಶಾಸ್ತ್ರಯುಕ್ತಿಗಳ ಆಧಾರದಿಂದಲ್ಲ. ಆದ್ದರಿಂದ ಇಲ್ಲಿ ನಾನು ವಾಚಕರ ಅವಲೋಕನಕ್ಕೆ ತಂದಿರುವ ಒಂದೆರಡು ವಿಚಾರಗಳು ಕೇವಲ ಸಂಪ್ರದಾಯ ಶ್ರದ್ಧೆಯಿಂದಲೇ ಎಂದು ಭಾವಿಸಿ ನನ್ನ ಧಾರ್ಷ್ಟ್ಯವನ್ನು ಕ್ಷಮಿಸಬೇಕೆಂದು ಬೇಡುತ್ತೇನೆ.

## 5

ಶ್ರೀ ವಿವೇಕಾನಂದಸ್ವಾಮಿಗಳವರು ಗ್ರಂಥರಚನೆಗೆ ಹೊರಟವರಲ್ಲ. ಅವರು ಶ್ರೀರಾಮಕೃಷ್ಣ ಪರಮಹಂಸರವರಿಂದ ಶಕ್ತಿಪಾತವನ್ನೂ ಗ್ರಂಥಿಭೇದವನ್ನೂ ಹೊಂದಿದವರಾಗಿ ತಮ್ಮಲ್ಲಿ ತುಂಬಿತುಳುಕುತ್ತಿದ್ದ ಉತ್ಸಾಹದಂಶವನ್ನು ಮಿಕ್ಕ ಮಾನವರಲ್ಲಿಯೂ ಒಂದಿಷ್ಟಾದರೂ ಎಬ್ಬಿಸ ಬೇಕೆಂಬ ಹಂಬಲಿಕೆಯ ಆವೇಶದಲ್ಲಿ ಆಯಾ ಸಂದರ್ಭಕ್ಕೆ ತೋರಿದಂತೆ ಭಾಷಣ ಮಾಡಿದರು. ನಮ್ಮಗಳ ಸೌಭಾಗ್ಯದಿಂದ ಗುಡ್ವಿನ್ (J.J. Goodwin of Bath, England) -ಎಂಬ ಆಂಗ್ಲ ಮಹಾಶಯನೊಬ್ಬನು ಸ್ವಾಮಿಗಳ ಪ್ರಿಯಶಿಷ್ಯನಾಗಿ ಅವರ ಉಪನ್ಯಾಸಗಳನ್ನು ಸಂಕ್ಷಿಪ್ತಲಿಪಿಯಿಂದ ಬರೆದುಕೊಂಡು ಅವನ್ನು ಮತ್ತೆ ರೂಢಿಯ ಲಿಪಿಯಲ್ಲಿ ಬರೆದುಕೊಟ್ಟನು. ವಾಯುವೇಗದಿಂದ ಮಾಡಿದ ಸ್ವಾಮಿಗಳ ಭಾಷಣವನ್ನು ಎಂಥ ಹಸ್ತ ಕೌಶಲವುಳ್ಳವರು ಸಂಕ್ಷಿಪ್ತಲಿಪಿಯಲ್ಲಿ ಬರೆದುಕೊಂಡರೂ ನ್ಯೂನಾತಿರೇಕಗಳು ಆಗುವದು ಸಹಜವೇ ಆಗಿರುತ್ತದೆ.

ಆದ್ದರಿಂದ ಸ್ವಾಮಿಗಳ ಗ್ರಂಥವೆಂದು ಈಗ ಹೊರಕ್ಕೆ ಬಂದಿರುವ ಕರ್ಮಯೋಗ ರಾಜಯೋಗಾದಿಗಳಲ್ಲಿ ಬೇಕಾದಷ್ಟು ಸ್ಖಾಲಿತ್ಯಗಳಾಗಿರುತ್ತವೆ. ಭಕ್ತಿಯೋಗವೂ ಹೀಗೆಯೇ. ಈ ಗ್ರಂಥವು ಸ್ವಾಮಿಗಳು ಅಮೆರಿಕದ ನ್ಯೂಯಾರ್ಕ್ ನಗರದಲ್ಲಿ ಮಾಡಿದ ಕೆಲವು ಉಪನ್ಯಾಸಗಳ ಆಧಾರದಮೇಲೆ ಹುಟ್ಟಿದ್ದಾಗಿರುತ್ತದೆ; ಶಂಕರರಾಮಾನುಜಾಚಾರ್ಯರುಗಳ ಗ್ರಂಥಗಳಿಂದ ಉದಾಹರಿಸಿರುವ ದೀರ್ಘಪ್ರಘಟ್ಟಗಳಿರುವ ಮೊದಲಿನ ಕೆಲವು ಅಧ್ಯಾಯಗಳು ಮಾತ್ರ ಸ್ವಾಮಿಗಳು ತಾವೇ ಬರೆದವುಗಳಾಗಿರುತ್ತವೆ. ಕ್ರಿ. ಶ. 1894-95ರ ಸುಮಾರಿನಲ್ಲಿ ಮದ್ರಾಸಿನಿಂದ ಹೊರಡುತ್ತಿದ್ದ "ಬ್ರಹ್ಮವಾದಿ" ಎಂಬ ಇಂಗ್ಲಿಷ್ ಮಾಸ ಪತ್ರಿಕೆಯಲ್ಲಿ ಇವು ಕೆಲವು ಲೇಖನಮಾಲೆಗಳಾಗಿ ಹೊರಕ್ಕೆಬಂದವು. ಅಂತೂ ಅನೇಕ ಕಾರಣಗಳಿಂದ ಈ ಗ್ರಂಥದಲ್ಲಿಯೂ ಮೂಲಭಾಷಣದಲ್ಲಿಲ್ಲದ ಕೆಲವು ಹೆಚ್ಚು ಕುಂದುಗಳು ಉಂಟಾಗಿರುತ್ತವೆ.

ಶ್ರೀರಾಮಕೃಷ್ಣಮಠದವರು ಪ್ರಕಟಿಸಿರುವ ಮಾಯಾವತೀಸಂಸ್ಕರಣದಿಂದ ತೆಗೆದ ಭಕ್ತಿ ಯೋಗವನ್ನೇ ನಾನು ಪರಿವರ್ತನೆಗೆ ಮೂಲವಾಗಿ ಮೊದಲು ಇಟ್ಟುಕೊಂಡೆನಾದರೂ ಎಲ್ಲ ಅನುವಾದವೂ ಆದಮೇಲೆ ಕಲಕತ್ತೆಯಲ್ಲಿ ಅಚ್ಚಾಗಿರುವ ಉದ್ಬೋಧನಸಂಸ್ಕರಣದ ಪ್ರತಿಯನ್ನೂ ಹೋಲಿಸಿ ಕೆಲವು ಮಾರ್ಪಾಡುಗಳನ್ನು ಮಾಡಿರುತ್ತೇನೆ. ಈ ಎರಡು ಸಂಸ್ಕರಣ ಗಳಲ್ಲಿಯೂ ಕೆಲಕೆಲವು ವಾಕ್ಯಭಾಗಗಳು ರೂಪಾಂತರದಲ್ಲಿವೆ, ಕೆಲವು ಸ್ಥಳಾಂತರದಲ್ಲಿವೆ, ಕೆಲಕೆಲವು ಒಂದರಲ್ಲಿದ್ದು ಇನ್ನೊಂದರಲ್ಲಿರುವದಿಲ್ಲ. ಆಯಾ ಸಂಸ್ಕರಣವನ್ನು ಮಾಡಿ ಗ್ರಂಥವನ್ನು ಪ್ರಕಾಶಕ್ಕೆ ತಂದವರು ಆದಷ್ಟು ಮೂಲಕ್ಕೆ ಹೋಲಿಸಿ ಅರ್ಥಾನುಸಂಧಾನಕ್ಕೆ ಅವಶ್ಯವೆಂದು ತಮತಮಗೆ ತೋರಿದ ಕೆಲವು ಹೆಚ್ಚುಕಡಿಮೆಗಳನ್ನು ಮಾಡಿರುವದರಿಂದ ಈ ತಾರತಮ್ಯ ವುಂಟಾಗಿರುತ್ತದೆ. ಸ್ವಾಮಿಗಳವರ ಅಭಿಪ್ರಾಯವನ್ನು ಪೂರ ಗ್ರಹಿಸಲಾರದೆಯೂ ಗ್ರಹಿಸಿದ್ದನ್ನು ಸ್ಫುಟವಾಗಿ ಕನ್ನಡಿಸಿ ತಿಳಿಸಲಾರದೆಯೂ ಇರುವ ನನ್ನ ಅಶಕ್ತಿದೋಷದಿಂದ ಮತ್ತೂ ಕೆಲವು ಲೋಪದೋಷಗಳು ಆಗಿರುವದು ಸ್ವಾಭಾವಿಕವಾಗಿದೆ. ಇಷ್ಟೆಲ್ಲಾ ಆದರೂ, ಸಿಕ್ಕುವ ಮೂಲಾಧಾರದ ಗ್ರಂಥಗಳನ್ನೆಲ್ಲ ಕಣ್ಣಿಟ್ಟು ನೋಡಿ, ಆದರದಿಂದ ಕನ್ನಡಿಸಿ, ಓದುಗರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವದರಲ್ಲಿ ನಾನು ಸರ್ವಪ್ರಯತ್ನವನ್ನೂ ಮಾಡಿರುತ್ತೇನೆಂದು ಹೃದಯಶುದ್ಧಿಯಿಂದ ಹೇಳಬಲ್ಲೆನು. ಹಿಂದಿನ ಅನುವಾದಕ್ಕಿಂತಲೂ ಇದು ಎಲ್ಲಾ ಬಗೆಯಿಂದಲೂ ಉತ್ತಮವಾಗಿರುವದೆಂಬುದನ್ನು ವಾಚಕರೇ ಮನಗಾಣಬಹುದು. ಈ ಸಂಸ್ಕರಣದಲ್ಲಿ ಮಾಡಿರುವ ಹೊಸ ತಿದ್ದುಪಾಟುಗಳಿಂದ ಕೆಲವು ವಾಚಕರಿಗಾದರೂ ಗ್ರಂಥದಲ್ಲಿ ಹೆಚ್ಚು ಅಭಿರುಚಿಯೂ ಸ್ವಾಮಿಗಳವರಲ್ಲಿ ಹೆಚ್ಚು ಭಕ್ತಿಯೂ ಭಕ್ತಿ ವಿಚಾರದಲ್ಲಿ ಹೆಚ್ಚು ಶ್ರದ್ಧಾದರಗಳೂ ಉಂಟಾದರೆ ನಾನು ಧನ್ಯನು.

ಈಶ್ವರ ಸಂವತ್ಸರ, 1938

ಪುಷ್ಯ ಶುದ್ಧ ಪಂಚಮಿ. ಅನುವಾದಕ.

## ಪ್ರಕಾಶಕರ ಬಿನ್ನಹ

ಸಾವಿರ ವರ್ಷಗಳ ದಾಸ್ಯದಿಂದ ಸುಪ್ತವಾಗಿದ್ದ ಭಾರತೀಯ ಅಂತಃಶ್ಚೇತನವನ್ನು ಸಿಂಹಗರ್ಜನೆಯಿಂದೆಚ್ಚರಿಸಿ, ತಮ್ಮ ಚೈತನ್ಯಭರಿತ ವೇದಾಂತ ವಾಣಿಯಿಂದ ಭಾರತದ ಸಂಸ್ಕೃತಿಯೆಡೆಗೆ ಉತ್ಸಾಹ ಶ್ರದ್ಧೆಗಳಿಂದ ತಿರುಗಿಸಿದ ಹಾಗೂ ಸನಾತನ ಧರ್ಮದ ಹಿರಿಮೆಯನ್ನು ಜಗತ್ತಿಗೇ ಡಂಗುರ ಹೊಡೆದ ಮಹಾಮಹಿಮ ಶ್ರೀ ಸ್ವಾಮಿ ವಿವೇಕಾನಂದರ ಉಪನ್ಯಾಸಗಳಿಂದ ಚಿತ್ರಿತವಾದ ಪುಸ್ತಕಗಳಲ್ಲಿ ಇದೂ ಒಂದು. ಅವರ ಮಾತುಗಳ ಸರಣಿ, ಧೀರ ಗಂಭೀರ ವೈಖರಿ, ಅಧಿಕೃತ ವಿಚಾರ ಮಂಡನೆಗಳು ಅನುಪಮವಾದುದು. ದೇಶ ಬಾಂಧವರಲ್ಲಿ ವಿದ್ಯುತ್ ಸಂಚಾರ ಮಾಡಿಸಿದ, ಅಮೋಘ ಮೋಡಿಯ ಶ್ರೀ ವಿವೇಕಾನಂದರ ಪ್ರೌಢಿಮೆಯನ್ನು ಮೆಚ್ಚಿದ, ಈ ಕಾರ್ಯಾಲಯದ ಸಂಸ್ಥಾಪಕರಾದ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳವರು, ತಮ್ಮ ಪೂರ್ವಾಶ್ರಮದಲ್ಲೇ (ಶ್ರೀ ವೈ. ಸುಬ್ಬರಾವ್) ಅವರ ಕೆಲವು ಪುಸ್ತಕಗಳನ್ನು ಅನುವಾದ ಮಾಡಿದರು. ಶ್ರೀ ವಿವೇಕಾನಂದರ ವಿಚಾರಧಾರೆ ಎಷ್ಟು ಸೊಗಸೋ, ಆಕರ್ಷಣೀಯವೋ ಶ್ರೀ ಶ್ರೀ ಗಳ ಅನುವಾದವೂ ಅಷ್ಟೇ ಸರಳ ಸುಂದರ ಹಾಗೂ ಮೂಲಕ್ಕೆ ಕಿಂಚಿತ್ತೂ ಕೊರತೆತಾರದ ಅಧಿಕೃತ ಪ್ರತಿಕೃತಿಯೇ. ಇದರ ಜೊತೆಗೆ ಅಲ್ಲಲ್ಲೇ ಸಮಯೋಚಿತವಾದ ಅಡಕನಾದ ಟಿಪ್ಪಣಿಗಳನ್ನೂ, ಇಂಗ್ಲಿಷ್ ಪುಸ್ತಕದ ಕೆಲವು ವಾಕ್ಯಗಳ ಮೂಲ ಆಧಾರವನ್ನೂ ಸೂಚಿಸಿ, ಶ್ರೀ ಶ್ರೀ ಗಳವರು ಈ ಪುಸ್ತಕದ ಉಪಯುಕ್ತತೆಯನ್ನೂ, ಮೌಲ್ಯವನ್ನೂ ಹೆಚ್ಚಿಸಿದ್ದಾರೆ. ಭಗವದ್ಗೀತೆಯ ಪ್ರೀತಿಯ ಆರಾಧಕರಿಗೂ, ಶ್ರೀ ವಿವೇಕಾನಂದರನ್ನು ಗೌರವಾದರಗಳಿಂದ ಕಾಣುವ ಭಕ್ತರಿಗೂ, ಈ ಪುಸ್ತಕವು ಮೆಚ್ಚುಗೆ ಯಾಗುವುದರಲ್ಲಿ ಸಂದೇಹವಿಲ್ಲ.

ಈ ಪುಸ್ತಕ ಮೊದಲು ಮುದ್ರಿತವಾದದ್ದು 1913 ರಲ್ಲಿ, ಅನಂತರದಲ್ಲಿ ಎರಡನೆಯ ಸಂಸ್ಕರಣದ ಪ್ರಕಟಣೆ 1938 ರಲ್ಲಿ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಿಂದಾಯಿತು. ಆ ಪರಿಷ್ಕೃತ ಆವರ್ತಿಯೇ 65 ವರ್ಷಗಳನಂತರ ಈಗ ಮತ್ತೆ ಮುದ್ರಣವಾಗಿ ಬರುತ್ತಿದೆ. ಈ ಕಾರ್ಯವನ್ನು ಸಾಧ್ಯಮಾಡಿಕೊಟ್ಟ ಶ್ರೀ ಸ್ವಾಮಿ ವಿವೇಕಾನಂದರ ಅನುಗ್ರಹಕ್ಕೂ, ಶ್ರೀ ಶ್ರೀ ಗಳವರ ಆಶೀರ್ವಾದಕ್ಕೂ ಕಾರ್ಯಾಲಯದ ವಿನಮ್ರ ಪ್ರಣಾಮಗಳು. ಕೇವಲ ಕೆಲವೇ ವಾಕ್ಯಗಳಲ್ಲಿ ಮನಸೆಳೆವ ಮುನ್ನುಡಿಯಿಂದ ಪುಸ್ತಕಕ್ಕೊಂದು ಶೋಭೆಯನ್ನು ತಂದಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷ **ಶ್ರೀ ಸ್ವಾಮಿ ರಾಘವೇಶಾನಂದ**ರಿಗೆ ಹೃತ್ಪೂರ್ವಕ ಕೃತಜ್ಞತೆಯ ನಮನಗಳು. ಈ ಮರುಮುದ್ರಣಕ್ಕಾಗಿ, ಅಚ್ಚುಕಟ್ಟಾಗಿ, ಉತ್ಸಾಹದಿಂದ ಅಕ್ಷರಜೋಡಣೆ ಮಾಡಿರುವ ಶ್ರೀ ಸುರೇಶ್ ಮತ್ತು ಅಷ್ಟೇ ಶ್ರದ್ಧೆಯಿಂದ ಅಚ್ಚು ಹಾಕಿರುವ ಸ್ಟಾಂಡರ್ಡ್ ಮುದ್ರಣಾಲಯದ ಶ್ರೀ ನಾಗರಾಜರಿಗೂ, ಪುಸ್ತಕ ಮುದ್ರಣಕ್ಕೆ ಧನ ಸಹಾಯ ಮಾಡಿರುವ ಉದಾರಾಶ್ರಯರಿಗೂ ಕಾರ್ಯಾಲಯದ ಶುಭಾಶಂಸನಗಳು, ಅಭಿನಂದನೆಗಳು.

ತಾ ॥ 17 ಅಕ್ಟೋಬರ್ 2004 **ಪ್ರಕಾಶಕರು**

## ನಾಲ್ಕನೆಯ ಮುದ್ರಣಕ್ಕೆ ಬಿನ್ನಹ

ಜನಪ್ರಿಯವಾಗಿದ್ದ ಪುಸ್ತಕಗಳೆಲ್ಲ ಮಾರಾಟವಾಗಿಬಿಟ್ಟಿದ್ದರಿಂದ ಪುನಃ ನಾಲ್ಕನೆಯ ಬಾರಿಗೆ, ಗ್ರಂಥ ಶರೀರದಲ್ಲಿ ಬದಲಾವಣೆಯಿಲ್ಲದೆ ಮುದ್ರಿಸಿ ಹೊರತರಲಾಗಿದೆ.

ತಾ ॥ 20 ಏಪ್ರಿಲ್ 2009 **ಪ್ರಕಾಶಕರು**

# ವಿಷಯಾನುಕ್ರಮಣಿಕೆ


| ವಿಷಯ | ಪುಟ |
|---|---|
| ಎರಡನೆಯ ಸಂಸ್ಕರಣದ ಪೀಠಿಕೆ | (VI) - (XIV) |
| 1. ಭಕ್ತಿಯೋಗ | 1 |
| 2. ಈಶ್ವರತತ್ತ್ವಜಿಜ್ಞಾಸೆ | 10 |
| 3. ಆತ್ಮ ಸಾಕ್ಷಾತ್ಕಾರವೇ ಭಕ್ತಿಯೋಗದ ಉದ್ದೇಶ | 18 |
| 4. ಗುರುವಿನ ಆವಶ್ಯಕತೆ | 21 |
| 5. ಗುರುಶಿಷ್ಯರ ಲಕ್ಷಣ | 24 |
| 6. ಅವತಾರಿಕಗುರುಗಳೂ ಅವತಾರವೂ | 31 |
| 7. ಮಂತ್ರ - ಓಂಕಾರ : ಶಬ್ದವೂ ಜ್ಞಾನವೂ | 35 |
| 8. ಪ್ರತೀಕಪೂಜೆ, ಪ್ರತಿಮಾಪೂಜೆ | 39 |
| 9. ಇಷ್ಟನಿಷ್ಠೆ | 43 |
| 10. ಮಾರ್ಗವೂ ಸಾಧನಗಳೂ | 47 |
| 11. ವೈರಾಗ್ಯ ಸಾಧನ | 54 |
| 12. ಭಕ್ತನ ವೈರಾಗ್ಯವು ಪ್ರೇಮದಿಂದಾಗಿರುವದು | 58 |
| 13. ಭಕ್ತಿಯೋಗದ ಸ್ವಾಭಾವಿಕತೆಯೂ ಅದರ ಮೂಲರಹಸ್ಯವೂ | 63 |
| 14. ಪ್ರೇಮದ ವಿಶೇಷರೂಪಗಳು | 66 |
| 15. ಸರ್ವಭೂತಪ್ರೇಮವೂ ಅದರಿಂದುಂಟಾಗುವ ಆತ್ಮನಿವೇದನವೂ | 69 |
| 16. ನಿಜವಾದ ಭಕ್ತನಿಗೆ ಪರಜ್ಞಾನವೂ ಪರಭಕ್ತಿಯೂ ಒಂದೇ | 75 |
| 18. ಪ್ರೇಮತ್ರಿಕೋಣ | 77 |
| 18. ಪ್ರೇಮರೂಪನಾದ ಈಶ್ವರನು ಸ್ವತಃಸಿದ್ಧನು | 82 |
| 19. ಭಗವದ್ಭಕ್ತಿಗೆ ಕೊಟ್ಟಿರುವ ವ್ಯಾವಹಾರಿಕೋಪಮಾನಗಳು | 85 |
| 20. ಉಪಸಂಹಾರ | 94 |
| ಪರಿಶಿಷ್ಟ | 96 |
| ಶಬ್ದಾನುಕ್ರಮಣಿಕೆ | 108 |


---

ವಿ.ಸೂ. : ಗ್ರಂಥದ ಅನುವಾದದಲ್ಲಿರುವ (Antique) ಇಂಗ್ಲಿಷ ಅಂಕೆಗಳು ಪರಿಶಿಷ್ಟದಲ್ಲಿರುವ ಪ್ರಮಾಣ ವಚನಗಳನ್ನು ಮತ್ತು ಸಾಮಾನ್ಯ ಅಂಕೆಗಳು ಟಿಪ್ಪಣಿಗಳ ಸಂಖ್ಯೆಗಳನ್ನೂ ಸೂಚಿಸುತ್ತದೆ.

# ಶಬ್ದಸಂಕೇತಗಳು

**ಸೂಚನೆ** :- ಸಾಮಾನ್ಯವಾಗಿ ಅಕ್ಷರಗಳು ಆಯಾ ಗ್ರಂಥದ ಹೆಸರಿನ ಮಾತುಗಳ ಮೊದಲನೆಯ ಅಕ್ಷರಗಳಾಗಿರುತ್ತವೆ. ಮುಖ್ಯವಾದ ಸಂಕೇತಗಳನ್ನು ಈ ಕೆಳಗೆ ಕೊಟ್ಟಿರುತ್ತದೆ :-

| | |
|---|---|
| ಐ. | ಐತರೇಯೋಪನಿಷತ್ತು |
| ಕ. | ಕಠೋಪನಿಷತ್ತು. |
| ಗೀ. | ಗೀತೆ. |
| ಛಾ. | ಛಾಂದೋಗ್ಯೋಪನಿಷತ್ತು. |
| ತೈ. | ತೈತ್ತಿರೀಯೋಪನಿಷತ್ತು. |
| ನೃ. ಪೂ. | ನೃಸಿಂಹಪೂರ್ವತಾಪನೀಯೋಪನಿಷತ್ತು. |
| ಬೃ. | ಬೃಹದಾರಣ್ಯಕೋಪನಿಷತ್ತು. |
| ಬೈ. | ಬೈಬಲ್, ಕ್ರಿಸ್ತಿಯನ್ನರ ಧರ್ಮಗ್ರಂಥ. |
| ಬ್ರ. ಸೂ. | ಬ್ರಹ್ಮಸೂತ್ರ. |
| ಬ್ರ. ಸೂ. ಶಾಂ. ಭಾ. | ಬ್ರಹ್ಮಸೂತ್ರ ಶಾಂಕರಭಾಷ್ಯ. |
| ಭ. ಗೀ. | ಭಗವದ್ಗೀತಾ. |
| ಭಾಗ. | ಭಾಗವತ. |
| ಮಹೋ. | ಮಹೋಪನಿಷತ್ತು. |
| ಮುಂ. | ಮುಂಡಕೋಪನಿಷತ್ತು. |
| ಯೋ. ಸೂ. | ಯೋಗಸೂತ್ರ. |
| ವಿ. | ವಿವೇಕಚೂಡಾಮಣಿ. |
| ವಿ. ಪು. | ವಿಷ್ಣುಪುರಾಣ. |
| ಶೀ. | ಶೀಕ್ಷಾಷ್ಟಕ, ಶ್ರೀಕೃಷ್ಣ ಚೈತನ್ಯಕೃತ. |
| ಶೇ. | ಶೇಕ್ಸ್ಪಿಯರ್, ಪ್ರಸಿದ್ಧ ಆಂಗ್ಲ ಕವಿ. |
| ಶ್ರೀ. ಭಾ. | ಶ್ರೀಭಾಷ್ಯ, ರಾಮಾನುಜಾಚಾರ್ಯರ ಸೂತ್ರಭಾಷ್ಯ. |
| ಸೂ. ಭಾ. | ಸೂತ್ರಭಾಷ್ಯ. |

# ಭಕ್ತಿಯೋಗ

**ಸ ತನ್ಮಯೋ ಹ್ಯಮೃತ ಈಶಸಂಸ್ಥೋ। ಜ್ಞಃ ಸರ್ವಗೋ ಭುವನಸ್ಯಾಸ್ಯ ಗೋಪ್ತಾ।**

**ಯ ಈಶೇ ಅಸ್ಯ ಜಗತೋ ನಿತ್ಯಮೇವ। ನಾನ್ಯೋ ಹೇತುರ್ವಿದ್ಯತ ಈಶನಾಯ ॥**

**ಯೋ ಬ್ರಹ್ಮಾಣಮ್ ವಿದಧಾತಿಪೂರ್ವಮ್। ಯೋ ವೈವೇದಾಂಶ್ಚ ಪ್ರಹಿಣೋತಿ**

**ತಗ್ಂ ದೇವಮಾತ್ಮ ಬುದ್ಧಿಪ್ರಕಾಶಂ। ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥**

"ಆತನೇ ಪ್ರಪಂಚಕ್ಕೆಲ್ಲ ಆತ್ಮನು ; ಆತನೇ ಮರಣವಿಲ್ಲದಾತನು ; ಆತನದೇ ಒಡೆತನವು ಆತನೇ ಎಲ್ಲವನ್ನೂ ಅರಿಯುವವನು, ಎಲ್ಲದರಲ್ಲಿಯೂ ಹಬ್ಬಿಕೊಂಡಿರುವವನು, ಈ ಭುವನವನ್ನು ಕಾಪಾಡುವವನು, ಈ ಜಗತ್ತನ್ನು ಆತನೇ ನಿತ್ಯವೂ ಆಳುತ್ತಿರುವನು, ಇದನ್ನು (ನಿತ್ಯವೂ) ಆಳುವದಕ್ಕೆ ತಕ್ಕವನು ಮತ್ತೆ ಯಾರೂ ಇರುವದಿಲ್ಲ.

"ಯಾವಾತನು ಸೃಷ್ಟಿಗೆ ಮೊದಲು ಬ್ರಹ್ಮನನ್ನು (ಎಂದರೆ ಸಮಷ್ಟಿಜ್ಞಾನದಿಂದ ಕೂಡಿದಾತನನ್ನು) ಸೃಷ್ಟಿಸುವನಾದನೋ, ಯಾವಾತನು ಆತನಿಗೆ ವೇದಗಳನ್ನು ಕಳುಹಿಸಿ ಕೊಡುವವನಾದನೋ - ಆತ್ಮನ ಕಡೆಗೆ ತಿರುಗುವಂಥ ಬುದ್ಧಿಯನ್ನು ಕೊಡುವ ಪ್ರಕಾಶವುಳ್ಳ (ಆ ಸ್ವಯಂ ಪ್ರಕಾಶ) ದೇವನನ್ನು ಮೋಕ್ಷದ ಬಯಕೆಯಿಂದ ನಾನು ಶರಣುಹೊಕ್ಕಿದ್ದೇನೆ."

**-ಶ್ವೇತಾಶ್ವತರೋಪನಿಷತ್ತು 6-17, 18.**

# 1. ಭಕ್ತಿಯೋಗ

ಭಕ್ತಿಯೋಗವೆಂದರೆ ಈಶ್ವರನನ್ನು ನಿಜವಾಗಿ ಮನಃಪೂರ್ವಕವಾಗಿ ಹುಡುಕುವದು- ಪ್ರೇಮದಿಂದ ಹುಟ್ಟಿ ಪ್ರೇಮದಿಂದ ಬೆಳೆದು ಪ್ರೇಮದಲ್ಲಿಯೇ ಕೊನೆಗಾಣುವಂತೆ ಭಗವಂತನನ್ನು ಹುಡುಕುವಿಕೆ. ಈಶ್ವರನಲ್ಲಿರುವ ಆತ್ಯಂತಿಕಪ್ರೇಮದ ಹುಚ್ಚು ಒಂದೇ ಒಂದು ಕ್ಷಣವಿದ್ದರೂ ಸಾಕು, ನಮಗೆ ನಿತ್ಯಮುಕ್ತಿಯಾಗಿಬಿಡುವದು. **ನಾರದರು** ತಮ್ಮ ***ಭಕ್ತಿಸೂತ್ರ***ಗಳಲ್ಲಿ ಇದನ್ನು ವಿವರಿಸಿರುವದು ಹೇಗೆಂದರೆ - "ಭಕ್ತಿಯೆಂದರೆ ಈಶ್ವರನಲ್ಲಿರುವ ಪರಮಪ್ರೇಮವು. ಒಬ್ಬ ಪುರುಷನು ಇದನ್ನು ಪಡೆದನೆಂದರೆ ಅವನು ಎಲ್ಲರನ್ನೂ ಪ್ರೀತಿಸುವನು, ಯಾರನ್ನೂ ಹಗೆಮಾಡನು; ಆತನು ಎಂದೆಂದಿಗೂ ತೃಪ್ತನಾಗಿರುವನು. ಈ

ಪ್ರೇಮವೆಂಬುದು ಲೌಕಿಕಕಾಮರೂಪವಾಗಿರುವದಲ್ಲ, ಏಕೆಂದರೆ ಲೌಕಿಕಕಾಮಗಳು ಇರುವವರೆಗೂ ಆ ಜಾತಿಯ ಪ್ರೇಮವು ಬರುವದೇ ಇಲ್ಲ[1]. ಭಕ್ತಿಯು ಕರ್ಮಕ್ಕಿಂತ ಹೆಚ್ಚಿನದು, ಜ್ಞಾನಕ್ಕಿಂತ ಹೆಚ್ಚಿನದು[2], ಯೋಗಕ್ಕಿಂತ ಹೆಚ್ಚಿನದು ; ಏಕೆಂದರೆ (ಕರ್ಮ, ಜ್ಞಾನ, ಯೋಗ-) ಇವಕ್ಕೆ ಒಂದೊಂದು ಫಲವುಂಟು, ಆದರೆ ಭಕ್ತಿಯು ಸ್ವಯಂಫಲವಾಗಿರುವದು, ಎಂದರೆ ತಾನೇ ಸಾಧನವಾಗಿಯೂ ತಾನೇ ಫಲವಾಗಿಯೂ ಇರುವದು.''[1]

ಭಕ್ತಿಯೊಂದೇ ನಮ್ಮ ಋಷಿಗಳು ಮತ್ತೆ ಮತ್ತೆ ಹಾಡುವ ಪಲ್ಲವಿಯು. ಕೇವಲ ಭಕ್ತಿಯ ವಿಚಾರವಾಗಿಯೇ ಬರೆದಿರುವ **ಶಾಂಡಿಲ್ಯರು, ನಾರದರು**[3] ಮುಂತಾದವರು ಹೇಳಿರುವದು ಹಾಗಿರಲಿ ; **ವ್ಯಾಸಸೂತ್ರ**ಗಳ ಮೇಲೆ ಮಹಾಭಾಷ್ಯವನ್ನು ಬರೆದಿರುವ ವ್ಯಾಖ್ಯಾನಕಾರನು ಕೂಡ ತಾನು ಜ್ಞಾನಮಾರ್ಗವನ್ನೇ ಹೊಗಳುವಾತನಾದರೂ ಪ್ರೇಮವಿಷಯದಲ್ಲಿಯೂ ಏನಾದರೂ ಸ್ಫೂರ್ತಿದಾಯಕವಾದ ವಿಷಯವನ್ನು ಹೇಳಿಯೇ ಇರುವನು. ಭಾಷ್ಯಕಾರನು ಸೂತ್ರವಾಕ್ಯಗಳನ್ನೆಲ್ಲ ಆಗದಿದ್ದರೆ ಅವುಗಳಲ್ಲಿ ಅನೇಕ ವಾಕ್ಯಗಳನ್ನಾದರೂ ಒಂದು ಬಗೆಯ ಶುಷ್ಕಜ್ಞಾನದ ಪರವಾಗಿಯೇ ವ್ಯಾಖ್ಯಾನಮಾಡಿಬಿಡಬೇಕೆಂದು ಇಷ್ಟಪಡುವಲ್ಲಿ ಕೂಡ ಈ ಸೂತ್ರಗಳಲ್ಲಿ ಕೆಲವು, ಅದರಲ್ಲಿಯೂ ಉಪಾಸನಾಪಾದದಲ್ಲಿರುವ ಸೂತ್ರಗಳು, ಆ ರೀತಿಯಲ್ಲಿ ಮಾರ್ಪಡಿಸುವದಕ್ಕೆ ಸುಲಭವಾಗಿ ಅವಕಾಶವನ್ನು ಕೊಡುವಂತಿರುವದಿಲ್ಲ.[4]

ನಿಜವಾಗಿ ನೋಡಿದರೆ ಜ್ಞಾನಕ್ಕೂ ಭಕ್ತಿಗೂ ಜನರು ಕೆಲವರು ಎಣಿಸಿಕೊಳ್ಳುವಷ್ಟು

---

1 ಸಾ ನ ಕಾಮಯಮಾನಾ ನಿರೋಧರೂಪತ್ವಾತ್'' ಎಂಬ ಮೂಲದ ತಾತ್ಪರ್ಯವಿದು. 'ನಿರೋಧರೂಪತ್ವಾತ್' ಎಂಬುದು ಭಕ್ತಿಯ ವಿಶೇಷಣವೆಂದಿಟ್ಟುಕೊಂಡರೆ ಭಕ್ತಿಯು ಕಾಮಗಳನ್ನೆಲ್ಲ ನಾಶಗೊಳಿಸುವದು-ಎಂದರ್ಥವಾಗುತ್ತದೆ ; ಕಾಮಕ್ಕೆ ವಿಶೇಷಣವೆಂದಿಟ್ಟುಕೊಂಡರೆ ಸ್ವಾಮಿಗಳವರು ಬರೆದಿರುವ ಅರ್ಥವು ಹೊರಡುತ್ತದೆ. ಈ ಅರ್ಥವು ಭಕ್ತಿಪಂಥದವರ ಅಭಿಪ್ರಾಯಕ್ಕೆ ಚೆನ್ನಾಗಿ ಹೊಂದುವದು. ''ಭುಕ್ತಿಮುಕ್ತಿಸ್ಪೃಹಾ ಯಾವತ್ ಪಿಶಾಚೀ ಹೃದಿ ವರ್ತತೇ । ತಾವದ್ಭಕ್ತಿಸುಖಸ್ಯಾತ್ರ ಕಥಮಭ್ಯುದಯೋ ಭವೇತ್॥'' (ಭೋಗಮೋಕ್ಷಗಳ ಬಯಕೆಯೆಂಬ ಪಿಶಾಚಿಯಿರುವವರೆಗೂ ಭಕ್ತಿಸುಖವು ಹೇಗೆ ತಲೆದೋರೀತು ?) ಎಂಬ ಹರಿಭಕ್ತಿರಸಾಮೃತಸಿಂಧುವಿನ ವಾಕ್ಯವನ್ನು ಇದಕ್ಕೆ ಹೋಲಿಸಿರಿ.

2 ಭೂಕ್ತಿಸೂತ್ರದ ಸಂಸ್ಕೃತಮೂಲಾನುಸಾರವಾಗಿ ಈ ಮಾತನ್ನು ಸೇರಿಸಿಕೊಂಡಿದೆ.

1 ಈ ಭಾಗವು ನಾರದಭಕ್ತಿಸೂತ್ರ 2, 4, 5, 7, 25, 26, 30 - ಇವುಗಳ ತಾತ್ಪರ್ಯವು. ಸ್ವಾಮಿಗಳು ಸೂತ್ರದ ಅಕ್ಷರಾರ್ಥವನ್ನೇ ಅಷ್ಟು ಮುಖ್ಯವಾಗಿಟ್ಟುಕೊಂಡಿಲ್ಲ.

3 ಶಾಂಡಿಲ್ಯ ಸೂತ್ರ, ನಾರದಸೂತ್ರ - ಇವೆರಡೂ ಭಕ್ತಿಗೆ ಆಧಾರಗ್ರಂಥಗಳು.

4 ಈ ವಿಚಾರದಲ್ಲಿ ಪೀಠಿಕೆಯನ್ನು ನೋಡಿ.

ಮಹದಂತರವಿರುವದಿಲ್ಲ. ಇವೆರಡೂ ಒಂದಕ್ಕೊಂದು ಹತ್ತಿರಹತ್ತಿರಕ್ಕೆ ಬರುತ್ತಾ ಕೊನೆಗೆ ಒಂದೇ ಕಡೆಯಲ್ಲಿ ಸೇರಿಕೊಳ್ಳುವದೆಂಬುದು ಈ ಗ್ರಂಥದಲ್ಲಿ ಮುಂದೆ ಗೊತ್ತಾಗುವದು. **ರಾಜಯೋಗ**ದ ವಿಚಾರವೂ ಹೀಗೆಯೇ. ಪಾಪ ! ಕಪಟಿಗಳ ಕೈಯಲ್ಲೂ ರಹಸ್ಯ ವಿದ್ಯೆಯನ್ನು ಮಾರುವವರ ಕೈಯಲ್ಲೂ ಆಗಾಗ್ಗೆ ಸೇರಿ ಅದು ಬೆಪ್ಪರಿಗೆ ತೊಪ್ಪಿಗೆಹಾಕುವ ಸಾಧನ ವಾಗಿಬಿಡುವದುಂಟು ; ಹಾಗಿಲ್ಲದೆ ಅದನ್ನು ಮೋಕ್ಷಕ್ಕೆ ಸಾಧನವಾಗಿ ಅಭ್ಯಾಸ ಮಾಡಿದರೆ ಅದರಿಂದಲೂ ಇದೇ ಪುರುಷಾರ್ಥವು ದೊರಕುವದು.

ಭಕ್ತಿಯಲ್ಲಿರುವ ಒಂದು ಹೆಚ್ಚಿನ ಆನುಕೂಲ್ಯವೇನೆಂದರೆ, ನಮಗೆ ಬೇಕಾಗಿರುವ ಭಗವತ್ಪ್ರೀತಿಯೆಂಬ ಪರಮಪುರುಷಾರ್ಥವನ್ನು ಪಡೆಯುವದಕ್ಕೆ ಇದೇ ಅತ್ಯಂತಸುಲಭವಾದ[1] ಮತ್ತು ಸಹಜವಾದ ಮಾರ್ಗವು. ಇದರಲ್ಲಿರುವ ದೊಡ್ಡ ದೋಷವೇನೆಂದರೆ-ಇದು ಇನ್ನೂ ಕೀಳುತೆರದ ರೂಪಗಳಲ್ಲಿರುವಾಗ ಇದು ಅನೇಕ ವೇಳೆಗಳಲ್ಲಿ ಅಸಹ್ಯವಾದ ಮತದ್ವೇಷದ ರೂಪಕ್ಕೂ ಇಳಿದುಬಿಡುವದುಂಟು. *ಹಿಂದೂಮತ*ದಲ್ಲಾಗಲಿ **ಮಹಮ್ಮದೀಯಮತ**ದಲ್ಲಾಗಲಿ **ಕ್ರಿಸ್ತೀಯಮತ**ದಲ್ಲಾಗಲಿ ಕಂಡು ಬಂದಿರುವ ಮತದ್ವೇಷಿಗಳೆಲ್ಲ ಬಹುಮಟ್ಟಿಗೆ ಈ ಕೀಳುತೆರದ ಭಕ್ತಿಯ ಅಂತಸ್ತಿನಲ್ಲಿದ್ದುಕೊಂಡು ದೇವರನ್ನು ಭಜಿಸುವವರ ಗುಂಪಿನಿಂದಲೇ ಬಂದವರಾಗಿರುತ್ತಾರೆ. ತಾನು ಪ್ರೀತಿಸುವ ವಸ್ತುವಿನಲ್ಲಿ **ಏಕನಿಷ್ಠೆ**ಯಿಲ್ಲದಿದ್ದರೆ ನಿಜವಾದ ಪ್ರೇಮವು ಬೆಳೆಯಲಾರದಷ್ಟೆ ; ಆದರೆ ಅನೇಕ ವೇಳೆಗಳಲ್ಲಿ ಆ ನಿಷ್ಠೆಯೇ ಉಳಿದ ಎಲ್ಲಾ ವಸ್ತುಗಳನ್ನೂ ಹಳಿಯುವದಕ್ಕೆ ಕಾರಣವಾಗಿರುತ್ತದೆ. ಪ್ರತಿಯೊಂದು ದೇಶದಲ್ಲಿಯೂ ಪ್ರತಿಯೊಂದು ಮತದಲ್ಲಿಯೂ ಇರುವ ಅಪಕ್ವಚಿತ್ತರಾದ ಪ್ರಾಕೃತಬುದ್ಧಿಯ ಜನರಿಗೆ ತಮ್ಮ ತಮ್ಮ ಇಷ್ಟವಸ್ತುವಿನಲ್ಲಿ ಪ್ರೇಮವಿರುವದಕ್ಕೆ ಒಂದೇ ಒಂದು ಮಾರ್ಗವು ತೋರುವದು ; ಇತರರ ಇಷ್ಟವಸ್ತುಗಳನ್ನೆಲ್ಲ ದ್ವೇಷಿಸುವದೇ ಆ ಮಾರ್ಗವು. ತನ್ನ ಧರ್ಮಪಂಥದಲ್ಲಿ ಅಷ್ಟೊಂದು ಪ್ರೇಮವನ್ನು ತೋರಿಸುತ್ತಾ ತನ್ನ ಧರ್ಮಪಂಥದಲ್ಲಿ ಅಷ್ಟೊಂದು ಶ್ರದ್ಧೆಯನ್ನು ಪ್ರಕಟಿಸುತ್ತಾ ಇರುವ ಮನುಷ್ಯನೇ ಮತ್ತೊಂದು ದೇವರ ವಿಷಯವಾದ ಅಥವಾ ಮತ್ತೊಂದು ಧರ್ಮಪಂಥದ ವಿಷಯವಾದ ಮಾತನ್ನು ಕಂಡರೆ ಅಥವಾ ಕೇಳಿದರೆ ಕೂಡಲೆ ಕಿಡಿಕಿಡಿಯಾಗಿ ಕೂಗಾಡುತ್ತಾ ಮತದ್ವೇಷವನ್ನು ತೋರಿಸುವದಕ್ಕೆ ಇದೇ ಕಾರಣವು. ಇಂಥ ಪ್ರೇಮವು ತನ್ನ ಒಡೆಯನ ಸ್ವತ್ತನ್ನು ಮತ್ತೊಬ್ಬರು ಮುಟ್ಟದಂತೆ ಕಾಯುವ ನಾಯಿಯ ಸ್ವಭಾವವನ್ನೇ ಸ್ವಲ್ಪ ಹೆಚ್ಚುಕಡಿಮೆಯಾಗಿ ಹೋಲುತ್ತಿರುವದು. ಆದರೆ ಮನುಷ್ಯನ ಈ ಬುದ್ಧಿಶಕ್ತಿಗಿಂತಲೂ ನಾಯಿಯ ಸ್ವಭಾವವನ್ನೇ ಒಂದು ತರದಿಂದ ಮೇಲೆನ್ನಬೇಕು ; ಏಕೆಂದರೆ ತನ್ನ ಯಜಮಾನನು

1. "ಅನ್ಯಸ್ಮಾತ್ ಸೌಲಭ್ಯಂ ಭಕ್ತೌ" (58), ಎಂಬ ನಾರದಭಕ್ತಿಸೂತ್ರದ ಸೂಚನೆ.

ಯಾವ ವೇಷದಿಂದ ಬರಲಿ, ನಾಯಿಯು ಅವನನ್ನು ಶತ್ರುವೆಂದು ಎಂದಿಗೂ ತಪ್ಪಾಗಿ ತಿಳಿದುಕೊಳ್ಳುವದಿಲ್ಲ. ಇನ್ನೊಂದು ವಿಷಯವೇನೆಂದರೆ, ಮತದ್ವೇಷಿಯಾದವನಿಗೆ ವಿವೇಚನಾ ಶಕ್ತಿಯು ತೀರ ಹೋಗಿಬಿಟ್ಟಿರುತ್ತದೆ. ಅವನಿಗೆ ಸ್ವಾರ್ಥವಿಚಾರವೇ ಬಹುಮುಖ್ಯವಾಗಿ ಲಕ್ಷಿಸಬೇಕಾದದ್ದಾಗಿರುವದರಿಂದ ಮತ್ತೊಬ್ಬರು ಹೇಳುವದು ಏನು, ಅದು ನ್ಯಾಯವೆ, ಅನ್ಯಾಯವೆ ? - ಎಂಬುದು ಬೇಕೇ ಇರುವದಿಲ್ಲ. ಅವನಿಗೆ ಯಾವಾಗಲೂ ಬೇಕಾಗಿರುವದೆಲ್ಲ ಒಂದೇ ಒಂದು ವಿಷಯ : ಅದನ್ನು ಹೇಳುವವರು ಯಾರು ? ತನ್ನಂತೆ ಅಭಿಪ್ರಾಯವುಳ್ಳ ಜನರ ವಿಷಯಕ್ಕೆ ದಯಾಳುವೂ ಪ್ರೀತಿಯುಕ್ತನೂ ಆಗಿರುವ ಅದೇ ಮನುಷ್ಯನೇ ತನ್ನ ಧರ್ಮಭ್ರಾತೃಗಳ ಗುಂಪಿಗೆ ಸೇರದೆ ಇರುವವರ ಮೇಲೆ ಎಂಥ ಕ್ರೂರಕೃತ್ಯಗಳನ್ನು ನಡೆಸುವದಕ್ಕೂ ಹಿಂಜರಿಯುವದಿಲ್ಲ.[1]

ಆದರೆ ಈ ಅಪಾಯವು ಭಕ್ತಿಯ ಆದಿಭಾಗವಾದ "ಸಾಧನಭಕ್ತಿ" **(ಗೌಣೀ)** ಯೆಂಬ ಅಂತಸ್ತಿನಲ್ಲಿ ಮಾತ್ರ ಇರುತ್ತದೆ. ಭಕ್ತಿಯು ಪರಿಪಕ್ವವಾಗಿ "ಹೆಚ್ಚಿನದು" **(ಪರಾ)** ಎಂಬ ರೂಪವನ್ನು ಪಡೆದಿರುವಾಗ ಇಂಥ ಮತದ್ವೇಷದ ಅವಿವೇಕಗಳಿಗೆ ಅವಕಾಶವಾದೀತೆಂಬ ಭಯವೇನೂ ಇರುವದಿಲ್ಲ. ಈ ಹೆಚ್ಚಿನ **ಪರಭಕ್ತಿಗೆ**[2] ಒಳಪಟ್ಟಿರುವ ಜೀವನು ಪ್ರೇಮ ಸ್ವರೂಪನಾದ ಭಗವಂತನ ಅತ್ಯಂತಸಾಮಿಪ್ಯವನ್ನು ಹೊಂದಿರುವ ಕಾರಣ ದ್ವೇಷವನ್ನು ಹರಡುವದಕ್ಕೆ ಎಂದಿಗೂ ತಾನು ನಿಮಿತ್ತನಾಗಲಾರನು.

ಈ ಲೋಕದಲ್ಲಿ ನಮ್ಮ ಸ್ವಭಾವವನ್ನು ಪರಿಪೂರ್ತಿಗೊಳಿಸುವದರಲ್ಲಿ ಎಲ್ಲಾ ಭಾಗಗಳಲ್ಲಿಯೂ ಹೊಂದಿಕೆಯಾಗಿರುವದೆಂಬುದು ನಮ್ಮೆಲ್ಲರಿಗೂ ಸಾಧ್ಯವಾದ ಮಾತಲ್ಲ. ಆದರೂ ಯಾವ ಸ್ವಭಾವದಲ್ಲಿ ಜ್ಞಾನ, ಭಕ್ತಿ[3], ಯೋಗ - ಈ ಮೂರೂ ಹೊಂದಿಕೆಯಿಂದ ಎರಕವಾಗಿರುವವೋ, ಅದೇ ಉತ್ತಮಜಾತಿಯದೆಂಬುದೇನೋ ನಿಶ್ಚಯವು. ಪಕ್ಷಿಗೆ ಹಾರುವ ದಕ್ಕೆ ಎರಡು ರೆಕ್ಕೆಗಳು, ಹಡಗನ್ನು ಗೊತ್ತಾದ ದಿಕ್ಕಿನಲ್ಲಿ ಮುಂದುವರಿಸುವದಕ್ಕೆ ಬೇಕಾದ

---

1. ಕ್ರಿಸ್ತಿಯರಲ್ಲಿ ಪ್ರಾಟೆಸ್ಟೆಂಟರು, ರೋಮನ್ ಕ್ಯಾಥೊಲಿಕರು ; ಮಹಮ್ಮದೀಯರಲ್ಲಿ ಸುನ್ನಿ, ಷಿಯ ; ಹಿಂದುಗಳಲ್ಲಿ ಶೈವವೈಷ್ಣವಶಾಕ್ತೇಯರು - ಇವರ ಪರಸ್ಪರನಿಂದಾದಿಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

2. ಸಂಸ್ಕೃತದಲ್ಲಿ ವಿಶೇಷ್ಯದ ಲಿಂಗವಚನವಿಭಕ್ತಿಗಳೇ ವಿಶೇಷಣಕ್ಕೂ ಹತ್ತುವವೆಂಬುದು ಸಾಮಾನ್ಯನಿಯಮವು ; ಭಕ್ತಿ ಶಬ್ದವು ಸ್ತ್ರೀಲಿಂಗವಾದ್ದರಿಂದ 'ಗೌಣೀ ಭಕ್ತಿ', 'ಪರಾ ಭಕ್ತಿ'..... ಎಂದು ಆ ಭಾಷೆಯಲ್ಲಿ ಪ್ರಯೋಗಿಸುತ್ತಾರೆ. ಕನ್ನಡದಲ್ಲಿ ಈ ನಿಯಮವೇನೂ ಇಲ್ಲದ್ದರಿಂದ ಗೌಣಭಕ್ತಿ ಪರಭಕ್ತಿ - ಎಂಬ ಪ್ರಯೋಗವೇ ಸರಿಹೋಗುತ್ತದೆ ; ಆದ್ದರಿಂದ ಈ ಅನುವಾದದಲ್ಲಿ ಹೀಗೆಯೇ ಬರೆದಿರುತ್ತದೆ.

3. ಕರ್ಮವನ್ನು ಸ್ವಾಮಿಗಳವರು ವೈಧೀಭಕ್ತಿಯಲ್ಲಿಯೇ ಅಡಕಮಾಡಿರುವರೆಂದು ತೋರುತ್ತದೆ.

ಕೆಳಹಲಗೆಯಂತಿರುವ ಒಂದು ಪುಚ್ಛ- ಹೀಗೆ ಮೂರೂ ಇದ್ದೇ ಇರಬೇಕಾಗುತ್ತದೆ. ಪ್ರಕೃತದಲ್ಲಿ ಜ್ಞಾನವೇ ಒಂದು ರೆಕ್ಕೆ, ಭಕ್ತಿಯೇ ಮತ್ತೊಂದು ರೆಕ್ಕೆ, ಯೋಗವೇ ಸಮತ್ವದಲ್ಲಿಡುವ ಪುಚ್ಛವು. ಈ ಮೂರು ವಿಧವಾದ ಸಾಧನಗಳನ್ನೂ ಹೊಂದಿಸಿಕೊಂಡು ನಡೆಯಿಸಲಾರದೆ ಭಕ್ತಿಮಾರ್ಗ ವೊಂದನ್ನೇ ಯಾರು ಅನುಸರಿಸುವರೋ, ಅವರು ಅವಶ್ಯವಾಗಿ ಯಾವಾಗಲೂ ನೆನಪಿನಲ್ಲಿಡ ಬೇಕಾದದ್ದೇನೆಂದರೆ, ಬಾಹ್ಯಸಾಧನಗಳೂ ಕರ್ಮಗಳೂ ಸಾಧಕನಿಗೆ ಬೇಕೇಬೇಕು; ಆದರೂ ಈಶ್ವರನಲ್ಲಿ ಪರಮಪ್ರೇಮವುಂಟಾಗುವ ಸ್ಥಿತಿಗೆ ಕರೆದುಕೊಂಡು ಹೋಗುವದೇ ಅವುಗಳ ಪ್ರಯೋಜನವೇ ಹೊರತು ಮತ್ತೇನೂ ಅವಕ್ಕೆ ಬೆಲೆಯಿರುವದಿಲ್ಲ.

ಜ್ಞಾನವನ್ನುಪದೇಶಿಸುವ ಆಚಾರ್ಯರುಗಳಿಗೂ ಭಕ್ತಿಯನ್ನುಪದೇಶಿಸುವ ಆಚಾರ್ಯರು ಗಳಿಗೂ ಒಂದು ಸಣ್ಣ ಮತಭೇದವಿರುವದು. ಭಕ್ತಿಯ ಅದ್ಭುತಶಕ್ತಿಯನ್ನು ಇಬ್ಬರೂ ಒಪ್ಪಿರುತ್ತಾರೆ; ಆದರೆ ಜ್ಞಾನಿಗಳು ಭಕ್ತಿಯು ಮುಕ್ತಿಗೆ ಸಾಧನವೆನ್ನುತ್ತಾರೆ, ಭಕ್ತರು ಭಕ್ತಿಯು ತಾನೇ ಸಾಧನವು, ತಾನೇ ಫಲವು[1] - ಎನ್ನುತ್ತಾರೆ. ನನ್ನ ಮನಸ್ಸಿಗೆ ಈ ಮತಭೇದದಿಂದ ಅಷ್ಟು ಹೆಚ್ಚುಕಡಿಮೆಯೇನೂ ಆದಂತೆ ಕಾಣುವುದಿಲ್ಲ. ನಿಜವಾಗಿ ನೋಡಿದರೆ ಸಾಧನವಾಗಿ ಉಪಯೋಗಿಸುವ ಭಕ್ತಿಯೆಂಬುದು ಒಂದು ಕಡಿಮೆಯ ರೂಪದ ಭಜನೆ[2]; ಮುಂದೆಮುಂದೆ ಹೋಗುತ್ತ ಭಕ್ತಿಯು ಬಲಿತುಕೊಂಡಮೇಲೆ ಸಿಕ್ಕುವ ಹೆಚ್ಚಿನ ರೂಪದ ಭಕ್ತಿಯನ್ನೂ ಜ್ಞಾನವನ್ನೂ ಬಿಡಿಸಿ ತೋರಿಸುವದಕ್ಕೇ ಆಗುವಂತಿರುವದಿಲ್ಲ. ಪೂರ್ಣಪ್ರೇಮವಿರುವಲ್ಲಿ ಬೇಡವೆಂದರೂ ನಿಜವಾದ ಜ್ಞಾನವು ಬರಲೇಬೇಕು. ಪೂರ್ಣಜ್ಞಾನವನ್ನು ಬಿಟ್ಟು ನಿಜವಾದ ಪ್ರೇಮವು ಇರಲೇ ಆರದು - ಎಂಬುದನ್ನು ಮರೆತು ಅವರವರು ತಮ್ಮ ತಮ್ಮ ಮಾರ್ಗವನ್ನೇ ಮುಖ್ಯವಾಗಿ ಎತ್ತಿಹಿಡಿದಿರುವಂತೆ ತೋರುತ್ತದೆ.

ಇಷ್ಟನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ವಿಷಯಕ್ಕೆ ವೇದಾಂತದ **ಮಹಾಭಾಷ್ಯ ಕಾರರುಗಳು**[3] ಏನು ಹೇಳಿರುತ್ತಾರೆಂಬುದನ್ನು ತಿಳಿಯುವದಕ್ಕೆ ಪ್ರಯತ್ನಿಸೋಣ. **'ಆವೃತ್ತಿರಸಕೃ ದುಪದೇಶಾತ್'** (ಬ್ರ. ಸೂ. 4-1-1) ಎಂಬ ಸೂತ್ರದರ್ಥವನ್ನು ವಿವರಿಸುವಾಗ **ಶ್ರೀಶಂಕರಭಗವತ್ಪಾದರವರು** ಹೇಳಿರುವದೇನೆಂದರೆ-''ಯಾವನು ತತ್ಪರನಾಗಿ ಗುರು

---

1. ಮನುಷ್ಯನ ಪರಮಪುರುಷಾರ್ಥವು ಭಗವತ್ಪ್ರೇಮವೇ, ಭುಕ್ತಿಮುಕ್ತಿಗಳಲ್ಲ - ಎಂಬುದು ಭಕ್ತರ ಮೂಲಮಂತ್ರವು. ಚೈತನ್ಯಪಂಥದಲ್ಲಿ ಈ ವಾದವು ಎದ್ದುಕಾಣುತ್ತದೆ.

2. ಇದನ್ನು ಮುಕ್ತಿಗೆ ನೇರವಾದ ಸಾಧನವೆಂದು ಜ್ಞಾನವಾದಿಗಳು ಒಪ್ಪುವದಿಲ್ಲ. ಪೀಠಿಕೆಯನ್ನು ನೋಡಿ.

3. ಶಂಕರ, ರಾಮಾನುಜ, ಮಧ್ವ - ಈ ಆಚಾರ್ಯರುಗಳು.

ಮುಂತಾದವರನ್ನು ಅನುಸರಿಸುತ್ತಾನೋ ಆವನ ವಿಷಯದಲ್ಲಿ 'ಇವನು ಗುರುವನ್ನು ಉಪಾಸನೆ ಮಾಡುತ್ತಿದಾನೆ', 'ಇವನು ರಾಜನನ್ನು ಉಪಾಸನೆಮಾಡುತ್ತಿದಾನೆ'- ಎಂದೀ ರೀತಿಯಲ್ಲಿ ಹೇಳಿಕೊಳ್ಳುತ್ತಾರೆ. ಹೀಗೆಯೇ ಯಾವಾಕೆಯು ನಿರಂತರವಾಗಿ ಸ್ಮರಿಸುತ್ತಾ ಪತಿಯಲ್ಲಿಯೇ ಕುತೂಹಲವುಳ್ಳವಳಾಗಿರುವಳೋ ಆಕೆಯ ವಿಷಯವಾಗಿಯೂ, 'ಗಂಡನು ಊರುಬಿಟ್ಟು ಹೋಗಿರುವದರಿಂದ ಇವಳು ಗಂಡನನ್ನು ಧ್ಯಾನಿಸುತ್ತಿದ್ದಾಳೆ' ಎನ್ನುವರು.'[1] **ಶಂಕರಾಚಾರ್ಯರ**[2] ಅಭಿಪ್ರಾಯದಂತೆ ನಿರಂತರವಾಗಿ ಧ್ಯಾನಿಸುವದೇ ಭಕ್ತಿಯ ಲಕ್ಷಣವೆಂದು ಹೇಳಿದಂತಾಯಿತು.

ಇನ್ನು **ಶ್ರೀರಾಮಾನುಜಾಚಾರ್ಯರ** ಆಭಿಪ್ರಾಯ : ''ಧ್ಯಾನವೆಂದರೆ ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಸುರಿದ ಎಣ್ಣೆಯ ಧಾರೆಯಂತೆ ಎಡೆಬಿಡದೆ ಧ್ಯೇಯವಸ್ತುವನ್ನು ನೆನಪಿನಲ್ಲಿಟ್ಟುಕೊಂಡೇ ಇರುವದು. ಇಂಥ ಈಶ್ವರಸ್ಮೃತಿಯು ಲಬ್ಧವಾದರೆ ಎಲ್ಲ ಗ್ರಂಥಿಗಳೂ ಬಿಚ್ಚಿಕೊಳ್ಳುವವು'' ಎಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಈ ಸ್ಮೃತಿಯೇ ಮೋಕ್ಷಕ್ಕೆ ಉಪಾಯವೆಂದಂತಾಯಿತು. ಇನ್ನು ಈ ಸ್ಮೃತಿಯೆಂಬುದು ದರ್ಶನದ ರೂಪವಾಗಿಯೇ ಇರುವದು. ಏಕೆಂದರೆ ''ದೂರದಲ್ಲಿಯೂ ಹತ್ತಿರದಲ್ಲಿಯೂ ಇರುವ ಆತನನ್ನು ಕಂಡರೆ ಹೃದಯಗ್ರಂಥಿಯು ಬಿಚ್ಚಿಕೊಳ್ಳುವದು, ಸಂಶಯಗಳೆಲ್ಲ ತೊಲಗುವವು, ಕರ್ಮಗಳ ಫಲಗಳೆಲ್ಲ ಇಲ್ಲವಾಗುವವು'' (ಮುಂ.) ಎಂಬ ಶ್ರುತಿಗೂ ಸ್ಮೃತಿಯಿಂದ ಮೋಕ್ಷವಾಗುವದೆಂದು ಹೇಳುವ ಈ ಶ್ರುತಿಗೂ ಏಕವಾಕ್ಯತೆಯಾಗಬೇಕಾಗಿದೆ. ಹತ್ತಿರವಿರುವವನನ್ನು[3] ನೋಡಬಹುದು, ಆದರೆ ದೂರದಲ್ಲಿರುವಾತನನ್ನು ಸ್ಮರಿಸುವದಕ್ಕೆ ಮಾತ್ರವೇ ಆಗುತ್ತದೆ; ಆದರೂ ಶ್ರುತಿಯು ಹತ್ತಿರದಲ್ಲಿರುವಾತನನ್ನೂ ದೂರದಲ್ಲಿರುವಾತನನ್ನೂ ನೋಡ ಬೇಕೆಂದೇ

---

1. ಈ ಅನುವಾದವನ್ನು ಸಂಸ್ಕೃತಮೂಲಕ್ಕೆ ಅನುಗುಣವಾಗಿ ಮಾರ್ಪಡಿಸಿಕೊಂಡಿದೆ.
2. ಶಂಕರಾಚಾರ್ಯರ ಸಿದ್ಧಾಂತದಲ್ಲಿ ಇದು ಉಪಾಸನೆಯ ಅಥವಾ ಗೌಣಭಕ್ತಿಯ ಲಕ್ಷಣವು. ನಿಜವಾದ ಭಕ್ತಿಯೆಂದರೆ ಆತ್ಮನಿಷ್ಠೆಯೇ. ಗೀ. ಭಾ. 18 - 54 ನ್ನು ನೋಡಿರಿ.
3. ಹತ್ತಿರವರುವವನನ್ನು ನೋಡಬಹುದು, ದೂರದಲ್ಲಿರುವವನನ್ನು ನೋಡಲಾಗುವದಿಲ್ಲ - ಎಂಬರ್ಥದ ವಾಕ್ಯವು ಶ್ರೀಭಾಷ್ಯದಲ್ಲಿ ಕಂಡುಬರುವದಿಲ್ಲ. ದರ್ಶನದಿಂದ ಆಗುವ ಮೋಕ್ಷವನ್ನೇ ಸ್ಮರಣೆಗೂ ಫಲವಾಗಿ ಹೇಳಿರುವದರಿಂದ ದರ್ಶನಕ್ಕೂ, ಸ್ಮರಣೆಗೂ ಭೇದವಿಲ್ಲವೆಂಬುದು ಶ್ರುತಿ ಸಮ್ಮತವಾದಂತಾಯಿತು - ಎಂದು ಶ್ರೀ ರಾಮಾನುಜಾಚಾರ್ಯರು ಹೇಳಿರುವರೆಂದು ತೋರುವದು.

ಹೇಳಿರುವದರಿಂದ ಮೇಲೆ ಹೇಳಿದ ಸ್ಮೃತಿಯೂ ದರ್ಶನವೂ ಎರಡೂ ಒಂದೇ ಎಂದು ಸೂಚಿಸಿದಂತಾಯಿತು[1] ..........★ ಭಾವನೆಯು ಬಲವಾದಂತೆ ಈ ಸ್ಮೃತಿಯು ದರ್ಶನದ ರೂಪವನ್ನೇ ಹೊಂದುವದು ...... ಉಪಾಸನೆ ಎಂದರೆ ಬಿಡದೆ ನೆನಪಿನಲ್ಲಿಟ್ಟಿರುವದು - ಎಂಬುದು ಶಾಸ್ತ್ರವಚನಗಳಿಂದ ಕಂಡುಬಂದಿರುತ್ತದೆ [2] ....... ಉಪಾಸನಾರೂಪವಾಗಿರುವ ತಿಳಿವನ್ನು ಮತ್ತೆ ಮತ್ತೆ ಅಭ್ಯಾಸಮಾಡಿದರೆ ಧ್ರುವಾನುಸ್ಮೃತಿಯಾಗುವದು ಎಂದು ವರ್ಣಿಸಿರುತ್ತಾರೆ ..... ಹೀಗೆ ಪ್ರತ್ಯಕ್ಷರೂಪವನ್ನು ಮುಟ್ಟಿದರೆ ಮೋಕ್ಷಕ್ಕೆ ಸಾಧನವಾಗುವ ಈ ಸ್ಮೃತಿಯನ್ನು ಶ್ರುತಿಯು ಈ ರೀತಿಯಾಗಿ ವಿಶೇಷರೂಪದಿಂದ ತಿಳಿಸುತ್ತದೆ. 'ಈ ಆತ್ಮನನ್ನು ನಾನಾಶಾಸ್ತ್ರಗಳಿಂದಾಗಲಿ, ಬುದ್ಧಿಯಿಂದಾಗಲಿ, ಹೆಚ್ಚಾದ ವೇದಾಧ್ಯಯನದಿಂದಾಗಲಿ ಪಡೆಯಲಾಗುವದಿಲ್ಲ. ಯಾವಾತನನ್ನು ಈ ಆತ್ಮನು ಬಯಸುತ್ತಾನೋ ಆತನಿಗೇ ಈ ಆತ್ಮನು ಸಿಕ್ಕುವನು. ಆತನಿಗೇ ಈ ಆತ್ಮನು ತನ್ನ ಸ್ವರೂಪವನ್ನು ಬಿಚ್ಚಿ ತೋರಿಸುವನು' (ಕಠ). ಈ ಶ್ರುತಿಯಲ್ಲಿ ಕೇವಲ ಶ್ರವಣಮನನನಿದಿಧ್ಯಾಸನಗಳು ಈ ಆತ್ಮನನ್ನು ಪಡೆಯುವದಕ್ಕೆ ಸಾಧನಗಳಾಗಲಾರವೆಂದು ಹೇಳಿ, ಈ ಆತ್ಮನು ಯಾರನ್ನು ಬಯಸುವನೋ ಅವನಿಗೇ, ಈ ಆತ್ಮನು ಸಿಕ್ಕುವನು - ಎಂದು ಹೇಳಿರುತ್ತದೆ. ಯಾರಾದರೂ ತಮಗೆ ಅತ್ಯಂತ ಪ್ರಿಯರಾದವರನ್ನೇ ಬಯಸುತ್ತಾರೆ. ಯಾವಾತನಿಗೆ ಈ ಆತ್ಮನು ನಿರತಿಶಯವಾಗಿ ಪ್ರಿಯವಾಗಿರುವನೋ ಆತನೇ ಈ ಆತ್ಮನಿಗೆ ಅತ್ಯಂತಪ್ರಿಯನಾಗಿರುವನು. ಈ ತನ್ನ ಪ್ರಿಯತಮನು ಆತ್ಮಸಾಕ್ಷಾತ್ಕಾರವನ್ನು ಹೊಂದಲಿ ಎಂದು ಭಗವಂತನು ತಾನೇ ಸಹಾಯ ಮಾಡುವನು. ಆದ್ದರಿಂದಲೇ 'ಯಾವಾಗಲೂ ನನ್ನಲ್ಲಿಯೇ ಆಸಕ್ತರಾಗಿ ಪ್ರೀತಿಯಿಂದ ಭಜಿಸುತ್ತಿರುವರಲ್ಲ, ಅಂಥವರಿಗೆ ನನ್ನನ್ನೇ ಬಂದು ಸೇರುವಂಥ ಬುದ್ಧಿಯೋಗವನ್ನು ಕೊಡುತ್ತೇನೆ' (ಭ. ಗೀ.) ಎಂದು ಭಗವಂತನೇ ಹೇಳಿರುವನು. ಆದ್ದರಿಂದ ಸ್ಮರಿಸಲ್ಪಡುವ ವಸ್ತುವಾದ ಪರಮಾತ್ಮನಿಗೆ ಬಹಳವಾಗಿ ಪ್ರಿಯವಾಗಿರುವದೆಂಬ ಕಾರಣದಿಂದ ಯಾವಾತನಿಗೆ ಸಾಕ್ಷಾತ್ಕಾರರೂಪವಾದ ಈ ಸ್ಮರಣವು ಅತಿಶಯವಾಗಿ ಪ್ರಿಯವಾಗಿರುವದೋ ಆತನನ್ನೇ ಪರಮಾತ್ಮನು ಬಯಸುವನು, ಆತನಿಗೇ ಪರಮಾತ್ಮನ ಲಾಭವಾಗುವದು - ಎಂದು ಹೇಳಿದಂತಾಯಿತು. ಈ ರೂಪವಾದ ಧ್ರುವಾನುಸ್ಮೃತಿಯೇ ಭಕ್ತಿಶಬ್ದದಿಂದ ಹೇಳಲ್ಪಡುವದು."[3] ಹೀಗೆಂದು **'ಅಥಾತೋ ಬ್ರಹ್ಮಜಿಜ್ಞಾಸಾ'** (ಬ್ರ. ಸೂ. 1-1-1) ಎಂಬ ಸೂತ್ರದ ಮೇಲೆ ಬರೆದಿರುವ ಶ್ರೀಭಾಷ್ಯದಲ್ಲಿ **ಭಗವದ್ರಾಮಾನುಜಾಚಾರ್ಯರವರು** ಹೇಳಿರುತ್ತಾರೆ.

---

1..............★ ಹೀಗೆ ಚುಕ್ಕೆ ಹಾಕಿರುವ ಕಡೆಗಳಲ್ಲೆಲ್ಲ ಮೂಲಭಾಷ್ಯದಲ್ಲಿರುವ ಕೆಲವು ವಾಕ್ಯಗಳನ್ನು ಬಿಟ್ಟಿರುತ್ತದೆಯೆಂದು ತಿಳಿಯಬೇಕು.

2. ಈ ಅರ್ಥದ ವಾಕ್ಯವೂ ಮೂಲದಲ್ಲಿರುವದಿಲ್ಲ.

**"ಈಶ್ವರಪ್ರಣಿಧಾನಾದ್ವಾ"** (ಈಶ್ವರಪ್ರಣಿಧಾನದಿಂದಲಾಗಲಿ) ಎಂಬ ಪತಂಜಲಿಸೂತ್ರ (ಯೋ.ಸೂ.1-23)ಕ್ಕೆ ವೃತ್ತಿಯನ್ನು ಬರೆಯುವಾಗ ಭೋಜನೆಂಬಾತನು ಹೇಳಿರುವದೇನೆಂದರೆ -"ಪ್ರಣಿಧಾನವೆಂದರೆ ವಿಷಯಸುಖವೇ ಮುಂತಾದ ಫಲವನ್ನು ಇಚ್ಛಿಸದೆ ಸರ್ವಕ್ರಿಯೆಗಳನ್ನೂ ಗುರುಗಳಿಗೆಲ್ಲ ಗುರುವಾದ ಪರಮೇಶ್ವರನಿಗೆ ಅರ್ಪಣ ಮಾಡುವ ಒಂದು ಬಗೆಯ ಭಕ್ತಿಯು."[4] ಇದೇ ಸೂತ್ರದ ಮೇಲೆ ಭಾಷ್ಯವನ್ನು ಬರೆಯುವಾಗ **ಭಗದ್ವ್ಯಾಸರು**[1] ಪ್ರಣಿಧಾನವೆಂದರೆ ಈಶ್ವರನ ಅನುಗ್ರಹವು ಯೋಗಿಗೆ ದೊರೆತು ಅವನ ಇಷ್ಟವನ್ನು ನೆರವೇರಿಸುವ ಭಕ್ತಿವಿಶೇಷವೆಂದು[2] ಹೇಳಿರುತ್ತಾರೆ.[5]

ಶಾಂಡಿಲ್ಯರ ಮತದಲ್ಲಿ ಭಕ್ತಿಯೆಂದರೆ "ಈಶ್ವರನಲ್ಲಿರುವ ಪರಮಾನುರಕ್ತಿಯು"[6] (ಶಾಂ. ಸೂ) ಆದರೆ ಇವೆಲ್ಲಕ್ಕಿಂತಲೂ ಉತ್ತಮವಾದ ಲಕ್ಷಣವೆಂದರೆ ಭಕ್ತರಾಜನಾದ ಪ್ರಹ್ಲಾದನು ಕೊಟ್ಟಿರುವದು :

"ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥"

(ವಿ. ಪು. 1 - 20 - 19)

"ವಿವೇಕರಹಿತರಾದವರಿಗೆ ಅನಿತ್ಯವಾದ ವಿಷಯಗಳಲ್ಲಿ ಎಂದೆಂದಿಗೂ ನಾಶವಾಗದ ಯಾವ ಬಗೆಯ ಪ್ರೀತಿಯಿರುವದೋ, ನಿನ್ನನ್ನು ಸ್ಮರಿಸುತ್ತಿರುವಾಗ ಅಂಥ ಪ್ರೀತಿಯು ನನ್ನ ಹೃದಯವನ್ನು ಎಂದಿಗೂ ಬಿಟ್ಟುಹೋಗದೆ ಇದ್ದುಕೊಂಡಿರಲಿ!" ಪ್ರೀತಿಯೆಂದರೆ ಯಾರ ಮೇಲಿನ ಪ್ರೀತಿ ? ಪರಮೇಶ್ವರನ ಮೇಲಿನ ಪ್ರೀತಿಯೇ. ಮತ್ತೆ ಯಾವ ವಸ್ತುವಿನ ಮೇಲಿನ ಪ್ರೀತಿಯಾದರೂ ಅದು ಎಷ್ಟೇ ಹೆಚ್ಚಿನದಾಗಿರಲಿ, ಅದು ಭಕ್ತಿಯೆನಿಸಲಾರದು ; ಏಕೆಂದರೆ ಒಬ್ಬ ಪೂರ್ವಾಚಾರ್ಯರ[1] ಸಮ್ಮತಿಯಿಂದ ಶ್ರೀರಾಮಾನುಜಾಚಾರ್ಯರು ತಮ್ಮ ಶ್ರೀಭಾಷ್ಯದಲ್ಲಿ[2]

---

1. ಈ ಭಾಷ್ಯವನ್ನು ಬರೆದ ವ್ಯಾಸರು ವೇದಾಂತ ಸೂತ್ರಗಳನ್ನು ರಚಿಸಿರುವ ಬಾದರಾಯಣರೆ, ಅಲ್ಲವೆ ? ಮಹಾಭಾರತವನ್ನು ಬರೆದ ವ್ಯಾಸರು ಬೇರೆಯೆ ? ಎಂಬ ವಿಷಯಕ್ಕೆ ಭಿನ್ನಾಭಿಪ್ರಾಯಗಳುಂಟು.

2. ಇದು ಭಾಷ್ಯದ ಒಟ್ಟರ್ಥವು ; ಅಕ್ಷರಾರ್ಥವು ಹೀಗಿರುವದು : "ಪ್ರಣಿಧಾನವೆಂಬ ಭಕ್ತಿವಿಶೇಷದಿಂದ ವಶನಾದ ಈಶ್ವರನು ಚಿಂತಿಸಿದ ಮಾತ್ರದಿಂದಲೇ ಅವರಿಗೆ ಅನುಗ್ರಹಮಾಡುತ್ತಾನೆ ; ಬರಿಯ ಆತನ ಚಿಂತೆಯಿಂದ ಕೂಡ ಯೋಗಿಗೆ ಸಮಾಧಿಲಾಭವೂ, ಸಮಾಧಿಫಲವೂ ತೀರ ಹತ್ತಿರವಾಗುತ್ತದೆ."

ಹೇಳಿರುವಂತೆ "ಈ ಪ್ರಪಂಚದಲ್ಲಿ ಬ್ರಹ್ಮನು ಮೊದಲಾಗಿ ಮೋಟುಮರದವರೆಗಿನ ಪ್ರಾಣಿ ಗಳೆಲ್ಲ ಕರ್ಮದಿಂದುಂಟಾದ ಹುಟ್ಟು ಸಾವುಗಳೆಂಬ ಸಂಸಾರಕ್ಕೆ ಅಡಿಯಾಳಾಗಿರುವವು ; ಆದ್ದರಿಂದ ಅವು ಧ್ಯಾನಿಗಳಿಗೆ ಧ್ಯಾನಕ್ಕೆ ಉಪಯೋಗವಾಗುವದಿಲ್ಲ, ಏಕೆಂದರೆ ಅವೆಲ್ಲ ಅಜ್ಞಾನದೊಳಗೆ ಸೇರಿಕೊಂಡಿವೆ, ಸಂಸಾರದ ಮಾರ್ಪಾಡಿಗೆ ಒಳಗಾಗಿರುತ್ತವೆ"[7]

ಶಾಂಡಿಲ್ಯರು ಉಪಯೋಗಿಸಿರುವ 'ಅನುರಕ್ತಿ' ಎಂಬ ಮಾತನ್ನು ವಿವರಿಸುವಾಗ ಭಾಷ್ಯಕಾರರಾದ **ಸ್ವಪ್ನೇಶ್ವರರು** ಇದು ಅನು - ಆಮೇಲೆ ಆಗುವ, ರಕ್ತಿ - ರಾಗವು ; ಎಂದರೆ ಭಗವಂತನ ಸ್ವರೂಪ, ಮಹಿಮೆ - ಮುಂತಾದವುಗಳನ್ನು ತಿಳಿದುಕೊಂಡಮೇಲೆ ಉಂಟಾಗುವ ಪ್ರೇಮವು. ಹಾಗಿಲ್ಲದೆ (ಬರಿಯ ಪ್ರೇಮವೇ ಭಕ್ತಿಯೆಂದರೆ) ಹೆಂಡತಿ, ಮಕ್ಕಳು - ಮೊದಲಾದವರಲ್ಲಿ ಯಾರಲ್ಲಿಯಾದರೂ ಪ್ರೀತಿಯಿದ್ದರೆ ಆದೂ ಭಕ್ತಿಯಾಗಿಬಿಡುವುದು"[8] ಎಂದು ಹೇಳಿರುತ್ತಾರೆ.[3]

ಆದ್ದರಿಂದ ಮೊದಮೊದಲು ಸಾಮಾನ್ಯವಾದ ಉಪಾಸನೆಯ ರೂಪದಲ್ಲಿ ಮೊದಲಾಗಿ ಕೊನೆಗೆ ಈಶ್ವರನಲ್ಲಿರುವ ನಿರತಿಶಯಪ್ರೇಮರೂಪವಾಗಿ ಪರಿಣಮಿಸುವ ಮಾನಸಪ್ರಯತ್ನ ಧಾರೆಯೇ ಭಕ್ತಿಯೆಂದು ಸ್ಪಷ್ಟವಾಯಿತು.

---

1. ಶೌನಕರ ವಾಕ್ಯವಿದು.
2. ಶ್ರೀಭಾಷ್ಯದ ಜಿಜ್ಞಾಸಾಧಿಕರಣ ಭಾಷ್ಯದಲ್ಲಿ ಮುಂದಿನ ಪುಟದಿಂದ ಇಲ್ಲಿದೆ.
3. ಇಲ್ಲಿ ಕೊಟ್ಟಿರುವದು ಸ್ವಪ್ನೇಶ್ವರಭಾಷ್ಯದ ಅಕ್ಷರಾರ್ಥವಲ್ಲ, ತಾತ್ಪರ್ಯಮಾತ್ರವಾಗಿರುತ್ತದೆ.

# 2. ಈಶ್ವರತತ್ತ್ವಜಿಜ್ಞಾಸೆ

ಈಶ್ವರನೆಂದರೆ ಯಾರು ? ''ಜನ್ಮಾದ್ಯಸ್ಯ ಯತಃ'' (ಬ್ರ. ಸೂ. 1-1-2) - ಈ ಪ್ರಪಂಚದ ಸೃಷ್ಟಿಯೂ ಸ್ಥಿತಿಯೂ ನಾಶವೂ ಯಾವಾತನಿಂದ ಆಗುವವೋ ಆತನು ; ''ನಿತ್ಯನೂ ಶುದ್ಧನೂ ಮುಕ್ತನೂ ಸರ್ವಶಕ್ತನೂ ಸರ್ವಜ್ಞನೂ ಕರುಣಾಮಯನೂ ಗುರುಗಳಿಗೆಲ್ಲ ಗುರುವೂ''[9] ಆಗಿರುವವನು ; ಇದೆಲ್ಲಕ್ಕಿಂತಲೂ ಮುಖ್ಯವಾಗಿ ''ಸ ಈಶ್ವರೋಽನಿರ್ವಚನೀಯ ಪ್ರೇಮಸ್ವರೂಪಃ'' (?) - ಆ ಈಶ್ವರನು ಇಂಥದ್ದೆಂದು ಹೇಳಲಳವಲ್ಲದ ಪ್ರೇಮಸ್ವರೂಪನು.

ಇವುಗಳೆಲ್ಲ **ಸಗುಣ**ನಾದ[1] ದೇವರ ಲಕ್ಷಣಗಳೆಂಬುದು ನಿಶ್ಚಯ. ಹಾಗಾದರೆ ''ಇದಲ್ಲ ಇದಲ್ಲ'' (ಬೃ)[10] ಎಂದು ತತ್ತ್ವಜ್ಞಾನಿಯು ಹೇಳುವ ಸಚ್ಚಿದಾನಂದ ಸ್ವರೂಪನಾದ ದೇವರೊಬ್ಬನು, ಭಕ್ತನು ಹೇಳುವ ಈ ಪ್ರೇಮಸ್ವರೂಪನಾದ ದೇವರೊಬ್ಬನು - ಹೀಗೆ ಇಬ್ಬರು ದೇವರಿದಾರೆಯೇನು?-ಎಂದರೆ ಹಾಗಲ್ಲ. ಅದೇ ಸಚ್ಚಿದಾನಂದನೇ ಪ್ರೇಮಸ್ವರೂಪನಾದ ಈಶ್ವರನೂ ಆಗಿರುವನು ; ಸಗುಣನೂ ಅವನೇ, ನಿರ್ಗುಣನೂ ಅವನೇ. ಭಕ್ತನು ಉಪಾಸನೆ ಮಾಡುವ ಈಶ್ವರನು ಬ್ರಹ್ಮಕ್ಕಿಂತ ಬೇರೆಯಾಗಿರುವದಿಲ್ಲ, ಅದಕ್ಕಿಂತ ಬೇರೆಯಲ್ಲ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು. ಸರ್ವವೂ ಅದ್ವಿತೀಯವಾದ ಬ್ರಹ್ಮವೇ; ಆದರೆ ಅದ್ವಿತೀಯವಾದ ನಿರುಪಾಧಿಕಬ್ರಹ್ಮವು ಅತಿಸೂಕ್ಷ್ಮವಾಗಿರುವದರಿಂದ[2] ಅದನ್ನು ಪ್ರೀತಿಸುವದಕ್ಕಾಗಲಿ ಉಪಾಸನೆಮಾಡುವದಕ್ಕಾಗಲಿ ಆಗುವಂತಿಲ್ಲ ; ಆದ್ದರಿಂದ ಭಕ್ತನು ಬ್ರಹ್ಮದ ಸೋಪಾಧಿಕರೂಪವನ್ನು, ಎಂದರೆ **ಈಶ್ವರ**ನನ್ನು ಆರಿಸಿಕೊಂಡಿರುತ್ತಾನೆ. ಇದಕ್ಕೊಂದು ದೃಷ್ಟಾಂತವನ್ನು ಕೊಡಬಹುದು. ಮಣ್ಣಿನಿಂದ ಅನೇಕ ಪದಾರ್ಥಗಳನ್ನು ಮಾಡುವದಕ್ಕೆ ಬರುತ್ತದೆಯಲ್ಲವೆ ? ಬ್ರಹ್ಮವು ಉಪಾದಾನಕಾರಣವಾದ ಈ ಮಣ್ಣಿನಂತಿರುವದು. ಮಣ್ಣಿನ ದೃಷ್ಟಿಯಿಂದ ನೋಡಿದರೆ ಅದರಿಂದಾಗಿರುವ ಪದಾರ್ಥಗಳೆಲ್ಲ ಒಂದೇ ; ಆದರೂ ಅಭಿವ್ಯಕ್ತವಾಗಿರುವ ಆಕಾರಗಳ ದೃಷ್ಟಿಯಿಂದ ನೋಡಿದರೆ ಅವು ಬೇರೆಬೇರೆಯಾಗಿರುವವು. ಅವುಗಳಲ್ಲಿ ಒಂದೊಂದು ಪದಾರ್ಥವೂ ಬೇರೆಬೇರೆಯಾಗಿ ರೂಪುಗೊಳ್ಳುವದಕ್ಕೆ ಮೊದಲು ಅವೆಲ್ಲವೂ ಅವ್ಯಕ್ತರೂಪದಿಂದ ಮಣ್ಣಿನಲ್ಲಿಯೇ ಇದ್ದವು. ಮಣ್ಣೆಂಬ ದ್ರವ್ಯದ ದೃಷ್ಟಿಯಿಂದ

---

1. ಈ ವಿಷಯದಲ್ಲಿ ಪೀಠಿಕೆಯನ್ನು ನೋಡಿರಿ.

2. ಇಲ್ಲಿರುವ 'Abstraction' ಎಂಬ ಇಂಗ್ಲಿಷ್ ಮಾತಿಗೆ ಸೂಕ್ಷ್ಮ, ಅತೀಂದ್ರಿಯ, ಅವಿಷಯ- ಎಂಬ ಅರ್ಥವನ್ನು ಮಾಡಬೇಕು ; ವಸ್ತುಶೂನ್ಯವಾದ ಮಾನಸವಿಕಲ್ಪವೆಂಬ ಪಾರಿಭಾಷಿಕಾರ್ಥವನ್ನು ಇಟ್ಟುಕೊಳ್ಳ ಬಾರದು ; ಏಕೆಂದರೆ ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಅದರ ಅರಿವು ಎಂದಿಗೂ ಬರಿಯ ವಿಕಲ್ಪವಾಗಲಾರದು.

ನೋಡಿದರಂತೂ ಅವುಗಳೆಲ್ಲ ಒಂದೇ ಆಗಿರುತ್ತವೆ. ಆದರೆ ಅವು ರೂಪುಗೊಂಡಮೇಲೆ, ಆಯಾ ರೂಪವು ಇದ್ದುಕೊಂಡಿರುವವರೆಗೂ, ಅವುಗಳು ಒಂದಕ್ಕೊಂದು ಸಂಬಂಧವಿಲ್ಲದೆ ಬೇರೆಬೇರೆಯಾಗಿಯೇ ಇರುವವು. ಮಣ್ಣಿನ ಇಲಿಯು ಎಂದಿಗೂ ಮಣ್ಣಿನ ಆನೆಯಾಗಲಾರದು. ಏಕೆಂದರೆ ನಿರಾಕಾರವಾದ ಮಣ್ಣಿನ ದೃಷ್ಟಿಯಿಂದ ಅವುಗಳೆರಡೂ ಒಂದೇ ಆದರೂ ವ್ಯಕ್ತರೂಪದಲ್ಲಿ ಆಕಾರದಿಂದಲೇ ಅವುಗಳೂ ಅವುಗಳ ಆಯಾ ವ್ಯಕ್ತಿಗಳಾಗಿರುತ್ತವೆ. ನಿರುಪಾಧಿಕಸತ್ಯದ ಅತ್ಯಂತ ಉತ್ಕೃಷ್ಟವಾದ ವ್ಯಕ್ತಾಕಾರವೇ, ಅಂದರೆ ಮಾನವನ ಮನಸ್ಸು ಆ ನಿರುಪಾಧಿಕತತ್ತ್ವವನ್ನು ಯಾವರೂಪದಲ್ಲಿ ಮಾತ್ರವೇ ತಿಳಿದುಕೊಳ್ಳುವದಕ್ಕೆ ಸಾಧ್ಯವೋ ಆ ರೂಪವೇ **ಈಶ್ವರ**ನು. ಸೃಷ್ಟಿಯು ಹೇಗೆ ಅನಾದಿಯೋ ಹಾಗೆಯೇ ಈಶ್ವರನೂ ಅನಾದಿಯು.[1]

**ಬ್ರಹ್ಮಸೂತ್ರ**ದ ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ ಮುಕ್ತಜೀವನಿಗೆ ಮೋಕ್ಷವನ್ನು ಪಡೆದುಕೊಂಡಕೂಡಲೆ ಸ್ವಲ್ಪ ಹೆಚ್ಚುಕಡಿಮೆ ಅನಂತವಾದ ಶಕ್ತಿಯೂ ಜ್ಞಾನವೂ ಬರುವದೆಂದು ತಿಳಿಸಿರುತ್ತದೆ. ಅಲ್ಲಿ ಪ್ರಸಕ್ತಾನುಪ್ರಸಕ್ತಿಯಿಂದ ವ್ಯಾಸರು, ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವದಕ್ಕೆ ಮಾತ್ರ ಯಾವ ಜೀವನಿಗೂ ಬರಲಾರದೆಂದೂ ಆ ಶಕ್ತಿಯು ಪರಮೇಶ್ವರನಿಗೆ ಮಾತ್ರ ಸೇರಿದ್ದೆಂದೂ ಒಂದಾನೊಂದು ಸೂತ್ರದಲ್ಲಿ[2] ಹೇಳಿರುತ್ತಾರೆ. ಈ ಸೂತ್ರಕ್ಕೆ ವ್ಯಾಖ್ಯಾನವನ್ನು ಬರೆಯುವಾಗ, ಅಲ್ಪಶಕ್ತಿಯುಳ್ಳ ಜೀವನು ದೇವರಂತೆ ಅನಂತ ಶಕ್ತಿಯನ್ನೂ ಸಂಪೂರ್ಣಸ್ವಾತಂತ್ರ್ಯವನ್ನೂ ಎಂದೆಂದಿಗೂ ಪಡೆಯಲಾರನೆಂದು ದ್ವೈತ ಭಾಷ್ಯಕಾರರುಗಳು ಸುಲಭವಾಗಿ ತಿಳಿಸಿಬಿಟ್ಟಿರುತ್ತಾರೆ. ಪೂರ್ಣದ್ವೈತಿಗಳಾದ **ಶ್ರೀಮಧ್ವಾಚಾರ್ಯರು** ತಮ್ಮ ಭಾಷ್ಯದಲ್ಲಿ **ವರಾಹಪುರಾಣ**ದಿಂದ ಒಂದು ಶ್ಲೋಕವನ್ನು ಉದಾಹರಿಸಿ ತಮ್ಮ ಪದ್ಧತಿಯಮೇರೆಗೆ ಸಂಕ್ಷೇಪರೀತಿಯಿಂದಲೇ ಈ ಗ್ರಂಥಭಾಗದ ವ್ಯಾಖ್ಯಾನವನ್ನು ಮುಗಿಸಿಬಿಟ್ಟಿರುವರು.[10]

ಈ ಸೂತ್ರವನ್ನು ವಿವರಿಸುವಾಗ ವಿಶಿಷ್ಟಾದ್ವೈತಭಾಷ್ಯಕಾರರಾದ **ರಾಮಾನುಜರು**[11] ಹೇಳಿರುವದೇನೆಂದರೆ :[3]"ಮುಕ್ತಜೀವರಿಗೆ ಉಂಟಾಗುವ ಸಿದ್ಧಿಗಳಲ್ಲಿ ಪರಮಪುರುಷನ ಅಸಾಧಾರಣಶಕ್ತಿಯಾದ ಜಗತ್ಸೃಷ್ಟಿಯನ್ನು ಮಾಡುವದೇ★ ಮುಂತಾದ ಸರ್ವೇಶ್ವರತ್ವವು ಕೂಡ ಸೇರಿದೆಯೊ, ಅಥವಾ ಆ ಪರಮಪುರುಷನನ್ನು ಸಾಕ್ಷಾತ್ತಾಗಿ ಅನುಭವಿಸುವದೇ

1. ಭ. 13 - 12, 19ನ್ನು ನೋಡಿ.
2. "ಜಗದ್ವ್ಯಾಪಾರವರ್ಜಂ ಪ್ರಕರಣಾದಸನ್ನಿಹಿತತ್ವಾಚ್ಚ" - ಎಂಬ (4 - 4 - 17) ಸೂತ್ರದಲ್ಲಿ.
3. ಈ ಅನುವಾದದೊಳಗೆ ನಕ್ಷತ್ರಚಿಹ್ನೆಯನ್ನು ಹಾಕಿರುವ ಕಡೆಯಲ್ಲೆಲ್ಲ ಸ್ವಾಮಿಗಳ ಅಭಿಪ್ರಾಯಕ್ಕೆ ವಿರೋಧವಾಗದಂತೆಯೇ ಭಾಷ್ಯಾನುಗುಣವಾಗಿ ವಾಕ್ಯಗಳನ್ನು ತಿದ್ದಿದೆ.

ಅವರಿಗುಂಟಾಗುವ ಈಶ್ವರತ್ವವೊ? ಎಂದು ಸಂಶಯವು ಬರಲಾಗಿ ಮೊದಲು ನೋಡುವದಕ್ಕೆ ತೋರಬಹುದಾದ ಪೂರ್ವಪಕ್ಷವೇನೆಂದರೆ, ಜಗದೀಶ್ವರತ್ವವೂ ಮುಕ್ತನಿಗೆ ಬರುವದು ಯುಕ್ತವು. ಏಕೆಂದರೆ ಶ್ರುತಿಯಲ್ಲಿ★ 'ಯಾವದರ ಲೇಪವೂ ಇಲ್ಲದ ಪರಮೇಶ್ವರನ ಪರಮ ಸಾಮ್ಯವನ್ನು ಪಡೆಯುತ್ತಾನೆ' ಎಂದೂ 'ಆತನ ಸಂಕಲ್ಪಗಳೆಲ್ಲ ಪರಿಪೂರ್ಣವಾಗುವವು' (ಛಾ.) ಎಂದೂ ಹೇಳಿದೆ. ಆದರೆ ಜಗತ್ತನ್ನು ಆಳುವದೆಂಬ ಸರ್ವೇಶ್ವರನ ಅಸಾಧಾರಣ ಶಕ್ತಿಯಿಲ್ಲದಿದ್ದರೆ ಈ ಪರಮ ಸಾಮ್ಯವಾಗಲಿ ಸತ್ಯಸಂಕಲ್ಪತ್ವವಾಗಲಿ ಉಂಟಾಗಲಾರದು. ಆದ್ದರಿಂದ ಸತ್ಯಸಂಕಲ್ಪತ್ವವೂ ಪರಮಸಾಮ್ಯವೂ ಉಂಟಾಗುವದಕ್ಕಾಗಿ ಮುಕ್ತರಿಗೆ ಜಗತ್ತನ್ನೆಲ್ಲ ಆಳುವ ಶಕ್ತಿಯೂ ಬರುವುದೆಂತ ನಾವು ಒಪ್ಪಲೇಬೇಕು - ಎಂಬುದು ಪೂರ್ವಪಕ್ಷವು. ಇದಕ್ಕೆ ನಮ್ಮ ಉತ್ತರವೇನೆಂದರೆ, ಮುಕ್ತರಿಗೆ ಜಗದ್ವ್ಯಾಪಾರವೊಂದನ್ನು ಬಿಟ್ಟು ಮಿಕ್ಕ ಎಲ್ಲಾ ಶಕ್ತಿಗಳೂ ಉಂಟಾಗುವವು. ಜಗದ್ವ್ಯಾಪಾರವೆಂದರೆ ಎಲ್ಲಾ ಚೇತನಾಚೇತನಗಳ ಬಗೆಬಗೆಯ ಸ್ವರೂಪ, ಸ್ಥಿತಿ, ಪ್ರವೃತ್ತಿ - ಇವುಗಳನ್ನು ಗೊತ್ತುಪಡಿಸುವದು. ಈ ಜಗದ್ವ್ಯಾಪಾರವೇನೂ ಮುಕ್ತನಿಗೆ ಬರುವದಿಲ್ಲ. ಪರಮಾತ್ಮನ ನಿಜವಾದ ಸ್ವರೂಪವನ್ನು ಮರೆಮಾಡಿದ್ದ ಆವರಣವನ್ನೆಲ್ಲ ದೂರಮಾಡಿಕೊಂಡು, ಯಾವ ಅಡ್ಡಿಯೂ ಇಲ್ಲದೆ ಬ್ರಹ್ಮವನ್ನು ಅನುಭವಿಸುವದೇ ಮುಕ್ತನಿಗೆ ಉಂಟಾಗುವ ಈಶ್ವರತ್ವವು. 'ಯಾವದರಿಂದ ಈ ವಸ್ತುಗಳೆಲ್ಲ ಹುಟ್ಟುವವೋ, ಯಾವದರಿಂದ ಹುಟ್ಟಿದವುಗಳೆಲ್ಲ ಬದುಕಿರುವವೋ, ಈ ಲೋಕವನ್ನು ಬಿಟ್ಟು ಯಾವದನ್ನೇ ಸೇರುತ್ತವೆಯೋ - ಅದನ್ನು ವಿಚಾರಮಾಡು, ಅದೇ ಬ್ರಹ್ಮವು' (ತೈ.) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಈ ಜಗನ್ನಿಯಾಮಕತ್ವಗುಣವು ಮುಕ್ತರಿಗೂ ಸಾಧಾರಣವಾದ ಗುಣವಾಗಿಬಿಟ್ಟರೆ ಈ ಶ್ರುತಿ ವಚನವು ಜಗದೀಶ್ವರನಾಗಿರುವದೇ ಬ್ರಹ್ಮತ್ವವು-ಎಂದು ತಿಳಿಸುವ ಲಕ್ಷಣವಾಕ್ಯವಾಗಲಾರದೆ ಹೋಗುವದು. ಏಕೆಂದರೆ ಅಸಾಧಾರಣಧರ್ಮವೇ★ ಲಕ್ಷಣವು. ಹೀಗೆಯೇ★ 'ಎಲೈ , ಪ್ರಿಯಬಾಲಕನೆ, ಮೊದಲು ಇದು★ ಸದ್ರೂಪವಾದ ಅದ್ವಿತೀಯವಾದ ಒಂದೇ ಒಂದಾಗಿತ್ತು. ಅದು ನಾನು ಬಹಳವಾಗಿ ಅನೇಕವನ್ನು ಉತ್ಪತ್ತಿಮಾಡುವೆನೆಂದು ನೋಡಿ ಯೋಚಿಸಿ ಕೊಂಡಿತು. ಅದು ತೇಜಸ್ಸನ್ನುಂಟುಮಾಡಿತು' (ಛಾ.), 'ಇದು ★ ಮೊದಲು ಬ್ರಹ್ಮವೊಂದೇ ಆಗಿತ್ತು. ಅದು ಒಂದೇ ಆಗಿದ್ದದ್ದರಿಂದ ಸಾಕಾಗಲಿಲ್ಲ.★ ಅದು ಕ್ಷತ್ರವೆಂಬ ಪ್ರಶಸ್ತರೂಪ ವೊಂದನ್ನು ಸೃಷ್ಟಿಮಾಡಿತು. ಇಂದ್ರ, ವರುಣ, ಸೋಮ, ರುದ್ರ, ಪರ್ಜನ್ಯ, ಯಮ, ಮೃತ್ಯು, ಈಶಾನ - ಈ ದೇವತೆಗಳೆಲ್ಲ ಕ್ಷತ್ರರು' (ಬೃ.), 'ಇದು ★ ಮೊದಲು ಆತ್ಮವೊಂದೇ ಆಗಿತ್ತು : ವ್ಯಾಪಾರವುಳ್ಳದ್ದು ಮತ್ತೆ ಯಾವದೂ ಇರಲಿಲ್ಲ. ಅವನು ಲೋಕವನ್ನು ಸೃಷ್ಟಿಸೋಣವೆಂದು ★ ಯೋಚಿಸಿದನು : ಆತನು ಈ ಲೋಕಗಳನ್ನು ★ ಸೃಷ್ಟಿಸಿದನು.' (ಐ.), 'ನಾರಾಯಣನೊಬ್ಬನೇ ಇದ್ದನು : ಬ್ರಹ್ಮನಾಗಲಿ, ಈಶಾನನಾಗಲಿ, ಈ★ ದ್ಯಾವಾಪೃಥಿವಿಗಳಾಗಲಿ, ನಕ್ಷತ್ರಗಳಾಗಲಿ, ನೀರಾಗಲಿ, ಬೆಂಕಿಯಾಗಲಿ,

ಸೋಮನಾಗಲಿ, ಸೂರ್ಯನಾಗಲಿ ಇರಲಿಲ್ಲ. ಒಬ್ಬನೇ ಇರುವದು ಆತನಿಗೆ ಒಗ್ಗಲಿಲ್ಲ. ಧ್ಯಾನಾವಸ್ಥೆಯಲ್ಲಿರುವ★ ಅವನಿಗೆ ಒಬ್ಬ ಕನ್ಯೆಯೂ ಹತ್ತು ಇಂದ್ರಿಯಗಳೂ ಹುಟ್ಟಿದವು' (ಮಹೋ.)-ಇತ್ಯಾದಿ ವಚನಗಳಲ್ಲಿಯೂ 'ಯಾವಾತನು ಭೂಮಿಯಲ್ಲಿದ್ದು ಭೂಮಿಗಿಂತ ಬೇರೆಯಾಗಿರುವನೋ'(ಬೃ.)-ಇತ್ಯಾದಿ ವಾಕ್ಯಗಳಲ್ಲಿಯೂ ಎಲ್ಲಾ ಜಗತ್ತನ್ನೂ ಆಳುವದೆಂಬುದು ಪರಮಪುರುಷನನ್ನು ಕುರಿತೇ ಶ್ರುತಿಗಳಲ್ಲಿ ಹೇಳಲ್ಪಟ್ಟಿರುತ್ತದೆ. ಇಡಿಯ ಜಗತ್ತನ್ನೇ ಆಳುವದನ್ನು ಹೇಳುವ ವಾಕ್ಯಗಳಲ್ಲಿ ಮುಕ್ತಜೀವನ ವಿಷಯವೇ ಕಂಡುಬರುವದಿಲ್ಲ. ಹಾಗೇನಾದರೂ ಕಂಡುಬಂದಿದ್ದರೆ ಇಂಥ ಜೀವನಿಗೆ ಜಗದ್ವ್ಯಾಪಾರವು ಸೇರಿದೆಯೆನ್ನ ಬಹುದಾಗಿತ್ತು."[11] ಹೀಗೆಂದು ಹೇಳಿ ಶ್ರೀರಾಮಾನುಜಾ- ಚಾರ್ಯರು ಇದರ ಮುಂದಿನ ಸೂತ್ರವನ್ನು[1] ವಿವರಿಸುವಾಗ "ಇದಕ್ಕೆ ವಿರುದ್ಧವಾಗಿ ಮುಕ್ತರಿಗೆ ಜಗದ್ವ್ಯಾಪಾರವೂ ಉಂಟೆಂದು ಪ್ರತ್ಯಕ್ಷವಾಗಿ ಹೇಳುವ ಪ್ರಮಾಣ ವಚನಗಳು★ ಕಂಡುಬರುವದರಿಂದ ಹೀಗೆ ಹೇಳುವುದು ಸರಿಯಲ್ಲ -ಎಂದು ನೀವು ಹೇಳಬಹುದು, ಆದರೆ ಈ ವಚನಗಳು ಆಧಿಕಾರಿಕದೇವತೆಗಳ ಲೋಕಗಳಲ್ಲಿ ಮುಕ್ತಜೀವರುಗಳು ಅನುಭವಿಸುವ ಐಶ್ವರ್ಯವನ್ನು ತಿಳಿಸುತ್ತವೆಯೆಂಬುದೇ ನಮ್ಮ ಉತ್ತರವು"[12]-ಎಂದು ಬರೆದಿರುತ್ತಾರೆ. ಪ್ರಕೃತದ ತೊಡಕನ್ನು ಬಿಚ್ಚುವದಕ್ಕೆ ಇದೂ ಒಂದು ಸುಲಭವಾದ ಉಪಾಯವೇ ಸರಿ. ರಾಮಾನುಜ ಸಿದ್ಧಾಂತದಲ್ಲಿ ಏಕತ್ವವನ್ನು ಒಪ್ಪಿದ್ದರೂ ಅವೊಂದು ಒಟ್ಟಿನೊಳಗೆ ನಿತ್ಯಭೇದಗಳಿವೆ ಯೆಂದು ಅವರು ಅಂಗೀಕರಿಸಿರುತ್ತಾರೆ. ಅಂತೂ ಅವರದೂ ಸ್ವಲ್ಪ ಹೆಚ್ಚುಕಡಿಮೆ ದ್ವೈತಸಿದ್ಧಾಂತವೇ ಆಗಿರುವದರಿಂದ ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಭೇದವನ್ನು ಸ್ಪಷ್ಟವಾಗಿ ವಿಂಗಡಿಸಿ ತೋರಿಸುವದು ರಾಮಾನುಜಾಚಾರ್ಯರಿಗೂ ಸುಲಭವೇ ಆಯಿತು.

ಅದ್ವೈತವಾದಿಗಳ ಮಹಾಪ್ರತಿನಿಧಿಗಳಾದ **ಶಂಕರಾಚಾರ್ಯರು** ಈ ವಿಷಯದಲ್ಲಿ ಹೇಳುವದೇನೆಂಬುದನ್ನು ಈಗ ನೋಡೋಣ. ದ್ವೈತಿಯ ಯಾವ ಪ್ರತ್ಯಾಶೆಗಳಿಗೂ ಮನೋರಥಗಳಿಗೂ ಭಂಗವಾಗದಂತೆ ನೋಡಿಕೊಂಡು ಮಾನವರು ಮುಟ್ಟಬೇಕಾಗಿರುವ ದೈವಿಕವಾದ ಪರಮಪದವಿಗೂ ಲೋಪವಾಗದಂತೆ ಪ್ರಕೃತಪ್ರಶ್ನೆಗೆ ಸ್ವತಂತ್ರವಾದ ತನ್ನದೇ ಒಂದು ಸ್ವತಂತ್ರವಾದ ಉತ್ತರವನ್ನು ಅದ್ವೈತ ಸಿದ್ಧಾಂತವು ಹೇಗೆ ಕೊಟ್ಟಿರುವದೆಂಬುದನ್ನು ನೋಡೋಣ. ಮುಕ್ತಿಯಾದಮೇಲೂ ತಮ್ಮ ತಮ್ಮ ಮನಸ್ಸನ್ನು ಇಟ್ಟುಕೊಂಡು ತಾವು ಬೇರೆಯಾಗಿಯೇ ಇರಬೇಕೆಂದು ಬಯಸುವವರಿಗೆ ತಮ್ಮ ಮನೋರಥವನ್ನು ಪೂರ್ಣ ಮಾಡಿಕೊಂಡು ಸಗುಣ ಬ್ರಹ್ಮಾನಂದವನ್ನು ಹೊಂದುವದಕ್ಕೂ ಇಲ್ಲಿ ಬೇಕಾದಷ್ಟು ಅವಕಾಶವಿರುವದು. ಇಂಥವರ ವಿಚಾರವನ್ನು ಕುರಿತೇ **ಭಾಗವತಪುರಾಣ**ದಲ್ಲಿ ಹೀಗೆಂದು

1. "ಪ್ರತ್ಯಕ್ಷೋಪದೇಶಾದಿತಿ ಚೇನ್ನಾಧಿಕಾರಿಕಮಣ್ಡಲಸ್ಥೋಕ್ತೇಃ" - ಎಂಬ (4- 4 - 18) ಸೂತ್ರದಲ್ಲಿ

ಹೇಳಿದೆ : "ಭಗವಂತನ ಕಲ್ಯಾಣಗುಣಗಳು ಎಂಥವುಗಳೆಂದರೆ ಕೇವಲ ಆತ್ಮರತಿಯುಳ್ಳವರೂ ಸಕಲ ಬಂಧಗಳನ್ನೂ ಕಡಿದುಹಾಕಿರುವವರೂ ಆಗಿರುವ ಮಹಾತ್ಮರು ಕೂಡ ಸರ್ವವ್ಯಾಪಿಯಾದ ಭಗವಂತನನ್ನು ಪ್ರೇಮೈಕಹೇತುವಿನಿಂದ ಭಜಿಸುತ್ತಿರುವರು." (ಭಾಗ)13 ಈ ಕಲ್ಪದಲ್ಲಿ ಪ್ರಕೃತಿಲಯವನ್ನು ಹೊಂದಿ ಪರಿಪೂರ್ಣರಾಗಿ ಮುಂದಿನ ಕಲ್ಪದಲ್ಲಿ ಪ್ರಪಂಚದ **ಪ್ರಜಾಪತಿ**ಗಳಾಗುವರೆಂದು **ಸಾಂಖ್ಯರು** ಹೇಳುತ್ತಾರಷ್ಟೆ , ಅದೂ ಇಂಥವರ ವಿಷಯವೇ. ಆದರೆ ಇದರಲ್ಲಿ ಯಾರೊಬ್ಬನೂ ಎಂದಿಗೂ ಈಶ್ವರಸಮಾನನಾಗುವದಿಲ್ಲ. ಸೃಷ್ಟಿ, ಸ್ರಷ್ಟವ್ಯ, ಸ್ರಷ್ಟೃ; ಜ್ಞಾನ, ಜ್ಞೇಯ, ಜ್ಞಾತೃ; ನಾನು, ನೀನು, ಅವನು ; ವಿಷಯಿ, ವಿಷಯ, ಸಂಬಂಧ -ಇವು ಯಾವವೂ ಇಲ್ಲದಂಥ ಸ್ಥಿತಿಯನ್ನು "ಯಾರು ಯಾರಿಂದ ನೋಡಿಸಿಕೊಳ್ಳುವರು ?" (ಬೃ)14ಎಂಬ ಸ್ಥಿತಿಯನ್ನು ಯಾರು ಪಡೆಯುವರೋ ಅಂಥವರು ಎಲ್ಲಕ್ಕೂ ಅತೀತರಾಗಿರುವರು ; "ಮನಸ್ಸಾಗಲಿ ಮಾತುಗಳಾಗಲಿ ಮುಟ್ಟುವುದಕ್ಕಾಗದ" (ತೈ.)15 ಎಲ್ಲವನ್ನೂ ಮೀರಿದ ಸ್ಥಿತಿಗೆ ಹೋಗಿರುತ್ತಾರೆ ; ಶ್ರುತಿಗಳು "ಇದಲ್ಲ, ಇದಲ್ಲ" (ಬೃ)16 ಎಂದು ವರ್ಣಿಸಿರುವ ವಸ್ತುವನ್ನೇ ಸೇರಿರುತ್ತಾರೆ. ಆದರೆ ಯಾರು ಈ ಸ್ಥಿತಿಯನ್ನು ಹೊಂದಲಾರರೋ ಅಥವಾ ಹೊಂದಲಿಚ್ಛಿಸುವದಿಲ್ಲವೋ ಅವರ ಭಾಗಕ್ಕೆ ನಿರ್ಭೇದವಾಗಿ ಒಂದೇ ಆಗಿರುವ ಬ್ರಹ್ಮವನ್ನು ಜಡ, ಜೀವ, ಮತ್ತು ಇವೆರಡರಲ್ಲಿ ಅಂತರ್ಯಾಮಿಯಾಗಿರುವ ಈಶ್ವರ ಎಂಬ ತ್ರಿಪುಟಿಯ ದೃಷ್ಟಿಯಿಂದ ಕಾಣುವದು ಉಳಿದುಕೊಂಡೇ ಇರುವದು. ಆದ್ದರಿಂದಲೇ **ಪ್ರಹ್ಲಾದ**ನು ಭಕ್ತ್ಯತಿರೇಕದಿಂದ ತನ್ನನ್ನು ತಾನು ಮರೆತುಬಿಟ್ಟಾಗ ಪ್ರಪಂಚವಾಗಲಿ ಅದರ ಕಾರಣವಾಗಲಿ ಅವನಿಗೆ ತೋರಲಿಲ್ಲ ; ಅವನಿಗೆ ಎಲ್ಲವೂ ನಾಮರೂಪಗಳ ಭೇದವಿಲ್ಲದೆ ಒಂದೇ ಒಂದು ಅನಂತಸತ್ತಾರೂಪವಾಗಿತ್ತು. ಆದರೆ ತಾನು ಪ್ರಹ್ಲಾದನೆಂಬ ನೆನಪು ಬಂತೋ ಇಲ್ಲವೋ, ಅವನ ಮುಂದೆ ಪ್ರಪಂಚವೂ ಕಾಣಿಸಿಕೊಂಡಿತು, ಅದರೊಡನೆ 'ಅನಂತಕಲ್ಯಾಣಗುಣಾಕರನಾದ'17 ಸರ್ವೇಶ್ವರನೂಗೋಚರನಾದನು. ಭಾಗ್ಯಶಾಲಿಗಳಾದ ಗೋಪಿಯರ ವಿಚಾರವೂ ಹೀಗೆಯೇ. ಅವರಿಗೆ ತಾವು ಇಂಥವರೆಂಬ ವ್ಯಕ್ತಿಜ್ಞಾನವು ಎಲ್ಲಿಯವರೆಗೆ ಅಳಿಸಿಹೋಗಿತ್ತೋ ಅಲ್ಲಿಯವರೆಗೆ ಅವರೆಲ್ಲರೂ ಕೃಷ್ಣರೇ ಆಗಿದ್ದರು, ಆದರೆ ಆತನು ಉಪಾಸ್ಯನೆಂದು ಮತ್ತೆ ಆತನ ವಿಷಯದಲ್ಲಿ ಬುದ್ಧಿಯುಂಟಾಯಿತೋ ಇಲ್ಲವೋ, ಆಗ ಅವರು ಗೋಪಿಯರೇ ಆದರು; ಕೂಡಲೆ "ಮುಖಪದ್ಮವು ಹುಸಿನಗೆಯಿಂದ ಅರಳುತ್ತಿರಲು ಪೀತಾಂಬರಧಾರಿಯಾಗಿಯೂ ವನಮಾಲೆಯನ್ನು ಧರಿಸಿದವನಾಗಿಯೂ ಸಾಕ್ಷಾದ್ಮನ್ಮಥ ಮನ್ಮಥನಾಗಿಯೂ ಇದ್ದ ಕೃಷ್ಣನು ಅವರಿಗೆ ಪ್ರತ್ಯಕ್ಷನಾದನು."18

---

13. ಸಂಸ್ಕೃತಮೂಲದಲ್ಲಿ 'ಎಲೈ ರಾಜನೆ' ಎಂಬ ಮಾತುಗಳಿಲ್ಲ, ಸಂದರ್ಭಕ್ಕೂ ಹೊಂದುವ ಹಾಗಿಲ್ಲ ಆದ್ದರಿಂದ ಅವುಗಳು ಮೂಲದಲ್ಲಿದ್ದರೂ ಅನುವಾದದಲ್ಲಿ ಸೇರಿಸಿಲ್ಲ.

ಇನ್ನು ನಮ್ಮ ***ಶಂಕರಾಚಾರ್ಯರ*** ಅಭಿಪ್ರಾಯದ ಕಡೆಗೆ ಹಿಂತೆರಳೋಣ. ಅವರು ಹೇಳಿರುವದೇನೆಂದರೆ, "ಯಾರು ಸಗುಣಬ್ರಹ್ಮದ ಉಪಾಸನೆಯಿಂದ ತಮ್ಮ ತಮ್ಮ ಮನಸ್ಸನ್ನು ಉಳಿಸಿಕೊಂಡೇ ಈಶ್ವರಸಾಯುಜ್ಯವನ್ನು ಪಡೆಯುತ್ತಾರೋ ಅಂಥವರ ಐಶ್ವರ್ಯವು ಸಾಂಕುಶವಾಗಿರುವದೊ, ನಿರಂಕುಶವಾಗಿರುವದೊ?-ಎಂಬೀ ಸಂಶಯವು ಬರಲಾಗಿ ಮೊದಲನೆಯ ಪಕ್ಷದಲ್ಲಿ ತೋರುವದೇನೆಂದರೆ, 'ಸ್ವಾರಾಜ್ಯವನ್ನು ಪಡೆಯುತ್ತಾನೆ' (ತೈ.) 'ಆತನಿಗೆ ಎಲ್ಲಾ ದೇವತೆಗಳೂ ಪೂಜೆಯನ್ನು ಮಾಡುವರು' (ತೈ.), 'ಅವರು ಎಲ್ಲ ಲೋಕಗಳಲ್ಲಿಯೂ ಇಷ್ಟಬಂದಂತೆ ಇರಬಹುದು' (ಛಾ.)-ಇವೇ ಮುಂತಾದ ಶ್ರುತಿಗಳಿರುವದರಿಂದ ಅವರ ಐಶ್ವರ್ಯವು ನಿರಂಕುಶವಾಗಿಯೇ ಇರಬೇಕು. ಈ ಪೂರ್ವಪಕ್ಷಕ್ಕೆ ಉತ್ತರವಾಗಿ ವ್ಯಾಸರು 'ಜಗದ್ವ್ಯಾಪಾರವು ಹೊರತು' ಎಂದು ಬರೆದಿರುತ್ತಾರೆ. ಜಗತ್ತಿನ ಸೃಷ್ಟಿಯೇ ಮುಂತಾದ ವ್ಯಾಪಾರವನ್ನು ಬಿಟ್ಟು ಉಳಿದ ಅಣಿಮಾ[1] ಮುಂತಾದ ಸಿದ್ಧಿಗಳನ್ನು ಪಡೆಯುವದೇ ಮುಕ್ತರ ಈಶ್ವರತ್ವವಾಗಿರುವದು, ಜಗದ್ವ್ಯಾಪಾರವು ಮಾತ್ರ ನಿತ್ಯಸಿದ್ಧನಾದ ಈಶ್ವರನದೇ ಸರಿ. ಏಕೆಂದರೆ ಆ ವಾಕ್ಯಗಳಲ್ಲಿ[2] ಆತನನ್ನು ಉದ್ದೇಶಿಸಿಯೇ ಹೇಳಿರುತ್ತದೆ, ಮತ್ತು ಮುಕ್ತರ ವಿಚಾರವು ಆ ಬಳಿ ಇರುವದೂ ಇಲ್ಲ. ಪರಮೇಶ್ವರನೇ ಜಗದ್ವ್ಯಾಪಾರಕ್ಕೆ ತಕ್ಕವನು, ಏಕೆಂದರೆ ಆತನನ್ನುದ್ದೇಶಿಸಿಯೇ ಉತ್ಪತ್ತ್ಯಾದಿಗಳನ್ನು ಶ್ರುತಿಯಲ್ಲಿ ಉಪದೇಶ ಮಾಡಿರುತ್ತದೆ. ಆತನಿಗೆ 'ನಿತ್ಯಸಿದ್ಧ'ನೆಂಬ ವಿಶೇಷಣವೂ ಇರುತ್ತದೆ. ಆತನನ್ನು ಅನ್ವೇಷಣಮಾಡಿ ಉಪಾಸನೆ ಮಾಡುವದರಿಂದಲೇ ಮಿಕ್ಕವರಿಗೆ ಅಣಿಮಾದ್ಯೈಶ್ವರ್ಯ ವುಂಟಾಗುವದೆಂದೂ ಶ್ರುತಿಗಳಲ್ಲಿ ಹೇಳಿದೆ. ಆದ್ದರಿಂದ ಜಗದ್ವ್ಯಾಪಾರವಿಚಾರದಲ್ಲಿ † ಅವರ ಸಂಬಂಧವಿಲ್ಲ. ಇದೂ ಅಲ್ಲದೆ ಅವರಿಗೆ ಬೇರೆಬೇರೆ ಮನಸ್ಸಿರುವದರಿಂದಲೇ ಐಕಮತ್ಯವಿಲ್ಲದೆಹೋಗಿ ಒಬ್ಬನಿಗೆ ಜಗತ್ತಿನ † ಸ್ಥಿತಿಯಾಗಬೇಕೆಂದಿರುವಾಗ ಮತ್ತೊಬ್ಬನಿಗೆ ಲಯವಾಗಬೇಕೆಂಬ ಅಭಿಲಾಷೆಯಾಗಿ ಒಬ್ಬರ ಅಭಿಪ್ರಾಯವು ಒಂದುವೇಳೆ ಮತ್ತೊಬ್ಬರದಕ್ಕೆ ವಿರುದ್ಧವಾಗಿಯೂ ಆಗಬಹುದು. ಯಾರಾದರೊಬ್ಬನ ಸಂಕಲ್ಪಕ್ಕನುಗುಣವಾಗಿ ಉಳಿದವರ ಸಂಕಲ್ಪವೂ ಇರುವದೆಂದು ಈ ವಿರೋಧವನ್ನು ಪರಿಹರಿಸಿಕೊಳ್ಳುವದಾದರೆ ಉಳಿದ ಮುಕ್ತಜೀವರುಗಳ ಮನಸ್ಸುಗಳೂ ಪರಮೇಶ್ವರನ ಮನಸ್ಸಿಗೆ ಅಧೀನವಾಗಿರುವವೆಂದೇ ಹೇಳಿದಂತಾಗುವದರಿಂದ † ನಮ್ಮ ಪಕ್ಷವೇ ಸಿದ್ಧವಾಗುವದು"[19]

---

1. ಅಣುವಿನಷ್ಟು ಸಣ್ಣವನಾಗುವ ಸಿದ್ಧಿಯು.

2. ಈ ಭಾಷ್ಯಭಾಗವನ್ನು ಸಂಸ್ಕೃತಮೂಲಕ್ಕೆ ಹೋಲಿಸಿ, ಸ್ವಾಮಿಗಳ ಅಭಿಪ್ರಾಯಕ್ಕೆ ವಿರುದ್ಧವಾಗದಂತೆ ತಿದ್ದಿ ಅಲ್ಲಲ್ಲಿ † ಹೀಗೆ ಗುರುತುಮಾಡಿರುತ್ತದೆ.

ಹೀಗಿರುವದರಿಂದ ಬ್ರಹ್ಮದ ಸಗುಣರೂಪದಲ್ಲಿ ಮಾತ್ರವೇ ಭಕ್ತಿಯನ್ನು ಮಾಡಬಹುದೆಂದಾಯಿತು. ''ಅವ್ಯಕ್ತದಲ್ಲಿ ಆಸಕ್ತವಾಗಿರುವ ಚಿತ್ತವುಳ್ಳವರಿಗೆ ಮಾರ್ಗದಲ್ಲಿ ಹೆಚ್ಚು ಕಷ್ಟವಿರುವದು'' (ಗೀ.)[20] ಭಕ್ತನು ಮಾನುಷಸ್ವಭಾವಕ್ಕೆ ಅನುಗುಣವಾಗಿ ಹಾಯಾಗಿ ಈಜಿಕೊಂಡು ಹೋಗುತ್ತಿರುವನು. ಬ್ರಹ್ಮವೆಂದರೆ ನಮಗೆ ಮಾನವದೃಷ್ಟಿಗೆ[1] ಅನುಗುಣವಾದ ಅಭಿಪ್ರಾಯವಾಗುವದೇ ಹೊರತು ಮತ್ತೆ ಯಾವ ರೀತಿಯ ಅಭಿಪ್ರಾಯವೂ ಆಗಲಾರದೆಂಬುದು ನಿಜವೆ ; ಆದರೆ ನಮಗೆ ತಿಳಿಯಬರುವ ಪ್ರತಿಯೊಂದರ ವಿಷಯವೂ ಹೀಗೆಯೇ ಇರುವದಲ್ಲವೆ? ಹೊರಗೆ ಇಂದ್ರಿಯಗಳಿಂದಾಗುವ ಗ್ರಹಣದ ಮತ್ತು ಒಳಗೆ ಮನಸ್ಸಿನಲ್ಲಾಗುವ ಆಲೋಚನೆಯ ವಿಷಯಗಳ ರಚನೆಯಲ್ಲೆಲ್ಲ ಮಾನವಮನಸ್ಸು ಸೇರಿಕೊಂಡೇ ಇರುವದೆಂದು ಸಾವಿರಾರು ವರ್ಷಗಳ ಹಿಂದೆಯೇ ಪ್ರಪಂಚಮನಶ್ಶಾಸ್ತ್ರಜ್ಞರಲ್ಲಿ ಅಗ್ರೇಸರರಾದ **ಭಗವತ್ಕಪಿಲರು** ತೋರಿಸಿಕೊಟ್ಟಿರುವರು.[2] ನಮ್ಮ ಶರೀರವನ್ನು ಮೊದಲುಮಾಡಿಕೊಂಡು ಈಶ್ವರನವರೆಗೆ ನಮ್ಮ ಜ್ಞಾನಕ್ಕೆ ಗೋಚರವಾಗುವ ಪ್ರತಿಯೊಂದು ವಿಷಯವೂ ಈ ಮನಸ್ಸು ಮತ್ತು ಇನ್ನೇನೋ ಒಂದು - ಇವೆರಡೂ ಸೇರಿಕೊಂಡೇ ಇರುವವು. ಆ ಇನ್ನೊಂದು ಯಾವದೆಂಬುದು ನಮಗೆ ತಿಳಿಯದು, ಆದರೂ ಅಪರಿಹರಣೀಯವಾದ ಈ ಎರಡರ ಮಿಶ್ರಣವನ್ನೇ ನಾವು ಸಾಮಾನ್ಯವಾಗಿ ವಿಷಯದ ಇರವೆಂದು ಎಣಿಸುತ್ತಿರುವೆವು. ನಿಜವಾಗಿ ನೋಡಿದರೆ ಈ ಮಾನವನ ಮನಸ್ಸಿಗೆ ತಿಳಿಯುವದಕ್ಕೆ ಸಾಧ್ಯವಾಗಿರುವ ತತ್ತ್ವವೆಂಬುದೆಲ್ಲ ಇಷ್ಟೇ, ಮುಂದೆ ಸಾಧ್ಯವಾಗಬಹುದಾಗಿರುವದೂ ಇಷ್ಟೆ. ಆದ್ದರಿಂದ ನಮ್ಮ ಅರಿವು ಮಾನವೀಯ ದೃಷ್ಟಿಗೆ ಬದ್ಧವಾಗಿರುವದರಿಂದ ಈಶ್ವರನು ಸತ್ಯವಲ್ಲ ಎಂದು ಹೇಳುವದು ಶುದ್ಧ ಅವಿವೇಕದ ಮಾತು. ವಿಜ್ಞಾನವಾದ[3] (idealism), ಬಾಹ್ಯಸತ್ಯತ್ವವಾದ (realism) ಎಂದು ಪಶ್ಚಿಮ ದೇಶದವರು ಹೊಡೆದಾಡುತ್ತಿರುವ ವ್ಯರ್ಥವಾದಗಳನ್ನೇ ಇದೂ ಹೋಲುತ್ತದೆ. ನೋಡುವದಕ್ಕೆ ಅಷ್ಟು ಗಡುಸಾಗಿ ತೋರುವ ಆ ಪಶ್ಚಿಮದೇಶದ ಜಗಳಕ್ಕೆ ಅವರು 'ಸತ್ಯ'ವೆಂಬ ಮಾತಿಗೆ ಇಟ್ಟುಕೊಂಡಿರುವ ಶ್ಲೇಷಾರ್ಥವೇ ಮೂಲವು. ಈಶ್ವರನೆಂಬ

---

1. ಮನುಷ್ಯನ ಬುದ್ಧಿಗೆ ಗೋಚರನಾಗುವ ದೇವರು ಮನುಷ್ಯದೃಷ್ಟಿಗೆ ಅನುಗುಣವಾಗಿರುತ್ತಾನೆಂಬುದು ಸಹಜವಾಗಿದೆ ; ಆದ್ದರಿಂದ ಸ್ವತಃ ಆತನು ಹೇಗಿರುವನೆಂಬುದು ಭಕ್ತನಿಗೆ ಗೊತ್ತಾದಂತಾಗಲಿಲ್ಲ - ಎಂದು ಕೆಲವರು ಆಕ್ಷೇಪಿಸುವದುಂಟು. ಇದಕ್ಕೆ ಇಲ್ಲಿ ಪರಿಹಾರವನ್ನು ಹೇಳಿದ್ದಾರೆ.

2. ಈ ಮಾತನ್ನು ಸ್ವಾಮಿಗಳು ಯಾವ ವಾಕ್ಯವನ್ನು ಆಧಾರವಾಗಿಟ್ಟುಕೊಂಡು ಹೇಳಿರುವರೆಂಬುದು ತಿಳಿಯದು. ''ವೇದಾಂತೋಪನ್ಯಾಸಗಳು'' ಎಂಬ ಹೆಸರಿನಿಂದ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟವಾಗಿರುವ ಪುಸ್ತಕದ 80 - 81 ನೆಯ ಪುಟಗಳನ್ನು ನೋಡಿರಿ ; ಅಲ್ಲಿ ಇದರ ವಿವರವು ಕಂಡುಬರುತ್ತದೆ.

3. ಮಾನಸವಿಜ್ಞಾನಕ್ಕಿಂತ ಬೇರೆಯಾಗಿ ಹೊರಗಿನ ವಸ್ತುವಿಲ್ಲವೆಂಬ ವಾದ.

ಭಾವನೆಯಲ್ಲಿ ಸತ್ಯವೆಂಬ ಮಾತಿನ ವ್ಯಾಚ್ಯಾರ್ಥಲಕ್ಷ್ಯಾರ್ಥಗಳೆಲ್ಲ ಸೇರಿಕೊಂಡೇ ಇರುವವು. ಆದ್ದರಿಂದ ಈ ಪ್ರಪಂಚದಲ್ಲಿ ಯಾವಯಾವದನ್ನು ನಾವು ನಿಜವೆನ್ನುವೆವೊ, ಅದಕ್ಕಿಂತಲೂ ಈಶ್ವರನು ಎಳ್ಳಷ್ಟೂ ಕಡಿಮೆಯಾಗಿ ನಿಜವಾಗಿರುವನೆನ್ನುವ ಹಾಗಿಲ್ಲ. ಇದೂ ಅಲ್ಲದೆ ಸತ್ಯವೆಂಬ ಮಾತಿಗೆ ಈಗ ನಾವು ತೋರಿಸಿರುವ[1] ಅರ್ಥವೇ ಹೊರತು ಮತ್ತೆ ಯಾವ ಅರ್ಥವೂ ಇರುವದೂ ಇಲ್ಲ.

ಈಶ್ವರನೆಂದರೆ ತತ್ತ್ವಶಾಸ್ತ್ರರೀತಿಯಿಂದ ನಮ್ಮ ಭಾವನೆಯು ಹೇಗಿರುವದೆಂಬುದನ್ನು ಇಲ್ಲಿಯವರೆಗೆ ವಿವರಿಸಿದ್ದಾಯಿತು.

---

1. ಚೈತನ್ಯಕ್ಕೆ ಸಂಬಂಧಪಟ್ಟಿರುವದೇ ವಸ್ತುವಿನ ಸತ್ಯತ್ವವು - ಎಂಬುದೇ ಪ್ರಕೃತದಲ್ಲಿ ಹೇಳಿದ ಸತ್ಯದ ಲಕ್ಷಣವು.

# 3. ಆತ್ಮಸಾಕ್ಷಾತ್ಕಾರವೇ ಭಕ್ತಿಯೋಗದ ಉದ್ದೇಶ

ಮನೋದಾರ್ಢ್ಯಕ್ಕೆ ಇವು ಆವಶ್ಯವೆಂಬುದನ್ನು ಬಿಟ್ಟರೆ ಭಕ್ತನಿಗೆ ಇಂಥ ಒಣ ವಿಚಾರ ಗಳಿಂದ ಮತ್ತೇನೂ ಪ್ರಯೋಜನವಿರುವದಿಲ್ಲ; ಏಕೆಂದರೆ ಅವನು ನಡೆಸುತ್ತಿರುವ ಹಾದಿಯು ಬಲುಬೇಗನೆ ಅವನನ್ನು ಸಂಶಯಾಸ್ಪದವಾಗಿ ಕೋಲಾಹಲದಿಂದ ಕೂಡಿರುವ ಈ ತರ್ಕ ಪ್ರದೇಶಗಳನ್ನು ದಾಟಿಸಿ ಸಾಕ್ಷಾತ್ಕಾರಭೂಮಿಗೆ ಒಯ್ಯುವದಕ್ಕೆ ಸಮರ್ಥವಾಗಿರುತ್ತದೆ. ವಾಗಾಡಂಬರದಿಂದ ಕೂಡಿದ ಈ ಅಸಮರ್ಥ ತರ್ಕವನ್ನು ಎಷ್ಟೋ ಹಿಂದೆ ಬಿಟ್ಟಿರುವಂಥ ಒಂದಾನೊಂದು ಸ್ಥಿತಿಯು ಅವನಿಗೆ ಪರಮೇಶ್ವರನ ಕೃಪೆಯಿಂದ ಬೇಗನೆ ಪ್ರಾಪ್ತವಾಗಿ ಬಿಡುವದು. ಬರಿಯ ತರ್ಕದ ಕತ್ತಲೆಯಲ್ಲಿ ತಡವರಿಸುತ್ತಾ ನಡೆಯುವದು ಸಂಪೂರ್ಣವಾಗಿ ನಿಂತುಹೋಗಿ ಅದರ ಬದಲು ಸಾಕ್ಷಾದನುಭವವೆಂಬ ಹಾಡಿಯ ಹಗಲಿನ ಗಜಬೆಳಕು ಅವನಿಗೆ ಗೋಚರವಾಗುವದು. ಇನ್ನು ಮೇಲೆ ಆತನು ತರ್ಕಮಾಡಿ ನಂಬಬೇಕಾದದ್ದೇನೂ ಇರುವದಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಕಣ್ಣಿಗೆ ಕಟ್ಟಿದಂತೆಯೇ ವಸ್ತುವನ್ನು ಕಾಣುವನು ; ವಾದ ಮಾಡುವದಿಲ್ಲ, ಅನುಭವಿಸುವನು. ಈ ರೀತಿಯಲ್ಲಿ ದೇವರನ್ನು ನೋಡಿ ದೈವ ಭಾವನೆಯನ್ನು ಪಡೆದುಕೊಂಡು ದೇವರನ್ನೇ ಅನುಭವಿಸುವದು ಮಿಕ್ಕ ಎಲ್ಲದಕ್ಕಿಂತಲೂ ಹೆಚ್ಚಿನದಲ್ಲವೆ? ಅಷ್ಟೇಕೆ? ಈ ಸ್ಥಿತಿಯು ಮೋಕ್ಷಕ್ಕಿಂತಲೂ ಹೆಚ್ಚಿನದೆಂದು ಹೇಳುವ ಭಕ್ತರೂ ಇಲ್ಲದೆ ಇಲ್ಲ, ಅಂಥವರ ಸಂಖ್ಯೆಯೇನೂ ಕಡಿಮೆಯಿಲ್ಲ. ಮತ್ತೂ ನೋಡಿದರೆ ಇದೇ ಸರ್ವೋತ್ತಮವಾದ ಪುರುಷಾರ್ಥವೂ ಆಗಿರುವದಿಲ್ಲವೆ? ಮನುಷ್ಯನಿಗೆ ಇಂದ್ರಿಯ ಭೋಗಗಳನ್ನು ತಂದು ಕೊಡುವದು ಯಾವದೋ, ಅದೊಂದೇ ಪ್ರಯೋಜನಕರವೆಂದೂ ಪುರುಷಾರ್ಥವೆಂದೂ ನಿಶ್ಚಯಿಸಿಕೊಂಡಿರುವ ಜನರೂ ಎಷ್ಟೋ ಮಂದಿ ಈ ಪ್ರಪಂಚದಲ್ಲಿರುವರು. ಇಂಥ ಜನರಿಗೆ ಧರ್ಮವಾಗಲಿ, ದೇವರಾಗಲಿ, ನಿತ್ಯಕೈವಲ್ಯವಾಗಲಿ, ಆತ್ಮವಾಗಲಿ - ಯಾವದೂ ಉಪಯೋಗವುಳ್ಳದ್ದಾಗಿ ತೋರುವದಿಲ್ಲ; ಏಕೆಂದರೆ ಇವುಗಳಿಂದ ಅವರಿಗೆ ಹಣವೂ ಸಿಕ್ಕುವದಿಲ್ಲ, ವಿಷಯಭೋಗವೂ ಸಿಕ್ಕುವದಿಲ್ಲ. ಇಂದ್ರಿಯಗಳಿಗೆ ತೃಪ್ತಿಯನ್ನುಂಟು ಮಾಡದೆಯೂ ಹಸಿವುಬಾಯಾರಿಕೆಗಳನ್ನು ಅಡಗಿಸದೆಯೂ ಇರುವ ಯಾವ ವಸ್ತುಗಳಿಂದಲೂ ಏನೂ ಪ್ರಯೋಜನವಿಲ್ಲವೆಂಬುದೇ ಇಂಥ ಜನರ ಮತವಾಗಿರುತ್ತದೆ. ಆದರೆ ಯಾವ ಮನಸ್ಸಿಗೇ ಆಗಲಿ, ಇಂಥದ್ದೊಂದು ಪ್ರಯೋಜನಕರವೆಂಬುದು ಅದಕ್ಕೆ ಏನೇನು ಬೇಕಾಗಿರುವದೋ ಅದನ್ನವಲಂಬಿಸಿರುತ್ತದೆ. ಆದ್ದರಿಂದ ತಿನ್ನುವದು, ಕುಡಿಯುವದು, ಮಕ್ಕಳನ್ನು ಹಡೆಯುವದು, ಸಾಯುವದು - ಇದಕ್ಕಿಂತ ಹೆಚ್ಚಿನ ಅಂತಸ್ತಿಗೆ ಏರಲಾರದವರಿಗೆ ಇಂದ್ರಿಯಭೋಗವೇ ಪರಮಲಾಭವು; ಇದಕ್ಕಿಂತ ಉತ್ತಮವಾದದ್ದರ ಆವಶ್ಯಕತೆಯು ಅವರಿಗೆ ಎಳ್ಳಷ್ಟಾದರೂ ತೋರಬೇಕಾದರೂ ಎಷ್ಟೋ ಜನ್ಮಜನ್ಮಾಂತರಗಳಲ್ಲಿ

ನಾನಾಯೋನಿಗಳಲ್ಲಿ ಹುಟ್ಟಿ ಅವರು ಅದನ್ನು ತಿಳಿದುಕೊಳ್ಳಬೇಕಾಗಿರುವದು. ಆದರೆ ನಶ್ವರವಾದ ಈ ಪ್ರಪಂಚದ ಮೂರುಗಳಿಗೆಯ ಬಾಳಿಗಿಂತಲೂ ಶಾಶ್ವತನಾದ ಆತ್ಮನ ನಿತ್ಯಸುಖಕ್ಕೆ ಹೆಚ್ಚುಬೆಲೆ ಎಂದು ಯಾರಿಗೆ ತೋರುವದೋ, ಯಾರಿಗೆ ಇಂದ್ರಿಯತೃಪ್ತಿಯನ್ನು ಮಾಡಿಕೊಳ್ಳುವದೆಂಬುದು ಏನೂ ಅರಿಯದ ಮಕ್ಕಳ ಆಟವೇ ಹೊರತು ಬೇರೆಯಲ್ಲವೆಂದು ತೋರುವದೋ ಅಂಥವರಿಗೆ ಪರಮೇಶ್ವರನು, ಪರಮೇಶ್ವರಭಕ್ತಿ - ಇವೇ ಮನುಷ್ಯನ ಜನ್ಮದ ಅತ್ಯಂತಪರಮಪ್ರಯೋಜನವಾಗಿರುವವು. ದೇವರ ದಯದಿಂದ ಈ ಪ್ರಪಂಚದಲ್ಲಿ ಇನ್ನೂ ಕೆಲವರು ಇಂಥ ಜನರು ಬದುಕಿದ್ದಾರೆ.

ನಾವು ಹಿಂದೆಯೇ ಹೇಳಿರುವಂತೆ **ಗೌಣ** (ಸಾಧನ) ಭಕ್ತಿಯೆಂದೂ **ಪರ** (ಹೆಚ್ಚಿನ) ಭಕ್ತಿಯೆಂದೂ ಭಕ್ತಿಯೋಗದಲ್ಲಿ ಎರಡು ವಿಭಾಗಗಳುಂಟು. ಸಾಧನ ಸ್ಥಿತಿಯಲ್ಲಿ ಮುಂದು ವರಿಯುವದಕ್ಕೆ ನಮಗೆ ಎಷ್ಟೋ ಸ್ಥೂಲವಾದ ಸಲಕರಣೆಗಳು ಬೇಕಾಗುವವೆಂದು ನಮಗೆ ಮುಂದೆ ಮುಂದೆ ಕಂಡುಬರುವದು. ನಿಜವಾಗಿ ನೋಡಿದರೆ ಎಲ್ಲಾ ಮತಗಳಲ್ಲಿಯೂ ಇರುವ ಪುರಾಣಭಾಗಗಳೂ ತಂತ್ರಭಾಗಗಳೂ ಮುಮುಕ್ಷುವಾದ ಜೀವನಿಗೆ ಅನುಕೂಲವಾಗಿಯೇ ಇರುವವು, ಇವು ಅವನನ್ನು ದೇವರ ಕಡೆಗೆ ತಿರುಗಿಸುವದಕ್ಕೆ ಬೇಕಾಗಿರುವ ಸ್ವಭಾವಸಿದ್ಧವಾದ ಉಪಕರಣಗಳಾಗಿರುವವು. ಇದಲ್ಲದೆ ಯಾವ ಮತದಲ್ಲಿ ಬೇಕಾದಷ್ಟು ಪುರಾಣಗಳೂ ಕರ್ಮಗಳೂ ತುಂಬಿರುವವೋ, ಅವುಗಳಲ್ಲಿ ಮಾತ್ರ ಆತ್ಮ ಸಾಕ್ಷಾತ್ಕಾರವನ್ನು ಪಡೆದ ದೊಡ್ಡದೊಡ್ಡ ಮಹನೀಯರುಗಳು ಹುಟ್ಟಿರುವರೆಂಬುದೂ ನಾವು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ. ಶುಷ್ಕವಾದ ಯಾವ ದುರಭಿಮಾನದ ಮತವಿಶೇಷಗಳು ಹೃದಯಾಹ್ಲಾದಕವಾಗಿಯೂ ಸೌಂದರ್ಯಯುಕ್ತವಾಗಿಯೂ ಉದಾತ್ತವಾಗಿಯೂ ದೇವರ ಕಡೆಗೆ ತಪ್ಪು ಹೆಜ್ಜೆಯಿಂದ ನಡೆಯುವ ಕೂಸಿನಂತಿರುವ ಜೀವನ ಮನಸ್ಸು ಹಿಡಿದು ಕೊಳ್ಳುವದಕ್ಕೆ ಭದ್ರವಾದ ಆಶ್ರಯವಾಗಿಯೂ ಇರುವದನ್ನೆಲ್ಲ ನಿರ್ಮೂಲಮಾಡಲು ಪ್ರಯತ್ನ ಮಾಡುವವೋ, ಯಾವ ಮತಪ್ರಭೇದಗಳು ಧರ್ಮಗೃಹದ ಛಾವಣಿಯ ಬೇಂಗಟೆಯನ್ನೇ ಮುರಿದುಹಾಕುವ ಪ್ರಯತ್ನವನ್ನು ಮಾಡುತ್ತವೆಯೋ, ಮತ್ತು ವಿವೇಕವಿಲ್ಲದ ಮೂಢಭಕ್ತಿ ಯಿಂದ ತಮಗೆ ತಿಳಿದ ಯಾವದೋ ಒಂದನ್ನು ತತ್ತ್ವವೆಂದು ಭಾವಿಸಿಕೊಂಡು ಮನುಷ್ಯನ ಹೃದಯದಲ್ಲಿ ಧರ್ಮವೃಕ್ಷವು ಬೆಳೆಯುವದಕ್ಕೆ ಸಾರಪ್ರದವಾದ ಪೋಷಕ ದ್ರವ್ಯವನ್ನು ಒದಗಿ ಸುವದನ್ನೆಲ್ಲ ನಾಶಪಡಿಸುವದಕ್ಕೆ ಯತ್ನಿಸುವವೋ-ಇಂಥ ಮತಪ್ರಭೇದಗಳಿಗೆ ಕೊನೆಗೆ ಉಳಿಯುವದೆಲ್ಲ ತಿರುಳಿಲ್ಲದ ಚಿಪ್ಪು, ಹುರುಳಿಲ್ಲದ ಶಬ್ದಜಾಲ, ವಿತಂಡಾವಾದ-ಇವೇ ಎಂದು ಅತ್ಯಲ್ಪಕಾಲದಲ್ಲಿಯೇ ಮನವರಿಕೆಯಾಗುವದು. ಒಂದು ವೇಳೆ ಸಮಾಜ ಸಂಸ್ಕರಣವೆಂದು

ಹೇಳಿಸಿಕೊಳ್ಳುವ ಜನಸಮಾಜದ ಕಸವನ್ನು ಗುಡಿಸುವದೊಂದಿಷ್ಟು ಉಳಿದರೆ ಉಳಿದುಕೊಳ್ಳ ಬಹುದು. ಇಂಥ ಮತಗಳಲ್ಲಿ ಪ್ರವಿಷ್ಟರಾದವರಲ್ಲಿ ಬಹು ಜನರು ತಿಳಿದೋ ತಿಳಿಯದೆಯೋ ಚಾರ್ವಾಕರಾಗುವರು ; ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ವಿಷಯಭೋಗವೇ ಅವರಿಗೆ ಮುಖ್ಯಪುರುಷಾರ್ಥವಾಗಿರುವದು ; ಅವರಿಗೆ ನಿಜವಾಗಿಯೂ ಈ ಭೋಗವೇ ಮನುಷ್ಯಜನ್ಮಕ್ಕೆ ಆದಿ, ಅದೇ ಅಂತ ; ಅದೇ ಅವರ ಇಷ್ಟಾಪೂರ್ತ. ಬೀದಿಯನ್ನು ಗುಡಿಸುವದು, ಕಶ್ಮಲವನ್ನು ತೆಗೆದುಹಾಕುವದು, ಆದರಿಂದ ಮನುಷ್ಯನ ವಿಷಯಸುಖವನ್ನು ಹೆಚ್ಚಿಸುವದು-ಇದೇ ಅವರಿಗೆ ಮನುಷ್ಯಜನ್ಮದ ಪರಮಸಾರ್ಥಕ್ಯವು, ಇದೇ ಪರಮ ಪುರುಷಾರ್ಥವು. ಈ ಮೌಢ್ಯದುರಭಿಮಾನಗಳ ವಿಲಕ್ಷಣಮಿಶ್ರಣವನ್ನು ಅನುವರ್ತಿಸುತ್ತಿರು ವವರು ತಮ್ಮ ನಿಜವಾದ ಸ್ವರೂಪವನ್ನು ತೋರಿಸಿಕೊಂಡು ತಮಗೆ ಅರ್ಹವಾದ ನಾಸ್ತಿಕರ ಮತ್ತು ಚಾರ್ವಾಕರ ಗುಂಪನ್ನು ಎಷ್ಟು ಬೇಗನೆ ಸೇರಿದರೆ ಪ್ರಪಂಚಕ್ಕೆ ಅಷ್ಟು ಒಳ್ಳೆಯದಾಗುವದು. ಧರ್ಮಮಾರ್ಗವನ್ನೂ ಆತ್ಮಸಾಕ್ಷಾತ್ಕಾರವನ್ನೂ ಅನುಸರಿಸುವ ಸಾಧನವು ಒಂದೇ ಗುಲಗಂಜಿಯಷ್ಟಿರಲಿ, ಅದೇ ಮಣಗಟ್ಟಲೆಯ ನಿಸ್ಸಾರವಾದ ಮಾತಿಗಿಂತಲೂ ಒಣಹೆಮ್ಮೆಯ ಅಭಿಮಾನಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದಾಗಿರುವದು. ಈ ಮೌಢ್ಯದ ಅಥವಾ ದುರಭಿಮಾನದ ಒಣಧೂಳಿನಿಂದ ಹುಟ್ಟಿ ಬೆಳೆದಿರುವ ಒಬ್ಬ ಮಹಾತ್ಮನನ್ನಾದರೂ ತೋರಿಸಿರಿ, ನೋಡೋಣ ; ಆದಾಗದಿದ್ದರೆ ಬಾಯಿಮುಚ್ಚಿರಿ, ತತ್ತ್ವದ ಶುದ್ಧವಾದ ಗಾಳಿಯು ಒಳಕ್ಕೆ ಬರುವಂತೆ ಹೃದಯದ ಬಾಗಿಲುಗಳನ್ನೆಲ್ಲ ತೆರೆದುಕೊಳ್ಳಿರಿ; ತಾವು ಏನು ಹೇಳುತಿದ್ದೇ ವೆಂಬುದನ್ನು ತಿಳಿದು ಹೇಳುವವರ ಪಾದಮೂಲದಲ್ಲಿ ಮಕ್ಕಳಂತೆ ಕುಳಿತು ನಿಜವನ್ನು ತಿಳಿದುಕೊಳ್ಳಿರಿ. ಇಂಥ ಮಹಾತ್ಮರೇ ಭರತಖಂಡದ ಸಾಧುಗಳು. ಅವರು ಈ ವಿಷಯದಲ್ಲಿ ಏನು ಹೇಳುತ್ತಾರೆಂಬುದನ್ನು ಚಿತ್ತವಿಟ್ಟು ಆಲಿಸೋಣ.

# 4. ಗುರುವಿನ ಆವಶ್ಯಕತೆ

ಪ್ರತಿಯೊಬ್ಬ ಜೀವನೂ ಕೊನೆಗೆ ಪೂರ್ಣಸಿದ್ಧನಾಗಿಯೇತೀರಬೇಕು, ಪ್ರತಿಯೊಂದು ಪ್ರಾಣಿಯೂ ಕೊನೆಗೆ ಸಿದ್ಧಿಯನ್ನು ಹೊಂದಿಯೇ ತೀರುವದು. ಈಗ ನಾವು ಯಾವಯಾವ ಸ್ಥಿತಿಯಲ್ಲಿರುವೆವೋ ಅದು ಪೂರ್ವಜನ್ಮದಲ್ಲಿ ನಾವು ಮಾಡಿದ ಕರ್ಮಗಳ ಮತ್ತು ಯೋಚಿಸಿದ ಆಲೋಚನೆಗಳ ಫಲವಾಗಿರುವದು ; ಇದರಂತೆ ಇನ್ನು ಮುಂದೆ ನಾವು ಏನೇನಾಗುವೆವೋ ಅದೆಲ್ಲವೂ ಈ ಜನ್ಮದಲ್ಲಿ ನಾವು ಏನು ಮಾಡುತ್ತಿದ್ದೇವೋ, ಏನು ಯೋಚಿಸುತ್ತಿದ್ದೇವೋ ಅದರ ಫಲವಾಗಿರುವದು. ಆದರೆ ಹೀಗೆ ನಮ್ಮ ಗತಿಯನ್ನು ನಾವೇ ರೂಪಿಸಿಕೊಳ್ಳುತ್ತಿರುವೆವೆಂಬುದು ನಿಜವಾದರೂ ಇದರಿಂದ ನಾವು ಹೊರಗಿನ ಸಹಾಯವನ್ನು ಪಡೆಯಕೂಡದೆಂದು ಅರ್ಥ ವಾಗುವದಿಲ್ಲ. ಇಷ್ಟೇ ಅಲ್ಲ, ಅನೇಕ ಸಂದರ್ಭಗಳಲ್ಲಿ ಇಂಥ ಸಹಾಯವು ಅತ್ಯವಶ್ಯವಾಗಿ ಬೇಕೇ ಆಗುವದು. ಅಂಥ ಸಹಾಯವು ಬಂದಾಗ ಜೀವನ ಉತ್ತಮಶಕ್ತಿಗಳಿಗೂ ಯೋಗ್ಯತೆಗಳಿಗೂ ಉತ್ತೇಜನೆಯಾಗುತ್ತದೆ, ಧರ್ಮಬುದ್ಧಿಯು ಉದ್ಬುದ್ಧವಾಗುತ್ತದೆ; ಆ ಮನುಷ್ಯನು ಪರಿಶುದ್ಧನಾಗಿ ಕೊನೆಗೆ ಸಿದ್ಧನೂ ಆಗುತ್ತಾನೆ.

ಈ ಉತ್ತೇಜನಶಕ್ತಿಯು ಪುಸ್ತಕದಿಂದ ದೊರೆಯಲಾರದು. ಜೀವನಿಗೆ ಉತ್ತೇಜನವು ಬರಬೇಕಾದರೆ ಮತ್ತೊಬ್ಬ ಜೀವನಿಂದಲೇ ಬಂದೀತಲ್ಲದೆ ಮತ್ತೆ ಯಾವದರಿಂದಲೂ ಬರಲರಿಯದು. ನಾವು ನಮ್ಮ ಜೀವಮಾನವೆಲ್ಲ ಪುಸ್ತಕಗಳನ್ನು ಓದಬಹುದು, ಬಹಳ ಬುದ್ಧಿವಂತರೂ ಆಗಬಹುದು; ಕೊನೆಗೆ ನೋಡಿಕೊಂಡರೆ ನಮ್ಮಲ್ಲಿ ಧಾರ್ಮಿಕನಿಷ್ಠೆಯೇನೂ ಬೆಳೆದೇಇಲ್ಲವೆಂದು ಕಂಡುಬರುವದು. ಮನುಷ್ಯನ ಬುದ್ಧಿಶಕ್ತಿಯು ಬೆಳೆದಹಾಗೆಲ್ಲ ಅದಕ್ಕೆ ತಕ್ಕಷ್ಟು ಅಧ್ಯಾತ್ಮನಿಷ್ಠೆಯೂ ಬೆಳೆಯುವದೆಂಬ ನಿಯಮವೇನೂ ಇರುವದಿಲ್ಲ. ಗ್ರಂಥಗಳನ್ನೋದುತ್ತಿರುವಾಗ ಅದರಿಂದ ನಮಗೆ ಧಾರ್ಮಿಕತ್ವವೂ ಬರುತ್ತಿದೆಯೆಂದು ಕೆಲವು ವೇಳೆ ನಾವು ಭ್ರಾಂತರಾಗುವದುಂಟು; ಆದರೆ ಪುಸ್ತಕಗಳಿಂದ ನಮ್ಮಲ್ಲಾದ ಫಲಿತಾಂಶವನ್ನು ಬಿಡಿಸಿ ನೋಡಿದರೆ ಅವುಗಳ ಪಠನದಿಂದ ಆದ ಪರಮಪ್ರಯೋಜನವೆಂದರೆ ನಮ್ಮ ಬುದ್ಧಿಗೆ ಪ್ರಯೋಜನವಾದದ್ದೇ ಹೊರತು ನಮ್ಮೊಳಗಿನ ಆತ್ಮಕ್ಕೇನೂ ಆಗಿರುವದಿಲ್ಲವೆಂದು ಗೊತ್ತಾಗುವದು. ಈ ರೀತಿಯಲ್ಲಿ ಧರ್ಮನಿಷ್ಠೆಯನ್ನು ಉತ್ತೇಜನಗೊಳಿಸುವದಕ್ಕೆ ಪುಸ್ತಕಗಳಿಗೆ ಯೋಗ್ಯತೆಯಿಲ್ಲದೆ ಇರುವದರಿಂದಲೇ ನಮ್ಮಲ್ಲಿ ಸ್ವಲ್ಪ ಹೆಚ್ಚುಕಡಿಮೆ ಪ್ರತಿಯೊಬ್ಬರೂ ಧರ್ಮವಿಚಾರದಲ್ಲಿ ಅದ್ಭುತವಾದ **ಭಾಷಣ**ವನ್ನು ಮಾಡಬಲ್ಲೆ ವಾದರೂ ಆಚರಣೆಯ ವಿಚಾರವು ಬಂದು ಅನುಷ್ಠಾನದ ವಿಷಯದ ಕಡೆಗೆ ತಿರುಗಿದಾಗ ನಮ್ಮಿಂದ ಏನೇನೂ ಸಾಗುವಂತಿರುವದಿಲ್ಲವೆಂದು ಕಂಡುಬರುತ್ತದೆ. ಆತ್ಮನ ಉತ್ತೇಜನೆಗೆ ಮತ್ತೊಂದು ಆತ್ಮದಿಂದಲೇ ಶಕ್ತಿಪಾತವಾಗಬೇಕು.

ಯಾವಾತನಿಂದ ಇಂಥ ಶಕ್ತಿಯು ಬರುವದೋ ಆತನೇ **ಗುರುವು**, ಯಾವಾತನ ಮನಸ್ಸಿನಲ್ಲಿ ಇಂಥ ಶಕ್ತಿಯು ಪಾತವಾಗುವದೋ ಆತನೇ **ಶಿಷ್ಯ**ನು. ಯಾವನಾದರೂ ಆತ್ಮಕ್ಕೆ ಇಂಥ ಶಕ್ತಿಯನ್ನು ಕೊಡಬೇಕಾದರೆ ಮೊದಲನೆಯದಾಗಿ ಯಾವನ ಆತ್ಮನಿಂದ ಅದು ಬರಬೇಕಾಗಿದೆಯೋ ಅಂಥವನಿಗೆ ಅದನ್ನು ಮತ್ತೊಬ್ಬನಿಗೆ ಅನುಗ್ರಹಿಸುವಂಥ ಯೋಗ್ಯತೆಯಿರಬೇಕು; ಮತ್ತು ಎರಡನೆಯದಾಗಿ ಯಾವನ ಆತ್ಮಕ್ಕೆ ಅದನ್ನು ಕೊಡಬೇಕಾಗಿದೆಯೋ ಅವನಿಗೆ ಅದನ್ನು ಗ್ರಹಣ ಮಾಡುವ ಯೋಗ್ಯತೆ ಇರಬೇಕು; ಬೀಜವು ಸಜೀವಬೀಜವಾಗಿರಬೇಕು. ಕ್ಷೇತ್ರವು ಕೃಷಿಯಿಂದ ಸಿದ್ಧವಾಗಿರಬೇಕು. ಈ ಎರಡು ಯೋಗ್ಯತೆಗಳೂ ಇದ್ದುಬಿಟ್ಟರೆ ನಿಜವಾದ ಧರ್ಮವು, ಬೇಕಾದಷ್ಟು ಹುಲುಸಾಗಿ ಬೆಳೆಯುವದು. ''ನಿಜವಾಗಿ ಧರ್ಮೋಪದೇಶಕನಾಗಿರುವ ಸದ್ಗುರುವು ಅದ್ಭುತ ಶಕ್ತಿಯಿಂದ ಕೂಡಿರಬೇಕು, ಕೇಳುವ ಶಿಷ್ಯನೂ ಜಾಣನಾಗಿರಬೇಕು'' (ಕ)[21] ಹೀಗೆ ಇವರಿಬ್ಬರೂ ನಿಜವಾಗಿ ಅದ್ಭುತಶಕ್ತಿಯಿಂದಲೂ ಅಸಾಧಾರಣಪ್ರಜ್ಞೆಯಿಂದಲೂ ಕೂಡಿದ್ದರೆ ಮಾತ್ರ ಉತ್ತಮ ಧಾರ್ಮಿಕನಿಷ್ಠೆಯು ಉದ್ಬುದ್ಧವಾಗುವದೇ ಹೊರತು ಇಲ್ಲದಿದ್ದರೆ ಆಗಲಾರದು. ಇಂಥವರೇ ನಿಜವಾದ ಗುರುಗಳು; ಇಂಥವರೇ ನಿಜವಾದ ಶಿಷ್ಯರು, ನಿಜವಾದ ಸಾಧಕರು. ಮಿಕ್ಕವರೆಲ್ಲ ಆಟಕ್ಕಾಗಿ ಧರ್ಮವನ್ನಿಟ್ಟುಕೊಂಡಿರುವವರು; ಅವರಿಗೆ ಎಲ್ಲಿಯೋ ಸ್ವಲ್ಪ ಕುತೂಹಲವುಂಟಾಗಿ ಎಲ್ಲಿಯೋ ಒಂದಿಷ್ಟು ವಿಚಾರ ಮಾಡಬೇಕೆಂಬ ಬುದ್ಧಿ ಹುಟ್ಟಿರುವದೆಂಬುದು ನಿಜ, ಆದರೂ ಅವರು ಇನ್ನೂ ಧರ್ಮದಿಗಂತದ ಹೊರಗಿನ ಅಂಚಿನಲ್ಲಿಯೇ ಇದ್ದುಕೊಂಡಿರುವರು. ಇದರಿಂದಲೂ ಕಾಲ ಕ್ರಮದಲ್ಲಿ ನಿಜವಾದ ಧರ್ಮದ ಬಯಕೆಯುಂಟಾಗಬಹುದಾದ್ದರಿಂದ ಇದಕ್ಕೂ ಅಲ್ಪಸ್ವಲ್ಪ ಬೆಲೆಯುಂಟೆಂಬುದಕ್ಕೇನೂ ಸಂಶಯವಿಲ್ಲ. ಕ್ಷೇತ್ರವು ಸಿದ್ಧವಾಯಿತೋ ಇಲ್ಲವೋ ಬೀಜವು ಬರಲೇಬೇಕೆಂದೂ ಬಂದೇಬರುವದೆಂದೂ ಒಂದು ಪ್ರಕೃತಿ ನಿಯಮದ ರಹಸ್ಯವಿರುವದು; ಜೀವನು ತನಗೆ ಧರ್ಮವು ಬೇಕೆಂದು ಮನಃಪೂರ್ವಕವಾಗಿ ಬಯಸುವದಕ್ಕೆ ಪ್ರಾರಂಭಿಸಿದರೆ ಆ ಧಾರ್ಮಿಕಶಕ್ತಿಯನ್ನನುಗ್ರಹಿಸುವಾತನು ಅವನಲ್ಲಿಗೆ ಬಂದೇತೀರಬೇಕು, ಮತ್ತು ಬಂದೇ ಬಂದು ಆ ಜೀವನಿಗೆ ಸಹಾಯಮಾಡಿಯೇ ತೀರುತ್ತಾನೆ. ಧರ್ಮದ ಬೆಳಕನ್ನು ಆಕರ್ಷಿಸಿಕೊಳ್ಳುವ ಶಕ್ತಿಯು ಗ್ರಹಿಸುವ ಜೀವನಲ್ಲಿ ಸಂಪೂರ್ಣವಾಗಿಯೂ ಬಲವಾಗಿಯೂ ಇದ್ದುಬಿಟ್ಟರೆ ಆ ಆಕರ್ಷಣೆಗೆ ಒಳಗಾಗಿ ಪ್ರಕಾಶವನ್ನು ಕಳುಹಿಸುವ ಶಕ್ತಿಯುಳ್ಳವನು ತನಗೆ ತಾನೇ ಸಿದ್ಧನಾಗುವನು.

ಆದರೆ ದಾರಿಯಲ್ಲಿ ಕೆಲವು ಅಪಾಯಗಳುಂಟು. ಉದಾಹರಣೆಗೆ ಗ್ರಹಿಸುವ ಜೀವನು ತನ್ನಲ್ಲಿ ತೋರುವ ಕ್ಷಣಿಕಭಾವನೆಗಳನ್ನೇ ನಿಜವಾದ ಧರ್ಮದ ಬಯಕೆಯೆಂದು ಭ್ರಮಿಸುವ ಅಪಾಯವೊಂದುಂಟು. ನಮ್ಮ ನಮ್ಮಲ್ಲಿಯೇ ಪರೀಕ್ಷೆಮಾಡಿಕೊಂಡರೆ ಇದು ಗೊತ್ತಾಗುವದು. ನಮ್ಮ ಜೀವಮಾನದಲ್ಲಿ ಅನೇಕವೇಳೆ ನಮಗೆ ಪ್ರೀತಿಪಾತ್ರರಾದವರು ಯಾರಾದರೂ ತೀರಿಕೊಂಡರೆ ನಮಗೊಂದು ಪೆಟ್ಟು ತಗಲಿದಂತಾಗಿ ಈ ಪ್ರಪಂಚವು ತೋರಿಹಾರತಕ್ಕದ್ದೆಂತಲೂ

ಇದಕ್ಕಿಂತಲೂ ಭದ್ರವಾಗಿ ಉತ್ತಮವಾಗಿರುವದು ಮತ್ತೆ ಯಾವದೋ ಒಂದು ನಮಗೆ ಬೇಕೆಂತಲೂ ಇನ್ನು ಮೇಲೆ ನಾವು ಧರ್ಮಮಾರ್ಗದಲ್ಲಿರಬೇಕೆಂತಲೂ ತೋರುವದು. ಆದರೆ ಕೆಲವು ದಿನಗಳಲ್ಲಿಯೇ ಈ ಭಾವನಾತರಂಗವು ಹೊರಟುಹೋಗಿ ನಾವು ಮೊದಲಿದ್ದ ಸ್ಥಳಕ್ಕೇ ಬಂದಿಳಿದುಬಿಡುತ್ತೇವೆ ! ಇಂಥ ತಾತ್ಕಾಲಿಕವಿಕಾರಗಳನ್ನೇ ನಿಜವಾದ ಮುಮುಕ್ಷುತೆಯೆಂದು ಅನೇಕವೇಳೆ ತಿಳಿದುಕೊಂಡು ನಾವು ಮೋಸಹೋಗುವದುಂಟು; ಆದರೆ ಎಲ್ಲಿಯವರೆಗೆ ನಾವು ಇಂಥ ಕ್ಷಣಿಕಭಾವಗಳ ಯೋಗ್ಯತೆಯನ್ನು ಸರಿಯಾಗಿ ತಿಳಿದುಕೊಳ್ಳದೆ ಹೋಗುವೆವೋ, ಅಲ್ಲಿಯವರೆಗೂ ಸಂತತವಾದ ನಿಜವಾದ ಧರ್ಮದ ಬಯಕೆಯೆಂಬುದು ನಮಗೆ ಮೈದೋರುವದೂ ಇಲ್ಲ, ನಮ್ಮ ಸ್ವಭಾವದಲ್ಲಿ ಧಾರ್ಮಿಕ ಶಕ್ತಿಯನ್ನು ಕೂಡಿಕೊಳ್ಳುವಂತೆ ಅನುಗ್ರಹಿಸಬಲ್ಲ ಸದ್ಗುರುವು ನಮಗೆ ಸಿಕ್ಕುವದೂ ಇಲ್ಲ. ಹೀಗಿರುವದರಿಂದ ನಮಗೆ ತತ್ತ್ವದ ಬಯಕೆಯು ಬೇಕಾದ ಹಾಗೆ ಇದೆಯೆಂದೂ ಆದಕ್ಕಾಗಿ ನಾವು ಮಾಡಿರುವ ಅನ್ವೇಷಣೆಯೆಲ್ಲ ವ್ಯರ್ಥವಾಯಿತೆಂದೂ ನಮಗೆ ಯಾವಾಗಲಾದರೂ ಅನ್ನಿಸಿದರೆ ಹಾಗೆಂದು ಯೋಚಿಸುವ ಮೊದಲು ನಮ್ಮನ್ನು ನಾವೇ ಪರೀಕ್ಷೆಮಾಡಿಕೊಂಡು ನಮ್ಮ ಹೃದಯದಲ್ಲಿರುವ ಬಯಕೆಯು ನಿಜವಾದದ್ದೆ?- ಎಂಬುದನ್ನು ಕಂಡುಹಿಡಿಯುವದು ನಮ್ಮ ಮೊಟ್ಟಮೊದಲನೆಯ ಕರ್ತವ್ಯ ವಾಗಿರಬೇಕು. ಹಾಗೆ ವಿಚಾರಿಸಿದರೆ ಮುಕ್ಕಾಲುಪಾಲು ಇಂಥ ಸಂದರ್ಭಗಳಲ್ಲಿ ತತ್ತ್ವೋಪದೇಶಕ್ಕೆ ತಕ್ಕ ಯೋಗ್ಯತೆಯೇ ನಮಗೆ ಬಂದಿರಲಿಲ್ಲವೆಂತಲೂ ನಿಜವಾಗಿ ಅಧ್ಯಾತ್ಮನಿಷ್ಠೆಯಲ್ಲಿ ಯಾವ ಬಯಕೆಯೂ ಉಂಟಾಗಿಯೇ ಇರಲಿಲ್ಲವೆಂತಲೂ ಕಂಡು ಬಂದೀತು. ಧಾರ್ಮಿಕಶಕ್ತಿಯನ್ನು ಕೊಡುವ ಗುರುವಿನ ವಿಚಾರದಲ್ಲಿ ಇನ್ನೂ ಹೆಚ್ಚಿನ ಅಪಾಯಗಳಿರುತ್ತವೆ. ತಾವು ಅಜ್ಞಾನದಲ್ಲಿ ಮುಳುಗಿದ್ದರೂ ಧರ್ಮದ ವಿಚಾರವನ್ನೆಲ್ಲವನ್ನೂ ಬಲ್ಲೆವೆಂದು ಹೆಮ್ಮೆಪಡುತ್ತಿರುವವರು ಅನೇಕರುಂಟು; ಅವರು ಇಷ್ಟಕ್ಕೇ ನಿಲ್ಲದೆ ಇತರರಿಗೂ ಧರ್ಮವನ್ನುಪದೇಶಿಸುತ್ತೇವೆಂದು ಅವರನ್ನೂ ತಮ್ಮ ಹೆಗಲಿನ ಮೇಲೆ ಏರಿಸಿಕೊಳ್ಳುವದಕ್ಕೆ ಹೋಗುತ್ತಿರುವರು. ಹೀಗೆ ಕುರುಡರು ಕುರುಡರನ್ನು ಕರೆದುಕೊಂಡು ಹೋಗುತ್ತಿರುವದರಿಂದ ಕೊನೆಗೆ ಇಬ್ಬರೂ ಗುಂಡಿಗೆ ಬೀಳುವರು. "ಅಜ್ಞಾನಾಂಧಕಾರದಲ್ಲಿ ಇದ್ದುಕೊಂಡಿರುವ ಮೂಢರು ತಾವೇ ಪಂಡಿತರು, ತಿಳಿದವರು-ಎಂದು ಹೆಮ್ಮೆಪಡುತ್ತಾ ಕುರುಡರು ಕರೆದುಹೋಗುತ್ತಿರುವ ಕುರುಡರ ಹಾಗೆ ಹಿಂದಕ್ಕೂ ಮುಂದಕ್ಕೂ ಮುಗ್ಗರಿಸುತ್ತಾ ಸುತ್ತುತ್ತಿರುವರು." (ಮು.)[22] ಪ್ರಪಂಚದಲ್ಲಿ ಇಂಥವರು ತುಂಬಿರುತ್ತಾರೆ. ಪ್ರತಿಯೊಬ್ಬನಿಗೂ ಗುರುವಾಗಬೇಕೆಂಬ ಆಶೆ, ಪ್ರತಿಯೊಬ್ಬ ತಿರುಕನಿಗೂ ಕೋಟಿ ಸುವರ್ಣಗಳ ದಾನವನ್ನು ಮಾಡಬೇಕೆಂಬ ಆಶೆ ! ಆ ತಿರುಕರು ಎಷ್ಟು ಅಪಹಸನೀಯರಾಗಿರುವರೋ, ಈ ಗುರುಗಳೂ ಅಷ್ಟರ ಮಟ್ಟಿಗೇ ಅಪಹಸನೀಯರಾಗಿರುತ್ತಾರೆ.

# 5. ಗುರುಶಿಷ್ಯರ ಲಕ್ಷಣ

ಹಾಗಾದರೆ ಇಂಥವನು ಗುರುವೆಂದು ತಿಳಿಯುವದು ಹೇಗೆ?-ಎಂದರೆ ಸೂರ್ಯನು ಗೋಚರವಾಗುವದಕ್ಕೆ ಕೊಳ್ಳಿಯ ಬೆಳಕೇನೂ ಬೇಕಾಗಿರುವದಿಲ್ಲ, ಅವನನ್ನು ನೋಡುವದಕ್ಕೆ ಹಗಲುಬತ್ತಿಯನ್ನು ಹತ್ತಿಸುವ ಅವಶ್ಯಕತೆಯೇನೂ ಇರುವದಿಲ್ಲ. ಸೂರ್ಯೋದಯವಾದರೆ ಆ ವಿಷಯವು ಹೇಗೋ ನಮಗೆ ತನಗೆ ತಾನೇ ಗೊತ್ತಾಗಿಬಿಡುತ್ತದೆ. ಇದರಂತೆಯೇ ತತ್ತ್ವೋಪದೇಶಕನಾದ ಗುರುವು ನಮಗೆ ಅನುಗ್ರಹಮಾಡುವದಕ್ಕೆ ಬರುವಾಗ ತತ್ತ್ವವು ತನ್ನಲ್ಲಿ ಬೆಳಗುವದಕ್ಕೆ ಪ್ರಾರಂಭವಾಗಿಬಿಟ್ಟಿರುವದೆಂದು ಹೇಗೋ ಮನಸ್ಸಿಗೆ ತನಗೆತಾನೇ ಗೊತ್ತಾಗ್ಗಿ ಬಿಡುತ್ತದೆ. ನಿಜವು ಸ್ವತಃಸಿದ್ಧವಾದದ್ದು ; ಅದನ್ನು ನಿಜವೆಂದು ತೋರಿಸುವದಕ್ಕೆ ಮತ್ತೊಂದು ಪ್ರಮಾಣವೇನೂ ಬೇಕಿರುವದಿಲ್ಲ. ಏಕೆಂದರೆ ಅದು ಸ್ವಯಂಪ್ರಕಾಶವಾಗಿರುತ್ತದೆ. ಅದು ನಮ್ಮ ಸ್ವಭಾವದ ತೀರ ಒಳಗಿನ ಮೂಲೆಗಳನ್ನು ಕೂಡ ವ್ಯಾಪಿಸುವಂಥದ್ದು ; ಅದರ ಸನ್ನಿಧಿಯಲ್ಲಿರುವಾಗ ಇಡಿಯ ವಿಶ್ವವೇ ಎದ್ದುನಿಂತುಕೊಂಡು "ಇಗೋ, ಇದೇ ನಿಜವು" ಎಂದು ಹೇಳುತ್ತದೆ.

ಯಾವ ಅಧ್ಯಾತ್ಮಸದ್ಗುರುಗಳ ಜ್ಞಾನವೂ ತತ್ತ್ವೋಪದೇಶವೂ ಸೂರ್ಯಪ್ರಕಾಶದಂತೆ ತನಗೆತಾನೇ ಹೊಳೆಯುವದೋ[1] ಅಂಥ ಜಗತ್ಪ್ರಸಿದ್ಧರಾದ ಎಲ್ಲರಿಗಿಂತಲೂ ಮಿಗಿಲೆನಿಸಿರುವ ಗುರುಗಳನ್ನು ಮುಕ್ಕಾಲುಪಾಲು ಜನರು ಭಗವತ್ಸ್ವರೂಪರೆಂದು ಭಾವಿಸಿ ಪೂಜಿಸುತ್ತಿರುತ್ತಾರೆ. ಆದರೆ ಇವರಿಗಿಂತಲೂ ಕಡಿಮೆಯ ದರ್ಜೆಯ ಗುರುಗಳಿಂದಲೂ ನಮಗೆ ಸಹಾಯವಾಗ ಬಹುದಾಗಿದೆ. ಯಾರಿಂದ ನಮಗೆ ತತ್ತ್ವೋಪದೇಶವೂ ಸನ್ಮಾರ್ಗ ಪ್ರದರ್ಶನೆಯೂ ಆಗಬೇಕೋ ಅಂಥವನ ಯೋಗ್ಯತೆಗಳನ್ನು ನಿರ್ಣಯಿಸುವದಕ್ಕೆ ತಕ್ಕಷ್ಟು ತಿಳಿವಳಿಕೆಯು ನಮಗೇ ಇರುವದಿಲ್ಲವಾದ್ದರಿಂದ ಶಿಷ್ಯನ ಯೋಗ್ಯತಾಪರೀಕ್ಷೆಗೆ ಲಕ್ಷಣಗಳು ಹೇಗೆ ಇರಬೇಕೋ ಹಾಗೆಯೇ ಗುರುವಿನಲ್ಲಿಯೂ ಹೀಗೆ ಹೀಗೆ ಇರಬೇಕೆಂಬ ಹೆಗ್ಗುರುತುಗಳು ಇರಲೇಬೇಕು.

ಶಿಷ್ಯರಲ್ಲಿರಬೇಕಾದ ಲಕ್ಷಣಗಳು ಯಾವವೆಂದರೆ **ಪರಿಶುದ್ಧತೆ, ಜ್ಞಾನದಲ್ಲಿ ನಿಜವಾದ ಬಯಕೆ, ಸ್ಥಿರಪ್ರಯತ್ನ**-ಇವು. ಅಶುದ್ಧವಾದ ಮನಸ್ಸುಳ್ಳವನು ಎಂದಿಗೂ ನಿಜವಾಗಿ ಧಾರ್ಮಿಕನಾಗಿರಲಾರನು. ಯಾವನೇ ಆಗಲಿ ಧಾರ್ಮಿಕನಾಗಿರಬೇಕಾದರೆ ಮನೋವಾಕ್ಕಾಯಗಳಲ್ಲಿ ಪರಿಶುದ್ಧನಾಗಿರಬೇಕಾದದ್ದು ಅತ್ಯಂತ ಆವಶ್ಯಕವಾಗಿರುತ್ತದೆ. **ಜ್ಞಾನೇಚ್ಛೆ**ಯ ವಿಷಯದಲ್ಲಿ ಹೆಚ್ಚು ಹೇಳಬೇಕಾದದ್ದೇ ಇಲ್ಲ. ನಮಗೆ ನಿಜವಾಗಿ ಏತರ ಬಯಕೆ ಇರುವದೋ ಅದು

---

1. "ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್" - ಎಂಬ (5 - 16 ಗೀತೋಕ್ತಿಯ ಸೂಚನೆ..

ಮಾತ್ರವೇ ನಮಗೆ ಸಿಕ್ಕೀತು ಎಂಬುದೊಂದು ಪುರಾತನನಿಯಮವು. ನಮ್ಮ ಮನಸ್ಸು ಏತರಲ್ಲಿ ನೆಟ್ಟುಕೊಂಡಿರುವದೋ ಅದು ಹೊರತು ಬೇರೊಂದು ಪದಾರ್ಥವು ನಮ್ಮಲ್ಲಿ ಯಾರಿಗೂ ಸಿಕ್ಕಲಾರದು. ಧರ್ಮಕ್ಕಾಗಿ ನಿಜವಾಗಿ ಹಂಬಲಿಸುವದೆಂಬುದು ಬಹಳ ಅಪರೂಪವೇ ಸರಿ; ಅದು ನಾವು ಸಾಮಾನ್ಯವಾಗಿ ಭಾವಿಸಿರುವಷ್ಟು ಸುಲಭವಾಗಿ ಸಿಕ್ಕುವದೇ ಇಲ್ಲ. ನಾವು ಪುರಾಣ ಪುಣ್ಯಕಥೆಗಳ ಶ್ರವಣವನ್ನು ಮಾಡುತ್ತಿರಬಹುದು, ಶಾಸ್ತ್ರಗ್ರಂಥಗಳನ್ನು ಪಾರಾಯಣ ಮಾಡುತ್ತಿರಬಹುದು; ಆದರೂ ನಮ್ಮ ಹೃದಯದಲ್ಲಿ ನಿಜವಾದ ಹಂಬಲಿಕೆಯಿದೆ ಎನ್ನುವದಕ್ಕೆ ಇದೇನೂ ಪ್ರಮಾಣವಾಗಲಾರದು. ಈ ಉತ್ತಮವಾದ ಬಯಕೆಯು ನಿಜವಾಗಿ ತಲೆದೋರಿ ನಾವು ಜಯಭೇರಿಯನ್ನು ಹೊಡೆಯಿಸುವವರೆಗೂ ಒಂದೇಸಮನೆ ನಮ್ಮ ಆಸುರಪ್ರಕೃತಿಯೊಡನೆ ಹೆಣಗಾಡಿ ತೆರಪಿಲ್ಲದೆ ಗುದ್ದಾಡುತ್ತಿರಬೇಕು, ಕ್ಷಣಹೊತ್ತು ವಿರಾಮ ವಿಲ್ಲದೆ ಹೋರಾಡುತ್ತಿರಬೇಕು. ಇದು ಒಂದೆರಡು ದಿವಸಗಳ ಅಥವಾ ವರ್ಷಗಳ ಮಾತಲ್ಲ ಅಥವಾ ಒಂದೆರಡು ಜನ್ಮಗಳ ಮಾತೂ ಅಲ್ಲ; ನೂರಾರು ಜನ್ಮಗಳವರೆಗೂ ಹೀಗೆಯೇ ಹೊಡೆದಾಡುತ್ತಿರಬೇಕಾದರೂ ಆಗಬಹುದು. ಕೆಲವು ವೇಳೆಗಳಲ್ಲೇನೊ ಬೇಗನೆ ಜಯವು ಕೈಗೂಡಬಹುದು,[23] ಆದರೆ ಯುಗದಷ್ಟು ದೀರ್ಘಕಾಲವೇ ಬೇಕೆಂದು ತೋರಿದರೂ ತಾಳ್ಮೆಯಿಂದ ಕಾಯುವದಕ್ಕೂ ನಾವು ಸಿದ್ಧವಾಗಿರಬೇಕು. ಇಂಥ **ಸ್ಥೈರ್ಯ**ದಿಂದ ಪ್ರಯತ್ನಿಸುವ ಸಾಧಕನಿಗೆ ಖಂಡಿತವಾಗಿಯೂ ಜಯವಾಗಿ ಕೊನೆಗೆ ಸಾಕ್ಷಾತ್ಕಾರವೂ ಆಗುವದು.

ಇನ್ನು ಗುರುವಿನ ಲಕ್ಷಣದ ಕಡೆಗೆ ತಿರುಗಿದರೆ ಶಾಸ್ತ್ರಗಳ ಹೃದಯವು ಆತನಿಗೆ ಗೊತ್ತಿದೆಯೆ? - ಎಂಬುದನ್ನು ನಾವು ಮೊದಲು ನೋಡಬೇಕು. ಬೈಬಲುಗಳನ್ನೂ ಕುರಾನುಗಳನ್ನೂ ವೇದಗಳನ್ನೂ ಇಡಿಯ ಪ್ರಪಂಚವೇ ಓದುತ್ತಿರುವದು; ಆದರೇನು ? ಅವರು ಓದುವದೆಲ್ಲ ಶಬ್ದಲಕ್ಷಣ, ವಾಕ್ಯಲಕ್ಷಣ, ಪದವ್ಯುತ್ಪತ್ತಿ ಭಾಷಾಸ್ವರೂಪ -ಇಂಥ ನೀರಸವಾದ ಭಾಗವೇ. ಯಾವ ಗುರುವು ಶಬ್ದಗಳನ್ನೇ ಬಹಳವಾಗಿ ಉಪಯೋಗಿಸುತ್ತಾ ಶಬ್ದಗಳ ಜೋರಿಗೆ ಒಳಗಾಗುವಂತೆ ಮನಸ್ಸನ್ನು ಬಿಡುವನೋ, ಆತನಿಗೆ ಶಾಸ್ತ್ರದ ತಿರುಳು ಕೈತಪ್ಪುವದು. **ಶಾಸ್ತ್ರಹೃದಯದ ತಿಳಿವಳಿಕೆ**ಯೇ ನಿಜವಾದ ಗುರುವಿನ ಲಕ್ಷಣವು. ''ಶಾಸ್ತ್ರಗಳ ಶಬ್ದಜಾಲವು ಒಂದು ಮಹಾರಣ್ಯದಂತೆ ಇರುವದು. ಅದರಲ್ಲಿ ಅನೇಕವೇಳೆ ಮನಸ್ಸು ಸಿಕ್ಕಿಬಿದ್ದು ದಾರಿತಪ್ಪಿ ಈಚೆಗೆ ಬರಲಾರದೆ ಹೋಗುವದು.''(ವಿ.)[24] ''ಮಾತುಗಳನ್ನು ಬಗೆಬಗೆಯಾಗಿ ಜೋಡಿಸುವ ರೀತಿಗಳೂ ಸುಂದರವಾದ ಭಾಷೆಯಲ್ಲಿ ಉಪನ್ಯಾಸ ಮಾಡುವ ಬಗೆಬಗೆಯ ಕ್ರಮಗಳೂ ಶಾಸ್ತ್ರಪಙ್ಕ್ತಿಗಳನ್ನು ವ್ಯಾಖ್ಯಾನಮಾಡಿ ತಿಳಿಸುವ ಬಗೆಬಗೆಯ ಜಾಣತನಗಳೂ ವಿದ್ವಾಂಸರ ವಾದಕ್ಕೂ ಭೋಗಕ್ಕೂ ಆಗುವವೇ ಹೊರತು ತತ್ತ್ವಸಾಕ್ಷಾತ್ಕಾರ

ದೃಷ್ಟಿಯ ಬೆಳವಣಿಗೆಗೇನೂ ಉಪಯೋಗ ಬೀಳುವದಿಲ್ಲ" (ವಿ.)[25] ಯಾರು ಮತ್ತೊಬ್ಬರಿಗೆ ಧರ್ಮೋಪದೇಶವನ್ನು ಮಾಡುವದಕ್ಕೆ ಇಂಥ ಕ್ರಮಗಳನ್ನು ಉಪಯೋಗಿಸುವರೋ, ಅವರು ತಮ್ಮನ್ನು ದೊಡ್ಡ ವಿದ್ವಾಂಸರೆಂದು ಪ್ರಪಂಚದ ಜನರು ಹೊಗಳಲಿ - ಎಂದು ಕೇವಲ ಪಾಂಡಿತ್ಯ ಪ್ರದರ್ಶನೆಗಾಗಿಯೇ ಹಾತುವರಿಯುತ್ತಿರುವರು. ವಿಚಾರಿಸಿದರೆ ಯಾವ ಮಹಾಜಗದ್ಗುರುಗಳೂ ಹೀಗೆ ಶಾಸ್ತ್ರಕ್ಕೆ ನಾನಾವ್ಯಾಖ್ಯಾನವನ್ನು ಮಾಡುವ ಗೋಜಿಗೆ ಹೋಗಲಿಲ್ಲವೆಂದು ಕಂಡು ಬರುವದು; ಅವರು ಗ್ರಂಥಗಳನ್ನು ತಿರಿಚುವ ಪ್ರಯತ್ನವನ್ನೇನೂ ಮಾಡುತ್ತಿರಲಿಲ್ಲವೆಂದೂ ಶಬ್ದಗಳ ನಾನಾರ್ಥಗಳು, ಅವುಗಳ ಮೂಲಧಾತುಗಳ ಸ್ವರೂಪ - ಇವುಗಳನ್ನೇ ಹಿಡಿದುಕೊಂಡು ಆಡಿಸುತ್ತಿರಲಿಲ್ಲವೆಂದೂ ತಿಳಿದುಬರುವದು. ಆದರೂ ಅವರು ಎಂಥ ಘನವಾದ ಉಪದೇಶವನ್ನು ಮಾಡುತ್ತಿದ್ದರು ! ಮಿಕ್ಕವರೋ ಎಂದರೆ ಉಪದೇಶಮಾಡುವದಕ್ಕೆ ತಮ್ಮಲ್ಲಿ ವಿಷಯವೇ ಇಲ್ಲದಿದ್ದರೂ ಕೆಲವು ವೇಳೆ ಒಂದೇ ಒಂದು ಮಾತನ್ನು ತೆಗೆದುಕೊಂಡು ಅದರ ವ್ಯುತ್ಪತ್ತಿ ಹೇಗೆ? ಅದನ್ನು ಮೊದಲು ಪ್ರಯೋಗಮಾಡಿದವನು ಯಾರು ? ಆತನು ಯಾವ ಆಹಾರವನ್ನು ಇಟ್ಟುಕೊಂಡಿದ್ದನು? ಎಷ್ಟು ಹೊತ್ತು ನಿದ್ದೆಹೋಗುತ್ತಿದ್ದನು?-ಇವೇ ಮುಂತಾದ ವಿಚಾರಗಳನ್ನು ಕುರಿತು ಮೂರು ಕಾಂಡದ ಮಹಾಪ್ರಬಂಧವನ್ನೇ ಬರೆದಿಟ್ಟಿರುತ್ತಾರೆ !

**ಭಗವಾನ್ ರಾಮಕೃಷ್ಣಪರಮಹಂಸರವರು** ಒಂದು ಕಥೆಯನ್ನು ಹೇಳುತ್ತಿದ್ದರು : ಕೆಲವು ಜನರು ಒಂದು ಮಾವಿನ ತೋಟಕ್ಕೆ ಹೋಗಿ ಮಾವಿನ ಎಲೆಗಳನ್ನೂ ಕಡ್ಡಿಗಳನ್ನೂ ಕೊಂಬೆಗಳನ್ನೂ ಲೆಕ್ಕಮಾಡಿ ಅವುಗಳ ಬಣ್ಣವನ್ನು ಪರೀಕ್ಷಿಸಿ ಅವುಗಳ ಗಾತ್ರವನ್ನು ಒಂದಕ್ಕೊಂದಕ್ಕೆ ಹೋಲಿಸುತ್ತಾ ಈ ಎಲ್ಲಾ ವಿಚಾರಗಳನ್ನೂ ಬಹು ಎಚ್ಚರಿಕೆಯಿಂದ ಪುಸ್ತಕದಲ್ಲಿ ಗುರ್ತುಮಾಡಿಕೊಂಡು ಆಮೇಲೆ ಇವುಗಳಲ್ಲಿ ಒಂದೊಂದು ವಿಷಯದಲ್ಲಿಯೂ ಒಂದೊಂದು ಚರ್ಚೆಯನ್ನು ಮಾಡುವದಕ್ಕೆ ದೊಡ್ಡದೊಂದು ಪರಿಷತ್ತನ್ನು ಕೂಡಿಸಿದರಂತೆ. ಈ ವಿಷಯದಲ್ಲಿ ಅವರಿಗೆ ತುಂಬ ಆದರವಿತ್ತೆಂಬುದಕ್ಕೇನೂ ಸಂದೇಹವಿಲ್ಲ; ಆದರೆ ಅವರಲ್ಲಿ ಮಿಕ್ಕವರಿಗಿಂತಲೂ ವಿವೇಕಿಯಾದವನೊಬ್ಬನು ಮಾತ್ರ ಈ ವಿಚಾರಗಳಲ್ಲಿ ಯಾವದೊಂದಕ್ಕೂ ಮನಸ್ಸು ಹಾಕದೆ ಮಾವಿನಹಣ್ಣನ್ನೇ ತಿನ್ನುವದಕ್ಕೆ ಪ್ರಾರಂಭಿಸಿದನು. ಇಲ್ಲಿ ಅವನೇ ಜಾಣನಲ್ಲವೆ? ಹೀಗಿರುವದರಿಂದ ಈ ಎಲೆಕಡ್ಡಿಗಳನ್ನು ಎಣಿಸುವದನ್ನೂ ಟಿಪ್ಪಣಿಹಚ್ಚಿಕೊಳ್ಳುವದನ್ನೂ ಮಿಕ್ಕವರ ಪಾಲಿಗೆ ಬಿಟ್ಟುಬಿಡಿರಿ. ಇಂಥ ಕೆಲಸಕ್ಕೂ ಪ್ರಯೋಜನವಾಗುವ ಸಂಭವಗಳುಂಟು, ಆದರೆ ಈ ಅಧ್ಯಾತ್ಮಕ್ಷೇತ್ರದಲ್ಲಿ ಇದರಿಂದೇನೂ ಉಪಯೋಗವಾಗಲಾರದು. ಇಂಥ 'ಪರ್ಣಗಣಕ'ರಲ್ಲಿ ಒಬ್ಬ ಮಹಾತ್ಮನು ಕೂಡ ಸಿಕ್ಕಲಾರನು. ಪರಮಪುರುಷಾರ್ಥವಾಗಿಯೂ ಮನುಷ್ಯಜನ್ಮಕ್ಕೆ ಭೂಷಣಪ್ರಾಯವಾಗಿಯೂ

ಇರುವ ಧಾರ್ಮಿಕತೆಗೆ 'ಎಲೆಗಳನ್ನೆಣಿಸು'ವಷ್ಟು ಪ್ರಯಾಸವೇನೂ ಬೇಕಾಗಿರುವದಿಲ್ಲ. ನಿಜವಾದ ಭಕ್ತನಾಗಬೇಕೆಂಬ ಇಚ್ಛೆ ಇದ್ದರೆ '**ಕೃಷ್ಣನು ಮಥುರೆ**ಯಲ್ಲಿ ಹುಟ್ಟಿದನೊ, ವ್ರಜದಲ್ಲಿ ಹುಟ್ಟಿದನೋ ?', 'ಅವನು ತನ್ನ ಜೀವಿತಕಾಲದಲ್ಲಿ ಏನು ಮಾಡುತ್ತಿದ್ದನು ?', 'ಆತನು ಗೀತೋಪದೇಶವನ್ನು ಮಾಡಿದ ನಿಶ್ಚಿತವಾದ ಕಾಲವು ಯಾವದು ?' - ಎಂಬುದನ್ನೆಲ್ಲ ತಿಳಿದುಕೊಳ್ಳಲೇಬೇಕಾದ ಅವಶ್ಯಕತೆಯೇನೂ ಇರುವದೇ ಇಲ್ಲ. ಗೀತೆಯಲ್ಲಿ ಉಪದಿಷ್ಟವಾಗಿರುವ ಕರ್ಮ, ಭಕ್ತಿ - ಇವುಗಳಲ್ಲಿ ಉತ್ಕಟೇಚ್ಛೆಯು ಮಾತ್ರ ಹುಟ್ಟಿದರೆ ಸಾಕಾಗಿದೆ. ಆ ಗ್ರಂಥದ ವಿಷಯವಾಗಿಯೂ ಗ್ರಂಥಕರ್ತನ ವಿಷಯವಾಗಿಯೂ ಮಾಡುವ ಉಳಿದ ವಿಚಾರಗಳೆಲ್ಲ ವಿದ್ವಾಂಸರ ಭೋಗಕ್ಕೆ. ಅವರಿಗೇನೇನು ಬೇಕೋ ಅದನ್ನೆಲ್ಲ ಅವರು ಇಟ್ಟುಕೊಳ್ಳಲಿ. ಆ ಮಹಾಪಂಡಿತರ ವಾದಗಳಿಗೆ 'ಶಾಂತಿಃ, ಶಾಂತಿಃ' ಎಂದು ಕೈಮುಗಿದು ಇತ್ತ ಬನ್ನಿರಿ, ನಾವು 'ಮಾವಿನ ಹಣ್ಣು'ಗಳನ್ನು ತಿನ್ನೋಣ !

ಗುರುವಿನಲ್ಲಿರಬೇಕಾದ ಎರಡನೆಯ ಲಕ್ಷಣವು ಯಾವದೆಂದರೆ **ಪಾಪರಾಹಿತ್ಯವು**. ''ಗುರುವಿನ ಯೋಗ್ಯತೆಯನ್ನೂ ಸ್ವಭಾವವನ್ನು ಏಕೆ ಪರೀಕ್ಷೆಮಾಡಬೇಕು ? ಆತನು ಏನು ಹೇಳುತ್ತಾನೆಂಬುದನ್ನು ನೋಡಿ ಅನುಸರಿಸಿದರಾಯಿತು'' ಎಂದು ಕೆಲವರು ಹೇಳುವದುಂಟು. ಆದರೆ ಇದು ಸರಿಯಲ್ಲ. **ಚಲನಶಕ್ತಿಶಾಸ್ತ್ರ** (Dynamics) ವನ್ನಾಗಲಿ, **ವಸ್ತುವಿಜ್ಞಾನಶಾಸ್ತ್ರ** (Chemistry) ವನ್ನಾಗಲಿ ಮತ್ತೆ ಯಾವದಾದರೊಂದು ಭೌತಿಕಶಾಸ್ತ್ರವನ್ನಾಗಲಿ ನಮಗೆ ಕಲಿಸಬೇಕಾಗಿರುವವನು ಹೇಗಿದ್ದರೂ ಸಾಗುವದು; ಏಕೆಂದರೆ ಭೌತಿಕಶಾಸ್ತ್ರಗಳಿಗೆ ಬೇಕಾದದ್ದೆಲ್ಲ ಬರಿಯ ಬುದ್ಧಿಶಕ್ತಿ ; ಆದರೆ ಅಧ್ಯಾತ್ಮಶಾಸ್ತ್ರಗಳಲ್ಲಿ ಎಂದಿಗೂ ಹಾಗಾಗಲಾರದು. ಅಪರಿಶುದ್ಧವಾದ ಮನಸ್ಸಿನಲ್ಲಿ ಆಧ್ಯಾತ್ಮಪ್ರಕಾಶವಿರುವದೆಂಬುದು ಮೊದಲಿನಿಂದ ಕೊನೆಯ ವರೆಗೂ ಅತ್ಯಂತ ಅಸಂಭಾವನೀಯವಾಗಿರುತ್ತದೆ. ದುರಾಚಾರಿಯಾದವನು ಎಂಥ ಧರ್ಮವನ್ನು ಉಪದೇಶ ಮಾಡಿಯಾನು? ತನಗಾಗಿಯೇ ಸಾಕ್ಷಾತ್ಕಾರವನ್ನು ಸಂಪಾದಿಸಿಕೊಳ್ಳ ಬೇಕಾಗಿರಲಿ, ಅಥವಾ ಮತ್ತೊಬ್ಬರಿಗೆ ಉಪದೇಶಮಾಡುವದಕ್ಕೆಂದೇ ಅದನ್ನು ಸಂಪಾದಿಸ ಬೇಕಾಗಿರಲಿ, ಅತ್ಯವಶ್ಯವಾಗಿ ಬೇಕಾಗಿರುವದೇನೆಂದರೆ ಚಿತ್ತಪರಿಶುದ್ಧಿ. ಚಿತ್ತವು ಪೂರ್ಣವಾಗಿ ಶುದ್ಧಿಯಾದ ಹೊರತು ಭಗವಂತನ ದರ್ಶನವು ಆಗಲೇ ಆರದು, ಪರತತ್ತ್ವವು ಎಳ್ಳಷ್ಟೂ ದೃಗ್ಗೋಚರವಾಗಲಾರದು. ಆದ್ದರಿಂದ ಧರ್ಮೋಪದೇಶಕನ ವಿಚಾರದಲ್ಲಿ ಮೊಟ್ಟಮೊದಲು ಆತನು ಎಂಥ ಸ್ವಭಾವದವನೆಂಬುದನ್ನು ನೋಡಿ ಆಮೇಲೆ ಆತನು ಏನು ಹೇಳುತ್ತಾನೆಂಬುದನ್ನು ನೋಡಬೇಕು. ಆತನು ಅತ್ಯಂತ ಪರಿಶುದ್ಧನಾಗಿರಬೇಕು, ಹಾಗಿದ್ದರೆ ಮಾತ್ರ ಅವನ ಮಾತಿಗೆ ಬೆಲೆ ಬರುವದು ; ಏಕೆಂದರೆ ಹಾಗಿದ್ದಾಗಲೇ ಆತನು ನಿಜವಾಗಿ ಅನುಗ್ರಾಹಕನಾಗುವನು. ತನ್ನಲ್ಲಿಯೇ ಧಾರ್ಮಿಕಶಕ್ತಿಯು ಇಲ್ಲದ ಮೇಲೆ ಮತ್ತೊಬ್ಬನಿಗೆ ಏನನ್ನು

ಅನುಗ್ರಹಿಸಿಯಾನು ? ಗುರುವಿನ ಮನಸ್ಸಿನಲ್ಲಿ ಧಾರ್ಮಿಕತೆ ಎಂಬ ಯೋಗ್ಯವಾದ ತಂತಿಯ ಉತ್ತಮನಾದವಿದ್ದರೆ ಶಿಷ್ಯನ ಮನಸ್ಸಿಗೂ ಅದನ್ನು ಸಹಾನುಭೂತಿಯಿಂದ ಸಾಗಿಸುವದಕ್ಕೆ ಬರುತ್ತದೆ. ತನ್ನಲ್ಲಿರುವ ಒಂದಾನೊಂದು ಶಕ್ತಿಯನ್ನು ತೆಗೆದು ಶಿಷ್ಯನಲ್ಲಿ ಹಾಕುವುದೇ ಗುರುವಿನ ಕಾರ್ಯವೇ ಹೊರತು ಸುಮ್ಮನೆ ಶಿಷ್ಯನಲ್ಲಿರುವ ಬುದ್ಧಿಶಕ್ತಿ ಯನ್ನಾಗಲಿ ಮತ್ತೆ ಯಾವ ಶಕ್ತಿಯನ್ನಾಗಲಿ ಚುರುಕುಮಾಡುವದು ಆತನ ಕರ್ತವ್ಯವಲ್ಲ. ತಾತ್ತ್ವಿಕ ವಾಗಿಯೂ ಉತ್ತೇಜಕವೆಂದು ಗೊತ್ತಾಗುವಂತೆಯೂ ಇರುವ ಒಂದಾನೊಂದು ಶಕ್ತ್ಯಂಶವು ಗುರುವಿನಿಂದ ಹೊರಟು ಶಿಷ್ಯನಲ್ಲಿಗೆ ಬಂದು ಸೇರುವದು. ಆದ್ದರಿಂದ ಗುರುವು ಪರಿಶುದ್ಧನಾಗಿರಲೇಬೇಕು.

ಮೂರನೆಯ ಲಕ್ಷಣವು ಉದ್ದೇಶಕ್ಕೆ ಸಂಬಂಧಪಟ್ಟದ್ದಾಗಿರುವದು. ಗುರುವು ಹಣವನ್ನಾಗಲಿ ಪೂಜ್ಯತೆಯನ್ನಾಗಲಿ ಪ್ರಖ್ಯಾತಿಯನ್ನಾಗಲಿ ಬಯಸಿ **ಸ್ವಾರ್ಥೋದ್ದೇಶದಿಂದ ಉಪದೇಶಿಸುವವ ನಾಗಿರಬಾರದು.** ಆತನ ಕೆಲಸವು ಪ್ರೇಮದ ಫಲವಾಗಿರಬೇಕು, ಜನಸಾಮಾನ್ಯದಲ್ಲಿರುವ ಪ್ರೇಮದಿಂದ ಉಂಟಾದದ್ದಾಗಿರಬೇಕು. ಅಧ್ಯಾತ್ಮಶಕ್ತಿಯನ್ನು ಅನುಗ್ರಹಿಸುವದಕ್ಕೆ ಪ್ರೇಮವೊಂದೇ ಅನುಕೂಲವಾಗಿರುವ ಸಾಧನವು. ಲಾಭ, ಪೂಜೆ-ಮುಂತಾದವುಗಳ ಸ್ವಾರ್ಥದ ಉದ್ದೇಶವು ಒಂದಿಷ್ಟು ಇದ್ದರೂ ಶಕ್ತಿಯನ್ನು ಕೊಂಡೊಯ್ಯತಕ್ಕ ಈ ಸಾಧನವನ್ನೇ ಹಾಳು ಮಾಡಿಬಿಡುವದು. ಭಗವಂತನು ಪ್ರೇಮ ಸ್ವರೂಪನು, ಆದ್ದರಿಂದ ಭಗವಂತನನ್ನು ಪ್ರೇಮರೂಪದಿಂದ ಕಂಡುಕೊಂಡಿ ರುವಾತನೇ ಭಗವದ್ಭಕ್ತಿಯ ವಿಚಾರವಾಗಿಯೂ ಭಗವಂತನ ವಿಚಾರವಾಗಿಯೂ ಜನರಿಗೆ ಉಪದೇಶಿಸುವ ಗುರುವಾಗುವದಕ್ಕೆ ಅರ್ಹನಾದವನು.

ನಿಮ್ಮ ಗುರುವಿನಲ್ಲಿ ಈ ಲಕ್ಷಣಗಳಿವೆಯೆಂದು ಗೊತ್ತಾದರೆ ನಿಮಗೆ ಭಯವಿಲ್ಲ. ಇವು ಇಲ್ಲದಿದ್ದರೆ ಆತನ ಉಪದೇಶಕ್ಕೆ ಕಿವಿಗೊಡುವದೇ ಅಪಾಯಕರವು. ಏಕೆಂದರೆ ನಿಮ್ಮ ಹೃದಯದಲ್ಲಿ ಸದ್ಗುಣವನ್ನು ಬಿತ್ತುವದು ಆತನ ಕೈಯಿಂದ ಆಗದಿದ್ದರೆ ಆತನಿಂದ ದುರ್ಗುಣವೇ ನಿಮ್ಮಲ್ಲಿ ಉಂಟಾಗಬಹುದಾದ ಸಂಭವವುಂಟು. ಇಂಥ ಅಪಾಯವು ಒದಗದಂತೆ ಅವಶ್ಯವಾಗಿ ನೋಡಿಕೊಳ್ಳಬೇಕು. ''ಯಾವಾತನು ಶಾಸ್ತ್ರ ಜ್ಞಾನವುಳ್ಳವನೂ ಪಾಪರಹಿತನೂ ಕಾಮದಿಂದ ಅಪರಿಶುದ್ಧನಾದವನೂ ಆಗಿರುವನೋ ಆತನೇ ಬ್ರಹ್ಮಜ್ಞಾನಿಗಳಲ್ಲೆಲ್ಲ ಶ್ರೇಷ್ಠನು'' (ವಿ.)[26], ಆತನೇ ನಿಜವಾದ ಗುರುವು.

ಇದುವರೆಗೂ ಹೇಳಿದ್ದರಿಂದ ಏನು ಸಿದ್ಧವಾಯಿತೆಂದರೆ ಧರ್ಮಶ್ರದ್ಧೆ, ಧರ್ಮಜ್ಞಾನ, ಧರ್ಮಾನುಷ್ಠಾನ - ಇವುಗಳನ್ನು ನಾವು ಎಲ್ಲಿಯೆಂದರೆ ಅಲ್ಲಿ, ಯಾರಿಂದಲೆಂದರೆ ಅವರಿಂದ, ಕಲಿತುಕೊಳ್ಳುವದೆಂಬುದು ಸಾಧ್ಯವಲ್ಲ. ''ಕಲ್ಲುಗಳಲ್ಲಿ ಉಪದೇಶ ಮಾಲೆಯನ್ನೂ, ಹರಿಯುವ

ನದಿಗಳಲ್ಲಿ ಧರ್ಮಗ್ರಂಥಗಳನ್ನೂ, ಪ್ರತಿಯೊಂದು ವಸ್ತುವಿನಲ್ಲಿ ತತ್ತ್ವವನ್ನೂ'' (ಶೇ.)೨೭ ಕಾಣಬೇಕೆಂಬುದು ಸಾಹಿತ್ಯದೃಷ್ಟಿಯಿಂದ ಉತ್ತಮವಾದ ಅಲಂಕಾರದ ಭಾಷೆಯೇ ಸರಿ ; ಆದರೆ ಅವ್ಯಕ್ತವಾದ ರೂಪದಲ್ಲಿ ತತ್ತ್ವದ ಬೀಜಗಳು ಮೊದಲೇ ಯಾರಲ್ಲಿರುವದಿಲ್ಲವೋ ಅಂಥವನಿಗೆ ಒಂದು ರೇಣುತೂಕ ತತ್ತ್ವವನ್ನು ಕೂಡ ಮತ್ತೊಬ್ಬರು ಕೊಡಲಾರರು. 'ಕಲ್ಲುಗಳೂ ನದಿಗಳೂ ಉಪದೇಶ ಮಾಡುತ್ತಿರುವದು' ಎಂಥವನಿಗೆ ? ಯಾವಾತನ ಪರಿಶುದ್ಧವಾದ ಹೃದಯಕಮಲವು ಆಗಲೇ ಸಜೀವವಾಗಿಬಿಟ್ಟಿರುವದೋ ಅಂಥ ಮನುಷ್ಯ ಜೀವನಿಗೆ. ಈ ಕಮಲವು ಮನೋಹರವಾಗಿ ಅರಳುವಂತೆ ಮಾಡುವ ಬೆಳಕೋ ಎಂದರೆ ಅದು ಯಾವಾಗಲೂ ಸಾಧುವೂ ಸುಜ್ಞಾನಿಯೂ ಆಗಿರುವ ಸದ್ಗುರುವಿನಿಂದಲೇ ಬರಬೇಕಾಗಿ ರುವದು. ಈ ರೀತಿಯಲ್ಲಿ ಹೃದಯವು ಅರಳಿಕೊಂಡಮೇಲೆ ಅದು ಕಲ್ಲುಗಳಿಂದಲಾದರೂ ನದಿಗಳಿಂದಲಾದರೂ ಸೂರ್ಯನಿಂದಲಾದರೂ ಚಂದ್ರನಿಂದಲಾದರೂ ಭಗವಂತನು ಸೃಷ್ಟಿಸಿರುವ ಈ ನಮ್ಮ ಪ್ರಪಂಚದ ಮತ್ತೆ ಯಾವದೋ ವಸ್ತುವಿನಿಂದಲಾದರೂ ಉಪದೇಶವನ್ನು ಸ್ವೀಕರಿಸುವದಕ್ಕೆ ಯೋಗ್ಯವಾಗುವದು. ಆದರೆ ಹೀಗೆ ವಿಕಾಸವಾಗದೆ ಇರುವ ಹೃದಯಕ್ಕೆ ಇವು ಬರಿಯಕಲ್ಲುಗಳೇ ಆಗಿ, ಬರಿಯ ನದಿಗಳೇ ಆಗಿ ಕಾಣುವವೇ ಹೊರತು ಅವುಗಳಲ್ಲಿ ಮತ್ತೇನೂ ಕಾಣಸುವದಿಲ್ಲ. ಕುರುಡನಾದವನು ವಿಚಿತ್ರವಸ್ತುಪ್ರದರ್ಶನ ಶಾಲೆಗೇನೋ ಹೋಗ ಬಹುದು, ಆದರೆ ಅವನಿಗೆ ಅದರಿಂದ ಏನೂ ಪ್ರಯೋಜನ ವಾಗಲಾರದು. ಅವನಿಗೆ ಮೊದಲು ಕಣ್ಣಿನ ಪರೆಯನ್ನು ತೆರೆಯಬೇಕು, ಆಗಮಾತ್ರ ಪ್ರದರ್ಶನ ಶಾಲೆಯಲ್ಲಿರುವ ವಸ್ತುಗಳಿಂದ ಏನೇನು ತಿಳಿದುಕೊಳ್ಳಬಹುದೆಂಬುದು ಗೊತ್ತಾದೀತು.

ಧರ್ಮದಲ್ಲಿ ಬಯಕೆಯಿರುವ ಸಾಧಕನಿಗೆ ಕಣ್ಣಿನ ಪರೆಯನ್ನು ತೆರೆಯುವಾತನೇ ಗುರುವು. ಆದ್ದರಿಂದ ಗುರುವಿಗೂ ನಮಗೂ ಇರುವ ಸಂಬಂಧವು ಮೂಲ ಪುರುಷರಿಗೂ ತದ್ಗೋತ್ರಜನಿಗೂ ಇರುವ ಸಂಬಂಧವಾಗಿರುವದು. ಧರ್ಮೋಪದೇಶಕನಾಗಿರುವ ಗುರುವಿನ ವಿಷಯದಲ್ಲಿ ಶ್ರದ್ಧೆ, ದೈನ್ಯ, ವಿಧೇಯತೆ, ಪೂಜ್ಯಬುದ್ಧಿ-ಇವು ನಮ್ಮ ಹೃದಯದಲ್ಲಿ ಇದ್ದ ಹೊರತು ನಮ್ಮಲ್ಲಿ ಧರ್ಮಬುದ್ಧಿಯು ಒಂದಿಷ್ಟೂ ಬೆಳೆಯಲಾದರು. ಇಂಥ ಸಂಬಂಧವು ಗುರುಶಿಷ್ಯರಲ್ಲಿ ಎಲ್ಲಿ ರೂಢವಾಗಿರುವದೋ ಅಲ್ಲಿಯೇ ಮಹಾಮಹಾ ಆತ್ಮಜ್ಞಾನಿಗಳು ಉದಿಸುತ್ತಿರುವರೆನ್ನುವದು ಚೆನ್ನಾಗಿ ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ. ಇಂಥ ಸಂಬಂಧವನ್ನು ನಿಲ್ಲಿಸಿಕೊಳ್ಳುವದರಲ್ಲಿ ಅನಾದರಣೆಯನ್ನು ತೋರಿಸಿದ ದೇಶಗಳಲ್ಲಿಯಾದರೋ ಧರ್ಮೋಪದೇಶಕನೆಂದರೆ ಕೇವಲ ಉಪನ್ಯಾಸಕನಾಗಿ ಬಿಟ್ಟಿರುವನು. ಬೋಧಕನು ತನಗೆ ಎಂದಿನಂತೆ ಪಂಚಸುವರ್ಣದ ದಕ್ಷಿಣೆ ಬಂದೀತೆ !- ಎಂದು ಕಾದುಕೊಂಡಿರುವನು, ಬೋಧನೆಯನ್ನು

ಕೇಳುವವನು ಈ ಉಪದೇಶಕನ ವಾಕ್ಯಗಳನ್ನು ತನ್ನ ತಲೆಯಲ್ಲಿ ಆದಷ್ಟು ತುಂಬಿಕೊಳ್ಳಬೇಕೆಂದು ಕುತೂಹಲಪಡುತ್ತಿರುವನು; ಇಷ್ಟು ಕೆಲಸವು ಪೂರೈಸಿತೋ ಇಲ್ಲವೋ, ಇಬ್ಬರೂ ತಮ್ಮ ತಮ್ಮ ಹಾದಿಯನ್ನು ಹಿಡಿದುಕೊಂಡು ಹೊರಟುಹೋಗುವರು. ಇಂಥ ಸಂದರ್ಭದಲ್ಲಿ ಧಾರ್ಮಿಕತೆ ಯೆಂಬುದು ಸ್ವಲ್ಪ ಹೆಚ್ಚುಕಡಿಮೆ ಯಾರಿಗೂ ಗೊತ್ತಿಲ್ಲದ ವಸ್ತುವಾಗಿರುವದು; ಆಗ ಅದನ್ನು ಅನುಗ್ರಹಿಸುವವರೂ ಯಾರೂ ಇರುವದಿಲ್ಲ, ಅನುಗ್ರಾಹ್ಯರೂ ಯಾರೂ ಇರುವದಿಲ್ಲ. ಇಂಥ ಜನಗಳಲ್ಲಿ ಧರ್ಮವೂ ಒಂದು ವ್ಯಾಪಾರವು; ಸುವರ್ಣನಾಣ್ಯಗಳನ್ನು ಕೊಟ್ಟು ಅದನ್ನು ಕೊಂಡುಕೊಳ್ಳಬಹುದೆಂದೇ ಅವರ ನಂಬಿಕೆ. ಧರ್ಮವನ್ನು ಅಷ್ಟು ಸುಲಭವಾಗಿ ಪಡೆಯುವದಕ್ಕಾಗುವಂತೆ ದೇವರು ಅನುಗ್ರಹಿಸಿದ್ದರೆ ಎಷ್ಟು ಚೆನ್ನಾಗಿತ್ತು ! ಆದರೆ ನಮ್ಮ ದುರ್ದೈವದಿಂದ ಅದು ಆಗುವಹಾಗಿಲ್ಲ.

ಪರಮಜ್ಞಾನವೂ ಪರಮವಿಜ್ಞಾನವೂ ಆಗಿರುವ ಈ ಧರ್ಮವನ್ನು ಕೊಂಡುಕೊಳ್ಳುವದಕ್ಕೂ ಆಗುವದಿಲ್ಲ, ಗ್ರಂಥಗಳಿಂದ ಕಲಿತುಕೊಂಡುಬಿಡುವದಕ್ಕೂ ಆಗುವದಿಲ್ಲ. ಪ್ರಪಂಚದ ಮೂಲೆಮೂಲೆಯೊಳಕ್ಕೂ ತಲೆಹಾಕಿ ನೋಡಬಹುದು; ಹಿಮಾಲಯ, ಆಲ್ಪ್ಸ್, ಕಾಕ್ಸಸ್ - ಮುಂತಾದ ಪರ್ವತಗಳೊಳಗೆ ನುಗ್ಗಿ ಶೋಧನೆ ಮಾಡಲೂಬಹುದು; ಸಮುದ್ರವನ್ನು ತಳದವರೆಗೂ ಅಳೆಯಬಹುದು. ಟಿಬೆಟ್ ಪ್ರಸ್ಥಭೂಮಿಯ ಮತ್ತು ಗೋಬಿ ಮರುಭೂಮಿಯ ಸಂದುಗೊಂದಿಯನ್ನೂ ಇಣಿಕಿ ನೋಡಬಹುದು; ನಿಮ್ಮ ಹೃದಯವು ಧರ್ಮಸ್ವೀಕಾರಕ್ಕೆ ಯೋಗ್ಯವಾಗಿ ನಿಮಗೆ ತಕ್ಕ ಗುರುವು ದೊರೆತ ಹೊರತು ಈ ಧರ್ಮವು ಎಲ್ಲಿಯೂ ನಿಮ್ಮ ಕಣ್ಣಿಗೆ ಬೀಳುವದಿಲ್ಲ. ಭಗವನ್ನಿಯಮಿತನಾದ ಅಂಥ ಗುರುವು ದೊರೆತಾಗ ಮಕ್ಕಳಂತೆ ಆತನಲ್ಲಿಯೇ ಭರವಸೆಯನ್ನಿಟ್ಟು ಹೆಮ್ಮೆಯಿಲ್ಲದೆ ಆತನನ್ನು ಸೇವಿಸಿರಿ. ಆತನ ಅನುಗ್ರಹವಾಗುವಂತೆ ನಿಮ್ಮ ಹೃದಯವನ್ನು ಧಾರಾಳವಾಗಿ ತೆರೆದಿಡಿರಿ. ಆತನೇ ಭಗವಂತನ ಅವತಾರವೆಂದು ಭಾವಿಸಿರಿ. ಇಂಥ ಪ್ರೇಮಭಾವದಿಂದಲೂ ಪೂಜ್ಯಬುದ್ಧಿಯಿಂದಲೂ ತತ್ತ್ವಾನ್ವೇಷಣೆಯನ್ನು ಮಾಡುವದಕ್ಕೆ ಯಾರು ಬರುವರೋ, ಅಂಥವರಿಗೆ ಸತ್ಯಸ್ವರೂಪನಾದ ಭಗವಂತನು ಧರ್ಮ, ಅಧ್ಯಾತ್ಮವಿದ್ಯೆ- ಇವುಗಳ ವಿಷಯವಾಗಿ ಅದ್ಭುತವಾದ ವಿಚಾರಗಳನ್ನು ಪ್ರಕಾಶಗೊಳಿಸುವನು.

# 6. ಆವತಾರಿಕಗುರುಗಳೂ ಅವತಾರವೂ

ಆ ಪರಮಾತ್ಮನ ನಾಮೋಚ್ಚಾರಣೆಯು ಎಲ್ಲಿ ಆಗುತ್ತಿರುವದೋ ಆ ಸ್ಥಳವೇ ಪವಿತ್ರವಾದದ್ದು ಹೀಗಿರುವಾಗ ಆತನ ನಾಮವನ್ನು ಉಚ್ಚರಿಸುವಾತನು ಇನ್ನೆಷ್ಟು ಪವಿತ್ರನಾಗಬೇಕಾಯಿತು! ಮತ್ತು ಯಾವಾತನಿಂದ ನಮಗೆ ತತ್ತ್ವೋಪದೇಶವಾಗುವದೋ ಆತನನ್ನು ಎಷ್ಟು ಪೂಜ್ಯಬುದ್ಧಿಯಿಂದ ಕಾಣಬೇಕಾಯಿತು ! ಈ ಲೋಕದಲ್ಲಿ ಇಂಥ ತತ್ತ್ವೋಪದೇಶಕರ ಸಂಖ್ಯೆಯು ನಿಜವಾಗಿಯೂ ಬಹಳ ಕಡಿಮೆಯೇ; ಆದರೆ ಪ್ರಪಂಚದಲ್ಲಿ ಇವರು ಇಲ್ಲವೇ ಇಲ್ಲವೆಂಬ ಕಾಲವೇ ಇಲ್ಲ. ಅವರು ಸಂಪೂರ್ಣವಾಗಿಯೂ ಇಲ್ಲವೇ ಇಲ್ಲವೆಂಬ ಕಾಲವು ಯಾವಾಗ ಬರುವದೋ, ಆಗ ತತ್‌ಕ್ಷಣವೇ ಈ ಲೋಕವು ಭೀಭತ್ಸನರಕವಾಗಿ ಪರಿಣಮಿಸುವದು, ಆಮೇಲೆ ಕ್ಷಿಪ್ರದಲ್ಲಿಯೇ ಪ್ರಲಯೋನ್ಮುಖ ವಾಗಿ ಬಿಡುತ್ತದೆ. ಇಂಥವರು ಯಾವಾಗಲೂ ಮಾನವಜಾತಿಗೇ ಭೂಷಣಪ್ರಾಯರಾಗಿರುತ್ತಾರೆ. "ಯಾವ ಸ್ವಾರ್ಥವೂ ಇಲ್ಲದ ಕರುಣೆಯ ಸಮುದ್ರದಂತೆ ಇರುತ್ತಾರೆ" (ವಿ.)[28] "ಸದ್ಗುರುವನ್ನು ನಾನೆಂದೇ ತಿಳಿಯಬೇಕು" (ಭಾಗ.)[29] ಎಂದು ಶ್ರೀಕೃಷ್ಣನು ಭಾಗವತದಲ್ಲಿ[1] ಹೇಳಿರುತ್ತಾನೆ.

ಸಾಮಾನ್ಯಗುರುಗಳೆಲ್ಲರಿಗಿಂತಲೂ ಮೇಲೆನಿಸಿರುವ ಉತ್ತಮತರದ ಗುರುಗಳ ಪಂಗಡ ವೊಂದು ಈ ಲೋಕದಲ್ಲಿ ಉಂಟು. ಇವರು ಈಶ್ವರನ ಅವತಾರವೆನಿಸುವರು. ಇವರು ಸ್ಪರ್ಶಮಾತ್ರದಿಂದ ಅಥವಾ ಇಚ್ಛಾಮಾತ್ರದಿಂದಲೇ ಧಾರ್ಮಿಕಶಕ್ತಿಪಾತವನ್ನು ಮಾಡುವದಕ್ಕೆ ಸಮರ್ಥರಾಗಿರುತ್ತಾರೆ.[2] ಅತ್ಯಂತ ನೀಚರೂ ದುರಾಚಾರಿಗಳೂ ಆಗಿದ್ದವರು ಕೂಡ ಇವರ ಆಜ್ಞಾಮಾತ್ರದಿಂದ ಒಂದು ಕ್ಷಣದೊಳಗೆ ಮಹಾತ್ಮರಾಗಿ ಬಿಡುವರು. ಇವರು ಗುರುಗಳಿಗೆಲ್ಲ ಗುರುಗಳು, ಮನುಷ್ಯನಲ್ಲಿ ಪ್ರಕಟವಾಗಿರುವ ಪರಮಾತ್ಮನ ಉತ್ಕೃಷ್ಟವಿಭೂತಿ ಸ್ವರೂಪರು. ನಮಗೆ ಇವರ ಮೂಲಕವಲ್ಲದಿದ್ದರೆ ಭಗವಂತನನ್ನು ನೋಡುವದಕ್ಕೆ ಬೇರೆ ದಾರಿಯೇ ಇರುವದಿಲ್ಲ. ಇವರನ್ನು ಪೂಜಿಸದೆ ಇರುವದೂ ಸಾಧ್ಯವಿಲ್ಲ. ಚೆನ್ನಾಗಿ ವಿಚಾರಿಸಿನೋಡಿದರೆ ನಾವು ಪೂಜಿಸಲೇಬೇಕಾದದ್ದು ಇವರನ್ನು ಮಾತ್ರವೇ !

ಈ ಮಾನವವಿಭೂತಿಗಳ ದ್ವಾರದಿಂದಲೇ ಹೊರತು ಬೇರೊಂದು ರೀತಿಯಿಂದ ಯಾವನೂ ಭಗವಂತನನ್ನು ನೋಡಲಾರನು. ಬೇರೊಂದು ರೀತಿಯಿಂದ ಭಗವಂತನನ್ನು

---

1. 'ಗೀತೆಯಲ್ಲಿ' ಎಂದು ಮಾಯಾವತೀಸಂಸ್ಕರಣದಲ್ಲಿ ಲೇಖಕರ ಕೈತಪ್ಪಿನಿಂದ ಬಿದ್ದಿರುತ್ತದೆ. ನಿಜವಾಗಿ ಈ ವಾಕ್ಯವು ಭಾಗವತದ ಏಕಾದಶಸ್ಕಂಧದಲ್ಲಿದೆ.

2. ಶ್ರೀರಾಮಕೃಷ್ಣ ಪರಮಹಂಸರವರು ಇಂಥ ಸದ್ಗುರುಗಳೆಂದು ಅವರ ಸಾಕ್ಷಾಚ್ಛಿಷ್ಯರು ನಂಬಿದ್ದರೆಂದು ಅವರ ಇತಿಹಾಸದಿಂದ ತಿಳಿಯಬರುತ್ತದೆ.

ನೋಡೋಣವೆಂದು ಯತ್ನಿಸಿದರೆ ಯಾವದಾದರೊಂದು ವಿಕಾರಸ್ವರೂಪವನ್ನು ಕಲ್ಪಿಸಿ ಕೊಂಡು ಮೂಲರೂಪವೂ ಆದರಂತೆಯೇ ಇರಬೇಕೆಂದು ಭಾವಿಸಬೇಕಾಗಿಬರುವದು. ಒಬ್ಬಾನೊಬ್ಬ ಮೂಢನಿಗೆ ವಿನಾಯಕನ ವಿಗ್ರಹವನ್ನು ಮಾಡಬೇಕೆಂದು ಯಾರೋ ಹೇಳಿರಲು ಆತನು ಬಹುದಿನಗಳವರೆಗೆ ಪ್ರಯಾಸಪಟ್ಟು ಕೊನೆಗೆ ಒಂದು ಕೋತಿಯ ಆಕೃತಿಯನ್ನು ಮಾಡಿಟ್ಟನೆಂದು ಒಂದು ಕಥೆಯಿದೆ. ಇದರಂತೆಯೇ ಪರಮಾತ್ಮನು ಇರುವ ಪರಿಪೂರ್ಣ ರೂಪವನ್ನು ಕುರಿತು ಯೋಚಿಸುವದಕ್ಕೆ ಹೊರಟಾಗಲೆಲ್ಲ ನಮ್ಮ ಪ್ರಯತ್ನವು ಅತ್ಯಂತನಿಷ್ಫಲವಾಗುವದು. ಏಕೆಂದರೆ ನಾವು ಮನುಷ್ಯರಾಗಿರುವವರೆಗೂ ಆತನನ್ನು ಮನುಷ್ಯನೆಂದು ಕಲ್ಪಿಸಿಕೊಳ್ಳಬಹುದೇ ಹೊರತು ಅದಕ್ಕಿಂತ ಹೆಚ್ಚಿನ ರೂಪವನ್ನು ಕಲ್ಪಿಸಿಕೊಳ್ಳುವದು ನಮ್ಮ ಕೈಯಿಂದ ಆಗಲಾರದು. ನಮ್ಮ ಮನುಷ್ಯಸ್ವಭಾವವನ್ನು ಮೀರಿ ಭಗವಂತನು ಹೇಗಿರುವನೋ ಆ ರೂಪದಿಂದಲೇ ಆತನನ್ನು ಅರಿಯುವ ಕಾಲವೂ ಬರಬಹುದು; ಆದರೆ ನಾವು ಮನುಷ್ಯರಾಗಿರುವವರೆಗೂ ಆ ಭಗವಂತನನ್ನು ಮನುಷ್ಯ ವ್ಯಕ್ತಿಯಲ್ಲಿಯೇ ಪೂಜಿಸಬೇಕು. ನೀವು ಎಷ್ಟುಬೇಕಾದರೂ ಮಾತಾಡಿರಿ, ಎಷ್ಟು ಬೇಕಾದರೂ ಪ್ರಯತ್ನಪಡಿರಿ, ದೇವರನ್ನು ಮನುಷ್ಯರೂಪದಿಂದಲ್ಲದೆ ಬೇರೆ ರೀತಿಯಿಂದ ಭಾವಿಸಿಕೊಳ್ಳುವದೆಂಬುದು ಆಗದ ಮಾತು. ನೀವು ಈಶ್ವರನ ವಿಷಯವಾಗಿಯೂ ಈ ಪ್ರಪಂಚದ ಮಿಕ್ಕ ವಸ್ತುಗಳ ವಿಷಯವಾಗಿಯೂ ಭಾರಿಭಾರಿಯ ಬುದ್ಧಿವಂತಿಕೆಯ ಭಾಷಣಗಳನ್ನು ಮಾಡಬಹುದು; ಮಹಾಸ್ವತಂತ್ರವಿಚಾರಿ ಗಳೆನಿಸಿಕೊಂಡು ದೇವರು ಮಾನವರೂಪದಲ್ಲಿ ಅವತರಿಸುವನೆಂದು ಹೇಳುವ ಮಾತುಗಳೆಲ್ಲ ಅವಿವೇಕವೆಂದು ನಿಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಸಿದ್ಧಮಾಡಿಕೊಳ್ಳಲೂಬಹುದು. ಆದರೆ ಒಂದು ಕ್ಷಣಹೊತ್ತು ವ್ಯವಹಾರಕ್ಕೊಪ್ಪುವ ಸಾರ್ವಜನಿಕ ದೃಷ್ಟಿಯಿಂದ ಇವುಗಳನ್ನು ನೋಡೋಣ. ಇಂಥ ಮಹಾಮಹಾಬುದ್ಧಿಪ್ರದರ್ಶನದಲ್ಲಿ ಸಾರವೇನಿರುವದು ? ಸೊನ್ನೆಯೇ, ಏನೇನೂ ಇಲ್ಲ .ಬರಿಯ ಒಣ ಗದ್ದಲ. ಈಶ್ವರನ ಅವತಾರಗಳನ್ನು ಹೀಗೆ ಪೂಜೆಮಾಡ ಕೂಡದೆಂದು ಬುದ್ಧಿವಂತಿಕೆಯನ್ನು ತೋರಿಸಿಕೊಳ್ಳುವ ಮಹಾವ್ಯಾಖ್ಯಾನವನ್ನು ಮಾಡುತ್ತಿರುವ ವನು ಯಾವನಾದರೂ ಇನ್ನೊಮ್ಮೆ ನಿಮಗೆ ಕಂಡುಬಂದರೆ, ಅಂಥವನನ್ನು ಹಿಡಿದು ನಿಲ್ಲಿಸಿ ''ದೇವರ ಸ್ವರೂಪದ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು? 'ಸರ್ವಶಕ್ತಿತ್ವ', 'ಸರ್ವವ್ಯಾಪಕತ್ವ'- ಮುಂತಾದ ಶಬ್ದಗಳಲ್ಲಿರುವ ಅಕ್ಷರಸಂಯೋಜನೆಯನ್ನು ಬಿಟ್ಟರೆ ಈ ಮಾತುಗಳಿಗೆ ನೀನು ಮಾಡಿಕೊಂಡಿರುವ ಅರ್ಥವೇನು ?'' ಎಂದು ಕೇಳಿರಿ. ಆ ಮಾತುಗಳ ಅರ್ಥವು ಆತನಿಗೆ ನಿಜವಾಗಿ ಏನೇನೂ ತಿಳಿದಿರುವದಿಲ್ಲ; ಮಾನವ ಸ್ವಭಾವದ ಸಂಬಂಧವಿಲ್ಲದಿರುವ ಯಾವ ಅರ್ಥವನ್ನೂ ಆ ಶಬ್ದಗಳಿಗೆ ಹೇಳುವದು ಅವನಿಂದ ಆಗುವ ಹಾಗಿರುವದೇ ಇಲ್ಲ. ಒಂದು ಗ್ರಂಥವನ್ನೂ ಓದದಿರುವ ಹಳ್ಳಿಯ ಗೌಡನಿಗಿಂತ ಈ ವಿಷಯದಲ್ಲಿ ಅವನು ಒಂದಿಷ್ಟೂ ಮೇಲೆನಿಸಿರುವದಿಲ್ಲ. ಆದರೆ ಹಳ್ಳಿಯಗೌಡನು ಜನರ ನೆಮ್ಮದಿಗೆ ಭಂಗವನ್ನು

ತರದೆ ತೆಪ್ಪಗೆ ಇರುತ್ತಾನೆ; ಈ ಮಾತುಗನು ಮಾತ್ರ ಜನಗಳಲ್ಲಿ ಬುದ್ಧಿಕ್ಷೋಭೆಯನ್ನೂ ತೊಂದರೆಯನ್ನೂ ಹುಟ್ಟಿಸುತ್ತಿರುತ್ತಾನೆ, ಅಷ್ಟೆ. ಎಷ್ಟೇ ಯೋಚಿಸಿದರೂ ಧರ್ಮವೆಂಬುದು ಸಾಕ್ಷಾತ್ಕಾರದಲ್ಲಿ ಪರ್ಯವಸಾನವಾಗತಕ್ಕದ್ದು. ಆದ್ದರಿಂದ ಇಂಥ ಬರಿಯಮಾತಿಗೂ ಸಾಕ್ಷಾದನುಭವಕ್ಕೂ ತುಂಬ ಹೆಚ್ಚುಕಡಿಮೆಯುಂಟು. ನಮ್ಮ ಅಂತರಾತ್ಮದಲ್ಲಿ ಯಾವದು ಅನುಭವಕ್ಕೆ ಬರುವದೋ ಅದೇ ಸಾಕ್ಷಾತ್ಕಾರವು, ಸರಿಯಾಗಿ ನೋಡಿದರೆ ಈ ವಿಷಯದಲ್ಲಿ ಸಾಮಾನ್ಯ ಜ್ಞಾನವು ವಿರಳವಾಗಿರುವಷ್ಟು ಮತ್ತೆ ಯಾವುದೂ ವಿರಳವಾಗಿರುವದಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿರುತ್ತದೆ.

ನಮ್ಮ ಮನಸ್ಸು ಈಗಿರುವ ಸ್ಥಿತಿಯಲ್ಲಿ ನಾವು ಪರಿಚ್ಛಿನ್ನರಾಗಿಯೇ ಇರುತ್ತೇವೆ; ಆದ್ದರಿಂದ ದೇವರನ್ನು ಮನುಷ್ಯನೆಂದೇ ನಾವು ಕಾಣಬೇಕಾಗಿರುತ್ತದೆ. ಹೇಗೆಂದರೆ ಎಮ್ಮೆಗಳು ದೇವರನ್ನು ಪೂಜಿಸಬೇಕೆಂದು ಇಚ್ಛಿಸಿದವೆಂದು ಇಟ್ಟುಕೊಳ್ಳಿ; ಆಗ ಅವು ತಮ್ಮ ಸ್ವಭಾವಕ್ಕನುಗುಣವಾಗಿ ದೇವರನ್ನು ಒಂದು ದೊಡ್ಡ ಎಮ್ಮೆಯೆಂದೇ ಕಲ್ಪಿಸಿಕೊಳ್ಳುವವು. ಮೀನು ದೇವರನ್ನು ಧ್ಯಾನಿಸಬೇಕಾದರೆ ಆತನನ್ನು ಒಂದು ದೊಡ್ಡಮೀನೆಂದೇ ಭಾವಿಸಬೇಕಾಗಿರುವದು. ಇದರಂತೆ ಮನುಷ್ಯನು ಆತನನ್ನು ಮನುಷ್ಯನೆಂದೇ ಭಾವಿಸಬೇಕಾಗಿರುವದು. ಈ ಬೇರೆಬೇರೆಯ ಪರಿಚ್ಛಿನ್ನ ಭಾವನೆಗಳು ಯಾವದೋ ಒಂದು ಅಸ್ವಾಭಾವಿಕವಾಗಿ ವ್ಯಾಪಾರ ಮಾಡುತ್ತಿರುವ ಕಲ್ಪನೆಯ ಫಲವಲ್ಲ: ಮನಸ್ಸು, ಎಮ್ಮೆ, ಮೀನು - ಇವೆಲ್ಲ ಬೇರೆಬೇರೆಯ ಆಕಾರದ ಮತ್ತು ಪರಿಮಾಣದ ಬೇರೆಬೇರೆಯ ಪಾತ್ರೆಗಳಿದ್ದಂತೆ ಇವೆ. ಈ ಪಾತ್ರೆಗಳೆಲ್ಲ ದೇವರೆಂಬ ಸಮುದ್ರಕ್ಕೆ ಹೋಗಿ ತಮ್ಮ ತಮ್ಮ ಆಕಾರಕ್ಕೂ ಪರಿಮಾಣಕ್ಕೂ ತಕ್ಕಂತೆ ನೀರನ್ನು ತುಂಬಿಕೊಳ್ಳುತ್ತಿವೆ. ಆ ನೀರು ಮನುಷ್ಯನಲ್ಲಿ ಮನುಷ್ಯಾಕೃತಿಯನ್ನೂ ಎಮ್ಮೆಯಲ್ಲಿ ಎಮ್ಮೆಯ ಆಕೃತಿಯನ್ನೂ ಮೀನಿನಲ್ಲಿ ಮೀನಿನ ಆಕೃತಿನ್ನೂ ಪಡೆಯುವದು. ಈ ಎಲ್ಲ ಪಾತ್ರೆಗಳಲ್ಲಿಯೂ ದೇವರೆಂಬ ಆ ಸಮುದ್ರದ ನೀರೇ ಇರುವದು. ಮನುಷ್ಯರು ಭಗವಂತನನ್ನು ಕಾಣುವಾಗ ಆತನನ್ನು ಮನುಷ್ಯರೂಪದಲ್ಲಿಯೇ ಕಾಣುವರು; ಮತ್ತು ಪಶ್ವಾದಿಗಳು - ಅವಕ್ಕೂ ದೇವರ ಭಾವನೆಯೇನಾದರೂ ಇರುವದಾದರೆ - ತಮ್ಮ ತಮ್ಮ ಧ್ಯೇಯಕ್ಕನುಗುಣವಾಗಿ ಆತನನ್ನು ಒಂದು ಪ್ರಾಣಿಯೆಂದೇ ಕಾಣಬೇಕಾಗುವದು. ಅಂತೂ ಹೀಗೆ ದೇವರನ್ನು ಮನುಷ್ಯ ದೃಷ್ಟಿಯಿಂದ ನೋಡದೆ ಇರುವದಕ್ಕೆ ನಮಗೆ ಆಗುವಂತಿಲ್ಲ; ಆದ್ದರಿಂದ ನಾವು ಆತನನ್ನು ಮನುಷ್ಯರೂಪದಿಂದಲೇ ಪೂಜಿಸಬೇಕು, ಬೇರೆಯ ಮಾರ್ಗವೇ ಇಲ್ಲ.

ದೇವರನ್ನು ಮನುಷ್ಯರೂಪದಿಂದ ಪೂಜಿಸದೆ ಇರುವವರು ಇಬ್ಬರು : ಯಾವ ಧರ್ಮಭಾವನೆಯೂ ಇಲ್ಲದ ಮಾನವಪಶು ಒಬ್ಬನು, ಮನುಷ್ಯತ್ವದ ದೋಷಗಳನ್ನೆಲ್ಲ ಮೀರಿ ತನ್ನ ಮಾನವಸ್ವಭಾವದ ಎಲ್ಲೆಯನ್ನೇ ದಾಟಿರುವ ಪರಮಹಂಸನೊಬ್ಬನು. ಈ ಪರಮ ಹಂಸನಿಗೆ

ಪ್ರಪಂಚವೆಲ್ಲ ತನ್ನ ಆತ್ಮವಾಗಿಬಿಟ್ಟಿರುವದು. ದೇವರು ಹೇಗಿದ್ದನೋ ಅದೇ ರೂಪದಿಂದ ಆತನನ್ನು ಪೂಜಿಸುವದಕ್ಕೆ ಇವನೊಬ್ಬನೇ ಸಮರ್ಥನು. ಮಿಕ್ಕ ವಿಷಯಗಳಲ್ಲಿ ಹೇಗೋ ಹಾಗೆಯೇ ಈ ವಿಚಾರದಲ್ಲಿಯೂ ಆದ್ಯಂತಕೋಟಿಗಳೆರಡೂ ಒಂದೇ ರೂಪವಾಗಿರುವಂತೆ ಕಾಣಿಸುವವು. ಅಜ್ಞತ್ವವೆಂಬ ಆದ್ಯಸ್ಥಿತಿ, ಸರ್ವಜ್ಞತ್ವವೆಂಬ ಅಂತ್ಯಸ್ಥಿತಿ - ಇವೆರಡರಲ್ಲಿಯೂ ಪೂಜೆಮಾಡುವದೆಂಬುದಿಲ್ಲ. ಪುರುಷಪಶುವಾದವನು ಮೂಢನಾಗಿ ರುವದರಿಂದ ಪೂಜಿಸುವದಿಲ್ಲ ; ಜೀವನ್ಮುಕ್ತನು ಪರಮಾತ್ಮನನ್ನು ತನ್ನಲ್ಲಿಯೇ ಸಾಕ್ಷಾತ್ಕಾರಮಾಡಿ ಕೊಂಡಿರುವದರಿಂದ ಪೂಜಿಸುವದಿಲ್ಲ. ಈ ಎರಡು ಕೊನೆಗಳ ನಡುವೆ ಇದ್ದುಕೊಂಡು ದೇವರನ್ನು ಮನುಷ್ಯರೂಪದಿಂದ ತಾನು ಪೂಜಿಸುವದಿಲ್ಲವೆಂದು ಯಾರಾದರೂ ಹೇಳಿದರೆ ಆತನ ವಿಷಯದಲ್ಲಿ ಬಹು ಎಚ್ಚರದಿಂದಿರಿ ; ಹೆಚ್ಚಿನ ಕಠಿನೋಕ್ತಿ ಏಕೆ?- ಅವನು ಮನಬಂದಂತೆ ಹರಟುವವನಾಗಿರುತ್ತಾನೆ. ಅವನು ಉಪದೇಶಿಸುವ ಧರ್ಮವು ವಿವೇಕಹೀನರಿಗೂ ವಿಚಾರ ಶೂನ್ಯರಿಗೂ ಒಪ್ಪುವಂಥದ್ದು.

ಭಗವಂತನಿಗೆ ಮನುಷ್ಯನ ದೋಷಗಳು ಗೊತ್ತು ; ಆದ್ದರಿಂದ ಜನರಿಗೆ ಕಲ್ಯಾಣವನ್ನುಂಟು ಮಾಡುವದಕ್ಕಾಗಿ ಆತನು ಮನುಷ್ಯನಾಗುವನು. ''ಯಾವ ಯಾವ ಕಾಲದಲ್ಲಿ ಧರ್ಮವು ತಗ್ಗಿ ಅಧರ್ಮವು ಮೇಲಕ್ಕೇರುವದೋ, ಆಗಾಗಲೆಲ್ಲ ನಾನು ಪ್ರಕಟವಾಗುವೆನು. ಸಾಧುಗಳನ್ನು ಕಾಪಾಡಿ ಪಾಪಗಳನ್ನು ನಾಶಮಾಡಿ ಧರ್ಮವನ್ನು ಸ್ಥಾಪಿಸುವದಕ್ಕಾಗಿ ಯುಗಯುಗ ದಲ್ಲಿಯೂ ಅವತರಿಸುತ್ತಿರುವೆನು'' (ಗೀ.)**30** ''ಸಮಸ್ತ ಭೂತಗಳಿಗೂ ಒಡೆಯನಾದ ನನ್ನ ಉತ್ತಮಸ್ವರೂಪವನ್ನರಿಯದ ಮೂಢರು ಮನುಷ್ಯದೇಹವನ್ನಾಶ್ರಯಿಸಿರುವ[1] ನನ್ನನ್ನು ಅಪಮಾನಪಡಿಸುವರು''**31**-ಹೀಗೆಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅವತಾರ ವಿಷಯದಲ್ಲಿ ಅಪ್ಪಣೆಕೊಡಿಸಿರುವನು. ಭಗವಾನ್ ಶ್ರೀರಾಮಕೃಷ್ಣರವರು ಅಪ್ಪಣೆಕೊಡಿಸಿರುವ ದೇನೆಂದರೆ ''ಒಂದು ಸಮುದ್ರದ ದೊಡ್ಡ ಅಲೆ ಬಂತೆಂದರೆ ತಮ್ಮ ಪ್ರಯತ್ನವು ಯಾವದೂ ಇಲ್ಲದೆಯೇ, ತಮಗೆ ಅದರ ಅರಿವಾಗುವದಕ್ಕೆ ಮುಂಚಿತವಾಗಿಯೇ, ಚಿಕ್ಕಪುಟ್ಟ ಹಳ್ಳಕೊಳ್ಳಗಳೆಲ್ಲ ನೀರಿನಿಂದ ತುಂಬಿಹೋಗುವವು ; ಇದರಂತೆ ಭಗವಂತನ ಒಂದು ಅವತಾರ ವಾದಾಗಲೂ ಒಂದಾನೊಂದು ಧರ್ಮತರಂಗವು ಪ್ರಪಂಚದಮೇಲೆ ನುಗ್ಗುವದು, ಜನರಿಗೆ ವಾತಾವರಣದಲ್ಲೆಲ್ಲ ಧರ್ಮವೇ ತೋರುವದು.''

---

1. ಮೂಲದ ಭಾವಕ್ಕೆ ಹೊಂದುವಂತೆ ಈ ಶ್ಲೋಕಗಳನ್ನು ಅಲ್ಲಲ್ಲಿ ತಿದ್ದಿ ★ ಹೀಗೆ ನಕ್ಷತ್ರ ಚಿಹ್ನೆಯಿಂದ ಗುರುತುಮಾಡಿರುತ್ತದೆ.

# 7. ಮಂತ್ರ - ಓಂಕಾರ : ಶಬ್ದವೂ ಜ್ಞಾನವೂ

ಈಶ್ವರನ ಅವತಾರರೂಪವಾಗಿರುವ ಇಂಥ ಮಹಾಪುರುಷರ ಮಾತು ಹಾಗಿರಲಿ, ಸದ್ಯಕ್ಕೆ ನಾವು ವಿಚಾರಮಾಡುತ್ತಿರುವದು ಇವರನ್ನಲ್ಲ, ಬರಿಯ ಸಿದ್ಧಗುರುಗಳನ್ನ, ಎಂದರೆ ಪಡೆಯ ಬೇಕಾದ ಪುರುಷಾರ್ಥವನ್ನು ಪಡೆದುಕೊಂಡಿರುವವರನ್ನ. ಸಾಮಾನ್ಯವಾಗಿ ಇವರು ಜಪ ಮಾಡುವದಕ್ಕೆ ಅನುಕೂಲವಾದ **ಮಂತ್ರ**ಗಳ ಮೂಲಕವಾಗಿಯೇ ಶಿಷ್ಯನಲ್ಲಿ ಅಧ್ಯಾತ್ಮಜ್ಞಾನದ ಬೀಜವನ್ನು ಬಿತ್ತಬೇಕಾಗಿರುವದು.

ಈ ಮಂತ್ರಗಳೆಂದರೇನು? ಹಿಂದೂಶಾಸ್ತ್ರದಂತೆ ನೋಡಿದರೆ ಈ ಪ್ರಪಂಚವೆಲ್ಲವೂ ತೋರಿಕೊಳ್ಳುವದಕ್ಕೆ **ನಾಮ, ರೂಪ**- ಎಂಬ ಎರಡು ಉಪಾಧಿಗಳು ಬೇಕು. ಹೇಗೆಂದರೆ ಮನುಷ್ಯನೆಂಬ ಪಿಂಡಾಂಡದಲ್ಲಿ ನಾಮರೂಪಗಳ ಉಪಾಧಿಯಿಲ್ಲದೆ ಒಂದು ಚಿತ್ತವೃತ್ತಿಯೂ ಹುಟ್ಟುವಹಾಗಿಲ್ಲ. ಪ್ರಪಂಚದ ರಚನೆಯೆಲ್ಲ ಎಲ್ಲೆಲ್ಲಿಯೂ ಒಂದೇ ನಿಯಮಕ್ಕೆ ಒಳಪಟ್ಟಿರುವ ದೆಂಬುದು ನಿಜವಾದರೆ, ಹೀಗೆ ನಾಮರೂಪಗಳಿಂದ ಪರಿಚ್ಛಿನ್ನವಾಗಿರುವದೆಂಬುದು ಈ ಇಡಿಯ ಬ್ರಹ್ಮಾಂಡದ ರಚನೆಯಲ್ಲಿಯೂ ನಿಯಮವಾಗಿರಬೇಕಾಯಿತು. "ಹೇಗೆ ಒಂದು ಮಣ್ಣಿನ ಮುದ್ದೆಯ ಸ್ವರೂಪವನ್ನು ಅರಿತುಕೊಡರೆ ಎಲ್ಲಾ ಮಣ್ಣಿನ ಸ್ವರೂಪವನ್ನೂ ಅರಿತು ಕೊಂಡಂತಾಯಿತೋ" (ಛಾ.)[32] ಹಾಗೆ ಈ **ಪಿಂಡಾಂಡ**ದ ಜ್ಞಾನದಿಂದ **ಬ್ರಹ್ಮಾಂಡ**ದ ಜ್ಞಾನವೂ ಆಗಲೇಬೇಕು.

ಇಲ್ಲಿ[1] ರೂಪವೆಂಬುದು ಹೊರಗಣ ಚಿಪ್ಪಿನಂತಿರುವದು, ನಾಮವು ಅಥವಾ ಪ್ರತ್ಯಯವು ಇದರೊಳಗಿರುವ ಸಾರವು, ಅಥವಾ ತಿರುಳು. ಶರೀರವೇ ರೂಪವು, ಅಂತಃಕರಣವೇ ನಾಮವು. ಮಾತನಾಡುವ ಶಕ್ತಿಯುಳ್ಳ ಪ್ರಾಣಿಗಳಲ್ಲೆಲ್ಲ ಶಬ್ದಗಳಂತೆ ಚಿಹ್ನೆಗಳಿಗೂ ಈ ನಾಮಕ್ಕೂ ಸಂಬಂಧವಿದ್ದೇ ಇರುವದು. ವ್ಯಷ್ಟಿಯಾದ ಮನುಷ್ಯನಲ್ಲಿ ಚಿತ್ತವೆಂಬುದು ಪರಿಚ್ಛಿನ್ನವಾದ **ಮಹತ್ತತ್ತ್ವ**ವಾಗಿರುತ್ತದೆ; ಈ ಚಿತ್ತದಲ್ಲಿ ವೃತ್ತಿಗಳೆಂಬ ಅಲೆಗಳು ಮೊದಲು ಶಬ್ದಗಳಾಗಿ ತೋರಿಕೊಳ್ಳುವವು, ಆಮೇಲೆ ಇನ್ನೂ ಸ್ಥೂಲವಾದ ರೂಪಗಳಾಗಿ ತೋರಿಕೊಳ್ಳುವವು. ಇದರಂತೆ ಬ್ರಹ್ಮಾಂಡದಲ್ಲಿಯೂ **ಬ್ರಹ್ಮನು,** - ಎಂದರೆ ಮಹತ್ತತ್ತ್ವದ ಸಮಷ್ಟಿರೂಪನಾಗಿರುವ **ಹಿರಣ್ಯಗರ್ಭನು**-ಮೊದಲು ನಾಮವಾಗಿ, ಪ್ರತ್ಯಯರೂಪದಲ್ಲಿ, ತೋರಿಕೊಂಡನು ;

---

1. ಈ ಪ್ರಘಟ್ಟದಲ್ಲಿ ವಿವರಿಸಿರುವ ಎಷ್ಟೋ ವಿಚಾರಗಳು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಇಲ್ಲಿರುವ ಸ್ಫೋಟದ ಮತ್ತು ನಾಮರೂಪಗಳ ವಿಚಾರಕ್ಕೆ ಯಾವ ಶಾಸ್ತ್ರದ ಅಥವಾ ಅನುಭವದ ಆಧಾರವಿದೆಯೆಂಬುದನ್ನೂ ಹೇಳುವದಕ್ಕೆ ಬರುವಂತಿಲ್ಲ. ಪೀಠಿಕೆಯನ್ನು ನೋಡಿ.

ಆಮೇಲೆ ರೂಪವಾಗಿ, ಎಂದರೆ ಈ ಪ್ರಪಂಚದ ಆಕಾರದಲ್ಲಿ, ತೋರಿಕೊಂಡನು. ಹೊರಗೆ ತೋರುತ್ತಿರುವ ಈ ಇಂದ್ರಿಯವೇದ್ಯವಾದ ಪ್ರಪಂಚವೆಲ್ಲ ರೂಪವು ; ಇದಕ್ಕೆ ಆಧಾರವಾಗಿರ ತಕ್ಕದ್ದೇ ನಿತ್ಯವಾದ ಇಂಥದ್ದೆಂದು ಹೇಳುವದಕ್ಕಾಗದ **ಸ್ಫೋಟವು,** ಅಂದರೆ ಇದನ್ನು ಹೊರಗೆಡ ಹಿರುವ **ಶಬ್ದಬ್ರಹ್ಮವು** (Logos). ಅರಿವುಗಳ ಸ್ವರೂಪವಾಗಿರುವ ಎಲ್ಲಾ ನಾಮಗಳಿಗೂ ನಿತ್ಯೋಪಾದಾನಕಾರಣವಾದ ಈ ನಿತ್ಯವಾದ ಸ್ಫೋಟವೆಂಬ ಶಕ್ತಿಯಿಂದಲೇ ಪರಮೇಶ್ವರನು ಈ ಪ್ರಪಂಚವನ್ನು ಸೃಷ್ಟಿಸಿರುವನು, ಇಷ್ಟೇ ಏಕೆ ? ಆ ಪರಮೇಶ್ವರನು ಮೊದಲು ಸ್ಫೋಟ ರೂಪದಲ್ಲಿ ಪರಿಚ್ಛಿನ್ನನಾಗಿ ಆಮೇಲೆ ಇನ್ನೂ ಸ್ಥೂಲವಾದ ಇಂದ್ರಿಯವೇದ್ಯವಾದ ಪ್ರಪಂಚಾತ್ಮನಾಗಿ ಪರಿಣಮಿಸುವನು - ಎಂದುಕೂಡ ಹೇಳಬಹುದು.

ಈ ಸ್ಫೋಟಕ್ಕೆ ವಾಚಕವಾಗುವುದಕ್ಕೆ ತಕ್ಕದ್ದು ಒಂದೇ ಒಂದು ಮಾತು, ಇದೇ **ಓಂಕಾರವು.** ನಾವು ಎಷ್ಟು ಕಷ್ಟಪಟ್ಟು ವಿವೇಚನೆಮಾಡಿದರೂ ವಾಚ್ಯವನ್ನು, ವಾಚಕವನ್ನು ವಿಂಗಡಿಸುವುದು ಆಗುವಹಾಗಿಲ್ಲವಾದ್ದರಿಂದ ಈ ಓಂಕಾರಕ್ಕೂ ನಿತ್ಯವಾದ ಸ್ಫೋಟಕ್ಕೂ ಭೇದವಿಲ್ಲ ; ಆದ್ದರಿಂದ ಪವಿತ್ರವಾದ ಶಬ್ದಗಳನ್ನೆಲ್ಲ ಪವಿತ್ರತಮವಾಗಿಯೂ ನಾಮರೂಪಗಳಿಗೆಲ್ಲ ಮಾತೃರೂಪವಾಗಿಯೂ ಇರುವ ಈ ನಿತ್ಯವಾದ ಓಂಕಾರದಿಂದಲೇ ಸಮಸ್ತ ಪ್ರಪಂಚವೂ ಸೃಷ್ಟಿಯಾಗಿರುವದೆಂದು ಹೇಳಬಹುದು. "ಒಳ್ಳೆಯದು, ಶಬ್ದವನ್ನೂ ಅರಿವನ್ನೂ ಬೇರ್ಪಡಿಸುವದಕ್ಕೆ ಆಗುವದಿಲ್ಲವೆಂಬುದೇನೋ ನಿಜವೇ; ಆದರೆ ಒಂದೇ ಅರಿವಿಗೆ ಎಷ್ಟೋ ಮಾತುಗಳನ್ನು ಸಂಜ್ಞೆಯಾಗಿ ಉಪಯೋಗಿಸಬಹುದಾಗಿರುವದಲ್ಲವೆ ? ಪ್ರಪಂಚವು ಯಾವ ಅರಿವಿನಿಂದ ಹೊರತೋರಿರುವದೋ ಅದಕ್ಕೆ ಓಂಕಾರವೇ ವಾಚಕವಾಗಿರಬೇಕೆಂಬುದೇನು ?" ಎಂದರೆ, ಅದನ್ನು ಪೂರ್ಣವಾಗಿ ಸೂಚಿಸುವದು ಓಂಕಾರವೆಂಬ ಒಂದು ಶಬ್ದಕ್ಕೆ ಮಾತ್ರ ಸಾಧ್ಯವಾಗಿರುವದು, ಇದರಂಥ ಶಬ್ದವೇ ಇನ್ನೊಂದಿರುವದಿಲ್ಲ. ಸ್ಫೋಟವೆಂಬುದು ಪ್ರತಿಯೊಂದು ಶಬ್ದಕ್ಕೂ ಉಪಾದಾನಕಾರಣವಾಗಿರುವದಾದರೂ ಪೂರ್ಣವಾಗಿ ರೂಪುಗೊಂಡ ಯಾವ ಶಬ್ದವೂ ಸ್ಫೋಟವಾಗಲಾರದು; ಎಂದರೆ ಶಬ್ದಗಳಿಗಿರುವ ಪರಸ್ಪರಭೇದಕ ಗುಣಗಳನ್ನೆಲ್ಲ ತೆಗೆದುಹಾಕಿದರೆ ಉಳಿಯುವದೇ ಸ್ಫೋಟವಾಗಿರುವದೆಂದು ನಮ್ಮ ತಾತ್ಪರ್ಯ. ಆದ್ದರಿಂದ ಈ ಸ್ಫೋಟಕ್ಕೆ **ನಾದಬ್ರಹ್ಮ**ವೆಂದೂ ಹೆಸರುಂಟು. ಹೀಗಿರುವಾಗ ಇಂಥದ್ದೆಂದು ಹೇಳುವದಕ್ಕಾಗದ ಈ ಸ್ಫೋಟಕ್ಕೆ ಯಾವ ಶಬ್ದವನ್ನು ವಾಚಕವಾಗಿ ಇಟ್ಟುಕೊಂಡರೂ ಅದರಲ್ಲಿ ಯಾವದಾದರೊಂದು ವಿಶೇಷವನ್ನು ಕಲ್ಪಿಸಿದಂತೆ ಆಗುವದರಿಂದ ಅದು ಸ್ಫೋಟವೇ ಅಲ್ಲದೆ ಹೋಗುತ್ತದೆ. ಆದ್ದರಿಂದ ಯಾವ ಶಬ್ದವು ಅದರಲ್ಲಿ ಅದಷ್ಟು ಕಡಿಮೆಯ ವಿಶೇಷವನ್ನು ಕಲ್ಪಿಸುವದೋ ಮತ್ತು ಅದರ ಸ್ವರೂಪವನ್ನೂ ಆದಷ್ಟುಮಟ್ಟಿಗೆ ಕುರುಹಿಟ್ಟು ತಿಳಿಸುವದೋ, ಅದೇ ಈ ಸ್ಫೋಟಕ್ಕೆ

ಉತ್ತಮವಾಚಕವೆಂದು ಹೇಳಬೇಕಾಯಿತು. ಇಂಥ ಶಬ್ದವೇ ಓಂಕಾರವು. ಓಂಕಾರವೊಂದೇ ಇಂಥ ಶಬ್ದವು; ಏಕೆಂದರೆ ಅ, ಉ, ಮ್ - ಎಂಬ ವರ್ಣಗಳ ಸಂಯೋಗದಿಂದಾಗಿರುವ ಈ ಓಂಕಾರವು ಸಕಲವರ್ಣಗಳಿಗೂ ಸಾಮಾನ್ಯಸಂಜ್ಞೆಯೆಂದು ಇಟ್ಟುಕೊಳ್ಳುವದಕ್ಕೆ ಯೋಗ್ಯವಾಗಿರುತ್ತದೆ. ಅದು ಹೇಗೆಂದರೆ, ಅಕಾರವು ಎಲ್ಲಕ್ಕಿಂತಲೂ ತೀರ ಕಡಿಮೆಯಾದ ವಿಶೇಷವಿರುವ ವರ್ಣವಾಗಿರುತ್ತದೆ ; ವ್ಯಕ್ತವಾಗಿ ಉಚ್ಚಾರವಾಗುವ ವರ್ಣಗಳಿಗೆಲ್ಲ ಇದೇ ಆದಿಯಾಗಿರುತ್ತದೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು "ಅಕ್ಷರಗಳಲ್ಲಿ ನಾನು ಅಕಾರವಾಗಿರುವೆನು" (ಗೀ.)**33** ಎಂದು ಹೇಳಿರುತ್ತಾನೆ. ಇದಲ್ಲದೆ ವರ್ಣಗಳೆಲ್ಲ ನಾಲಗೆಯ ಬುಡದಿಂದ ಮೊದಲಾಗಿ ತುಟಿಗಳವರೆಗಿರುವ ಪ್ರದೇಶದಲ್ಲಿ ಹುಟ್ಟುವವಷ್ಟೆ. ಇವುಗಳಲ್ಲಿ ಅಕಾರವು ಕಂಠಸ್ಥಾನದಲ್ಲಿ ಹುಟ್ಟುವ ವರ್ಣವು, ಮಕಾರವು ತುಟಿಗಳ ಸಹಾಯದಿಂದ ಹುಟ್ಟುವ ವರ್ಣಗಳಲ್ಲಿ ಕೊನೆಯದು, ಉಕಾರವೋ ಎಂದರೆ ಶಬ್ದಶಕ್ತಿಯು ನಾಲಗೆಯ ಬುಡದಲ್ಲಿ ಹುಟ್ಟಿ ತುಟಿಯವರೆಗೂ ಉರುಳಿಕೊಂಡುಬರುವದನ್ನು ಸರಿಯಾಗಿ ಸೂಚಿಸುವ ವರ್ಣೋತ್ಪತ್ತಿಯ ಸ್ವರೂಪವನ್ನೆಲ್ಲ ತಿಳಿಸಿಕೊಡುವ ಶಬ್ದವಾಗಿರುತ್ತದೆ.[1] ಮತ್ತೆ ಯಾವ ಶಬ್ದಕ್ಕೂ ಈ ಕೆಲಸವನ್ನು ಮಾಡುವ ಶಕ್ತಿಯಿಲ್ಲ. ಆದ್ದರಿಂದ ಸ್ಫೋಟಕ್ಕೆ ಇದೇ ಅತ್ಯಂತಯೋಗ್ಯವಾದ ವಾಚಕವು. ಓಂಕಾರಕ್ಕೆ ಸ್ಫೋಟವೇ ನಿಜವಾದ ವಾಚ್ಯವು. ಶಬ್ದವನ್ನು ಅರ್ಥದಿಂದ ಬೇರ್ಪಡಿಸುವದು ಎಂದಿಗೂ ಆಗಲಾರದಾದ್ದರಿಂದ ಓಂಕಾರವೂ ಸ್ಫೋಟವೂ ಒಂದೇ ಎಂದು ತಿಳಿಯಬೇಕು. ಸ್ಫೋಟ ವೆಂಬುದು ವ್ಯಾಕೃತಪ್ರಪಂಚದ ಸೂಕ್ಷ್ಮರೂಪವಾಗಿ ಪರಮಾತ್ಮನಿಗೆ ಸಮೀಪತರವಾಗಿರುವದ ರಿಂದಲೂ ನಿಜವಾಗಿ ನೋಡಿದರೆ ಪರಮೇಶ್ವರನ ಸಂಕಲ್ಪದ ಮೊಟ್ಟಮೊದಲನೆಯ ವ್ಯಕ್ತರೂಪವಾಗಿರುವದರಿಂದಲೂ ಈ ಓಂಕಾರವು ನಿಜವಾಗಿ ಪರಮಾತ್ಮನ ವಾಚಕವೆಂದೇ ಆಯಿತು.

ಇದಲ್ಲದೆ ಅಖಂಡಸಚ್ಚಿದಾನಂದಸ್ವರೂಪವಾಗಿಯೂ ಅದ್ವಿತೀಯವಾಗಿಯೂ ಇರುವ ಪರಬ್ರಹ್ಮವನ್ನು ಅಪೂರ್ಣರಾದ ಜೀವರುಗಳು ಕೆಲಕೆಲವು ವಿಶೇಷದೃಷ್ಟಿಯಿಂದಲೇ, ಕೆಲಕೆಲವು ಗುಣವಿಶೇಷಗಳ ಸಂಬಂಧದಿಂದ ಮಾತ್ರವೇ, ಅರಿಯುವದಕ್ಕೆ ಶಕ್ತರಾಗಿರುವಂತೆಯೇ, ಆ ಪರಬ್ರಹ್ಮದ ಶರೀರವಾದ ಈ ಪ್ರಪಂಚವನ್ನೂ ಆಯಾ ಅಧಿಕಾರಿಯು ತನ್ನತನ್ನ ಮನಸ್ಸಿನ ಸ್ಥಿತಿಗನುಸಾರವಾಗಿಯೇ ಅರಿಯಬೇಕಾಗಿರುವದು. ಉಪಾಸಕನ ಈ ಮನಃಸ್ಥಿತಿಯೆಂಬುದು ಆದರಲ್ಲಿ ಪ್ರಧಾನವಾಗಿರುವ ಗುಣವಿಶೇಷಗಳನ್ನು ಅವಲಂಬಿಸಿಕೊಂಡಿರುವದು. ಹೀಗಿರುವ ದರಿಂದ ಉಪಾಸಕರಿಗೆ ಅದೇ ಪರಮಾತ್ಮನೇ ಬೇರೆಬೇರೆಯ ಆಕೃತಿಗಳಲ್ಲಿ ಬೇರೆಬೇರೆಯ ಗುಣವಿಶೇಷಗಳಿಂದ ಕೂಡಿದವನಾಗಿ ತೋರುವನು. ಕೆಲಕೆಲವು ವೇಳೆ ವಿರುದ್ಧಗುಣಗಳಿಂದ

---

1. ಓಂಕಾರವು ವರ್ಣೋತ್ಪತ್ತಿಯ ಕ್ರಮವನ್ನೆಲ್ಲ ತನ್ನೊಳಗೆ ಅಡಕಮಾಡಿಕೊಂಡಿರುವದೆಂಬ ಈ ವರ್ಣನೆಗೆ ಆಧಾರಗ್ರಂಥವು ಯಾವದಾದರೂ ಇದೆಯೋ ಇಲ್ಲವೋ ತಿಳಿಯದು.

ಕೂಡಿದವನಾಗಿಯೂ ತೋರುವನು. ಅದೇ ಪ್ರಪಂಚವೇ ಅವರವರ **ದೃಷ್ಟಿ**ಗೆ ಅಸಂಬದ್ಧವಾದ ಬಗೆಬಗೆಯ ಅನೇಕ ರೂಪಗಳಿಂದ ಕೂಡಿದ್ದಾಗಿ ತೋರಿಕೊಳ್ಳುವದು. ಯಾವ ವಿಶೇಷವೂ ಇಲ್ಲವೆನ್ನುವಂತಿರುವ ಸರ್ವಸಾಮಾನ್ಯವಾಚಕವಾದ ಓಂಕಾರದ ವಿಷಯದಲ್ಲಿ ಕೂಡ ಶಬ್ದವೂ ಅರಿವೂ ಬೇರ್ಪಡಿಸುವದಕ್ಕೆ ಆಗದಂತೆ ನಿತ್ಯಸಂಬದ್ಧವಾಗಿರುವವೆಂಬ ನಿಯಮವಿದೆಯಷ್ಟೆ; ಪರಮಾತ್ಮ ವಿಷಯವಾದ ಮತ್ತು ಪ್ರಂಪಂಚವಿಷಯವಾದ ವಿಶೇಷದೃಷ್ಟಿಗಳಲ್ಲಿ ಇದೇ ನಿಯಮವೇ ಹತ್ತುತ್ತದೆ. ಇವುಗಳಲ್ಲಿ ಪ್ರತಿಯೊಂದಕ್ಕೂ ಅದದನ್ನು ತಿಳಿಸುವ ಒಂದೊಂದು ವಾಚಕವು ಇದ್ದೇ ಇರುವದು, ಇರಲೂ ಬೇಕು. ಈ ವಾಚಕಗಳು ಋಷಿಗಳು ಧ್ಯಾನಮಗ್ನರಾಗಿದ್ದಾಗ ಅವರ ದೃಷ್ಟಿಗೆ ಗೋಚರವಾದವುಗಳಾದ್ದರಿಂದ ಪರಮಾತ್ಮನ ಅಥವಾ ಪ್ರಪಂಚದ ವಿಷಯಕವಾದ ಆಯಾ ದೃಷ್ಟಿಯಲ್ಲಿ ತೋರುವ ರೂಪಕ್ಕೆ ಸಾಧ್ಯವಾದಷ್ಟುಮಟ್ಟಿಗೂ ತಕ್ಕವಾಗಿರುವ ವಾಚಕಗಳಾಗಿರುವವು. ಓಂಕಾರವು ಅಖಂಡಬ್ರಹ್ಮವನ್ನು ಹೇಳುವಂತೆಯೇ ಉಳಿದ ಶಬ್ದಗಳೂ ಅದೇ ಪರಮಾತ್ಮನ ಖಂಡರೂಪಗಳನ್ನು ತಿಳಿಸುವವು.[1] ಇವುಗಳೆಲ್ಲ ಧ್ಯಾನಕ್ಕೂ ತತ್ತ್ವಜ್ಞಾನದ ಸಂಪಾದನೆಗೂ ಸಹಕಾರಿಗಳಾಗಿರುವವು.

---

1. ಇಲ್ಲಿ ಮೂಲದಲ್ಲಿ ಇದೇ ವಿಷಯವು ಎರಡು ಸಲ ಬಂದಿರುತ್ತದೆ ; ಸ್ವಾಮಿಗಳು ಇದನ್ನು ವಿವರಣಾರ್ಥವಾಗಿ ಉಪಯೋಗಿಸಿರಬಹುದೆಂದು ತೋರುತ್ತದೆ.

# 8. ಪ್ರತೀಕಪೂಜೆ, ಪ್ರತಿಮಾಪೂಜೆ

ಈಶ್ವರನ ಪ್ರತಿನಿಧಿಯ ಸ್ಥಾನದಲ್ಲಿಟ್ಟುಕೊಂಡು ಉಪಾಸನೆಮಾಡುವ ಬಗೆಬಗೆಯ **ಪ್ರತೀಕ**ಗಳ ಮತ್ತು **ಪ್ರತಿಮೆ**ಗಳ ವಿಚಾರವಾಗಿ ಯೋಚಿಸೋಣ. ಪ್ರತೀಕದ ಮೂಲಕವಾಗಿ ಈಶ್ವರನನ್ನು ಪೂಜಿಸುವದೆಂದರೇನು ? "ಯಾವದು ಬ್ರಹ್ಮವಲ್ಲವೋ ಅದನ್ನು ಬ್ರಹ್ಮವೆಂಬ ಭಾವನೆಯಿಂದ ಧ್ಯಾನಿಸುವದೇ" (ಶ್ರೀಭಾ.)[34] ಪ್ರತೀಕೋಪಾಸನೆಯು ಎಂದು **ಭಗವಾನ್ ರಾಮಾನುಜಾಚಾರ್ಯ**ರು ಹೇಳುತ್ತಾರೆ. "ಮನಸ್ಸನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು, ಇದು ಅಧ್ಯಾತ್ಮವು, ಒಳಗಿನ ಉಪಾಸನೆ ; ಹೀಗೆಯೇ ಆಕಾಶವನ್ನು ಉಪಾಸನೆಮಾಡಬೇಕು, ಇದು ಅಧಿದೈವತವು, ಹೊರಗೆ ಮಾಡುವ ಉಪಾಸನೆ' ಮತ್ತು 'ಸೂರ್ಯನೇ ಬ್ರಹ್ಮವು - ಎಂಬುದು ವಿಧಿಯು', 'ಯಾವನು ನಾಮವನ್ನು ಬ್ರಹ್ಮವೆಂದು ಉಪಾಸನೆಮಾಡುವನೋ'- ಇವೇ ಮುಂತಾದ ಶ್ರುತಿಗಳಲ್ಲಿ ಪ್ರತೀಕೋಪಾಸನೆಯ ವಿಷಯಗಳಲ್ಲಿ ಸಂಶಯ ವುಂಟಾಗುತ್ತದೆ........"(ಸೂ.ಭಾ.)[35]ಎಂದು **ಶ್ರೀಶಂಕರಾಚಾರ್ಯರೂ** ಹೇಳಿರುತ್ತಾರೆ. 'ಪ್ರತೀಕ'ವೆಂಬ ಮಾತಿಗೆ 'ಕುರಿತು ಹೋಗುವದು' ಎಂದು ಅಕ್ಷರಾರ್ಥವಾಗುವದು ; ಒಂದು ಅಥವಾ ಹೆಚ್ಚು ಸಾಮ್ಯಗಳಿಂದ ಬ್ರಹ್ಮದಂತೆಯೇ ಇದ್ದು ನಿಜವಾಗಿ ಬ್ರಹ್ಮವಲ್ಲದ ಯಾವದಾದರೊಂದು ವಸ್ತುವನ್ನು ಬ್ರಹ್ಮಕ್ಕೆ ಬದಲಾಗಿ ಉಪಾಸನೆಮಾಡುವದೇ ಪ್ರತೀಕೋಪಾಸನೆಯು. ಶ್ರುತಿಗಳಲ್ಲಿ ಹೇಳಿರುವ ಪ್ರತೀಕಗಳೇ ಅಲ್ಲದೆ **ಪುರಾಣ**ಗಳಲ್ಲಿಯೂ **ತಂತ್ರ**ಗಳಲ್ಲಿಯೂ ಬೇರೆಯ ಕೆಲವು ಪ್ರತೀಕಗಳನ್ನು ಹೇಳಿರುವದು ಕಂಡುಬರುತ್ತದೆ. ಬಗೆಬಗೆಯ **ಪಿತೃಪೂಜೆ**ಯನ್ನೂ **ದೇವತೋಪಾಸನೆ**ಯನ್ನೂ ಈ ಪ್ರತೀಕೋಪಾಸನೆಯಲ್ಲಿಯೇ ಅಡಕ ಮಾಡಬಹುದಾಗಿದೆ.

ಇಲ್ಲಿ ಒಂದು ವಿಚಾರ : ಈಶ್ವರನನ್ನು ಪೂಜಿಸುವದು ಮಾತ್ರ ಭಕ್ತಿಯಾಗುವದೇ ಹೊರತು ಉಳಿದ ದೇವತೆಗಳನ್ನಾಗಲಿ ಪಿತೃಗಳನ್ನಾಗಲಿ ಪೂಜಿಸುವದು ಭಕ್ತಿಯಾಗಲಾರದು. ಬೇರೆ ಬೇರೆಯ ದೇವತೆಗಳನ್ನು ಬಗೆಬಗೆಯಾಗಿ ಆರಾಧಿಸುವದು ಒಂದು ವಿಧವಾದ ಕರ್ಮ ವಾಗುವದು ; ಇದರಿಂದ ಆರಾಧಕನಿಗೆ ಪರಲೋಕದಲ್ಲಿ ಏನಾದರೊಂದು ಭೋಗ ವುಂಟಾಗುವ ಫಲವಾದೀತೇ[1] ಹೊರತು ಇದು ಭಕ್ತಿಗಾಗಲಿ ಮುಕ್ತಿಗಾಗಲಿ ಕಾರಣ ವಾಗಲಾರದು. ಆದಕಾರಣ ಒಂದು ವಿಷಯವನ್ನು ಮಾತ್ರ ಚೆನ್ನಾಗಿ ನೆನಪಿಡಬೇಕಾದದ್ದು ಅಗತ್ಯವು. ಸರ್ವವೇದಾಂತವೇದ್ಯವಾದ ಪರಬ್ರಹ್ಮವನ್ನೇ ಪ್ರತೀಕೋಪಾಸನೆಯ ನೆಪದಿಂದ

1. ಗೀತೆ 9 - 25 ನ್ನು ನೋಡಿ.

ಪ್ರತೀಕಕ್ಕೆ ಸಮವೆಂದು, ಅಥವಾ ಪ್ರತೀಕವೇ ಉಪಾಸಕನ ಆತ್ಮನೆಂದು ಅಥವಾ ಅಂತರ್ಯಾಮಿಯೆಂದು, ಎಣಿಸಿಬಿಡುವ ಸಂಭವವೂ ಉಂಟು ; ಆದರೆ ಹಾಗೆ ಮಾಡಿದರೆ ಉಪಾಸಕನು ಸಂಪೂರ್ಣವಾಗಿಯೂ ತಪ್ಪುಹಾದಿಯನ್ನು ಹಿಡಿದಂತಾಗುವದು ; ಏಕೆಂದರೆ ಯಾವ ಪ್ರತೀಕವೂ ಉಪಾಸಕನ ಆತ್ಮನಾಗಲಾರದು. ಆದರೆ ಉಪಾಸನೆಗೆ ಬ್ರಹ್ಮವೇ ವಿಷಯವಾಗಿದ್ದು ಪ್ರತೀಕವೆಂಬುದು ಅದರ ಸ್ಥಾನದಲ್ಲಿರುವ ಅದರ ಸೂಚಕಲಿಂಗವಾಗಿ ಮಾತ್ರ ಇದ್ದರೆ, ಎಂದರೆ ಪ್ರತೀಕದ ಮೂಲಕವಾಗಿ ಸರ್ವವ್ಯಾಪಿಯಾದ ಬ್ರಹ್ಮವನ್ನೇ ಉಪಾಸನೆಮಾಡುತ್ತಾ ಪ್ರತೀಕವನ್ನು ಸರ್ವಕಾರಣವಾದ ಬ್ರಹ್ಮವೆಂದು ಧ್ಯಾನಿಸುತ್ತಿದ್ದರೆ, ಅಂಥ ಉಪಾಸನೆಯಿಂದ ಉತ್ತಮಫಲವೇ ಆಗುವದು; ಇಷ್ಟೇ ಅಲ್ಲ, ಉಪಾಸನೆಯಲ್ಲಿ ಮೊದಲನೆಯ ಬಾಲಪಾಠದ ಮೆಟ್ಟಿಲನ್ನು ದಾಟುವವರೆಗೆ ಎಲ್ಲರಿಗೂ ಇದು ಅತ್ಯಾವಶ್ಯಕವಾಗಿಯೂ ಇರುತ್ತದೆ. ಹೀಗಿರುವದರಿಂದ ದೇವತೆಗಳನ್ನಾಗಲಿ ಅಥವಾ ಮತ್ತೆ ಯಾರನ್ನಾಗಲಿ ಆಯಾ ದೃಷ್ಟಿಯಿಂದಲೇ ಉಪಾಸನೆ ಮಾಡಿದರೆ ಆ ಉಪಾಸನೆಯು ಒಂದು ಬಗೆಯ ಕರ್ಮಮಾತ್ರವಾಗುವದು; ಆ ಉಪಾಸನಾ ರೂಪವಾದ **ವಿದ್ಯೆ**ಯಿಂದ ಆಯಾ **ವಿದ್ಯೆ**ಗೆ ಸಂಬಂಧಪಟ್ಟ ಫಲವು ಮಾತ್ರ ಸಿಕ್ಕುತ್ತದೆ. ಆದರೆ ದೇವತೆಗಳನ್ನಾಗಲಿ ಮತ್ತೆ ಯಾರನ್ನಾಗಲಿ ಬ್ರಹ್ಮದೃಷ್ಟಿಯಿಂದ ಉಪಾಸನೆ ಮಾಡಿದರೆ ಈಶ್ವರೋಪಾಸನೆಯ ಫಲವೇ ಬರುವದು. ಶ್ರುತಿಗಳಲ್ಲಿಯೂ ಸ್ಮೃತಿಗಳಲ್ಲಿಯೂ ಯಾವದಾದರೊಂದು ದೇವತೆಯನ್ನೋ ಅಥವಾ ಋಷಿಯನ್ನೋ ಅಥವಾ ಮತ್ತೆ ಯಾವನಾದರೂ ಮಹಿಮಾವಿಶಿಷ್ಟನಾದ ಜೀವನನ್ನೋ ಸದ್ಯಕ್ಕೆ ಅದರ ಸ್ವಾಭಾವಿಕರೂಪವನ್ನು ಮರೆತು ಅದನ್ನು ಬ್ರಹ್ಮವೆಂಬ ಉತ್ಕೃಷ್ಟದೃಷ್ಟಿಯಿಂದ ಉಪಾಸನೆಮಾಡುವಂತೆ ಹೇಳಿರುವದಕ್ಕೆ ಇದೇ ಕಾರಣವು. ''ಯಾವದೇ ಆಗಲಿ, ಅದರ ನಾಮರೂಪಗಳನ್ನು ತೆಗೆದುಹಾಕಿದರೆ ಉಳಿಯುವ ರೂಪದಿಂದ ಬ್ರಹ್ಮವೇ ಆಗಿರುವದಲ್ಲವೆ ?'' ಎಂದು **ಅದ್ವೈತಿ**ಯು ಅನ್ನುವನು ; ''ಆ ಪರಮೇಶ್ವರನೇ ಸರ್ವರಿಗೂ ಅಂತರಾತ್ಮನಲ್ಲವೆ?'' ಎಂಬುದು **ವಿಶಿಷ್ಟಾದ್ವೈತಿ**ಯ ಅಭಿಪ್ರಾಯ. ''ಆದಿತ್ಯಾದಿಗಳನ್ನು ಉಪಾಸನೆಮಾಡುವಾಗಲೂ ಪರಮಾತ್ಮನೇ ಫಲವನ್ನು ಕೊಡುವನು; ಏಕೆಂದರೆ ಆತನೇ ಸರ್ವರಿಗೂ ಅಧ್ಯಕ್ಷನಾಗಿರುತ್ತಾನೆ'', (ಸೂ. ಭಾ.)[1] ''ಈ ರೀತಿಯಲ್ಲಿಯೇ ಬ್ರಹ್ಮವು ಇಲ್ಲಿ ಉಪಾಸನೆಗೆ ವಿಷಯವಾಗಿರುತ್ತದೆ ; ಏಕೆಂದರೆ ಪ್ರತಿಮೆಯೇ ಮುಂತಾದವುಗಳಲ್ಲಿ ವಿಷ್ಣುವೇ ಮೊದಲಾದವರ ದೃಷ್ಟಿಯನ್ನು ಹಾಕುವಂತೆ ಪ್ರತೀಕಗಳಲ್ಲಿ ಬ್ರಹ್ಮದೃಷ್ಟಿಯನ್ನು ಆರೋಪಮಾಡಿರುತ್ತದೆ'' (ಸೂ. ಭಾ.)[36] ಎಂದು **ಶ್ರೀಶಂಕರಾಚಾರ್ಯರು** ಬ್ರಹ್ಮಸೂತ್ರ ಭಾಷ್ಯದಲ್ಲಿ ಹೇಳಿರುತ್ತಾರೆ.

---

1. ಗೀತೆ 7 - 22 ನ್ನು ನೋಡಿರಿ.

ಪ್ರತಿಮೆಗಳ ಆರಾಧನೆಯ ವಿಷಯದಲ್ಲಿಯೂ ಪ್ರತೀಕೋಪಾಸನೆಯ ವಿಷಯದಲ್ಲಿ ಹೇಳಿದ ವಿಚಾರಗಳನ್ನು ಅನ್ವಯಿಸಿಕೊಳ್ಳಬೇಕು. ಅಂದರೆ ಪ್ರತಿಮೆಯು ಒಂದಾನೊಂದು ದೇವತೆಯ ಪ್ರತಿನಿಧಿಯಾಗಿ ಅಥವಾ ಒಬ್ಬ ಮಹಾತ್ಮನ ಪ್ರತಿನಿಧಿಯಾಗಿ ಉಪಯುಕ್ತವಾದರೆ ಆ ಪೂಜೆಯು ಭಕ್ತಿಯಿಂದುಂಟಾದದ್ದೂ ಅಲ್ಲ, ಅದರಿಂದ ಮುಕ್ತಿಯೂ ಉಂಟಾಗಲಾರದು. ಆದರೆ ಅದು ಏಕೇಶ್ವರನ ಸ್ಥಾನದಲ್ಲಿದ್ದರೆ ಅದರಿಂದ ಭಕ್ತಿಮುಕ್ತಿಗಳೆರಡೂ ಲಭಿಸುವವು. ಪ್ರಪಂಚದಲ್ಲಿರುವ ಮುಖ್ಯವಾದ ಧರ್ಮಪಂಥಗಳಲ್ಲಿ ವೇದಾಂತಮತವೂ ಬೌದ್ಧಮತವೂ ಕ್ರಿಸ್ತೀಯಮತದಲ್ಲಿ ಕೆಲವು ಪಂಗಡಗಳೂ ಪ್ರತಿಮೆಗಳನ್ನು ಧಾರಾಳವಾಗಿ ಉಪಯೋಗಿಸು ತ್ತಿರುವದು ಕಂಡುಬರುತ್ತದೆ. ಮಹಮ್ಮದೀಯಮತ, ಪ್ರಾಟೆಸ್ಟೆಂಟ್‌ಮತ - ಇವೆರಡು ಮಾತ್ರ ಇಂಥ ಸಹಾಯವನ್ನು ತಿರಸ್ಕರಿಸಿರುತ್ತವೆ. ಆದರೂ ಮಹಮ್ಮದೀಯರು ತಮ್ಮ ಮಹಾತ್ಮರ ಗೋರಿಗಳನ್ನೂ ಮತಕ್ಕಾಗಿ ಮಡಿದಿರುವವರ ಗೋರಿಗಳನ್ನೂ ಪ್ರತಿಮೆಗಳ ಬದಲು ಪೂಜಿಸುತ್ತಿದ್ದಾರೆಂದು ಹೇಳಬಹುದಾಗಿದೆ. ಇನ್ನು ಪ್ರಾಟೆಸ್ಟೆಂಟರು ಮಾತ್ರ ಧರ್ಮಕ್ಕೆ ಯಾವ ವಿಧವಾದ ಬಾಹ್ಯವಸ್ತುವಿನ ಸಹಾಯವು ಅಗತ್ಯವಿಲ್ಲವೆಂದು ಹೇಳುತ್ತಾ ವರ್ಷವರ್ಷಕ್ಕೂ ಧಾರ್ಮಿಕಶಕ್ತಿಯಲ್ಲಿ ಕಡಿಮೆಯಾಗುತ್ತಾಬರುತ್ತಿರುವರು; ಈಗ ವೀರ ಪ್ರಾಟೆಸ್ಟೆಂಟರಾಗಿರುವ ವರಿಗೂ **ಆಗಸ್ಟ್‌ಕಾಮ್ಟೆ** (August Comte)[1] ಎಂಬಾತನ ಶಿಷ್ಯಪರಂಪರೆಯವರಿಗೂ ಅಥವಾ ಕೇವಲ ನೀತಿಯನ್ನು ಮಾತ್ರ ಬೋಧಿಸುವ **ಅಜ್ಞಾನವಾದಿ**ಗಳಿಗೂ (Agnostics)[2] ಯಾವ ಭೇದವೂ ತೋರುವಹಾಗಿಲ್ಲ. ಇನ್ನೊಂದು ವಿಷಯ : ಕ್ರಿಸ್ತಿಯನ್ನರ ಮತ್ತು ಮಹಮ್ಮದೀಯರ ಧರ್ಮಗಳಲ್ಲಿ ಉಳಿದುಕೊಂಡಿರುವ ಪ್ರತಿಮಾಪೂಜೆಯೆಂಬುದೆಲ್ಲ ಪ್ರತೀಕಕ್ಕಾಗಿ ಪ್ರತೀಕವನ್ನು ಅಥವಾ ಪ್ರತಿಮೆಗಾಗಿ ಪ್ರತಿಮೆಯನ್ನು ಪೂಜಿಸುವ ತರಗತಿಗೆ ಸೇರಿರುತ್ತದೆಯೇ ಹೊರತು ಪರಮೇಶ್ವರಪೂಜೆಯ ದೃಷ್ಟಿಸೌಕರ್ಯಕ್ಕಾಗಿರುವದಿಲ್ಲ ; ಆದ್ದರಿಂದ ಅದನ್ನು ಎಷ್ಟು ಮೇಲಕ್ಕೆತ್ತಿಹೇಳಿದರೂ ಅದೊಂದು ಬಗೆಯ ಕರ್ಮವಾಗುವದೇ ಹೊರತು ಅದರಿಂದ

---

1. ಈತನು ಒಬ್ಬ ಫ್ರೆಂಚ್ ತತ್ತ್ವಶಾಸ್ತ್ರಜ್ಞನು (ಕ್ರಿ. ಶ. 1798 - 1857). ದೃಶ್ಯವಾಗಿರುವ ಭೌತಿಕಪ್ರಪಂಚನಿಯಮಗಳನ್ನು ಕಂಡುಕೊಳ್ಳುವದು ಮಾತ್ರವೇ ಮನುಷ್ಯನಿಗೆ ಸಾಧ್ಯವೆಂಬ ವಾದವನ್ನು ತಂದವನು ; ಮಾನವನಿಗಿಂತ ಹೆಚ್ಚಿನ ತತ್ತ್ವವೆಂಬುದೇ ಅವನ ಸಿದ್ಧಾಂತದಲ್ಲಿಲ್ಲ.

2. ಈಶ್ವರತತ್ತ್ವವೇ ಮುಂತಾದುವು ಇವೆಯೆಂದಾಗಲಿ, ಇಲ್ಲವೆಂದಾಗಲಿ ನಿರ್ಣಯಿಸುವದಕ್ಕಾಗು ವದಿಲ್ಲ - ಎಂದು ಹೇಳುವ ಸಂಶಯವಾದಿಗಳಿವರು. **ಸ್ಪೆನ್ಸರ್, ಹಕ್ಸ್ಲೀ, ಇಂಗರ್ಸಾಲ್** ಮುಂತಾದವರು ಈ ಗುಂಪಿಗೆ ಸೇರಿದವರು.

ಭಕ್ತಿಯಾಗಲಿ ಮುಕ್ತಿಯಾಗಲಿ ದೊರಕಲಾರದು.[1] ಇಂಥ ಪ್ರತಿಮಾಪೂಜೆಯಲ್ಲಿ ಚಿತ್ತವು ಈಶ್ವರವ್ಯತಿರಿಕ್ತವಾದ ವಸ್ತುಗಳನ್ನು ಆಶ್ರಯಿಸಿರುವದರಿಂದ ಪ್ರತಿಮೆಗಳ, ಗೋರಿಗಳ, ದೇವಸ್ಥಾನಗಳ ಅಥವಾ ಸಮಾಧಿಗಳ ಪೂಜೆಯು ನಿಜವಾಗಿಯೂ ಮೂರ್ತಿಪೂಜೆಯೇ ಆಗಿರುತ್ತದೆ. ಆದಮಾತ್ರಕ್ಕೆ ಅದೇನೂ ಪಾಪವಲ್ಲ, ದುಷ್ಕೃತ್ಯವೂ ಅಲ್ಲ; ಅದೊಂದು ಬಗೆಯ ಕರ್ಮವು. ಈ ಪೂಜೆಯನ್ನು ಮಾಡುವವರಿಗೆ ಆದರಿಂದ ಆಗುವ ಫಲವು ದೊರಕಲೇಬೇಕು, ದೊರಕಿಯೂ ದೊರಕುವದು.

---

1. ಈಶ್ವರಭಕ್ತಿಯಿಂದುಂಟಾದದ್ದಲ್ಲ; ಹಿರಿಯಲ್ಲಿರುವ ಭಕ್ತಿಯಿಂದದ್ದಾದರೂ ಆದರಿಂದ ಮುಕ್ತಿಯಾಗುವ ಹಾಗಿಲ್ಲ - ಎಂದು ಭಾವ.

# 9. ಇಷ್ಟನಿಷ್ಠೆ

ಈಗ ನಾವು ವಿಚಾರಮಾಡಬೇಕಾಗಿರುವದು **ಇಷ್ಟನಿಷ್ಠೆ** ಅಥವಾ ತಾನು ಆರಿಸಿಕೊಂಡಿರುವ ಧ್ಯೇಯದಲ್ಲಿಯೇ ಚಿತ್ತವಿಟ್ಟಿರುವದು. ಭಕ್ತನಾಗಬೇಕೆಂದು ಬಯಸುವಾತನು "ಎಷ್ಟು ಮತಗಳಿವೆಯೋ ಅಷ್ಟೂ ಸಾಧನಮಾರ್ಗಗಳೇ"1 ಎಂದು ತಿಳಿಯಬೇಕು. ಬಗೆಬಗೆಯ ಧರ್ಮಪಂಥಗಳಲ್ಲಿರುವ ಬಗೆಬಗೆಯ ಒಳಪಂಗಡಗಳೆಲ್ಲ ಒಬ್ಬ ಪರಮಾತ್ಮನ ಮಹಿಮೆಯ ವಿಭೂತಿವಿಶೇಷಗಳೇ ಎಂದೆಣಿಸಬೇಕು. "ಭಗವಂತನೆ ಜನರು ನಿನ್ನನ್ನು ಅನಂತನಾಮಗಳಿಂದ ಕರೆಯುತ್ತಿದಾರೆ, ಬೇರೆ ಬೇರೆಯ ಹೆಸರುಗಳಿಂದ ನಿನ್ನನ್ನು ಒಂದು ಬಗೆಯಲ್ಲಿ ಭಾಗಭಾಗವಾಗಿ ಮಾಡುತ್ತಿದಾರೆ; ಆದರೆ ಇವುಗಳಲ್ಲಿ ಒಂದೊಂದರಲ್ಲಿಯೂ ನಿನ್ನ ಸರ್ವಶಕ್ತಿಯು ನೆಲಸಿರುವದು.... ಇವುಗಳಲ್ಲಿ ಪ್ರತಿಯೊಂದರ ಮೂಲಕವೂ ನೀನು ಉಪಾಸಕನ ಕೈವಶವಾಗುತ್ತಿರುವೆ. ಜೀವನಿಗೆ ನಿನ್ನಲ್ಲಿ ಪರಮಪ್ರೇಮವಿದ್ದರೆ ಸರಿ. ಇಂಥ ಕಾಲದಲ್ಲಿ ನಿನ್ನ ಆರಾಧನೆಯನ್ನು ಮಾಡಬೇಕೆಂಬ ನಿಯಮವು ಕೂಡ ಇರುವದಿಲ್ಲ. ನಿನ್ನ ಬಳಿಗೆ ಬರುವದು ಅಷ್ಟು ಸುಲಭ ! ಹೀಗಿರುವಲ್ಲಿ ನನಗೆ ನಿನ್ನಲ್ಲಿ ಭಕ್ತಿಯಿಲ್ಲವಲ್ಲ! ಇದು ನನ್ನ ದೌರ್ಭಾಗ್ಯವೇ ಸರಿ"37 ಎಂದು ಹಂಬಲಿಸುತ್ತಿರಬೇಕು. ಇಷ್ಟು ಮಾತ್ರವೇ ಅಲ್ಲ, ಭಕ್ತನಾದವನು ಬಗೆಬಗೆಯ ಪಂಗಡಗಳ ಮತಸ್ಥಾಪಕರೆಂಬ ತೇಜಸ್ವಿಗಳಾದ ಮಹಾಮಹಿಮರನ್ನು ಹಗೆಮಾಡುವದಕ್ಕಾಗಲಿ ಆಕ್ಷೇಪಿಸುವದಕ್ಕಾಗಲಿ ಹೋಗದಂತೆ ಎಚ್ಚರಿಕೆಯಿಂದಿರಬೇಕು ; ಅವರ ವಿಷಯದಲ್ಲಿ ಮತ್ತೊಬ್ಬರು ಕೆಟ್ಟ ಮಾತನ್ನಾಡುವದನ್ನು ಕೂಡ ಕೇಳಬಾರದು. ವಿಚಾರಿಸಿನೋಡಿದರೆ ವಿಸ್ತೃತವಾದ ಸಹಾನುಭೂತಿಯೂ ಗುಣಗ್ರಹಣಶಕ್ತಿಯೂ ಇದ್ದು ಅದರ ಜೊತೆಗೆ ದೇವರಲ್ಲಿ ಪರಮಪ್ರೇಮವೂ ಇರುವವರು ತೀರ ವಿರಳವೆಂದೇ ಹೇಳಬೇಕಾಗುವದು. ಉದಾರ ಹೃದಯರೂ ಸಹಾನುಭೂತಿಯುಳ್ಳವರೂ ಆದ ಮತಾನುಯಾಯಿಗಳೆಂಬವರಲ್ಲಿ ಉತ್ಕಟವಾದ ಧಾರ್ಮಿಕ ಭಾವನೆಯು ಇಲ್ಲದಿರುವದೇ ಬಹಳ. ಇಂಥವರ ಕೈಯಲ್ಲಿ ಸೇರಿದ ಧರ್ಮವು ಅರ್ಧ ರಾಜಕೀಯ ಅರ್ಧಸಾಮಾಜಿಕಗುಣಧರ್ಮವಾಗಿಬಿಡುವ ಸಂಭವವೇ ಹೆಚ್ಚು. ಇನ್ನು ಇದಕ್ಕೆ ಬದಲಾಗಿ ಅತಿಸಂಕುಚಿತಾಭಿಪ್ರಾಯವುಳ್ಳ ಪಂಥದವರೋ ಎಂದರೆ, ಅವರು ತಮ್ಮ ತಮ್ಮ

---

1. ಇದು ಶ್ರೀರಾಮಕೃಷ್ಣ ಪರಮಹಂಸರವರ ಒಂದು ಮುಖ್ಯಬೋಧೆಯು. "**ಋಜುಕುಟಿಲನಾನಾಪಥಜುಷಾಮ್**...." ಎಂಬ ಶಿವಮಹಿಮ್ನ ಸ್ತೋತ್ರದ ಅಭಿಪ್ರಾಯವು ಇದರಲ್ಲಿ ಅಡಕವಾಗಿರುತ್ತದೆ.

37 ಇದು ಶ್ರೀಕೃಷ್ಣ ಚೈತನ್ಯಕೃತ ಶಿಕ್ಷಾಷ್ಟಕದ ಒಂದು ಶ್ಲೋಕದ ಭಾವಾರ್ಥವು.

ಇಷ್ಟದೇವತೆಯಲ್ಲಿ ತುಂಬ ಶ್ಲಾಘನೀಯವಾದ ಪ್ರೇಮವನ್ನೇನೋ ತೋರಿಸುತ್ತಾರೆ ; ಆದರೆ ಆ ಪ್ರೇಮದ ಒಂದೊಂದು ಪರಮಾಣುವು ಕೂಡ ಅವರು ತಮ್ಮ ಅಭಿಪ್ರಾಯಕ್ಕೆ ರುಜುಹಾಕದೆ ಇರುವವರನ್ನೆಲ್ಲ ಹಗೆಮಾಡಿರುವದರಿಂದಲೇ ಕೂಡಿಹಾಕಿರತಕ್ಕದ್ದೆಂದು ಕಂಡುಬರುತ್ತದೆ. ತಮ್ಮ ಇಷ್ಟದೇವತೆಯಲ್ಲಿ ಎಷ್ಟು ಪರಮಪ್ರೇಮವಿರುವದೋ ಅದಕ್ಕೆ ತಕ್ಕಷ್ಟೇ ಎಲ್ಲೆಲ್ಲಿಯೂ ಹರಡಿರುವ ಸಹಾನುಭೂತಿಯೂ ಇರುವ ಜನರಿಂದಲೇ ಈ ಲೋಕವು ತುಂಬಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಆದರೆ ಇಂಥವರು ಎಲ್ಲಿಯೋ ಒಬ್ಬೊಬ್ಬರು ಸಿಕ್ಕುವರು. ಹೀಗಿದ್ದರೂ ಪ್ರೇಮವು ಬಲವಾಗಿಯೂ ವಿಸ್ತೃತವಾಗಿಯೂ ಇರುವಂತೆ ಈ ಎರಡು ಮಾರ್ಗವನ್ನೂ ಬೆರೆಸಿಕೊಂಡಿರುವ ಧ್ಯೇಯವನ್ನು ಇಟ್ಟುಕೊಂಡು ನಡೆಯುವಂತೆ ಮಹಾಜನರನ್ನು ತಿದ್ದುವದೇನೋ ಸಾಧ್ಯವೆಂಬುದು ನಮ್ಮೆಲ್ಲರಿಗೂ ತಿಳಿದ ಮಾತಾಗಿದೆ. ಇದಕ್ಕೆ ಈ **'ಇಷ್ಟನಿಷ್ಠೆ'** ಯೆಂಬ ಮಾರ್ಗವನ್ನನುಸರಿಸುವದೇ ಉಪಾಯವು. ಪ್ರಪಂಚದಲ್ಲಿರುವ ಪ್ರತಿಯೊಂದು ಧರ್ಮಪಂಥದಲ್ಲಿಯೂ ಆಯಾ ಒಳಪಂಗಡದಲ್ಲಿ ತಾವು ತಾವು ಇಟ್ಟುಕೊಂಡಿರುವ ಒಂದೊಂದು ಧ್ಯೇಯವನ್ನೇ ಜನರ ಮುಂದೆ ಇಟ್ಟಿರುತ್ತದೆ ; ಆದರೆ ಸನಾತನಧರ್ಮವಾದ ವೇದಾಂತವು ಮಾತ್ರ ಪರಮಾತ್ಮನ ಗರ್ಭಗುಡಿಗೆ ಹೋಗುವದಕ್ಕೆ ಅನಂತದ್ವಾರಗಳನ್ನು ಕಲ್ಪಿಸಿರುತ್ತದೆ. ಈ ವಾದವು ಇಷ್ಟೆಂದು ಎಣಿಸಿ ಮುಗಿಸುವದಕ್ಕಾಗದಷ್ಟು ಧ್ಯೇಯಗಳನ್ನು ಜನರ ಮುಂದೆ ಇಟ್ಟಿರುವದೆಂದರೂ ಎನ್ನಬಹುದು. ಈ ಧ್ಯೇಯಗಳಲ್ಲಿ ಒಂದೊಂದರಲ್ಲಿಯೂ ನಿತ್ಯನಾದ ಆ ಪರಮಾತ್ಮನೇ ಪ್ರಕಟನಾಗಿರುವನು. ವೇದಾಂತಮತವು ಅತ್ಯಂತ ಕರುಣೆಯಿಂದ ಮುಮುಕ್ಷುಗಳಾದ ಸ್ತ್ರೀಪುರುಷರಿಗೆ ಮಾನವಜೀವನದ ತತ್ತ್ವಗಳೆಂಬ ಗಟ್ಟಿಬಂಡೆಯಲ್ಲಿ ಪೂರ್ವಕಾಲದಲ್ಲಿಯೂ ಈಗಲೂ ಪರಮಾತ್ಮನ ಪುತ್ರರಾದ ಅಥವಾ ಅಂಶಪುರುಷರಾದ ಮಹಾತ್ಮರು ಕೊರೆದುಮಾಡಿರುವ ಲೆಕ್ಕವಿಲ್ಲದಷ್ಟು ಮಾರ್ಗಗಳನ್ನು ತೋರಿಸುತ್ತಿರುವದು ; ಇನ್ನು ಮುಂದೆ ಬರಬಹುದಾದವರನ್ನು ಕೂಡ ಬಿಡದಂತೆ ಎಲ್ಲರನ್ನೂ ಮಾನವಜೀವನು ಮಾಯಾಪಾಶದಿಂದ ಬಿಡುಗಡೆಹೊಂದಿದಂತೆ ಆ ಸ್ಥಾನವನ್ನು ಸೇರಿ ಸಂಪೂರ್ಣ ಸ್ವಾತಂತ್ರ್ಯದಿಂದಲೂ, ನಿತ್ಯಾನಂದದಿಂದಲೂ ಕೂಡಿಕೊಂಡಿರಲೆಂಬ ಉದ್ದೇಶದಿಂದ- ಸತ್ಯದ ತೌರುಮನೆಯೂ ಆನಂದಸಾಗರವೂ ಆದ ಪರಮಾತ್ಮನ ಬಳಿಗೆ ಸಂತೋಷದಿಂದ ಬರಮಾಡಿಕೊಳ್ಳುವದಕ್ಕೆ ತನ್ನ ಎರಡು ಕೈಗಳನ್ನೂ ನೀಡಿಕೊಂಡು ನಿಂತಿರುವದು.

ಅಂತು ಭಕ್ತಿಯೋಗದ ಕಟ್ಟಾಣೆಯೇನೆಂದರೆ, ಮುಕ್ತಿಗೊಯ್ಯುವ ಹಲವು ಮಾರ್ಗಗಳಲ್ಲಿ ಯಾವದೊಂದನ್ನೂ ಹಗೆಮಾಡಬಾರದು, ಯಾವದೊಂದನ್ನೂ ಸರಿಯಲ್ಲವೆನ್ನಬಾರದು. ಆದರೂ ಬೆಳೆಯುವ ಗಿಡವು ಮರವಾಗುವವರೆಗೂ ಅದನ್ನು ಕಾಪಾಡುವದಕ್ಕೆಂದು

ಬೇಲಿಯನ್ನು ಹಾಕುವದು ಅವಶ್ಯವು ; ಮೊದಲೇ ಅಭಿಪ್ರಾಯಗಳನ್ನು ಧ್ಯೇಯಗಳನ್ನೂ ಮತ್ತೆ ಮತ್ತೆ ಬದಲಾಯಿಸುವದಕ್ಕೆ ಬಿಟ್ಟರೆ ಧರ್ಮದ ಸಸಿಯೇ ಒಣಗಿಹೋಗುವದು.[1] ಎಷ್ಟೋ ಜನರು ಧರ್ಮದ ವಿಷಯದಲ್ಲಿ ಉದಾರವಾಗಿರಬೇಕೆಂಬ ನೆಪದಿಂದ ದಿನಕ್ಕೊಂದು ಮಾರ್ಗವನ್ನು ಅವಲಂಬಿಸುತ್ತಾ ಕುತೂಹಲದ ತೀಟೆಯನ್ನು ತೀರಿಸಿಕೊಳ್ಳುತ್ತಿರುವರು. ಇಂಥವರಿಗೆ ಹೊಸ ವಿಚಾರಗಳನ್ನು ಕೇಳಬೇಕೆಂಬುದೇ ಒಂದು ಬಗೆಯ ರೋಗ ವಾಗಿರುವದು, ಅದೇ ಒಂದು ಬಗೆಯ ಧರ್ಮಮದ್ಯದ ಚಟವಾಗಿರುವದು. ಸ್ವಲ್ಪಹೊತ್ತು ತಮ್ಮ ನರಗಳಿಗೆ ಜೋರುಕೊಟ್ಟಂತೆ ಆಗುವದೆಂಬ ಕಾರಣದಿಂದಲೇ ಇವರಿಗೆ ಹೊಸಹೊಸ ವಿಷಯಗಳನ್ನು ಕೇಳುವ ತವಕವಿರುವದು ; ಇವರುಗಳಲ್ಲಿ ಇಂಥ ಒಂದರ ಜೋರಿನಿಂದಾದ ಮದವು ಇಳಿದಕೂಡಲೆ ಅವರು ಮತ್ತೊಂದಕ್ಕೆ ಸಿದ್ಧರಾಗುವರು. ಈ ಜನರಿಗೆ ಧರ್ಮವೆಂಬುದು ಒಂದು ರೀತಿಯಲ್ಲಿ ಬುದ್ಧಿಯಿಂದ ಅಫೀಮು ಮೆಲ್ಲುವ ಕಾರ್ಯವಾಗಿ ಅಷ್ಟರಲ್ಲಿಯೇ ಕೊನೆಗಾಣುವದು. ಆದರೆ ಮತ್ತೊಂದು ಬಗೆಯ ಅಧಿ ಕಾರಿಯುಂಟು. ಅವನ ವಿಷಯವಾಗಿ **ಭಗವಾನ್ ರಾಮಕೃಷ್ಣ ಪರಮಹಂಸರು** ಹೇಳಿರುವದೇನೆಂದರೆ "ಆತನು ಕಥೆಯಲ್ಲಿ ಹೇಳುವ ಮುತ್ತಿನ ಕ್ರಿಮಿಯಂತೆ ಇರುವನು. ಈ ಮುತ್ತಿನಹುಳು ಸ್ವಾತಿಯಮಳೆ ಬಿತ್ತೋ ಇಲ್ಲವೋ, ತಾನಿರುವ ಸಮುದ್ರತಳವನ್ನು ಬಿಟ್ಟು ಮಳೆಯ ನೀರನ್ನು ಹಿಡಿಯುವದಕ್ಕೆಂದು ಮೇಲಕ್ಕೆ ಬರುವದು ; ಚಿಪ್ಪನ್ನು ಚೆನ್ನಾಗಿ ತೆರೆದುಕೊಂಡು ಈಜಾಡುತ್ತಲೇ ಇದ್ದು ಹೇಗೋ ಒಂದು ಮಳೆಹನಿಯನ್ನು ಹಿಡಿದುಕೊಳ್ಳುವದು ; ಒಡನೆಯೆ ಮುಳುಗಿ ಸರ‍್ರನೆ ತಾನಿದ್ದ ಸಮುದ್ರದ ತಳವನ್ನು ಸೇರುವದು ; ಆ ಹನಿಯಿಂದ ಒಂದು ಸುಂದರವಾದ ಮುತ್ತಾಗುವವರೆಗೂ ಅಲ್ಲಿಯೇ ಕೆಲಸಮಾಡಿಕೊಂಡಿರುವದು."

ಇಷ್ಟನಿಷ್ಠೆಯ ವಾದವನ್ನು ಇದಕ್ಕಿಂತ ಹೆಚ್ಚು ಹೃದಯಂಗಮವಾಗಿ ಮನಸ್ಸಿಗೆ ಹಿಡಿಯುವಂತೆ ಹೇಳುವದು ಆಗಲಾರದು. ಭಕ್ತಿಯನ್ನು ಬೆಳೆಸುವದಕ್ಕೆ ಪ್ರಾರಂಭಸ್ಥಿತಿಯಲ್ಲಿ ಇಂಥ ಏಕನಿಷ್ಠೆಯು ಅತ್ಯಂತ ಅವಶ್ಯವಾಗಿರುವದು. **ರಾಮಾಯಣ**ದಲ್ಲಿ ಹನುಮಂತನು ಹೇಳಿರುವಂತೆ "ಶ್ರೀಪತಿಯೂ ಜಾನಕೀಪತಿಯೂ ಒಬ್ಬ ಪರಮಾತ್ಮನ ವಿಭೂತಿಗಳೇ ಸರಿ; ಆದರೂ ಕಮಲ ನೇತ್ರನಾದ ರಾಮನೇ ನನ್ನ ಸರ್ವಸ್ವವು"**38**(?) ಎನ್ನುತ್ತಿರಬೇಕು. ಅಥವಾ **ತುಳಸೀದಾಸ**ರೆಂಬ ಸಾಧುಗಳು ಹೇಳಿರುವ ಪರಿಯಲ್ಲಿ "ಎಲ್ಲದರ ಸಾರವನ್ನೂ ತೆಗೆದುಕೊಳ್ಳಬೇಕು, ಎಲ್ಲರೊಡನೆಯೂ ಕೂತುಕೊಳ್ಳಬೇಕು, ಎಲ್ಲರ ಹೆಸರನ್ನೂ ಹೇಳಬೇಕು ; 'ಹೌದು', 'ಹೌದು' ಎನ್ನುತ್ತಿರ ಬೇಕು ; ಆದರೂ ತನ್ನ ಸ್ಥಾನದಲ್ಲಿ ತಾನು ಭದ್ರವಾಗಿ ಕೂತಿರಬೇಕು"(?)**39** ಎಂದು ತಿಳಿದಿರಬೇಕು. ಹೀಗಿದ್ದರೆ ಭಕ್ತನು

1. ಶ್ರೀರಾಮಕಷ್ಣ ಪರಮಹಂಸರವರ ಉಪದೇಶವಿದು.

ಮನಃಪೂರ್ವಕವಾಗಿ ಸಾಧನವನ್ನು ನಡೆಸುತ್ತಿದ್ದರೆ, ಈ ಸಣ್ಣಬೀಜದಿಂದ ಆಲದಮರದಂಥ ಒಂದು ಅದ್ಭುತವಾದ ಮರವು ಹುಟ್ಟಿ ಎಲ್ಲೆಲ್ಲಿಯೂ ಕೊಂಬೆಕೊಂಬೆಗಳಾಗಿ ಬಿಳಿಲು ಬಿಳಿಲುಗಳಾಗಿ ಹಬ್ಬಿ, ಧರ್ಮದ ಕ್ಷೇತ್ರವನ್ನೆಲ್ಲ ಆವರಿಸಿಕೊಂಡು ಬಿಡುವದು. ನಿಜವಾದ ಭಕ್ತನಿಗೆ ತನ್ನ ಇಷ್ಟದೇವತೆಯಾಗಿದ್ದ ಪರಮಾತ್ಮನನ್ನೇ ಎಲ್ಲಾ ಪಂಗಡದವರೂ ನಾನಾನಾಮಗಳಿಂದಲೂ ನಾನಾರೂಪಗಳಿಂದಲೂ ತಮ್ಮ ತಮ್ಮ ಧ್ಯೇಯಗಳಲ್ಲಿ ಪೂಜಿಸುತ್ತಿರುವರೆಂಬುದು ಆಗ ಗೊತ್ತಾಗುವದು.

---

# 10. ಮಾರ್ಗವೂ ಸಾಧನಗಳೂ

ಭಕ್ತಿಯೋಗದ ಮಾರ್ಗ ಮತ್ತು ಸಾಧನ - ಇವುಗಳ ವಿಚಾರದಲ್ಲಿ **ಭಗವಾನ್ ರಾಮಾನುಜಾಚಾರ್ಯ**ರವರು ವೇದಾಂತಸೂತ್ರಗಳ ಮೇಲೆ ಬರೆದಿರುವ ಶ್ರೀಭಾಷ್ಯದಲ್ಲಿ "ವಿವೇಕ, ವಿಮೋಕ, ಅಭ್ಯಾಸ, ಕ್ರಿಯಾ, ಕಲ್ಯಾಣ, ಅನವಸಾರ, ಅನುದ್ಧರ್ಷ - ಇವುಗಳಿಂದ ಅದು ಸಿಕ್ಕುವದು"[40] ಎಂಬ ವಾಕ್ಯವಿದೆ.

ರಾಮಾನುಜರ ಅಭಿಪ್ರಾಯದಂತೆ **ವಿವೇಕ**ವೆಂಬುದರಲ್ಲಿ ಭಕ್ಷ್ಯಾಭಕ್ಷ್ಯ ವಿವೇಚನೆಯೂ ಸೇರಿರುತ್ತದೆ. ಅವರ ಅಭಿಮತದಂತೆ ಆಹಾರವು ಅಶುದ್ಧವಾಗುವದಕ್ಕೆ ಮೂರು ಕಾರಣ ಗಳುಂಟು :[40] (1) ಪದಾರ್ಥವು ಹುಟ್ಟುವಾಗಲೇ ಅಶುದ್ಧವಾಗಿರುವದು, ಉದಾಹರಣೆಗೆ ಬೆಳ್ಳುಳ್ಳಿ ಮುಂತಾದದ್ದು; (2) ದುಷ್ಟರ ಕೈಯಿಂದಲೂ ಪತಿತರ ಕೈಯಿಂದಲೂ ಬರುವದರಿಂದ ಅಶುದ್ಧಿಯಾಗಿರುವದು ; (3) ಧೂಳು, ಕೂದಲು - ಮುಂತಾದ ಹೊರಗಿನ ನಿಮಿತ್ತಗಳಿಂದ ಅಶುದ್ಧಿಯಾಗಿರುವದು. "ಆಹಾರವು ಶುದ್ಧಿಯಾಗಿದ್ದರೆ ಸತ್ತ್ವವು ಶುದ್ಧಿಯಾಗುವದು, ಸತ್ತ್ವಶುದ್ಧಿಯಾದರೆ ಸ್ಮೃತಿಯೂ ಸ್ಥಿರವಾಗುವದು" (ಛಾ.)[41] ಎಂದು ಶ್ರುತಿಯಲ್ಲಿ ಹೇಳಿದೆ. ಛಾಂದೋಗ್ಯೋಪನಿಷತ್ತಿನಲ್ಲಿರುವ ಈ ವಚನವನ್ನು ಇಲ್ಲಿ ರಾಮಾನುಜಾಚಾರ್ಯರು ಪ್ರಮಾಣವಾಗಿ ಉದಾಹರಿಸಿರುತ್ತಾರೆ.

ಭಕ್ತರೆಲ್ಲರೂ ಭಕ್ಷ್ಯಾಭಕ್ಷ್ಯವಿಚಾರವನ್ನು ಬಹು ಮುಖ್ಯವಾಗಿ ಇಟ್ಟುಕೊಂಡಿರುತ್ತಾರೆ. ಕೆಲವರು ಭಕ್ತಿಮಾರ್ಗದವರು ಈ ವಿಚಾರದಲ್ಲಿ ಮಿತಿಮೀರಿಹೋಗಿರುವರೆಂಬುದನ್ನು ಒತ್ತಟ್ಟಿಗೆ ಇಟ್ಟುನೋಡಿದರೆ, ಈ ಆಹಾರವಿಚಾರಕ್ಕೆ ಆಧಾರವಾಗಿ ಒಂದು ದೊಡ್ಡ ತತ್ತ್ವವುಂಟೆಂದು ಕಂಡುಬರುತ್ತದೆ. **ಸಾಂಖ್ಯಸಿದ್ಧಾಂತ**ದ ಪ್ರಕಾರ ಸತ್ತ್ವರಜಸ್ತಮೋಗುಣಗಳು ಸಮಪ್ರಮಾಣ ದಲ್ಲಿರುವಾತನ ಸಾಮ್ಯಾವಸ್ಥೆಯೇ 'ಪ್ರಕೃತಿ'ಯೆನಿಸುವದು,1 ವಿಷಮಪ್ರಮಾಣದಲ್ಲಿರುವಾಗ ಇವೇ ಪ್ರಪಂಚಾಕಾರವಾಗಿ ಪರಿಣಮಿಸಿರುವವು. ಇವು ಪ್ರಕೃತಿಯಲ್ಲಿರುವ ವಸ್ತುವೂ ಗುಣವೂ2 ಆಗಿರುವವೆಂಬುದನ್ನು ಇಲ್ಲಿ ನೀವು ನೆನಪಿಡಬೇಕು. ಹೀಗಿರುವದರಿಂದ ಪ್ರತಿಯೊಂದು

40 ಇದನ್ನು ವಾಕ್ಯಕಾರರ ವಚನವೆಂತ ರಾಮಾನುಜಭಾಷ್ಯದಲ್ಲಿ ಉದಾಹರಿಸಿದೆ ; ಈ ವಾಕ್ಯಕಾರರು ಯಾರೆಂಬುದು ಸರಿಯಾಗಿ ನಿರ್ಧರವಾಗಿಲ್ಲ.

1. ಈ ಸಾಮ್ಯಾವಸ್ಥೆಯ ಪ್ರಕೃತಿಯನ್ನು ಸಾಂಖ್ಯರು ಪ್ರಧಾನವೆಂದು ಕರೆಯುತ್ತಾರೆ.

2. ಪ್ರಕೃತಿಯು ಇವುಗಳಿಂದಾಗಿರುವದರಿಂದ, ಇವುಗಳಿಗೆ ಇಟ್ಟಿರುವ "ಗುಣ"ವೆಂಬ ಹೆಸರು ಪಾರಿಭಾಷಿಕವೆಂದು ತೋರುವದು.

ಮಾನುಷಾಕೃತಿಯೂ ಈ ಗುಣಗಳೆಂಬ ವಸ್ತುವಿನಿಂದಲೇ ಆಗಿರುವದು. ಇನ್ನು ಆಧ್ಯಾತ್ಮಿಕ ಪ್ರವೃತ್ತಿಯು ಬೆಳೆಯಬೇಕಾದರೆ ಸತ್ತ್ವಗುಣವು ಪ್ರಧಾನವಾಗಿರಬೇಕು. ನಮ್ಮ ಆಹಾರದ ಮೂಲಕ ನಮ್ಮ ಶರೀರರಚನೆಗೆ ಬಂದು ಸೇರುವ ವಸ್ತುವಿಶೇಷಗಳನ್ನೇ ಬಹುಮಟ್ಟಿಗೆ ನಮ್ಮ ಮನಸ್ಸಿನ ಸ್ಥಿತಿಯು ಅವಲಂಬಿಸಿರುತ್ತದೆ ; ಆದಕಾರಣ ನಾವು ತಿನ್ನುವ ಆಹಾರದ ವಿಷಯದಲ್ಲಿ ಬಹು ಜಾಗರೂಕತೆಯಿಂದ ಇರಬೇಕಾದದ್ದೇನೋ ಅಗತ್ಯವೇ. ಆದರೆ ಇತರ ವಿಷಯಗಳಲ್ಲಿ ಹೇಗೋ ಹಾಗೆ ಈ ವಿಷಯದಲ್ಲಿಯೂ ಮತಾನುಯಾಯಿಗಳು ಹೆಚ್ಚು ಅಭಿಮಾನವನ್ನು ತೋರಿಸುತ್ತಿರುವರು ; ಈ ತಪ್ಪನ್ನು ಮತಾಚಾರ್ಯರಮೇಲೆ ಎಂದಿಗೂ ಹಾಕತಕ್ಕದ್ದಲ್ಲ.

ಇದೂ ಅಲ್ಲದೆ ಒಟ್ಟಿನಲ್ಲಿ ನೋಡಿದರೆ ಈ ಆಹಾರವಿವೇಕವೆಂಬುದೇನೂ ಅಷ್ಟು ಪ್ರಧಾನವಾದದ್ದಲ್ಲ. ಮೇಲೆ ಉದಾಹರಿಸಿರುವ ಶ್ರುತಿಭಾಗವನ್ನೇ **ಶ್ರೀಶಂಕರಾಚಾರ್ಯ**ರವರು ತಮ್ಮ ಉಪನಿಷದ್ವಾಕ್ಯದಲ್ಲಿ ಮತ್ತೊಂದು ರೀತಿಯಿಂದ ವಿವರಿಸಿರುತ್ತಾರೆ. ತಿನ್ನುವ ವಸ್ತುವೆಂದು ಸಾಮಾನ್ಯವಾಗಿ ಅರ್ಥಮಾಡುವ ಈ ಆಹಾರವೆಂಬ ಶಬ್ದಕ್ಕೆ ಅವರು ಅಲ್ಲಿ ಸಂಪೂರ್ಣವಾಗಿ ಬೇರೊಂದು ಅರ್ಥವನ್ನೇ ಕೊಟ್ಟಿರುತ್ತಾರೆ. ಅವರ ಅಭಿಪ್ರಾಯವೇನೆಂದರೆ[1] "ಯಾವದನ್ನು ಒಳಕ್ಕೆ ತೆಗೆದುಕೊಳ್ಳೋಣಾಗುತ್ತದೆಯೋ ಅದೇ ಆಹಾರವು. ಶಬ್ದವೇ ಮುಂತಾದ ವಿಷಯಗಳ ಅರಿವು ಭೋಕ್ತೃವಾದ ಆತ್ಮನ ಭೋಗಕ್ಕಾಗಿ ಒಳಕ್ಕೆ ತೆಗೆದುಕೊಳ್ಳಲ್ಪಡುತ್ತದೆಯಾದ್ದರಿಂದ ಇದು ಆಹಾರವು. ವಿಷಯಗಳನ್ನು ಅರಿಯುವದೆಂಬ ಈ ವಿಜ್ಞಾನದ ಶುದ್ಧಿಯೇ ಆಹಾರಶುದ್ಧಿ. ರಾಗ ದ್ವೇಷಮೋಹಗಳೆಂಬ ದೋಷಗಳ ಸೋಂಕಿಲ್ಲದೆ ವಿಷಯಗಳನ್ನು ಅರಿಯುವದು ಎಂದರ್ಥ. ಈ ಆಹಾರಶುದ್ಧಿಯು ಆಯಿತೆಂದರೆ ಅದನ್ನುಳ್ಳ ಅಂತಃಕರಣವೆಂಬ ಸತ್ತ್ವದ ಶುದ್ಧಿ ಯಾಗುವದು, ಎಂದರೆ ಅದು ನಿರ್ಮಲವಾಗುವದು. ಈ ಸತ್ತ್ವಶುದ್ಧಿಯಾದರೆ ಮೇಲೆ ತಿಳಿಸಿರುವ ಪರಿಚ್ಛೇದರಹಿತನಾದ ಆತ್ಮನ ಸ್ವರೂಪದ ವಿಷಯದಲ್ಲಿ ಎಡೆಬಿಡದೆ ಸ್ಮರಣೆ ಯುಂಟಾಗುವದು" (ಛಾ. ಭಾ.)**42**

ಈ ಎರಡು ವ್ಯಾಖ್ಯಾನಗಳೂ ಮೊದಮೊದಲು ನೋಡುವದಕ್ಕೆ ಒಂದಕ್ಕೊಂದು ವಿರುದ್ಧವಾಗಿರುವಂತೆ ತೋರುತ್ತಿವೆಯಾದರೂ ಇವೆರಡೂ ನಿಜ, ಎರಡೂ ಆವಶ್ಯಕವಾಗಿವೆ. ಸೂಕ್ಷ್ಮಶರೀರವೆಂದು ಕರೆಯಬಹುದಾದ ಮನಸ್ಸನ್ನು ಮಾರ್ಪಡಿಸಿ ಸ್ವಾಧೀನದಲ್ಲಿಟ್ಟು ಕೊಳ್ಳುವದೆಂಬುದು ಮಾಂಸಮಯವಾದ ಸ್ಥೂಲಶರೀರವನ್ನು ಸ್ವಾಧೀನದಲ್ಲಿಟ್ಟುಕೊಳ್ಳು ವದಕ್ಕಿಂತ

1. ಈ ಭಾಷ್ಯದ ಅನುವಾದವಾಕ್ಯಗಳನ್ನು ಸಂಸ್ಕೃತಮೂಲಕ್ಕೆ ಹೋಲಿಸಿ ಸ್ವಾಮಿಗಳ ಅಭಿಪ್ರಾಯಕ್ಕೆ ವಿರೋಧವಾಗದಂತೆ ತಿದ್ದಿರುತ್ತದೆ.

ಹೆಚ್ಚಿನ ಕಾರ್ಯವೆನ್ನುವದಕ್ಕೇನೂ ಸಂದೇಹವಿಲ್ಲ. ಆದರೆ ಸೂಕ್ಷ್ಮ ಶರೀರವನ್ನು ಸ್ವಾಧೀನಕ್ಕೆ ತಂದುಕೊಳ್ಳುವ ಶಕ್ತಿಬರಬೇಕಾದರೆ ಸ್ಥೂಲಶರೀರವನ್ನು ಸ್ವಾಧೀನಪಡಿಸಿ ಕೊಳ್ಳುವದು ಅತ್ಯಂತ ಅವಶ್ಯವಾಗಿರುವದು. ಆದ್ದರಿಂದ ಸಾಧಕನಾದವನು ಪ್ರಾರಂಭ ಸ್ಥಿತಿಯಲ್ಲಿ ತನ್ನ ಗುರುಪರಂಪರೆಯವರಿಂದ ಉಪದಿಷ್ಟವಾಗಿರುವ ಆಹಾರನಿಯಮಗಳನ್ನೆಲ್ಲ ಎಚ್ಚರಿಕೆಯಿಂದ ನಡೆಸಿಕೊಂಡುಬರಬೇಕು. ಆದರೆ ಮತವೆಂಬುದಕ್ಕೆ ಧಾರ್ಮಿಕಭಾವನೆಯು ಬಿಸಿಲಿನ ಮುಖವನ್ನೇ ಕಾಣುವದಕ್ಕವಕಾಶವಿಲ್ಲದಂತೆ ಅಡಿಗೆಯಮನೆಯ ಮೂಲೆಗೆ ಮುಟ್ಟಾಗಿರುವಂತೆ ಮಾಡಿರುವ ನಮ್ಮ ಕೆಲವು ಮತಪ್ರಭೇದಗಳಲ್ಲಿ ಕಂಡುಬರುವ ವಿಪರೀತವಾದ ಅಭಿಮಾನವು ಮಾತ್ರ ಕೇವಲ ಶುದ್ಧಚಾರ್ವಾಕಮತದ ರೂಪವಿಶೇಷವೇ ಸರಿ. ಅದು ಜ್ಞಾನವೂ ಅಲ್ಲ, ಭಕ್ತಿಯೂ ಅಲ್ಲ, ಕರ್ಮ ಮೊದಲೇ ಅಲ್ಲ. ಅದೊಂದು ಬಗೆಯ ಹುಚ್ಚು. ಈ ಹುಚ್ಚಿಗೆ ತಮ್ಮ ಮನಸ್ಸನ್ನು ಗಂಟುಹಾಕಿಕೊಳ್ಳುವವರು ಬ್ರಹ್ಮಲೋಕವನ್ನು ಸೇರುವದಕ್ಕಿಂತಲೂ ಹುಚ್ಚರ ಆಸ್ಪತ್ರೆಯನ್ನು ಸೇರುವ ಸಂಭವವೇ ಹೆಚ್ಚಾಗಿರುವದು. ಇದಿರಲಿ, ಆಹಾರವಿಚಾರದಲ್ಲಿ ವಿವೇಕವು ಇರಬೇಕಾದದ್ದು ಮನಸ್ಸಿನ ಶುದ್ಧಸ್ಥಿತಿಯನ್ನು ಪಡೆಯುವದಕ್ಕೆ ಅವಶ್ಯವೆಂದೂ ಅದಿಲ್ಲದಿದ್ದರೆ ಆ ಸ್ಥಿತಿಯು ಸುಲಭವಾಗಿ ದಕ್ಕಲಾರದೆಂದೂ ಹೇಳುವದು ಯುಕ್ತಿಯುಕ್ತವೆಂದೇ ಒಟ್ಟಿನಲ್ಲಿ ಸಿದ್ಧವಾಯಿತು.

ಇನ್ನು **ವಿಮೋಕಕ್ಕೆ**[43] ಎಂದರೆ ಕಾಮವನ್ನು ತಡೆದುಕೊಳ್ಳುವದಕ್ಕೆ ಗಮನಕೊಡಬೇಕು. ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗದಂತೆ ಜಗ್ಗಿ ಅವುಗಳನ್ನು ಬಿಗಿಹಿಡಿದುಕೊಂಡು ತನ್ನ ಸಂಕಲ್ಪಕ್ಕೆ ಒಳಗುಮಾಡಿಕೊಳ್ಳುವದೆಂಬುದು ಪರಮಾರ್ಥಸಾಧನೆಯಲ್ಲಿ ಬಹುಮುಖ್ಯ ವಾದ ಗುಣವಾಗಿದೆ.

ಇದಾದಮೇಲೆ ಆತ್ಮಸಂಯಮಸ್ವಾರ್ಥತ್ಯಾಗಗಳ ರೂಪವಾದ **ಅಭ್ಯಾಸ**ವನ್ನು[43] ಮಾಡ ಬೇಕು. ಭಕ್ತನಾಗಬೇಕೆನ್ನುವವನು ಈ ರೀತಿಯಲ್ಲಿ ಶ್ರಮಪಟ್ಟು ಅಭ್ಯಾಸಮಾಡದಿದ್ದರೆ ಹೃದಯದಲ್ಲಿ ಭಗವತ್ಸಾಕ್ಷಾತ್ಕಾರವಾಗುವ ಮಹಾಸಂಭವಗಳು ಯಾವವೂ ಕೈಗೂಡಲಾರವು. ಮನಸ್ಸು ಯಾವಾಗಲೂ ಆ ಪರಮೇಶ್ವರನ ಭಾವನೆಯಿಂದಲೇ ಭಾವಿತವಾಗಿರಬೇಕು.[44] (ಗೀ.) ಪರಮೇಶ್ವರನನ್ನು ಯಾವಾಗಲೂ ಭಾವಿಸುವಂತೆ ಮನಸ್ಸನ್ನು ಒತ್ತಾಯ ಮಾಡು ವದೆಂಬುದು ಮೊದಮೊದಲು ಬಲು ಕಷ್ಟವಾಗಿರುವದು ; ಆದರೆ ಒಂದೊಂದು ಸಲ ಪ್ರಯತ್ನವನ್ನು ಮಾಡುವಾಗಲೂ ಅದನ್ನು ಮಾಡುವ ಶಕ್ತಿಯೂ ನಮ್ಮಲ್ಲಿ ಬಲಪಡುತ್ತಾ

43 ಈ ಅಧ್ಯಾಯದಲ್ಲಿ ಇಲ್ಲಿಂದ ಮುಂದಕ್ಕೆ 43 ಎಂಬ ಸಂಖ್ಯೆಯನ್ನು ಹಾಕಿರುವ ಸ್ಥಳಗಳಲ್ಲೆಲ್ಲ ರಾಮಾನುಜಭಾಷ್ಯೋದಾಹೃತ ವಾಕ್ಯಕಾರರ ವಚನಗಳು ಸೂಚಿತವಾಗಿವೆ ; ಅವನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ.

ಬರುವದು. "ಎಲೈ ಕುಂತೀಕುಮಾರನೆ, ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಇದು ವಶವಾಗುವದು"[45] ಎಂದು **ಶ್ರೀಕೃಷ್ಣನು ಗೀತೆ**ಯಲ್ಲಿ ಅಪ್ಪಣೆಕೊಡಿಸಿರುತ್ತಾನೆ.

ಇನ್ನು ಕ್ರಿಯೆಗಳ[43] ವಿಚಾರ : ನಿತ್ಯಕರ್ಮಗಳಾದ **ಪಂಚಮಹಾಯಜ್ಞಾದಿ**ಗಳನ್ನು[1] ಎಂದಿನಂತೆ ಮಾಡುತ್ತಿರಬೇಕು.

ಇನ್ನು **ಕಲ್ಯಾಣವು**[43] ಎಂದರೆ ಮನಃಶುದ್ಧಿಯು. ಇದು ಎಲ್ಲಕ್ಕೂ ತಳಹದಿಯಾಗಿರುತ್ತದೆ ಈ ಬುಡಬಂಡೆಯ ಮೇಲೆಯೇ ಭಕ್ತಿಯೆಂಬ ಭವನವೆಲ್ಲ ನಿಂತಿರುವದು. ಹೊರಗಿನ ಶರೀರವನ್ನು ಶುಚಿಯಾಗಿಡುವದೂ ಆಹಾರವಿವೇಕವನ್ನು ಸಂಪಾದಿಸಿಕೊಳ್ಳುವದೂ ಸುಲಭ ; ಆದರೆ ಅಂತಃಶುದ್ಧಿಯೂ ಕಲ್ಯಾಣಕರ್ಮವೂ ಇಲ್ಲದಿದ್ದರೆ ಈ ಬಾಹ್ಯಾಚರಣೆಗಳಿಗೆ ಏನೇನೂ ಬೆಲೆಯೇ ಇರುವದಿಲ್ಲ. ಕಲ್ಯಾಣಕ್ಕೆ ಕಾರಣವಾಗಿರುವ ಶ್ರೀರಾಮಾನುಜಾಚಾರ್ಯರು ಹೇಳಿರುವ ಗುಣಗಳು ಯಾವದೆಂದರೆ '**ಸತ್ಯ**'-ನಿಜವನ್ನೇ ನುಡಿಯುವದು, '**ಆರ್ಜವ**'-ವಕ್ರಮಾರ್ಗವಿಲ್ಲದೆ ಒಂದೇ ಸಮವಾಗಿರುವದು, '**ದಯಾ**'-ಸ್ವಾರ್ಥಲಾಭವೇನೂ ಇಲ್ಲದಿದ್ದರೂ ಪರರಿಗೆ ಉಪಕಾರವನ್ನು ಮಾಡುತ್ತಿರುವದು, **ದಾನ**[2]-ದೇಶಕಾಲಗಳಿಗೆ ತಕ್ಕಂತೆ ಸತ್ಪಾತ್ರರಿಗೆ ಏನಾದರೂ ಧರ್ಮಾರ್ಥವಾಗಿ ಕೊಡುವದು, **ಅಹಿಂಸೆ**-ಮನೋವಾಕ್ಕಾಯಗಳಲ್ಲಿ ಯಾರೊಬ್ಬರಿಗೂ ಹಿಂಸೆಮಾಡದಿರುವದು, **ಅನಭಿಧ್ಯಾ**[3]- ಮತ್ತೊಬ್ಬರ ಸ್ವತ್ತಿಗೆ ಆಶೆಪಡದೆ ಇರುವದು, ಮತ್ತೊಬ್ಬರಿಂದ ತನಗೆ ಆದ ಅಪಕಾರವನ್ನು ಕುರಿತು ಚಿಂತಿಸದೆಯೂ ಇರುವದು.

---

1. **ಉದ್ಬೋಧನಸಂಸ್ಕರಣ**ದಲ್ಲಿ ಈ ಪ್ರಘಟ್ಟಕ್ಕೆ ಸೇರಿದಂತೆ ಕೆಲವು ವಾಕ್ಯಗಳು ಹೆಚ್ಚಾಗಿರುತ್ತವೆ : "ಆದ್ದರಿಂದ ಭಕ್ತನಾದವನು ಮೇಲೆ ಹೇಳಿದ ಎಲ್ಲಾ ಗುಣಗಳನ್ನೂ ಸಂಪಾದಿಸಿಕೊಳ್ಳಬೇಕು ;ಇವು ಪರಭಕ್ತಿಯನ್ನು ಸಂಪಾದಿಸುವದಕ್ಕೆ ಅತ್ಯವಶ್ಯವಾಗಿರುತ್ತವೆ. ಅವನು ಕೆಲವು ಶಾಸ್ತ್ರಗಳಲ್ಲಿ ಹೇಳುವ ಕರ್ಮರೂಪವಾದ ಯಜ್ಞಗಳನ್ನು ಎಂದಿಗೂ ಮಾಡಬಾರದು; ಏಕೆಂದರೆ ಅವುಗಳ ಉದ್ದೇಶವೆಲ್ಲ ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ದೊರೆಯುವ ವಿಷಯಗಳನ್ನು ಉಪಭೋಗಿಸುವದೇ ಆಗಿರುತ್ತದೆ, ಅವುಗಳಿಂದ ಹೆಚ್ಚು ಹೆಚ್ಚು ಬಂಧವೇ ಆಗಿ ಈಶ್ವರನಿಗೆ ಇನ್ನೂ ದೂರವಾಗಿರಿಸುತ್ತದೆ". ಕಾಮ್ಯಕರ್ಮಗಳನ್ನು ಬಿಡಬೇಕೆಂಬುದೇ ಈ ವಾಕ್ಯಗಳ ತಾತ್ಪರ್ಯವಿರುವಂತೆ ತೋರುತ್ತದೆ. ಆದರೆ ಈ ವಾಕ್ಯಗಳಿಗೆ ಸ್ವಾಮಿಯವರು ಉದಾಹರಿಸಿರುವ ಮೂಲಪ್ರಮಾಣವಾದ ರಾಮಾನುಜಭಾಷ್ಯದಲ್ಲಿ ಯಾವ ಆಧಾರವೂ ಸಿಕ್ಕುವದಿಲ್ಲ. ಪಂಚಮಹಾಯಜ್ಞವೇ ಮುಂತಾದವುಗಳನ್ನು ಬಿಡದೆ ಮಾಡುತ್ತಿರಬೇಕೆಂದಷ್ಟೇ ಅಲ್ಲಿರುತ್ತದೆ. ಈ ಐದು ಯಜ್ಞಗಳು ಯಾವವೆಂದರೆ : ಬ್ರಹ್ಮಯಜ್ಞ-ವೇದಶಾಸ್ತ್ರಗಳನ್ನು ಓದುವದು ; ದೇವಯಜ್ಞ-ದೇವತೆಗಳನ್ನು ಪೂಜಿಸುವದು; ಪಿತೃಯಜ್ಞ -ಶ್ರಾದ್ಧತರ್ಪಣಾದಿಗಳನ್ನು ಮಾಡುವದು; ಭೂತಯಜ್ಞ-ಬಲಿಹರಣ; ಮನುಷ್ಯಯಜ್ಞ-ಅತಿಥಿಸತ್ಕಾರ.

2. ಸಂಸ್ಕೃತದಲ್ಲಿರುವ ಈ ಶಬ್ದವು ಅನುವಾದದಲ್ಲಿ ಹೇಗೋ ಕೈಬಿಟ್ಟು ಹೋಗಿರುತ್ತದೆ.

3. "ಅಭಿಧ್ಯಾ" ಎಂದು ಇಂಗ್ಲಿಷ್ ಅನುವಾದದಲ್ಲಿ ಬಿದ್ದಿರುವದು ಲೇಖಕರ ಕೈತಪ್ಪಿನಿಂದ.

ಈ ಪಟ್ಟಿಯಲ್ಲಿರುವ ಅಹಿಂಸೆಯನ್ನು ಕುರಿತು ಸ್ವಲ್ಪ ವಿಶೇಷವಿಚಾರವನ್ನು ಮಾಡುವದಗತ್ಯವು. ಈ ಅಹಿಂಸೆಯೆಂಬ ಕರ್ತವ್ಯಕರ್ಮವು ಸಕಲಪ್ರಾಣಿಗಳಿಗೂ ಸಂಬಂಧಪಟ್ಟಿದ್ದಾಗಿರಬೇಕೆಂಬುದು ನಿತ್ಯನಿಯಮವಾಗಿರುತ್ತದೆ. ಕೆಲವರು ತಿಳಿದುಕೊಂಡಿರುವಂತೆ ಮನುಷ್ಯರನ್ನು ಮಾತ್ರ ಹಿಂಸೆಪಡಿಸದೆ ಇದ್ದು ಮೂಗುಪ್ರಾಣಿಗಳಲ್ಲಿ ನಿರ್ದಯರಾಗಿರುವದೇನೂ ಅಹಿಂಸೆಯಲ್ಲ ; ಮತ್ತೆ ಕೆಲವರು ತಿಳಿದುಕೊಂಡಿರುವಂತೆ ನಾಯಿಗಳನ್ನೂ ಬೆಕ್ಕುಗಳನ್ನೂ ಸಾಕುತ್ತಾ ಇರುವೆಗಳಿಗೆ ಸಕ್ಕರೆಯನ್ನು ಉದುರಿಸುತ್ತಿದ್ದು ಒಡಹುಟ್ಟಿದವರಾದ ಮನುಷ್ಯರನ್ನು ಮಾತ್ರ ತನಗೆ ತೋಚಿದಂತೆ ಚಿತ್ರಹಿಂಸೆಗೊಳಿಸುವದೂ ಅಹಿಂಸೆಯಾಗಲಾರದು. ಈ ಲೋಕದಲ್ಲಿ ಪ್ರತಿಯೊಂದು ಉತ್ತಮಾಭಿಪ್ರಾಯವನ್ನೂ ಅತಿಯಾಗಿ ಆಚಾರದಲ್ಲಿ ತಂದು ಜನರಿಗೆ ಅಸಹ್ಯವಾಗುವಂತೆ ಮಾಡಿಬಿಡಬಹುದೆಂಬುದನ್ನು ಕಂಡರೆ ಆಶ್ಚರ್ಯವಾಗುತ್ತದೆ. ಯಾವ ಸದಾಚಾರವನ್ನೇ ಆಗಲಿ, ಧರ್ಮಶಾಸ್ತ್ರದ ಅಕ್ಷರಾರ್ಥವನ್ನು ಹಿಡಿದು ಅತಿಗೆ ತಂದರೆ ಅದೇ ಒಂದು ದೊಡ್ಡ ದುರಾಚಾರವಾಗಿ ಪರಿಣಮಿಸುತ್ತದೆ. ಕೆಲವು ಮತವಿಭಾಗಗಳಿಗೆ ಸೇರಿದ ಸಂನ್ಯಾಸಿಗಳು ತಮ್ಮ ಮೈಯು ನಾರುತ್ತಿದ್ದರೂ ಮೈಮೇಲಿನ ಕ್ರಿಮಿಗಳು ಸತ್ತಾವೆಂದು ಸ್ನಾನವನ್ನೇ ಮಾಡುವದಿಲ್ಲ ; ನೆರೆಯವರಿಗೆ ತಮ್ಮ ದೆಸೆಯಿಂದ ಅನನುಕೂಲವೂ ವ್ಯಾಧಿಗಳೂ ಸಂಭವಿಸುವವೆಂಬುದು ಎಂದಿಗೂ ಅವರ ತಲೆಗೆ ಹತ್ತುವದಿಲ್ಲ ! ಸದ್ಯಕ್ಕೆ ಈ ಪಂಗಡಗಳು ವೈದಿಕಧರ್ಮಕ್ಕೆ ಸೇರಿದವುಗಳಲ್ಲವೆಂಬುದೊಂದು ಸಮಾಧಾನಕರವಾದ ವಿಷಯ.

ಅಸೂಯೆಯಿಲ್ಲದಿರುವದೇ ಅಹಿಂಸೆಗೆ ಸಾಕ್ಷಿ. ತತ್ಕಾಲಕ್ಕೆ ಹಾಗೆ ತೋಚಿದ್ದರಿಂದಲೋ, ಯಾವದೋ ಒಂದು ಮೂಢಭಕ್ತಿಗೆ ಕಟ್ಟುಬಿದ್ದೋ, ಅಥವಾ ಪುರೋಹಿತರ ಕಾಟಕ್ಕೋ, ಮಹಾಧರ್ಮಕಾರ್ಯವನ್ನಾಗಲಿ ಮಹಾದಾನವನ್ನಾಗಲಿ ಯಾರು ಬೇಕಾದರೂ ಮಾಡಬಹುದು. ಆದರೆ ಯಾರೊಬ್ಬರ ಮೇಲೂ ಹೊಟ್ಟೆಯಕಿಚ್ಚಿಲ್ಲದವನೇ ನಿಜವಾದ ಲೋಕಬಾಂಧವನು. ಪ್ರಪಂಚದಲ್ಲಿ ಕೆಲವರು ದೊಡ್ಡವರು ಎನ್ನಿಸಿಕೊಂಡಿರುವರಷ್ಟೆ ; ಅವರಲ್ಲಿ ಅನೇಕರು ಯಾವದೋ ಒಂದು ಸಣ್ಣ ಪದವಿಗೋ, ಯಾವದೋ ಒಂದು ಸಣ್ಣ ಹೆಸರುವಾಸಿಗೋ, ಇಲ್ಲದಿದ್ದರೆ ಕೆಲವು ಚಿನ್ನದ ಚೂರುಗಳಿಗೋಸ್ಕರವೋ, ಒಬ್ಬರ ಮೇಲೊಬ್ಬರು ಅಸೂಯೆ ಪಡುವದು ಕಂಡುಬರುತ್ತದೆ. ಕೇವಲ ಸಸ್ಯಾಹಾರಿಯಾಗಿದ್ದರೂ ಈ ಅಸೂಯೆಯು ಹೃದಯದಲ್ಲಿರುವವರೆಗೆ ಅಹಿಂಸೆಯನ್ನು ಪೂರ್ಣವಾಗಿ ಸಂಪಾದಿಸಿದಂತೆ ಆಗುವದಿಲ್ಲ. ಹಸುವು ಮಾಂಸಭಕ್ಷಣಮಾಡುವದಿಲ್ಲ, ಕುರಿಯೂ ಮಾಡುವದಿಲ್ಲ; ಆದಮಾತ್ರದಿಂದ ಅವು ಮಹಾಯೋಗಿಗಳೆಂದೂ ದೊಡ್ಡ ಅಹಿಂಸಕಪ್ರಾಣಿಗಳೆಂದೂ ಎಣಿಸಿಕೊಂಡಾವೇನು ? ಎಂಥ ಮೂರ್ಖನಾದರೂ ಯಾವದಾದರೊಂದು ಆಹಾರವನ್ನು ತಿನ್ನದೆ ಬಿಟ್ಟುಬಿಡಬಹುದು ;

ಇಷ್ಟುಮಾತ್ರದಿಂದ ಅವನು ಕೇವಲ ಸಸ್ಯಾಹಾರಿಗಳಾದ ಪಶುಗಳಿಗಿಂತಲೂ ಹೆಚ್ಚೆಂದು ಹೇಳುವದಕ್ಕೆ ಆಗಲಾರದಷ್ಟೆ? ವಿಧವೆಯರನ್ನೂ ದಿಕ್ಕಿಲ್ಲದ ಮಕ್ಕಳನ್ನೂ ಕನಿಕರವಿಲ್ಲದೆ ವಂಚಿಸುತ್ತಾ ಹಣಕ್ಕಾಗಿ ಮಹಾಪಾತಕಗಳನ್ನಾದರೂ ಮಾಡುತ್ತಿರುವವನು ಯಾವಾಗಲೂ ಬರಿಯ ಹುಲ್ಲನ್ನೇ ತಿಂದು ಜೀವಿಸಿಕೊಂಡಿರಲಿ, ಅವನು ಪಶುಪ್ರಾಣಿಗಳಿಗಿಂತ ಕಡೆಯೇ ಸರಿ. ಯಾವನು ಯಾರೊಬ್ಬರನ್ನೇ ಆಗಲಿ, ಹಿಂಸೆಮಾಡಬೇಕೆಂಬ ಯೋಚನೆಯನ್ನು ಕೂಡ ಮನಸ್ಸಿನಲ್ಲಿ ತಾರದೆ ತನ್ನ ಶತ್ರುವಿಗೇ ಕಲ್ಯಾಣವಾದರೂ ನೋಡಿ ಹಿಗ್ಗುತ್ತಿರುವನೋ, ಅವನು ತನ್ನ ಇಡಿಯ ಜೀವಮಾನದಲ್ಲಿ ಪ್ರತಿಯೊಂದು ದಿನವೂ ಹಂದಿಯ ಮಾಂಸವನ್ನೇ ತಿನ್ನುತ್ತಿದ್ದರೂ ಆತನೇ ಭಕ್ತನು, ಆತನೇ ಯೋಗಿಯು, ಆತನೇ ಸರ್ವರಿಗೂ ಗುರುವು.

ಆದಕಾರಣ ಬಾಹ್ಯಾಚರಣೆಗಳೆಲ್ಲ ಅಂತಃಶುದ್ಧಿಯನ್ನುಂಟುಮಾಡುವದಕ್ಕೆ ಮಾತ್ರ ಉಪಯೋಗಕರವಾಗಿರುವವೆಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು. ಬಾಹ್ಯಾಚಾರಗಳನ್ನು ಸ್ವಲ್ಪವೂ ಬಿಡದಹಾಗೆ ನಡೆಸುವದಕ್ಕೆ ಆಗದೆ ಇರುವಾಗ ಅಂತಃಶುದ್ಧಿಯೊಂದೇ ಇದ್ದರೂ ಸಾಕು. ಆದರೆ ನಿಜವಾದ, ಒಳಗಿನ ಧರ್ಮಸಾರವನ್ನು ಮರೆತು ಹೊರಗಿನ ಆಚಾರಗಳನ್ನೆಲ್ಲ ಸಾಂಪ್ರದಾಯಿಕ ರೀತಿಯಲ್ಲಿ ವಜ್ರಮುಷ್ಟಿಯಿಂದ ಹಿಡಿದುಕೊಂಡು ಪಟ್ಟುಬಿಡದೆ ಇರುವ ಮನುಷ್ಯನ ಅಥವಾ ಜನಾಂಗದ ಗತಿಯು ದುರ್ಗತಿಯೇ ಸರಿ. ಒಳಗಿರುವ ಮನೋವೃತ್ತಿಯ ಬಹಿಃಸೂಚನೆಯಾಗಿರುವದರಿಂದಲೇ ಆಚಾರಗಳಿಗೆ ಬೆಲೆ ; ಅಂಥ ಸೂಚನೆಯನ್ನು ಮಾಡದೆ ಇರುವಾಗ ಅವುಗಳನ್ನು ಸ್ವಲ್ಪವೂ ಕನಿಕರವಿಲ್ಲದೆ ಕಾಲಲ್ಲಿ ತುಳಿದು ಹೊಸಕಿಹಾಕಿಬಿಡಬೇಕು.

ಭಕ್ತಿಯೋಗಕ್ಕೆ ಮುಂದಿನ ಸಾಧನವು **ಅನವಸಾದವು.** "ಈ ಆತ್ಮನು ಬಲಹೀನನಿಗೆ ಸಿಕ್ಕುವದಿಲ್ಲ" (ಮುಂ.)[46] ಎಂದು ಶ್ರುತಿಯು ಸಾರುತ್ತಿರುವದು. ಇಲ್ಲಿ ಬಲಹೀನತೆಯೆಂದರೆ ಶಾರೀರದೌರ್ಬಲ್ಯ, ಮನೋದೌರ್ಬಲ್ಯ-ಎರಡನ್ನೂ ತೆಗೆದುಕೊಳ್ಳಬೇಕು. ಬಲವಾಗಿ ಗಟ್ಟಿಮುಟ್ಟಾಗಿ ಇರುವವರೇ ಪರಮಾರ್ಥಕ್ಕೆ ತಕ್ಕ ಅಧಿಕಾರಿಗಳು, ತೆಳ್ಳಗೆ ಕೈಕಾಲು ಕದರು ಕಡ್ಡಿಯಾಗಿರುವ ಬಲಹೀನರಿಂದೇನಾಗುತ್ತದೆ ? ಯಾವದಾದರೊಂದು ಯೋಗದ ಅಭ್ಯಾಸ ದಿಂದ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಅವ್ಯಕ್ತವಾಗಿರುವ ಶಕ್ತಿವಿಶೇಷಗಳು ಸ್ವಲ್ಪಮಟ್ಟಿಗೆ ಉದ್ಬೋಧವಾದರೆ ಸಾಕು, ಇಂಥವರು ನುಗ್ಗುನುಚ್ಚಾಗಿಬಿಡುವರು. 'ಯುವಕನಾಗಿ, ಆರೋಗ್ಯ ವಂತನಾಗಿ, ಬಲಿಷ್ಠನಾಗಿ'[47](ತೈ.) ಇರುವಾತನೇ ಪರಮಾರ್ಥವನ್ನು ಸಾಧಿಸಲಾಪನು. ಆದ್ದರಿಂದ ಶರೀರದಾರ್ಢ್ಯವು ಅತ್ಯಂತ ಅವಶ್ಯವಾಗಿರುತ್ತದೆ. ಇಂದ್ರಿಯಗಳನ್ನು ನಿಗ್ರಹ ಮಾಡುವದಕ್ಕೆ ಪ್ರಯತ್ನಮಾಡುವಾಗ ಅದರಿಂದುಂಟಾಗಬಹುದಾದ ಪ್ರತಿಘಾತದ ಹೊಡೆತವನ್ನು ತಡೆದುಕೊಳ್ಳುವದಕ್ಕೆ ಬಲವಾದ ಶರೀರವೇಬೇಕು. ಭಕ್ತನಾಗಬೇಕೆನ್ನುವವನು ಬಲಾಢ್ಯನಾಗಿರಬೇಕು,

ಆರೋಗ್ಯವಂತನಾಗಿರಬೇಕು. ತೀರ ದುರ್ಬಲರಾಗಿರುವವರು ಯಾವ ದಾದರೊಂದು ಯೋಗವನ್ನು ಕೈಕೊಂಡರೆ ಸರಿ, ಅವರಿಗೆ ಚಿಕಿತ್ಸೆಮಾಡಲಾಗದಂಥ ಒಂದು ಬೇನೆ ಬಂದುಬಿಡುವದು; ಇಲ್ಲದಿದ್ದರೆ ಅವರ ಮನಸ್ಸೇ ಶಕ್ತಿಗುಂದುವದು. ಬೇಕೆಂದು ಶರೀರವನ್ನು ಬಲಹೀನವಾಗಿಮಾಡಿಕೊಳ್ಳುವದು ಆತ್ಮಸಾಕ್ಷಾತ್ಕಾರಕ್ಕೆ ಎಂದಿಗೂ ವಿಹಿತವಾದ ವೈದ್ಯವಲ್ಲ.

ಹೀಗೆಯೇ, ಮನೋದೌರ್ಬಲ್ಯವಿರುವವರಿಗೂ ಆತ್ಮನನ್ನು ಸೇರುವದು ಸಾಧ್ಯವಿಲ್ಲ. ಭಕ್ತನಾಗಬೇಕೆಂದು ಬಯಸುವಾತನು ಮನಸ್ಸಿನಲ್ಲಿ ಆನಂದದಿಂದಿರಬೇಕು. ಪಶ್ಚಿಮ ದೇಶ ಗಳಲ್ಲಿರುವ ಭಾವನೆಯೇನೆಂದರೆ, ಧರ್ಮಿಷ್ಠನಾದವನು ಎಂದಿಗೂ ಮುಗುಳುನಗೆಯನ್ನು ನಗಬಾರದು ; ಅವನ ಮುಖದಮೇಲೆ ಕಪ್ಪುಮೋಡದಂತೆ ಯಾವದೋ ಒಂದು ಆವರಣಬಿದ್ದಂತೆ ತೋರುತ್ತಿರಬೇಕು; ಮುಖವಂತೂ ಸುಕ್ಕುಬಿದ್ದು ದವಡೆಗಳು ಒಂದ ಕ್ಕೊಂದು ಹೊಂದಿಕೊಂಡಂತೆಯೇ ಇರಬೇಕು ! ಹೀಗೆ ಕಂದಿದ ಶರೀರವೂ ಜೋಲು ಮುಖವೂ ಇರುವವರು ವೈದ್ಯನ ಚಿಕಿತ್ಸೆಗೆ ಅರ್ಹರೇ ಹೊರತು ಎಂದಿಗೂ ಯೋಗಿಗಳೆನಿಸಿ ಕೊಳ್ಳಲಾರರು. ಬಿಡದೆ ಸಾಧನೆಮಾಡುವದಕ್ಕೆ ದೈನ್ಯವಿಲ್ಲದ ಮನಃಸ್ಥಿತಿಯೇ ಬೇಕು. ಮನಸ್ಸಿನ ಬಲವೊಂದಿದ್ದರೆ ಸಾವಿರಾರು ಕಷ್ಟಗಳು ಬಂದೊದಗಿದರೂ ಹೇಗೋ ಅದು ತನಗೊಂದು ಮಾರ್ಗವನ್ನು ಮಾಡಿಕೊಳ್ಳುವದು. ಹೀಗೆ ಮಾಯಾಜಾಲವನ್ನು ಕತ್ತರಿಸಿಕೊಂಡು ಸಾಧನ ಮಾರ್ಗವನ್ನು ಏರ್ಪಡಿಸಿಕೊಳ್ಳುವದೆಂಬುದು ಎಲ್ಲಕ್ಕಿಂತಲೂ ಕಷ್ಟತಮವಾದ ಕಾರ್ಯವು ; ಈ ಕಾರ್ಯವು ಮಹಾಸಂಕಲ್ಪವಂತರಿಗೆ ಮಾತ್ರ ಮೀಸಲಾದದ್ದು.

ಆದರೆ ಅತಿಹರ್ಷದಿಂದ ಉಬ್ಬದೆ ಇರುವಂತೆಯೂ ನೋಡಿಕೊಳ್ಳಬೇಕು. ಈ ಗುಣಕ್ಕೆ **ಅನುದ್ಧರ್ಷ**ವೆಂದು[43] ಹೆಸರು. ಅತಿಯಾಗಿ ವಿನೋದದಲ್ಲಿರುವದರಿಂದ ಗಂಭೀರವಾದ ವಿಚಾರಕ್ಕೆ ಅಯೋಗ್ಯತೆಯುಂಟಾಗುತ್ತದೆ ; ಇದೂ ಅಲ್ಲದೆ ಇದರಿಂದ ಮನಸ್ಸಿನ ಶಕ್ತಿಗಳೂ ವ್ಯರ್ಥವಾಗಿ ಕಂಡಕಡೆಗೆ ಚೆಲ್ಲಿಹೋಗುತ್ತವೆ. ಮನಸ್ಸಿನಲ್ಲಿ ಎಷ್ಟು ದೃಢಸಂಕಲ್ಪವಿರುವದೋ ಮನೋವಿಕಾರಗಳಿಗೆ ಒಳಗಾಗುವ ಸಂಭವವೂ ಅಷ್ಟು ಕಡಿಮೆಯಾಗಿರುವದು. ಅತಿದೈನ್ಯ ದಿಂದ ಚಿಂತಾಕ್ರಾಂತನಾಗಿರುವದು ಹೇಗೆ ಸರಿಯಲ್ಲವೋ ಹಾಗೆಯೇ ಅತಿಯಾಗಿ ಹರ್ಷಕ್ಕೆ ಒಳಗಾಗಿರುವದೂ ಸರಿಯಲ್ಲ. ಹೊಂದಿಕೆಯಾದ ಸಮತೆಯಲ್ಲಿರುವಂತೆ ಒಂದೇ ರೀತಿಯಾದ ಶಾಂತಸ್ಥಿತಿಯಲ್ಲಿದ್ದರೆ ಮಾತ್ರ ಧಾರ್ಮಿಕತತ್ತ್ವದ ಸಾಕ್ಷಾತ್ಕಾರವು ಸಾಧ್ಯವಾದೀತು.

ಭಗವಂತನಲ್ಲಿ ಭಕ್ತಿಯನ್ನಿಡುವದನ್ನು ಕಲಿಯುವದಕ್ಕೆ ಇದೇ ಮಾರ್ಗವು.

---

# 11. ವೈರಾಗ್ಯಸಾಧನ

**ಗೌಣ**ಭಕ್ತಿಯ ವಿಚಾರವು ಇಲ್ಲಿಗೆ ಮುಗಿಯಿತು. ಇನ್ನು ಪರಭಕ್ತಿಯೆಂಬ ಉತ್ತಮಭಕ್ತಿಯ ವಿಚಾರವನ್ನು ಪ್ರಾರಂಭಮಾಡಬೇಕು. ಈ ಪರಭಕ್ತಿಯ ನಿಷ್ಠೆಗೆ ಬೇಕಾದ ಒಂದಾನೊಂದು ಸಾಧನದ ವಿಚಾರವಾಗಿ ಕೆಲವು ಮಾತುಗಳನ್ನು ಈಗ ಹೇಳಬೇಕಾಗಿದೆ. ಇಂಥ ಸಾಧನಗಳೆಲ್ಲ ಚಿತ್ತಶುದ್ಧಿಗಾಗಿಯೇ ಹೇಳಿದವುಗಳಾಗಿವೆ. **ನಾಮಸ್ಮರಣೆ,** ಕರ್ಮಗಳು, ಪ್ರತೀಕಗಳು, ಮಂತ್ರತಂತ್ರಗಳು - ಇವೆಲ್ಲ ಚಿತ್ತಶುದ್ಧಿಗೋಸ್ಕರವೇ. ಇಂಥ ಶುದ್ಧಿಕಾರಕವಾದವುಗಳಲ್ಲೆಲ್ಲ ಅತ್ಯಂತ ಉತ್ತಮವಾದದ್ದು **ವೈರಾಗ್ಯ**ವು. ಇದರ ಶುದ್ಧಿಯಿಲ್ಲದೆ ಪರಭಕ್ತಿಯ ರಾಷ್ಟ್ರದಲ್ಲಿ ಕಾಲಿಡುವದು ಯಾರಿಗೂ ಸಾಧ್ಯವಿಲ್ಲ. ಇದನ್ನು ಕೇಳಿ ಅನೇಕರಿಗೆ ಭಯವಾಗಬಹುದು ; ಆದರೆ ಇದಿಲ್ಲದೆ ಧಾರ್ಮಿಕಭಾವನೆಯು ಎಂದಿಗೂ ಬೆಳೆಯುವದಿಲ್ಲ. ನಮ್ಮಲ್ಲಿ ಹೇಳಿರುವ ಯೋಗಗಳಿಗೆಲ್ಲ ಈ ವೈರಾಗ್ಯವೆಂಬುದು ಅಗತ್ಯವಾಗಿರುವದು. ಧರ್ಮಕ್ಕೆ ಪ್ರಥಮ ಸೋಪಾನವೂ ಅದರ ನಿಜವಾದ ಸಾರವೂ ಸರ್ವಸ್ವವೂ ಆಗಿರುವದು ಈ ವೈರಾಗ್ಯವೇ. ಧರ್ಮವೆಂದರೇ ವೈರಾಗ್ಯವು ಎಂದು ಕೂಡ ಹೇಳಬಹುದು. ಮನುಷ್ಯಜೀವನು ಪ್ರಾಪಂಚಿಕವಿಷಯಗಳಿಂದ ಹಿಂತಿರುಗಿ ಸೂಕ್ಷ್ಮ ವಿಚಾರಗಳಲ್ಲಿ ಪ್ರವೇಶಿಸುವದಕ್ಕೆ ಯಾವಾಗ ಪ್ರಯತ್ನಿಸುವನೋ ಎಂದರೆ ನಿಜವಾಗಿಯೂ ಆತ್ಮಸ್ವರೂಪನೇ ಆಗಿದ್ದು ಹೇಗೋ ಸ್ಥೂಲ ರೂಪವಾಗಿಯೂ ಭೌತಿಕವಸ್ತುವಿನ ರೂಪ ವಾಗಿಯೂ ಪರಿಣಮಿಸುತ್ತಿರುವ ಮಾನವನು ತಾನು ಇದರಿಂದ ಹಾಳಾಗುವೆನೆಂದೂ ಕೇವಲ ಜಡವಸ್ತುವಾಗಿಯೇ ಮಾರ್ಪಡುತ್ತಿರುವೆನೆಂದೂ ತಿಳಿದುಕೊಂಡು ಈ ಜಡವಸ್ತುವಿನಿಂದ ಯಾವಾಗ ಹಿಮ್ಮೆಟ್ಟುವನೋ ಆಗ ವೈರಾಗ್ಯವು ಪ್ರಾರಂಭವಾಗುವದು, ಆಗ ಧಾರ್ಮಿಕ ಭಾವನೆಯು ಬೆಳೆಯುವದಕ್ಕೆ ಪ್ರಾರಂಭವಾಗುವದು.[48]

**ಕರ್ಮಯೋಗಿ**ಗೆ ತಾನು ಮಾಡುವ ಕರ್ಮಗಳ ಫಲವನ್ನೆಲ್ಲ ತ್ಯಾಗಮಾಡುವದೇ ವೈರಾಗ್ಯವೆನಿಸುವದು. ಆತನು ತಾನು ಕಷ್ಟಪಟ್ಟು ಮಾಡುವದರ ಫಲದಲ್ಲಿ ಆಸಕ್ತನಾಗಿರು ವದಿಲ್ಲ; ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ತನ್ನ ಕರ್ಮಕ್ಕೆ ಆಗಬಹುದಾದ ಫಲವನ್ನು ಅವನು ಕಣ್ಣೆತ್ತಿಯೂ ನೋಡದೆ ಇರುವನು. ರಾಜಯೋಗಿಯಾದವನು ಪ್ರಕೃತಿ ಯೆಲ್ಲವೂ ಪುರುಷನಿಗೆ ಅನುಭವವನ್ನುಂಟುಮಾಡಿಕೊಡುವದಕ್ಕಾಗಿಯೇ ಇರುವದೆಂದೂ ಪುರುಷನು ತಾನು ಎಂದೆಂದಿಗೂ ಪ್ರಕೃತಿಗಿಂತ ಬೇರೆಯಾಗಿಯೇ ಇರುವೆನೆಂಬ ವಿವೇಕವನ್ನುಂಟುಮಾಡಿಕೊಳ್ಳುವದೇ ಈ ಅನುಭವಗಳಿಗೆಲ್ಲ ಫಲವೆಂದೂ ತಿಳಿದಿರುವನು. ತಾನು ಅನಾದಿಯಾಗಿ ಆತ್ಮನಾಗಿಯೇ

48 ಕಠೋಪನಿಷತ್ತಿನ ಸೂಚನೆ.

ಇರುವೆನೆಂದೂ ಪ್ರಕೃತಿಯಲ್ಲವೆಂದೂ ಈ ಪ್ರಕೃತಿಪುರುಷಸಂಯೋಗವೆಂಬುದು ಕೆಲವು ಕಾಲ ಮಾತ್ರ ಇರುವದೆಂದೂ-ಅದು ಕೆಲವುಕಾಲ ಮಾತ್ರವೇ ಇರುವದು ಸಾಧ್ಯವೆಂದೂ - ಜೀವನು ತಿಳಿದುಕೊಳ್ಳಬೇಕಾಗಿರುವದು. ರಾಜಯೋಗಿಯಾದವನು ವೈರಾಗ್ಯದ ಅಭ್ಯಾಸವನ್ನು ತನ್ನ ಪ್ರಪಂಚಾನುಭವದಿಂದಲೇ ಕಲಿತುಕೊಳ್ಳುತ್ತಾನೆ. **ಜ್ಞಾನಯೋಗಿ**ಯು ಅನುಸರಿಸಬೇಕಾದ ವೈರಾಗ್ಯವು ಇವೆಲ್ಲಕ್ಕಿಂತಲೂ ಕಠಿನವಾಗಿರುವದು. ಏಕೆಂದರೆ ಇಷ್ಟು ಗಡುತರವಾಗಿ ಕಾಣುವ ಈ ಪ್ರಪಂಚವೆಲ್ಲ ಕೇವಲ ಮಾಯಿಕವಾದದ್ದೆಂದು ಆತನು ಮೊಟ್ಟಮೊದಲೇ ಮನಗಾಣಬೇಕಾಗಿರುವದು[1] ಈ ಪ್ರಪಂಚದಲ್ಲಿ ಕಾಣಬರುವ ಶಕ್ತಿವಿಶೇಷವೆಲ್ಲ ಆತ್ಮನಿಗೆ ಸೇರಿದ್ದೇ ಹೊರತು ಪ್ರಕೃತಿಗೆ ಸೇರಿದ್ದಲ್ಲವೆಂದು ತಿಳಿದುಕೊಳ್ಳಬೇಕಾಗಿರುವದು. ಇನ್ನೂ ವಿಚಾರಕ್ಕೆ ಕಾಲಿಡುವಾಗಲೇ ಎಲ್ಲ ಬಗೆಯ ಅರಿವೂ, ಎಲ್ಲಾ ಬಗೆಯ ಅನುಭವವೂ, ಆತ್ಮನಲ್ಲಿರುವದೇ ಹೊರತು ಪ್ರಕೃತಿಯಲ್ಲಿಲ್ಲವೆಂದು ಆತನು ಅರಿಯಬೇಕಾಗಿರುವದು. ಹೀಗಿರುವದರಿಂದ ಅವನು ಕೇವಲ ವಿಚಾರಬಲದಿಂದಾದ ನಿರ್ಣಯದಿಂದ ಒಂದೇ ಸಲಕ್ಕೆ ಸೃಷ್ಟಿಯ ಬಂಧವನ್ನು ಕಿತ್ತೊಗೆದು ಬಿಡುಗಡೆಯನ್ನು ಹೊಂದಬೇಕಾಗಿರುವದು. ಅವನು ಪ್ರಕೃತಿಯನ್ನೂ ಪ್ರಾಕೃತಿಕವಸ್ತುವನ್ನೂ ಎಲ್ಲವನ್ನೂ ಹಾಗೆಯೇ ಕೈಬಿಟ್ಟು ಅವುಗಳನ್ನೆಲ್ಲ ಮಾಯಗೊಳಿಸಿ ತಾನೇತಾನಾಗಿ ನಿಲ್ಲುವದಕ್ಕೆ ಪ್ರಯತ್ನಿಸುತ್ತಾನೆ !

ವೈರಾಗ್ಯಗಳಲ್ಲೆಲ್ಲ **ಭಕ್ತಿಯೋಗದ ವೈರಾಗ್ಯ**ವೇ ಅತ್ಯಂತಸ್ವಾಭಾವಿಕವಾದದ್ದು. ಇದರಲ್ಲಿ ಯಾವ ಬಲಾತ್ಕಾರವೂ ಇರುವದಿಲ್ಲ, ಯಾವದನ್ನೂ ನಮ್ಮಿಂದಾಚೆಗೆ ಕಿತ್ತೊಗೆಯಬೇಕಾದದ್ದಿರುವದಿಲ್ಲ, ಯಾವದನ್ನೂ ನಾವು ಬಲಾತ್ಕಾರದಿಂದ ಬಿಟ್ಟು ಅಗಲಬೇಕಾದದ್ದು ಇರುವದಿಲ್ಲ. ಭಕ್ತನ ವೈರಾಗ್ಯವೆಂಬುದು ಸುಲಭವಾಗಿ, ಸಲೀಸಾಗಿ, ಸುಖವಾಗಿ ಪ್ರವಹಿಸುತ್ತಾ ನಮ್ಮ ಸುತ್ತಮುತ್ತ ಕಾಣುತ್ತಿರುವ ಘಟನೆಗಳಂತೆಯೇ ಸ್ವಾಭಾವಿಕವಾಗಿರುವದು. ಇಂಥ ವೈರಾಗ್ಯವು ಪ್ರತಿದಿನವೂ ನಮ್ಮ ಸುತ್ತುಮುತ್ತಲೂ ನಮ್ಮ ಕಣ್ಣಿಗೆ ಬೀಳುತ್ತಲೇ ಇರುವದು, ಆದರೆ ಅಲ್ಲಿ ಬಹುಮಟ್ಟಿಗೆ ಇದರ ಸ್ವರೂಪವನ್ನು ಅಣಕಿಸುವ ಕೀಳುಚಿತ್ರಗಳೇ ಕಾಣಬರುವವು. ಉದಾಹರಣೆಗೆ ಒಬ್ಬ ಪುರುಷನು ಒಬ್ಬ ಸ್ತ್ರೀಯನ್ನು ಪ್ರೀತಿಸುವದಕ್ಕೆ ಪ್ರಾರಂಭಿಸುತ್ತಾನೆಂದು ಇಟ್ಟುಕೊಳ್ಳಿರಿ. ಕೆಲವು ದಿನಗಳಮೇಲೆ ಅವನು ಮತ್ತೊಬ್ಬಳಮೇಲೆ ಪ್ರೇಮವಿಟ್ಟು ಮೊದಲಿನವಳನ್ನು ಕೈಬಿಡುತ್ತಾನೆ. ಆಕೆಯು ಮೆಲ್ಲಗೆ, ಸುಲಭವಾಗಿ, ಆಕೆಯ ಕೊರತೆಯು ಅವನ ಮನಸ್ಸಿಗೆ ತಟ್ಟದಂತೆಯೇ ಅವನ ಮನಸ್ಸನ್ನು

1. ಇಲ್ಲಿ ಮಾಯಿಕವೆಂಬ ಮಾತಿಗೆ ಅಕ್ಷರಾರ್ಥವನ್ನು ಕಲ್ಪಿಸಬಾರದು ; ಏಕೆಂದರೆ ನಾಮರೂಪ ಪ್ರಪಂಚವೆಲ್ಲವೂ ತನ್ನ ರೂಪದಿಂದ ಮಾಯಿಕವೂ ಬ್ರಹ್ಮರೂಪದಿಂದ ಆಗಿರುವದೆಂಬುದೇ ಪರಮಜ್ಞಾನವು.

ಬಿಟ್ಟುಹೋಗುವಳು. ಹೀಗೆಯೇ ಒಬ್ಬ ಸ್ತ್ರೀಯು ಒಬ್ಬ ಪುರುಷನನ್ನು ಪ್ರೀತಿಸುತ್ತಿರುತ್ತಾಳೆ, ಆಮೇಲೆ ಮತ್ತೊಬ್ಬನನ್ನು ಮೋಹಿಸುವದಕ್ಕೆ ತೊಡಗುತ್ತಾಳೆ. ಆಗ ಮೊದಲನೆಯ ಪುರುಷನು ಕೇವಲ ಸ್ವಾಭಾವಿಕರೀತಿಯಲ್ಲಿಯೇ ಆಕೆಯ ಮನದಿಂದ ದೂರವಾಗುವನು. ಒಬ್ಬನು ತನ್ನ ನಗರವನ್ನು ಪ್ರೀತಿಸುತ್ತಿದ್ದು ಆಮೇಲೆ ತನ್ನ ದೇಶದಮೇಲೆ ಪ್ರೀತಿಯಿಡುವದಕ್ಕೆ ಪ್ರಾರಂಭಿಸುವಾಗ, ಆ ಸಣ್ಣ ನಗರದಮೇಲೆ ಅವನಿಗಿದ್ದ ಪ್ರೇಮವು ಮೆಲ್ಲಗೆ ಸ್ವಾಭಾವಿಕವಾಗಿಯೇ ಜಾರಿಹೋಗುವದು. ಹೀಗೆಯೇ ಒಬ್ಬನು ಇಡಿಯ ಪ್ರಪಂಚವನ್ನೇ ಪ್ರೀತಿಸುವದಕ್ಕೆ ಕಲಿತುಕೊಂಡರೆ ಅವನಿಗಿದ್ದ ಮಿಗಿಲಿಲ್ಲದ ದುರಭಿಮಾನದ ದೇಶಭಕ್ತಿಯು - ಅವನಿಗೆ ಯಾವ ತೊಂದರೆಯನ್ನೂ ಕೊಡದೆಯೇ ಯಾವ ಬಲಾತ್ಕಾರದ ಗುರುತನ್ನೂ ತೋರದೆಯೇ ಹಾರಿಹೋಗುವದು. ಅಸಂಸ್ಕಾರಿಯಾದವನಿಗೆ ಇಂದ್ರಿಯಗಳಿಂದಾಗುವ ವಿಷಯಭೋಗಗಳಲ್ಲಿ ಅತ್ಯಂತ ಪ್ರೀತಿಯಿರುವದು, ಆತನು ಸಂಸ್ಕಾರಿಯಾದ ಹಾಗೆಲ್ಲ ವಿದ್ಯಾನಂದದ ಪ್ರೇಮವು ಹೆಚ್ಚಿ ವಿಷಯಸುಖದ ಆಸೆಯು ಕಡಿಮೆಕಡಿಮೆಯಾಗುತ್ತಾ ಹೋಗುವದು. ನಾಯಿಯಾಗಲಿ ತೋಳವಾಗಲಿ ತಿಂಡಿಯನ್ನು ತಿನ್ನುವಾಗ ತೋರಿಸುವ ಔತ್ಸುಕ್ಯವನ್ನೂ, ಆನಂದವನ್ನೂ ಅನುಭವಿಸುವದು ಯಾವ ಮನುಷ್ಯನಿಗೂ ಸಾಧ್ಯವಿಲ್ಲ; ಆದರೆ ಬುದ್ಧಿಯ ಅನುಭವದಿಂದಲೂ ಸಾಹಸಗಳಿಂದಲೂ ಮನುಷ್ಯನಿಗೆ ಸಿಕ್ಕುವ ಸುಖವು ನಾಯಿಗೆ ಎಂದಿಗೂ ದೊರೆಯಲಾರದು. ಮೊದಮೊದಲು ಸುಖವು ವಿಷಯೇಂದ್ರಿಯ ಸಂಯೋಗದಿಂದಲೇ ಆಗಬೇಕಾಗಿರುವದು, ಆದರೆ ಪ್ರಾಣಿಯು ಹೆಚ್ಚಿನ ಜನ್ಮವನ್ನು ಪಡೆದೊಡನೆಯೇ ಆ ಕೀಳ್ತರದ ಸುಖದ ಜೋರೂ ಕಡಿಮೆಯಾಗುವದು, ಮಾನವ ಸಮಾಜದಲ್ಲಿ ಕೂಡ ಮನುಷ್ಯನು ಪಶುಸ್ವಭಾವಕ್ಕೆ ಎಷ್ಟರಮಟ್ಟಿಗೆ ಹತ್ತಿರವಿರುವನೋ ಅಷ್ಟರಮಟ್ಟಿಗೆ ಅವನಿಗೆ ಇಂದ್ರಿಯಗಳಿಂದಾಗುವ ಸುಖವೂ ಬಲವಾಗಿರುವದು ; ಎಷ್ಟೆಷ್ಟುಮಟ್ಟಿಗೆ ಮೇಲಿನ ಅಂತಸ್ತಿನಲ್ಲಿದ್ದು ಸಂಸ್ಕಾರಿಯಾಗಿರುವನೋ ಅಷ್ಟು ಬುದ್ಧಿಯ ಕಾರ್ಯಗಳಲ್ಲಿಯೂ ಇತರ ಸೂಕ್ಷ್ಮ ವಿಚಾರಗಳಲ್ಲಿಯೂ ಆತನಿಗೆ ಅಷ್ಟಷ್ಟು ಹೆಚ್ಚು ಸುಖವುಂಟಾಗುವದು. ಹೀಗೆಯೇ ಬುದ್ಧಿಯ ಅಂತಸ್ತನ್ನೂ ಮೀರಿ ಬರಿಯ ವಿಚಾರಸ್ಥಿತಿಯಿಂದಾಚೆಗೆ ಹೋಗಿ ಸೇರಿದಾಗ, ಎಂದರೆ ಧಾರ್ಮಿಕ ಭಾವನೆಯ ಮತ್ತು ದೈವಿಕಶಕ್ತಿಪಾತದ ಅಂತಸ್ತಿಗೆ ಮುಟ್ಟಿದಾಗ, ಅವನಿಗೆ ಎಂಥ ಆನಂದವುಂಟಾಗುವದೆಂದರೆ, ಅದಕ್ಕೆ ಹೋಲಿಸಿದರೆ ಇಂದ್ರಿಯಸುಖವು ಹಾಗಿರಲಿ, ಬುದ್ಧಿಜನ್ಯವಾದ ಸುಖವು ಕೂಡ ಏತೇತಕ್ಕೂ ಬಾರದ್ದೆನಿಸುವದು. ಚಂದ್ರನು ಬೆಳಗುವದಕ್ಕೆ ಮೊದಲುಮಾಡಿದರೆ ನಕ್ಷತ್ರಗಳೆಲ್ಲ ಮಂಕಾಗುವವು ; ಆದರೆ ಸೂರ್ಯನು ತನ್ನ ಪ್ರಕಾಶವನ್ನು ಬೀರುತ್ತಾ ಉದಯಿಸಿದನೆಂದರೆ ಚಂದ್ರನ ಕಾಂತಿಯೂ ಮಸುಳಿಸಿಹೋಗುವದು. ಭಕ್ತಿಯ ಪ್ರಾಪ್ತಿಗೆ ಅವಶ್ಯವಾದ ವೈರಾಗ್ಯವು ಬರುವದಕ್ಕೆ ಯಾವದೊಂದನ್ನೂ ನಾಶಮಾಡ-

ಬೇಕಾದದ್ದಿರುವದಿಲ್ಲ ; ಆದರೆ ಬರುಬರುತ್ತಾ ಹೆಚ್ಚು ಹೆಚ್ಚು ಪ್ರಕಾಶವಾಗುತ್ತಿರುವ ತೇಜಸ್ಸಿನ ಎದುರಿಗೆ ಸಣ್ಣಪುಟ್ಟ ತೇಜಸ್ಸುಗಳು ತಾವೇ ಮಂಕುಮಂಕಾಗುತ್ತಾ ಕೊನೆಗೆ ಸಂಪೂರ್ಣವಾಗಿ ಕಣ್ಮರೆಯಾಗುವಂತೆಯೇ ಇಂದ್ರಿಯಜನ್ಯ ಸುಖದಲ್ಲಿಯೂ ಬುದ್ಧಿಜನ್ಯಸುಖದಲ್ಲಿಯೂ ಇರುವ ಪ್ರೀತಿಯು ಸಾಕ್ಷಾತ್ಪರಮಾತ್ಮನ ಪ್ರೇಮ ದಿಂದ ತನಗೆ ತಾನೇ ಮಂಕಾಗಿ ಮೂಲೆಗೆ ಮುದುರಿಕೊಳ್ಳುವದು.

ಈ ಈಶ್ವರಪ್ರೇಮವು ಬೆಳೆಯುತ್ತಬೆಳೆಯುತ್ತಾ **ಪರಭಕ್ತಿ** (ಮಿಗಿಲಿಲ್ಲದ ಹೆಚ್ಚಿನ ಭಕ್ತಿ) ಎಂಬುದೊಂದು ರೂಪವಿಶೇಷವನ್ನು ತಳೆಯುವದು. ಪರಮಾತ್ಮನ ಈ ಪ್ರೇಮವನ್ನು ಪಡೆದು ಕೊಂಡಿರುವಾತನಿಗೆ ರೂಪಗಳು ಮಾಯವಾಗುವವು ; ಕರ್ಮಗಳು ಹಾರಿಹೋಗುವವು ; ಗ್ರಂಥಗಳು, ಪ್ರತಿಮೆಗಳು, ಗುಡಿಗಳು, ಗೋಪುರಗಳು, ಮತಗಳು, ಜಾತಿಗಳು, ದೇಶಗಳು, ಜನಾಂಗಗಳು-ಇಂಥ ಸಣ್ಣಪುಟ್ಟ ಉಪಾಧಿಗಳೂ ಬಂಧಗಳೂ ತಮಗೆ ತಾವೇ ಕಳಚಿ ಕೊಳ್ಳುವವು. ಆತನಿಗೆ ಯಾವ ಬಂಧವೂ ಇರುವದಿಲ್ಲ. ಆತನ ಸ್ವಾತಂತ್ರ್ಯಕ್ಕೆ ಯಾವ ಬಾಧಕವೂ ಯಾವ ಕಾಲುಬೇಡಿಯೂ ಇರುವದಿಲ್ಲ. ಹಡಗು ಸೂಚಿಕಾಂತಶಿಲೆಯ ಬಂಡೆಯ ಬಳಿಗೆ ಬಂದರೆ ಇದ್ದಕ್ಕಿದ್ದಹಾಗೆಯೇ ಅದರ ಕಬ್ಬಿಣದ ಮೊಳೆಗಳೂ ಶಲಾಕೆಗಳೂ ಸೂಚಿಕಾಂತದ ಸೆಳೆತಕ್ಕೆ ಸಿಕ್ಕಿ ಈಚೆಗೆ ಬರುವವು ; ಹಲಗೆಗಳೂ ಸಡಿಲವಾಗಿ ನೀರಮೇಲೆ ಧಾರಾಳವಾಗಿ ತೇಲಾಡುವದಕ್ಕೆ ಮೊದಲುಮಾಡುವವು. ಅಲ್ಲವೆ? ಪರಮಾತ್ಮನ ಅನುಗ್ರಹವೂ ಇದರಂತೆಯೇ ಜೀವವನ್ನು ಬಂಧಿಸಿರುವ ಮೊಳೆಗಳನ್ನೂ ಶಲಾಕೆಗಳನ್ನೂ ಬಿಚ್ಚಿಬಿಡುವದು. ಕೂಡಲೆ ಜೀವನು ಮುಕ್ತನಾಗಿಬಿಡುವನು.[1]

ಆದ್ದರಿಂದ ಭಕ್ತಿಗೆ ಉಪಕರಣವಾಗಿರುವ **ವೈರಾಗ್ಯ**ದಲ್ಲಿ ಯಾವ ಕಾಠಿನ್ಯವೂ ಇರುವದಿಲ್ಲ. ಯಾವ ಸಂಕಟವೂ ಇರುವದಿಲ್ಲ ; ಇಲ್ಲಿ ಹೆಣಗಾಡಬೇಕಾದದ್ದಾಗಲಿ, ಅಣಗಿಸಬೇಕಾದದ್ದಾಗಲಿ, ಪ್ರತಿಭಟಿಸಿ ಜಯಿಸಬೇಕಾದದ್ದಾಗಲಿ ಯಾವದೊಂದೂ ಇರುವದಿಲ್ಲ. ಭಕ್ತನು ತನ್ನ ಮನೋಭಾವಗಳಲ್ಲಿ ಯಾವದೊಂದನ್ನೂ ನಿರೋಧಮಾಡಬೇಕಾದದ್ದಿರುವದಿಲ್ಲ; ಅವನು ಅವುಗಳನ್ನು ಇನ್ನಷ್ಟು ಬಲಪಡಿಸಿ ಭಗವಂತನ ಕಡೆಗೆ ತಿರುಗಿಸುವದಕ್ಕೆ ಮಾತ್ರವೇ ಯತ್ನಿಸಬೇಕಾಗಿರುತ್ತದೆ.[49]

---

1. ಶ್ರೀರಾಮಕೃಷ್ಣ ಪರಮಹಂಸರ ಉಪದೇಶದ ರೂಪಾಂತರ.

# 12. ಭಕ್ತನ ವೈರಾಗ್ಯವು ಪ್ರೇಮದಿಂದುಂಟಾಗಿರುವದು.

ಪ್ರಪಂಚದಲ್ಲಿ ಪ್ರೇಮದ ವ್ಯಾಪಾರವು ಎಲ್ಲೆಲ್ಲಿಯೂ ಕಾಣುತ್ತಿರುವದು. ಸಮಾಜದಲ್ಲಿ ಯಾವಯಾವದು ಒಳ್ಳೆಯದೋ, ದೊಡ್ಡದೋ, ಅಥವಾ ಊರ್ಜಿತವಾಗಿರುವದೋ ಅದೆಲ್ಲವೂ ಪ್ರೇಮದ ಕಾರ್ಯವೇ. ಯಾವದು ಬಹು ಕೆಟ್ಟದೋ ಅಥವಾ ಪೈಶಾಚವೆಂದು ಹೇಳುವಷ್ಟು ಭಯಂಕರವಾಗಿರುವದೋ-ಅದು ಕೂಡ ಪ್ರೇಮವೆಂಬ ಅದೇ ಮನೋ ವಿಕಾರವು ತಪ್ಪುದಾರಿಯಲ್ಲಿ ಹೋದದ್ದರ ಫಲವೇ. ಗಂಡಹೆಂಡಿರ ಪರಿಶುದ್ಧವಾದ ದಾಂಪತ್ಯಪ್ರೇಮವು ಉಂಟಾಗಿರುವದು ಈ ಮನೋವೃತ್ತಿಯಿಂದಲೇ. ಅತಿನೀಚವಾದ ಪಾಶವೀಯಕಾಮವನ್ನು ತೃಪ್ತಿಗೊಳಿಸಿಕೊಳ್ಳುವ ಪ್ರೇಮಾಭಾಸವು ಉಂಟಾಗುವದೂ ಇದರಿಂದಲೇ. ಮನೋವೃತ್ತಿಯೇನೋ ಒಂದೇ, ಆದರೂ ಬೇರೆಬೇರೆಯ ಸಂದರ್ಭಗಳಲ್ಲಿ ಅದು ಬೇರೆಬೇರೆಯ ರೂಪಿನಿಂದ ತೋರಿಕೊಳ್ಳುವದು. ಒಬ್ಬ ಮನುಷ್ಯನು ಪರೋಪಕಾರಿ ಯಾಗಿ ತನ್ನ ಸರ್ವಸ್ವವನ್ನೂ ಬಡವರಿಗೆ ಕೊಡುವಂತೆಯೂ ಮತ್ತೊಬ್ಬನು ನೆರೆಯವರ ಕತ್ತುಮುರಿದು ಅವರ ಆಸ್ತಿಯನ್ನೆಲ್ಲ ದೋಚಿಕೊಂಡು ಹೋಗುವಂತೆಯೂ ಪ್ರೇರಿಸುವದು ಇದೇ ಪ್ರೇಮವೇ. ಒಂದು ಕಡೆಯಲ್ಲಿ ಅದು ಸರಿಯಾದ ದಾರಿಯಲ್ಲಿ ಹೋಗಿರುವದು, ಮತ್ತೊಂದು ಕಡೆಯಲ್ಲಿ ಸಲ್ಲದ ದಾರಿಯಲ್ಲಿ ಹೋಗಿರುವದು, ಅಷ್ಟೆ. ದೃಷ್ಟಾಂತವಾಗಿ ಕೊಟ್ಟ ಈ ಇಬ್ಬರಲ್ಲಿ ಮೊದಲನೆಯವನು ಇತರರನ್ನು ಎಷ್ಟುಮಟ್ಟಿಗೆ ಪ್ರೀತಿಸುತ್ತಾನೋ ಎರಡನೆ ಯವನು ಅಷ್ಟುಮಟ್ಟಿಗೇ ತನ್ನನ್ನು ತಾನು ಪ್ರೀತಿಸುತ್ತಾನೆ. ಎರಡನೆಯವನಲ್ಲಿ ಪ್ರೇಮವು ಹೊರಟಿರುವ ದಿಕ್ಕು ತಪ್ಪು, ಮೊದಲನೆಯವನಲ್ಲಿ ಅದು ಹೊರಟಿರುವ ದಿಕ್ಕು ಸರಿಯಾದದ್ದು ಅಥವಾ ಯುಕ್ತವಾದದ್ದು. ನಮಗೆ ಅಡಿಗೆ ಮಾಡಿಕೊಡುವ ಬೆಂಕಿಯೇ ಒಂದು ಮಗುವನ್ನು ಸುಡಬಹುದು ; ಆದರೆ ಹಾಗೆ ಮಾಡುವದು ಬೆಂಕಿಯ ದೋಷವಲ್ಲ, ಅದನ್ನು ಉಪಯೋಗಿ ಸುವ ಕ್ರಮವೇ ಈ ಹೆಚ್ಚುಕಡಿಮೆಗೆ ಕಾರಣವಾಗಿರುತ್ತದೆ. ಆದ್ದರಿಂದ ಪ್ರೇಮವು, ಒಡಗೂಡಿರ ಬೇಕೆಂಬ ಇಚ್ಛೆಯು, ಇಬ್ಬರು ಒಂದಾಗಬೇಕೆಂಬ ಬಲವಾದ ಇಚ್ಛೆಯು, ಅಥವಾ ಅಷ್ಟೇ ಏಕೆ? ಕೊನೆಗೆ ಎಲ್ಲರೂ ಒಂದರಲ್ಲಿಯೇ ಐಕ್ಯವನ್ನು ಹೊಂದಬೇಕೆಂಬ ಬಯಕೆಯೆಂದೂ ಅದನ್ನು ಕರೆಯಬಹುದು. ಈ ಬಯಕೆಯು - ಸಂದರ್ಭಾನುಸಾರವಾಗಿ ಉತ್ತಮ ರೂಪಗಳಲ್ಲಿಯೋ ನೀಚರೂಪಗಳಲ್ಲಿಯೋ ಕಾಣಿಸಿಕೊಳ್ಳುತ್ತಲೇ ಇರುವದು. ಭಕ್ತಿಯೋಗವೆಂಬುದು ಉತ್ತಮ ರೂಪದ ಪ್ರೇಮದ ಶಾಸ್ತ್ರವು ; ಈ ಶಾಸ್ತ್ರವು ಪ್ರೇಮವನ್ನು ಎತ್ತಕಡೆಗೆ ಇರಿಸಬೇಕೆಂಬುದನ್ನೂ ಅದನ್ನು ಹೇಗೆ ಸ್ವಾಧೀನದಲ್ಲಿಟ್ಟುಕೊಂಡು ಅದರ ವ್ಯಾಪಾರವನ್ನು ಕ್ರಮಪಡಿಸಿ ಉಪಯೋಗಕ್ಕೆ

ತರಬೇಕೆಂಬುದನ್ನೂ ಈ ಪ್ರೇಮಕ್ಕೆ ಹೇಗೆ ಹೊಸದೊಂದು ಉದ್ದೇಶವನ್ನು ಕಲ್ಪಿಸಿ ಅದರಿಂದ ನಿತ್ಯನಿರತಿಶಯಾನಂದಸ್ವರೂಪವೆಂಬ ಅತ್ಯಂತಪ್ರಶಸ್ತವಾದ ಮಹಾಫಲವನ್ನು ಪಡೆದುಕೊಳ್ಳುವದಕ್ಕೆ ಅನುಕೂಲವಾಗಿ ಅದನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದನ್ನೂ ತೋರಿಸಿಕೊಡುತ್ತದೆ. ಭಕ್ತಿಯೋಗವು, 'ತ್ಯಾಗಮಾಡಿರಿ' ಎನ್ನುವದಿಲ್ಲ ; 'ಪ್ರೀತಿಸಿರಿ, ಅತ್ಯಂತ ಉತ್ತಮವಸ್ತುವನ್ನು ಪ್ರೀತಿಸಿರಿ' ಎಂದಿಷ್ಟೇ ಹೇಳುತ್ತದೆ. ಯಾವಾತನ ಪ್ರೇಮಕ್ಕೆ ಈ ಉತ್ತಮ ವಸ್ತುವೇ ವಿಷಯವಾಗಿರುವದೋ ಅಂಥವನಿಗೆ ಕೀಳ್ತರದ ವಸ್ತುಗಳೆಲ್ಲವೂ ತಮಗೆ ತಾವೇ ದೂರವಾಗುವವು.

"ಎಲೈ ಪರಮಾತ್ಮನೆ, ನೀನು ನನ್ನ ಪ್ರಿಯನೆಂಬುದೊಂದು ಹೊರತು ನಿನ್ನ ವಿಷಯದಲ್ಲಿ ಮತ್ತೇನೂ ನನಗೆ ತಿಳಿಯದು. ನೀನು ಪರಮಸುಂದರನು ; ಆಹಾ ! ನಿನ್ನ ಸೌಂದರ್ಯ ವನ್ನೇನು ಹೇಳಲಿ ! ನೀನು ಮೂರ್ತಿಮಂತ ಸೌಂದರ್ಯವೇ ಆಗಿರುವೆ"[1] ನಿಜವಾದ ಭಕ್ತನ ಹೃದಯದಿಂದ ಈ ಭಾವವೇ ಹರಿಯುತ್ತಿರುವದು. ಮುಖ್ಯವಾಗಿ ಈ ಯೋಗದಲ್ಲಿ ನಾವು ಮಾಡತಕ್ಕ ಸಾಧನವೇನೆಂದರೆ ಸೌಂದರ್ಯದಲ್ಲಿ ನಮಗಿರುವ ಬಯಕೆಯನ್ನು ಭಗವಂತನ ಕಡೆಗೆ ತಿರುಗಿಸಬೇಕು, ಅಷ್ಟೆ. ಮನುಷ್ಯರ ಮುಖದಲ್ಲಿ ಆಕಾಶದಲ್ಲಿ ನಕ್ಷತ್ರಗಳಲ್ಲಿ ಅಥವಾ ಚಂದ್ರನಲ್ಲಿ ತೋರಿಕೊಳ್ಳುವ ಈ ಸೌಂದರ್ಯವು ಯಾವದು? ಸರ್ವವ್ಯಾಪಕನಾದ ನಿಜವಾದ ಭಗವತ್ಸೌಂದರ್ಯದ ಅಂಶಮಾತ್ರವಲ್ಲವೆ? "ಆತನು ಬೆಳಗುವದನ್ನು ಆಶ್ರಯಿಸಿಕೊಂಡು ಮಿಕ್ಕದ್ದೆಲ್ಲವೂ ಬೆಳಗುತ್ತಿರುವದು, ಆತನ ಬೆಳಕಿನಿಂದಲೇ ಈ ಸಕಲ ವಸ್ತುಗಳೂ ಬೆಳಗುತ್ತಿರು ವವು" (ಮುಂ.ಕ.)[50]. ಸಣ್ಣಪುಟ್ಟ ವ್ಯಕ್ತಿಗಳನ್ನೆಲ್ಲ ಮರೆಸಿಬಿಡುವಂಥ ಈ ಭಕ್ತಿಯ ಉಚ್ಚಸ್ಥಾನ ವನ್ನು ಆಶ್ರಯಿಸಿರಿ. ಈ ಪ್ರಪಂಚದ ಸಣ್ಣಸಣ್ಣ ಅಭಿಮಾನಗಳಿಂದ ದೂರವಾಗಿರಿ. ಈ ಲೋಕದ ಮತ್ತು ಇದಕ್ಕೂ ಹೆಚ್ಚಿನ ಅಭಿಮಾನಗಳಿಗೆಲ್ಲ ಮನುಷ್ಯತ್ವವೇ ಆಲಂಬನೆಯೆಂದು ಎಣಿಸದೆ ಇರಿ. ಸಾಕ್ಷಿಯಾಗಿ ನಿಂತು ವಿಚಾರದೃಷ್ಟಿಯಿಂದ ಈ ಪ್ರಪಂಚದ ವ್ಯಾಪಾರವನ್ನು ಪರೀಕ್ಷಿಸಿರಿ ; ಮಾನವಜಾತಿಯಲ್ಲಿ ವಿಶೇಷಾಭಿಮಾನವೇನೂ ಇಲ್ಲದೆ ನೋಡಿರಿ. ಆಗ ಈ ಅಗಾಧವಾದ ಪ್ರೇಮಭಾವವು ಎಂಥ ವ್ಯಾಪಾರವನ್ನು ನಡೆಸುತ್ತಿರುವದೆಂಬುದು ಗೊತ್ತಾಗುವದು. ಒಂದೊಂದು ವೇಳೆ ಸ್ವಲ್ಪ ಸಂಘರ್ಷಣೆ ಯಾಗುವದೇನೋ ನಿಜ ; ಆದರೆ ಅದು ಹೆಚ್ಚಿನ ನಿಜವಾದ ಪ್ರೇಮವನ್ನು ಮುಟ್ಟುವದಕ್ಕೆ ಮಾಡುವ ಪ್ರಯತ್ನದಿಂದಾದದ್ದೇ ಹೊರತು ಮತ್ತೇನೂ ಅಲ್ಲ. ಕೆಲವು ವೇಳೆ ಸ್ವಲ್ಪ ಹೋರಾಟವಾಗುವದು, ಸ್ವಲ್ಪ ಕೆಳಕ್ಕೆ ಬೀಳುವದೂ ಉಂಟು ; ಆದರೇನು? ಅದೆಲ್ಲ ಪ್ರೇಮದ ದಾರಿಯಲ್ಲಾಗುವ

1. ಇದರ ಮೂಲವಾಕ್ಯವು ಯಾವುದಾದರೂ ಇದೆಯೋ ಇಲ್ಲವೋ ತಿಳಿಯದು.

ಘಟನೆಯೇ. ಇಂಥ ತಿಕ್ಕಾಟಗಳು ಬೇಕಾದಷ್ಟು ಬರಲೆಂದು ಒಕ್ಕಡೆಗೆ ನಿಂತುಕೊಳ್ಳಿರಿ. ನೀವು ಪ್ರಪಂಚಪ್ರವಾಹದಲ್ಲಿರುವಾಗ ಮಾತ್ರವೇ ಈ ತಿಕ್ಕಾಟಗಳು ಗೋಚರವಾಗುವವು ; ಆದರೆ ನೀವು ಇದಕ್ಕೆ ಹೊರಬ್ಬಾಗಿ, ಸಾಕ್ಷಿಯಾಗಿ, ಇದೇನೆಂದು ತತ್ತ್ವವನ್ನು ತಿಳಿಯುವದಕ್ಕೆ ನಿಂತರೆ ಭಗವಂತನು ಪ್ರೇಮ ರೂಪವಾಗಿ ಕೋಟ್ಯನುಕೋಟಿ ಮಾರ್ಗಗಳಿಂದ ಪ್ರಕಟವಾಗುತ್ತಿರುವನೆಂದು ನಿಮಗೆ ಚೆನ್ನಾಗಿ ಮನಗಾಣುವದು.

''ಎಲ್ಲೆಲ್ಲಿ ಒಂದಿಷ್ಟಾದರೂ ಆನಂದವಿರುವದೋ, ಅದು ಕೇವಲ ಇಂದ್ರಿಯಭೋಗದ ಆನಂದವಾಗಿದ್ದರೂ ಚಿಂತೆಯಿಲ್ಲ, ಅಲ್ಲಲ್ಲಿ ಪರಮಾತ್ಮನೆಂಬ ನಿತ್ಯಾನಂದದ ಒಂದು ಅಂಶ ವಿರುವದು'' **51**(ಬೃ.) ನಮ್ಮ ಮನಸ್ಸನ್ನು ಆಕರ್ಷಿಸುವ ಅತ್ಯಂತ ನೀಚವಿಷಯಗಳಲ್ಲಿ ಕೂಡ ಭಗವತ್ಪ್ರೇಮದ ಬೀಜವಿದ್ದೇ ಇರುವದು. ಪರಮೇಶ್ವರನಿಗೆ ಸಂಸ್ಕೃತಭಾಷೆಯಲ್ಲಿರುವ ನಾಮಗಳಲ್ಲಿ 'ಹರಿ' ಎಂಬುದೊಂದು ; **ಹರಿ**ಯೆಂದರೆ ಎಲ್ಲಾ ವಸ್ತುಗಳನ್ನೂ ತನ್ನ ಕಡೆಗೆ ಸೆಳೆದುಕೊಳ್ಳುವವನೆಂದರ್ಥ. ಮನುಷ್ಯರ ಹೃದಯವನ್ನು ಆಕರ್ಷಿಸುವದಕ್ಕೆ ತಕ್ಕವನು ನಿಜವಾಗಿ ಆತನೊಬ್ಬನೇ. ನಿಜವಾಗಿ ನೋಡಿದರೆ ಜೀವನನ್ನು ಯಾರುತಾನೆ ಆಕರ್ಷಿಸ ಲಾಪರು? ಆತನೊಬ್ಬನೇ. ಚೇತನನಾದ ಜೀವನನ್ನು ಜಡವಸ್ತುವಾದದ್ದು ನಿಜವಾಗಿಯೂ ಸೆಳೆಯಬಲ್ಲದೆ? ಹಿಂದೆ ಸೆಳೆದಿಲ್ಲ, ಮುಂದೆಯೂ ಸೆಳೆಯಲಾರದು. ಒಬ್ಬ ಪುರುಷನು ಸುಂದರವಾದೊಂದು ಮುಖಕ್ಕೆ ಬೆರಗಾಗುತ್ತಿರುವಾಗ, ಕ್ರಮವರಿತು ಜೋಡಿಸಿದ ಆ ಕೆಲವು ವಸ್ತುಕಣಗಳೇ ಆತನ ಮನಸ್ಸನ್ನು ಸೆಳೆದುಕೊಳ್ಳುತ್ತಿವೆಯೆಂದು ಹೇಳಬಹುದೆ? ಎಂದಿಗೂ ಹಾಗೆನ್ನಕೂಡದು. ಆ ವಸ್ತುಕಣಗಳಿಗೆ ಆಧಾರವಾಗಿ ದೈವಿಕಪ್ರಭಾವವೂ ದೈವಿಕಪ್ರೇಮವೂ ಇದ್ದೇ ಇರಬೇಕು, ಇದ್ದೂ ಇದೆ. ಮೂಢನಾದ ಆ ಮನುಷ್ಯನಿಗೆ ಅದು ತಿಳಿಯದು ; ಆದರೇನು ? ಅವನಿಗೆ ತಿಳಿಯಲಿ ತಿಳಿಯದಿರಲಿ, ಅವನನ್ನು ಸೆಳೆಯುತ್ತಿರುವದು ಅದೇ ಹೊರತು ಮತ್ತೊಂದಲ್ಲ. ಹೀಗೆ ಅತ್ಯಂತ ಕೀಳ್ತರದ ಪ್ರೇಮಗಳಲ್ಲಿ ತೋರುವ ಶಕ್ತಿಯು ಕೂಡ ಭಗವಂತನಿಂದಲೇ ಬಂದದ್ದಾಗಿರುವದು. ''ಪ್ರಿಯಳೆ, ಪತಿಯ ಕಾಮಕ್ಕಾಗಿ ಪತಿಯು ಎಂದಿಗೂ ಪ್ರಿಯನಾಗುವದಿಲ್ಲ ; ಒಳಗಿರುವ ಆತ್ಮನಾದ[1] ಪರಮೇಶ್ವರನಿಗಾಗಿಯೇ ಗಂಡನಲ್ಲಿ ಪ್ರೇಮವುಂಟಾಗುವದು''(ಬೃ.)**52**. ಗಂಡನನ್ನು ಪ್ರೀತಿಸುವ ಪತ್ನಿಯರಿಗೆ ಇದು ಗೊತ್ತಿರಲಿ ಗೊತ್ತಿಲ್ಲದಿರಲಿ, ಇದೇ ತತ್ತ್ವವು. ''ಪ್ರಿಯಳೆ, ಹೆಂಡತಿಯನ್ನು ಹೆಂಡತಿಗಾಗಿ ಯಾರೂ ಪ್ರೀತಿ ಸರು, ಆಕೆಯ ಒಳಗಿರುವ ಆತ್ಮನಿಗಾಗಿಯೇ

1. ''ಪೂರ್ವಾಪರಸಂದರ್ಭವನ್ನು ನೋಡಿದರೆ ಈ ಶ್ರುತಿಯಲ್ಲಿ ''ತನಗಾಗಿ ಎಲ್ಲವೂ ಪ್ರಿಯವಾಗಿ ರುವದರಿಂದ ತಾನೆಂಬ ವಸ್ತು ಎಲ್ಲಕ್ಕಿಂತಲೂ ಪ್ರಿಯವಾಯಿತು ; ಆ ತಾನು ಎಂಬ ವಸ್ತುವನ್ನು ವಿಚಾರಮಾಡಿ ಅದರ ನಿಜವನ್ನು ತಿಳಿದರೆ ಪರಮಾರ್ಥವನ್ನು ತಿಳಿದಂತೆ ಆಯಿತು'' ಎಂಬ ತಾತ್ಪರ್ಯವು ಹೊರಡುತ್ತದೆ. ಸ್ವಾಮಿಗಳವರು ಇಲ್ಲಿ ತೆಗೆದಿರುವದು ಆರ್ಥಿಕಾರ್ಥವು ಎಂದು ಹೇಳಬೇಕಾಗಿದೆ.

ಪ್ರೀತಿಸುವರು'' (ಬೃ.)[52]. ಹೀಗೆಯೇ ಲೋಕದಲ್ಲಿ ಪುತ್ರಾದಿಗಳನ್ನು ಕೂಡ ಅಂತರಾತ್ಮನಾದ ಭಗವಂತನಿಗಾಗಿಯೇ ಪ್ರೀತಿಸುವರೇ ಹೊರತು ಪುತ್ರಾದಿಗಳಿಗಾಗಿಯೇ ಯಾರೂ ಪ್ರೀತಿಸುವದಿಲ್ಲ. ಆ ಭಗವಂತನು ಮಹಾಸೂಚಿ ಕಾಂತಶಿಲೆಯು, ನಾವೆಲ್ಲರೂ ಅದರಿಂದ ಉಜ್ಜಿದ ಕಬ್ಬಿಣದ ಹುಡಿಗಳು; ನಮ್ಮೆಲ್ಲರನ್ನೂ ಆತನು ತನ್ನ ಕಡೆಗೆ ಎಳೆದುಕೊಳ್ಳುತ್ತಿರುವನು, ನಾವೆಲ್ಲರೂ ಆತನನ್ನು ಸೇರಬೇಕೆಂದು ಹೆಣಗಾಡುತ್ತಿರು ವೆವು. ಈ ಪ್ರಪಂಚದಲ್ಲಿರುವ ನಮ್ಮ ಒದ್ದಾಟವೆಲ್ಲ ಕೇವಲ ಸ್ವಾರ್ಥೋದ್ದೇಶಗಳಿಂದಲೇ ಆಗಿರುವದೆಂದು ಎಂದಗೂ ಹೇಳಲಾಗುವದಿಲ್ಲ, ಮೂಢರಾದ ಜನರಿಗೆ ತಾವೇನು ಮಾಡುತ್ತಿರುವೆವೆಂಬುದೇ ತಿಳಿಯದು ; ನಿಜವಾಗಿ ನೋಡಿದರೆ ಈ ಮಹಾಸೂಚಿ ಕಾಂತವನ್ನು ಸೇರುವದೇ ಅವರ ಜನ್ಮದ ಉದ್ದೇಶವು. ಈ ಪ್ರಪಂಚದಲ್ಲಿ ನಡೆಯುತ್ತಿರುವ ಇಷ್ಟೊಂದು ಒದ್ದಾಟವೂ ಗುದ್ದಾಟವೂ ಕೊನೆಗೆ ನಾವೆಲ್ಲರೂ ಆತನನ್ನು ಸೇರಿ, ಆತನ ಸಾಯುಜ್ಯವನ್ನು ಪಡೆಯಬೇಕೆಂತಲೇ ನಡೆಯುತ್ತಿರುವದು.[1]

ಭಕ್ತಿಯೋಗಿಗೊಬ್ಬನಿಗೇ ಸಂಸಾರದಲ್ಲಿರುವ ಹೋರಾಟಗಳ ಅಭಿಪ್ರಾಯವೇನೆಂಬುದು ತಿಳಿದಿರುತ್ತದೆ, ಅವನೊಬ್ಬನೇ ಅದರ ಉದ್ದೇಶವನ್ನು ಅರಿತುಕೊಂಡಿರುತ್ತಾನೆ. ಅವನು ಎಷ್ಟೋ ದೀರ್ಘಕಾಲದಿಂದ ಈ ಹೋರಾಟವನ್ನು ಅನುಭವಿಸಿ ಬಂದಿರುತ್ತಾನಾದ್ದರಿಂದ ಅವುಗಳ ಕಾರಣವನ್ನು ಬಲ್ಲವನಾಗಿರುತ್ತಾನೆ, ಅವುಗಳಿಂದಾಗುವ ಸಂಘರ್ಷಣೆಯಿಂದ ಪಾರಾಗ ಬೇಕೆಂದು ಅವನಿಗೆ ನಿಶ್ಚಯವಾದ ಇಚ್ಛೆಯುಂಟಾಗಿರುತ್ತದೆ. ಈ ಹೊಡೆದಾಟದ ತಂಟೆಯನ್ನು ತಪ್ಪಿಸಿಕೊಂಡು ಆಕರ್ಷಣಕ್ಕೆಲ್ಲ ಮೂಲನಾಗಿರುವ ಶ್ರೀಹರಿಯನ್ನೇ ಸೇರಿಬಿಡಬೇಕೆಂದು ಅವನು ಹವಣಿಸುತ್ತಿರುತ್ತಾನೆ. ಇದೇ ಭಕ್ತನ ವೈರಾಗ್ಯವು. ದೇವರಕಡೆಗೆ ಹೋಗಬೇಕೆಂಬ ಈ ಉತ್ಕಟೇಚ್ಛೆಯು ಅವನ ಪಾಲಿಗೆ ಉಳಿದ ಇಚ್ಛೆಗಳು ಯಾವವೂ ಇಲ್ಲದಂತೆ ಮಾಡಿರುತ್ತದೆ, ಭಗವದ್ವಿಷಯಕವಾದ ಈ ಅಗಾಧ-ಅನಂತ-ಪ್ರೇಮವು ಆತನ ಹೃದಯವನ್ನು ಹೊಕ್ಕಿರುವದ ರಿಂದ ಇನ್ನು ಯಾವತರದ ಪ್ರೇಮಕ್ಕೂ ಅಲ್ಲಿ ಎಡೆಯಿಲ್ಲದೆ ಇರುವದು. ಹೇಗೆತಾನೆ ಇದ್ದೀತು? ಭಕ್ತಿಯು ಭಗವಂತನೆಂಬ ಪ್ರೇಮಸಾಗರದ ದಿವ್ಯೋದಕದಿಂದ ಅವನ ಹೃದಯವನ್ನೆಲ್ಲ ತುಂಬಿಕೊಂಡಿರುವದು ; ಆದ್ದರಿಂದ ಅಲ್ಲಿ ಸಣ್ಣಪುಟ್ಟ ಪ್ರೇಮಗಳಿಗೆ ಸ್ಥಳವೇ ಇರುವದಿಲ್ಲ. ಸಾರಾಂಶವೇನೆಂದರೆ, ಭಗವಂತನಲ್ಲದ ವಿಷಯಗಳಲ್ಲಿ ಭಕ್ತನಿಗೆ ಉಂಟಾಗಿರುವ ಅನಾಸಕ್ತಿ ರೂಪವಾದ ವೈರಾಗ್ಯವು ಅನುರಾಗದಿಂದ, ಎಂದರೆ ಭಗವಂತನಲ್ಲಿರುವ ಪರಮಾಸಕ್ತಿಯಿಂದ, ಉಂಟಾಗಿರುತ್ತದೆ.

---

1. 'ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ' ಎಂಬ ಗೀತಾವಚನದ ಅಭಿಪ್ರಾಯವು.

ಪರಭಕ್ತಿಯ ಪ್ರಾಪ್ತಿಗೆ ಮಾಡಿಕೊಳ್ಳಬೇಕಾಗಿರುವ ಪರಮಸಾಧನವೇ ಇದು. ಈ ವೈರಾಗ್ಯವು ಬಂದೊಡನೆಯೇ ಜೀವನು ಪರಭಕ್ತಿಯ ಉಚ್ಚಪ್ರದೇಶವನ್ನು ಸೇರಿಕೊಳ್ಳುವದಕ್ಕೆ ಅನುಕೂಲವಾಗಿ ಮಹಾದ್ವಾರವು ತೆರೆದುಕೊಳ್ಳುವದು. ನಿಜವಾದ ಭಕ್ತಿಯೆಂದರೇನೆಂಬುದು ಗೊತ್ತಾಗುವದಕ್ಕೆ ಆಗಲೇ ಮೊದಲಾಗುವದು. ಈ ಪರಭಕ್ತಿಯ ಗರ್ಭಾಗಾರವನ್ನು ಹೊಕ್ಕವನು ಮಾತ್ರವೇ ನಾಮರೂಪಗಳು ಆತ್ಮ ಸಾಕ್ಷಾತ್ಕಾರಕ್ಕೆ ಅಗತ್ಯವಿಲ್ಲವೆಂದು ಹೇಳುವದಕ್ಕೆ ಅಧಿಕಾರಿಯು. ಮನುಷ್ಯರೆಲ್ಲರೂ ಒಡುಹುಟ್ಟಿದವರೆಂದು ಜನರು ಸಾಮಾನ್ಯವಾಗಿ ಆಡಿಕೊಳ್ಳುವರಷ್ಟೆ ; ಈ ಮಾತಿನಲ್ಲಿ ಅಡಗಿರುವ ಪ್ರೇಮದ ಪರಮಸ್ಥಿತಿಯನ್ನು ಆತನೊಬ್ಬನೇ ಹೊಂದಿರುವಾತನು, ಉಳಿದವರೆಲ್ಲರೂ ಬರಿಯ ಮಾತಿನವರು. ಅವನಿಗೆ ಯಾವದೊಂದು ಭೇದವೂ ತೋರುವದಿಲ್ಲ. ಪ್ರೇಮವೆಂಬ ಮಹಾಸಾಗರವು ಅವನಲ್ಲಿ ಪ್ರವೇಶಿಸಿರುವದರಿಂದ ಅವನಿಗೆ ಮನುಷ್ಯನು ಮನುಷ್ಯನಾಗಿ ಕಾಣಿಸುವದೇ ಇಲ್ಲ, ಅಲ್ಲಿಯೂ ತನ್ನ ಪ್ರಿಯನಾದ ಭಗವಂತನೇ ಕಾಣಿಸುತ್ತಿರುವನು. ಯಾವ ಮುಖದಲ್ಲಿಯೇ ಆಗಲಿ, ಅವನಿಗೆ ತನ್ನ ಹರಿಯ ಕಾಂತಿಯೇ ತೋರುತ್ತಿರುವದು, ಸೂರ್ಯನಲ್ಲಾಗಲಿ ಚಂದ್ರನಲ್ಲಾಗಲಿ ತೋರುವ ಬೆಳಕೂ ಆತನ ವಿಭೂತಿಯೇ. ಎಲ್ಲೆಲ್ಲಿ ಸೌಂದರ್ಯವೂ ಮಹಿಮೆಯೂ ಇರುವದೋ ಅದೆಲ್ಲ ಆತನದೇ ಎಂದು ಅವನಿಗೆ ತೋರುವದು.[53] ಇಂಥ ಭಕ್ತರು ಈಗಲೂ ಇದ್ದಾರೆ; ಜಗತ್ತಿನಲ್ಲಿ ಅವರು ಇಲ್ಲದ ಕಾಲವೇ ಇಲ್ಲ. ಇವರು ತಮ್ಮನ್ನು ಒಂದು ಸರ್ಪವು ಕಚ್ಚಿದರೂ ತಮ್ಮ ಪ್ರಿಯನಾದ ಪರಮೇಶ್ವರನ ಕಡೆಯಿಂದ ಒಬ್ಬ ದೂತನು ಬಂದಿದ್ದಾನೆಂದೇ ಎನ್ನುತ್ತಿರುವರು.[1] ಪ್ರಪಂಚದಲ್ಲಿರುವವರೆಲ್ಲರೂ ಅಣ್ಣತಮ್ಮಂದಿರೆಂದು ಹೇಳುವದಕ್ಕೆ ಇಂಥವರು ಮಾತ್ರವೇ ಅಧಿಕಾರಿಗಳು. ಅವರಲ್ಲಿ ಪ್ರತೀಕಾರಬುದ್ಧಿಯೆಂಬುದೇ ಇರುವದಿಲ್ಲ; ಅವರ ಮನಸ್ಸಿನಲ್ಲಿ ಹಗೆತನ ಅಥವಾ ಹೊಟ್ಟೇಕಿಚ್ಚು ಎಂಬ ರೂಪದ ವೃತ್ತಿಗಳೇ ಹುಟ್ಟುವದಿಲ್ಲ; ಬಾಹ್ಯದ ಇಂದ್ರಿಯ ಭೋಗದ ಜ್ಞಾನವು ಅವರನ್ನು ಸಂಪೂರ್ಣವಾಗಿ ಬಿಟ್ಟು ಹೋಗಿರುವದು. ತಮ್ಮ ಪ್ರೇಮದಿಂದ ಅವರಿಗೆ ಪ್ರಪಂಚದ ತೋರಿಕೆಗಳಲ್ಲೆಲ್ಲ ಅವುಗಳಿಗೆ ಆಧಾರವಾದ ಪರಮಾರ್ಥತತ್ತ್ವವೇ ಕಾಣುತ್ತಿರುವಾಗ ಅವರಿಗೆ ಸಿಟ್ಟು ಹೇಗೆ ತಾನೆ ಬಂದೀತು ?

---

53 ಭಗವದ್ಗೀತೆಯ ವಾಕ್ಯದ ಸೂಚನೆ.

1. "ಪವ್ಹಾರಿಬಾಬಾ" ಎಂಬ ಸಾಧುಗಳು ಈ ಭಾವನೆಯನ್ನು ಇಟ್ಟುಕೊಂಡಿದ್ದರೆಂದು ಸ್ವಾಮಿಗಳೇ ಅವರ ಸಂಕ್ಷಿಪ್ತಜೀವನಚರಿತ್ರೆಯಲ್ಲಿ ಬರೆದಿರುತ್ತಾರೆ.

# 13. ಭಕ್ತಿಯೋಗದ ಸ್ವಾಭಾವಿಕತೆಯೂ ಅದರ ಮೂಲರಹಸ್ಯವೂ

''ಯಾರು ಯಾವಾಗಲೂ ನಿನ್ನಲ್ಲಿಯೇ ಮನಸ್ಸಿಟ್ಟು ನಿನ್ನನ್ನೇ ಉಪಾಸನೆ ಮಾಡುತ್ತಿರುವರೋ ಅವರು, ಮತ್ತು ಯಾರು ಅವ್ಯಕ್ತವಾದ ಅಕ್ಷರವನ್ನು ಉಪಾಸನೆ ಮಾಡುತ್ತಿರುವರೋ ಅವರು - ಇವರಿಬ್ಬರಲ್ಲಿ ಯಾರು ಹೆಚ್ಚಿನ ಯೋಗಿಗಳು?'' **54** ಎಂದು **ಅರ್ಜುನ**ನು ಕೇಳಿದ್ದಕ್ಕೆ **ಶ್ರೀಕೃಷ್ಣ**ನು ಕೊಟ್ಟಿರುವ ಉತ್ತರವೇನೆಂದರೆ : ''ಯಾರು ನನ್ನಲ್ಲಿಯೇ ಮನಸ್ಸಿಟ್ಟು ನಿತ್ಯಯುಕ್ತರಾಗಿ ಹೆಚ್ಚಿನ ಶ್ರದ್ಧೆಯಿಂದ ನನ್ನನ್ನೇ ಉಪಾಸನೆಮಾಡುವರೋ ಅವರೇ ಉತ್ತಮ ಉಪಾಸಕರು, ಅವರೇ ಉತ್ತಮಯೋಗಿಗಳು. ಯಾರು ಇಂದ್ರಿಯಗಳ ವ್ಯಾಪಾರವನ್ನು ತಡೆದುಕೊಂಡು ಎಲ್ಲೆಲ್ಲಿಯೂ ಸಮಬುದ್ಧಿಯುಳ್ಳವರಾಗಿ, ಹೀಗೆಂದು ವರ್ಣಿಸುವದಕ್ಕಾಗದೆ ಇರುವದಾಗಿಯೂ ಅವ್ಯಕ್ತವಾಗಿಯೂ ಎಲ್ಲೆಲ್ಲಿಯೂ ಇರುವದಾಗಿಯೂ ಹೀಗಿರುವದೆಂದು ಮನಸ್ಸಿನಲ್ಲಿ ಚಿಂತಿಸುವದಕ್ಕೆ ಕೂಡ ಬಾರದ್ದಾಗಿಯೂ ಕೂಟಸ್ಥವಾಗಿಯೂ ಚಲನೆಯಿಲ್ಲದ್ದಾಗಿಯೂ ನಿತ್ಯವಾಗಿಯೂ ಇರುವ ಅಕ್ಷರವನ್ನು ಉಪಾಸನೆಮಾಡುತ್ತಿರುವರೋ, ಸರ್ವಪ್ರಾಣಿಗಳಿಗೂ ಹಿತವನ್ನು ಮಾಡುವದರಲ್ಲೇ ನಿರತರಾಗಿರುವ ಅವರು ನನ್ನನ್ನೇ ಸೇರುವರು. ಆದರೆ ಅವ್ಯಕ್ತವಾದ ಅಕ್ಷರದಲ್ಲಿ ಆಸಕ್ತವಾದ ಮನಸ್ಸುಳ್ಳ ಅವರಿಗೆ ಮಾರ್ಗದಲ್ಲಿ ಕ್ಲೇಶಗಳು ಇನ್ನೂ ಹೆಚ್ಚು; ಏಕೆಂದರೆ ದೇಹಿಗಳಿಗೆ ಅವ್ಯಕ್ತಮಾರ್ಗದಲ್ಲಿ ನಡೆಯುವದು ಬಲು ಕಷ್ಟವಾಗಿರುವದು. ಯಾರಾದರೆ ಎಲ್ಲಾ ಕರ್ಮಗಳನ್ನೂ ನನಗೆ ಅರ್ಪಣೆಮಾಡಿ ನನ್ನಲ್ಲಿಯೇ ತಾತ್ಪರ್ಯದಿಂದ ಮತ್ತೇನನ್ನೂ ಆಶ್ರಯಿಸದೆ ನನ್ನನ್ನೇ ಧ್ಯಾನಿಸುತ್ತಾ ಉಪಾಸನೆಮಾಡುತ್ತಿರುವರೋ ಅವರನ್ನು ಜನನಮರಣರೂಪವಾದ ಸಾಗರದಿಂದ ನಾನೇ ಮೇಲಕ್ಕೆತ್ತುವೆನು, ಏಕೆಂದರೆ ಅವರ ಮನಸ್ಸು ನನ್ನನ್ನೇ ಹೊಂದಿಕೊಂಡಿರುವದು.''**54**

ಇಲ್ಲಿ **ಜ್ಞಾನಯೋಗ, ಭಕ್ತಿಯೋಗ**-ಇವೆರಡರ ವಿಚಾರವೂ ಬಂದಿದೆ ; ಈ ಮೇಲಿನ ಗ್ರಂಥ ಭಾಗದಲ್ಲಿ ಇವೆರಡಕ್ಕೂ ಲಕ್ಷಣವನ್ನು ತಿಳಿಸಿದೆಯೆಂದು ಕೂಡ ಹೇಳಬಹುದು. ಜ್ಞಾನಯೋಗವು ದೊಡ್ಡದೇ ಸರಿ, ಅದು ಉತ್ತಮತರದ ದರ್ಶನವೂ ಹೌದು. ಅದೇನು ವಿಚಿತ್ರವೋ, ಪ್ರತಿಯೊಬ್ಬನೂ **ವೇದಾಂತಶಾಸ್ತ್ರ**ದಲ್ಲಿ ಹೇಳಿರುವ ಅಧಿಕಾರಲಕ್ಷಣವೆಲ್ಲ ತನ್ನಲ್ಲಿದೆ ಯೆಂದೇ ಭಾವಿಸಿಕೊಂಡಿರುವನು. ಆದರೆ ನಿಜವಾಗಿ ನೋಡಿದರೆ ವೇದಾಂತಕ್ಕನುಗುಣವಾಗಿ ವ್ಯವಹಾರದಲ್ಲಿ ನಡೆಯುವದೆಂಬುದು ಬಲು ಕಷ್ಟ. ವೇದಾಂತಕ್ಕೆ ಅನುಸಾರವಾಗಿ ವ್ಯವಹಾರ

ದಲ್ಲಿ ನಡೆಯುವದೆಂಬುದು ಹೋಗಿ ಅನೇಕ ಸಂದರ್ಭಗಳಲ್ಲಿ ನಾವು ದೊಡ್ಡದೊಡ್ಡ ಅಪಾಯಗಳಿಗೆ ಈಡಾಗುವ ಸಂಭವವುಂಟು. ಈ ಪ್ರಪಂಚದ ಜನರನ್ನೆಲ್ಲ ಎರಡು ತರಗತಿಯಾಗಿ ವಿಂಗಡಿಸಬಹುದು; ತಮ್ಮ ಶರೀರದ ಯೋಗಕ್ಷೇಮವೇ ಜನ್ಮದ ಆದ್ಯಂತೋ ದ್ದೇಶವೆಂದು ತಿಳಿಯುವ **ಆಸುರಸಂಪತ್ತಿನವರು** ಒಂದು ಪಂಗಡ ; ದೇಹವೆಂಬುದು ಪುರುಷಾರ್ಥವನ್ನು ನೆರವೇರಿಸಿಕೊಳ್ಳುವ ಸಾಧನಮಾತ್ರವೇ, ಆತ್ಮನ ಸಂಸ್ಕಾರಕ್ಕೆಂದು ದೇವರು ಕೊಟ್ಟಿರುವ ಸಾಧನವೇ ಹೊರತು ಮತ್ತೆ ಬೇರೆಯಲ್ಲ - ಎಂದು ತಿಳಿಯುವ **ದೈವಸಂಪತ್ತಿನವರು** ಮತ್ತೊಂದು ಪಂಗಡ. ಪಿಶಾಚವು ಕೂಡ ತನ್ನ ಆಚರಣೆಗೆ ತಕ್ಕ ಶಾಸ್ತ್ರಪ್ರಮಾಣವನ್ನು ಉದಾಹರಿಸಬಹುದು, ಉದಾಹರಿಸುವದೂ ಉಂಟು ; ಹೀಗಿರುವದರಿಂದ ಜ್ಞಾನಮಾರ್ಗವು ಸದಾಚಾರಕ್ಕೆ ಬೆಂಬಲವಾಗಿರುವಂತೆ ದುರಾಚಾರಕ್ಕೂ ಬೆಂಬಲವನ್ನು ಕೊಡುವಂತೆ ತೋರುವದು. ಇದೇ ಜ್ಞಾನಯೋಗದಲ್ಲಿರುವ ದೊಡ್ಡ ಅಪಾಯವು.[1] ಆದರೆ ಭಕ್ತಿಯೋಗವು ಸ್ವಾಭಾವಿಕವಾಗಿರುವದು, ಮನೋಹರವಾಗಿರುವದು, ಸುಕರವಾಗಿರುವದು. ಭಕ್ತನು ಜ್ಞಾನ ಯೋಗಿಯಂತೆ ತೀರ ಮೇಲಕ್ಕೆ ಹಾರುವದಕ್ಕೆ ಹೋಗುವದೂ ಇಲ್ಲ, ಅವನಂತೆ ಇವನು ದೊಪ್ಪನೆ ಕಡಿದುಕೊಂಡು ಬೀಳುವ ಸಂಭವವೂ ಇಲ್ಲ. ಸಾಧಕನು ಯಾವ ಮಾರ್ಗವನ್ನೇ ಅನುಸರಿಸಲಿ, ಜೀವನ ಬಂಧನಗಳೆಲ್ಲ ಪೂರ್ಣವಾಗಿ ಹೋಗುವವರೆಗೆ ಮುಕ್ತನಾಗಲಾರ ನೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಧನ್ಯರಾದ ಗೋಪಿಯರಲ್ಲೊಬ್ಬಾಕೆಯ ಪುಣ್ಯಪಾಪಗಳೆಂಬ ಎರಡು ಬಗೆಯ ಬಂಧದ ಸಂಕೋಲೆಯೂ ಕಡಿದುಹೋದ ಬಗೆಯನ್ನು ವರ್ಣಿಸುವ ಈ ಗ್ರಂಥಭಾಗವನ್ನು ನೋಡಿರಿ :- "ಆ ಪರಮಾತ್ಮನನ್ನು ಚಿಂತಿಸುವ ಅತ್ಯಂತಾಹ್ಲಾದದಿಂದ ಆಕೆಯ ಪುಣ್ಯಕರ್ಮಗಳಿಂದಾಗುವ ಬಂಧವು ಪರಿಹಾರವಾಯಿತು ; 'ಆತನನ್ನು ಪಡೆಯಲಿಲ್ಲವಲ್ಲ !' ಎಂಬ ಮಹಾದುಃಖದಿಂದ ಆಕೆಯ ಪಾಪವಾಸನೆಗಳೆಲ್ಲವೂ ತೊಳೆದುಹೋದವು; ಆಮೇಲೆ ಅವಳು ಮುಕ್ತಳಾಗಿ ಬಿಟ್ಟಳು!"**55** (ವಿ. ಪು.) ಆದ್ದರಿಂದ **ಭಕ್ತಿಯ ಮೂಲರಹಸ್ಯ**ವೇನೆಂದರೆ ಮನುಷ್ಯನ ಹೃದಯ ದಲ್ಲಿರುವ **ಕಾಮಕ್ರೋಧಾದಿಗಳೂ** **ವೇದನೆಗಳೂ** ಮನೋವೃತ್ತಿಗಳೂ ಸ್ವರೂಪದಿಂದಲೇನೂ ಕೆಟ್ಟವಲ್ಲವೆಂದೂ ಅವುಗಳನ್ನು ಎಚ್ಚರಿಕೆಯಿಂದ

1. ಸಾಧನಚತುಷ್ಟಯವು ಅಳವಡದಿದ್ದರೂ ವೇದಾಂತವಿಚಾರಕ್ಕೆಂದು ಹೊರಟು ತಮಗೆ ತೋರಿದ ರೀತಿಯಲ್ಲಿ ಸಿದ್ಧಾಂತವನ್ನು ಮಾಡಿಕೊಂಡು 'ನಾನು ಬ್ರಹ್ಮವಾದೆನು, ನನಗೆ ವಿಧಿನಿಷೇಧಗಳ ಕಟ್ಟಿಲ್ಲ' ಎಂದು ದುರಾಚಾರಗಳಿಗೆ ಬೀಳುವ ಬಾಯಿವೇದಾಂತದ ಮೂರ್ಖರ ವಿಚಾರವನ್ನು ಇಲ್ಲಿ ಸ್ವಾಮಿಗಳವರು ಸೂಚಿಸಿರುತ್ತಾರೆ. ಅವರು ಉದಾಹರಿಸಿರುವ ಗೀತಾಶ್ಲೋಕದ ಅವ್ಯಕ್ತೋಪಾಸಕರಾದ ಜ್ಞಾನಿಗಳಿಗೆ ಈ ಅಪಾಯವಿಲ್ಲವೆಂಬುದು "ತೇ ಪ್ರಾಪ್ನುವಂತಿ ಮಾಮೇವ" (ಅವರು ನನ್ನನ್ನೇ ಪಡೆಯುತ್ತಾರೆ) ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿಯೇ ಇದೆ.

ಸ್ವಾಧೀನದಲ್ಲಿಟ್ಟುಕೊಂಡಿದ್ದು ಉತ್ತರೋತ್ತರವಾಗಿ ಒಳ್ಳೆಯಕಡೆಗೆ ತಿರುಗಿಸುತ್ತಾಬಂದರೆ ಕೊನೆಗೆ ಅತ್ಯಂತ ಪರಿಶುದ್ಧಸ್ಥಿತಿಗೆ ಬರುವವೆಂದೂ ತಿಳಿದುಕೊಂಡಿರುವದು. ದೇವರ ಕಡೆಗೆ ನಮ್ಮನ್ನೊಯ್ಯುವ ದಿಕ್ಕೇ ಅವುಗಳನ್ನು ನಾವು ತಿರುಗಿಸಿಕೊಳ್ಳಬೇಕಾದ ಅತ್ಯಂತ ಉತ್ತಮವಾದ ದಿಕ್ಕು, ಉಳಿದ ದಿಕ್ಕು ಯಾವದಾದರೂ ಕೆಟ್ಟ ದಿಕ್ಕು. ನಮ್ಮ ಜೀವಿತಕಾಲದಲ್ಲಿ ಸುಖದುಃಖಗಳೆಂಬವು ಮತ್ತೆಮತ್ತೆ ಬರುತ್ತಲೇ ಇರುವ ಅನುಭವಗಳಾಗಿರುತ್ತವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳು ವದರಲ್ಲಿಯೇ ಜಾಣತನವಿರುವದು. ಐಶ್ವರ್ಯವಿಲ್ಲವೆಂದು-ಅಥವಾ ಮತ್ತೆ ಯಾವದಾದ ರೊಂದು ಪ್ರಾಪಂಚಿಕವಿಷಯವಿಲ್ಲವೆಂದು-ಒಬ್ಬನು ದುಃಖಪಡುತ್ತಿದ್ದರೆ ಆ ವೃತ್ತಿಯನ್ನು ತಪ್ಪುಹಾದಿಗೆ ಒಯ್ದಂತಾಯಿತು ; ಆದರೆ ತಾನು ಅತ್ಯಂತ ಪರಮಪದವಿಯನ್ನು ಸೇರಲಿಲ್ಲವಲ್ಲ ! -ಎಂದು ಯಾರಾದರೂ ದುಃಖಪಡುವದಾದರೆ ಆ ದುಃಖವು ಮೋಕ್ಷಕ್ಕೇ ಸಾಧನವಾಗುವದು. ಇದರಂತೆ ಕೆಲವು ಕಾಸುವೀಸಗಳು ಸಿಕ್ಕಿದವೆಂದು ಹಿಗ್ಗಿದರೆ ಸುಖವೃತ್ತಿಯನ್ನು ತಪ್ಪುದಾರಿಯಲ್ಲಿ ಬಿಟ್ಟಂತಾಯಿತು ; ಅದನ್ನು ಉತ್ಕೃಷ್ಟವಾದ ಹಾದಿಯಲ್ಲಿ ಬಿಡಬೇಕಾದರೆ ಅದನ್ನು ಅತ್ಯಂತವಾದ ಉತ್ತಮವಾದ ಧ್ಯೇಯಕ್ಕೆ ಸಾಧನವಾಗಿ ಉಪಯೋಗಿಸಿಕೊಳ್ಳಬೇಕು. ಆಗಲೇ ನಮಗೆ ನಿರತಿಶಯವಾದ ಆನಂದವು ದೊರಕುವದು. ಮಿಕ್ಕ ಮನೋವೃತ್ತಿಗಳ ವಿಚಾರವೂ ಹಾಗೆಯೇ. ಭಕ್ತನಾದವನು ಅವುಗಳಲ್ಲಿ ಯಾವದೊಂದನ್ನೂ ಕೆಟ್ಟದೆಂದು ಭಾವಿಸುವದಿಲ್ಲ, ಅವನು ಅವುಗಳನ್ನೆಲ್ಲ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ತಪ್ಪದೆ ಭಗವಂತನ ಕಡೆಗೇ ಹೋಗುವಂತೆ ತಿರುಗಿಸಿಕೊಳ್ಳುತ್ತಾನೆ.

# 14. ಪ್ರೇಮದ ವಿಶೇಷರೂಪಗಳು

ಪ್ರೇಮವು ಕಾಣಿಸಿಕೊಳ್ಳುವ ರೂಪಗಳಲ್ಲಿ ಕೆಲವನ್ನು ಇಲ್ಲಿ ತಿಳಿಸುತ್ತೇವೆ. ಇದರ ಮೊಟ್ಟಮೊದಲನೆಯ ರೂಪವು **ಬಹುಮಾನವು.**[1] **56** ದೇವಾಲಯಗಳಲ್ಲಿಯೂ ಪುಣ್ಯ ಕ್ಷೇತ್ರಗಳಲ್ಲಿಯೂ ಜನರಿಗೆ ಪೂಜ್ಯಬುದ್ಧಿಯಿರುವದೇಕೆ ? ಏಕೆಂದರೆ ಅಲ್ಲಿ ಆ ಪರಮಾತ್ಮನ ಅರ್ಚನೆ ನಡೆಯುತ್ತಿರುವದು. ಆ ಪವಿತ್ರಕ್ಷೇತ್ರಗಳಲ್ಲೆಲ್ಲ ಆತನ ಸಾನ್ನಿಧ್ಯವಿರುವದು. ಎಲ್ಲಾ ದೇಶದವರೂ ಧರ್ಮೋಪದೇಶಕರಾದ ಆಚಾರ್ಯರುಗಳನ್ನು ಗೌರವದಿಂದ ಕಾಣುತ್ತಾರಷ್ಟೆ ಇದಕ್ಕೆ ಕಾರಣವೇನು? ಮನುಷ್ಯನ ಹೃದಯಕ್ಕೆ ಅಂಥವರಲ್ಲಿ ಪೂಜ್ಯಬುದ್ಧಿಯಿರುವದೇ ಸ್ವಾಭಾವಿಕವು, ಏಕೆಂದರೆ ಈ ಉಪದೇಶಕರೆಲ್ಲರೂ ಭಗವತ್ತತ್ತ್ವವನ್ನು ಬೋಧಿಸುತ್ತಿರುವರು. ಮುಖ್ಯವಾಗಿ ಪೂಜ್ಯಬುದ್ಧಿಯೆಂಬುದು ಪ್ರೇಮದಿಂದಲೇ ಉಂಟಾಗಿರುವದು; ನಮಗೆ ಯಾವಾತನಲ್ಲಿ ಪ್ರೇಮವಿರುವದಿಲ್ಲವೋ ಅವನನ್ನು ಗೌರವಿಸುವದು ನಮ್ಮ ಯಾರಿಂದಲೂ ಆಗದ ಮಾತು.

ಇನ್ನು **ಪ್ರೀತಿ**ಯೆಂಬುದು ಎರಡನೆಯ ರೂಪವು. ಜನರಿಗೆ ವಿಷಯಗಳಲ್ಲಿ ಎಷ್ಟು ಪ್ರೀತಿಯಿರುವದು ! ಅವರು ತಮಗೆ ಇಷ್ಟವಾಗಿರುವ, ತಮ್ಮ ಇಂದ್ರಿಯಗಳಿಗೆ ಮೆಚ್ಚಾಗಿರುವ ವಸ್ತುಗಳನ್ನು ದೊರಕಿಸಿಕೊಳ್ಳುವದಕ್ಕೆ ಎಲ್ಲಿಗೆ ಬೇಕೆಂದರೂ ಹೋಗುವರು, ಎಷ್ಟು ಅಪಾಯಕ್ಕಾದರೂ ಒಳಗಾಗುವರು. ಭಕ್ತನಲ್ಲಿಯೂ ಇಂಥ ಬಲವಾದ ಪ್ರೇಮವೇ ಇರಬೇಕು, ಆದರೆ ಅದು ಭಗವಂತನ ವಿಷಯದಲ್ಲಿರಬೇಕು, ಅಷ್ಟೆ.

ಮೂರನೆಯ ರೂಪವು ಯಾವದೆಂದರೆ **ವಿರಹ**ವು. ಇದು ತನ್ನ ಪ್ರಿಯವಸ್ತುವಿನ ಅಗಲುವಿಕೆಯಿಂದಾದ ಪರಮದುಃಖವೆಂಬ ಅತ್ಯಂತ ಆಹ್ಲಾದಕರವಾದ ವೃತ್ತಿಯು. ತಾನು ಪರಮಾತ್ಮನನ್ನು ಸೇರಲಿಲ್ಲವಲ್ಲ, ಯಾವದೊಂದು ವಸ್ತುವೇ ನಿಜವಾಗಿ ಈ ಜನ್ಮದಲ್ಲಿ ಅರಿತುಕೊಳ್ಳುವದಕ್ಕೆ ಯೋಗ್ಯವಾದದ್ದೋ ಅದೊಂದನ್ನು ಅರಿತುಕೊಳ್ಳಲಿಲ್ಲವಲ್ಲ !- ಎಂದು ಅತ್ಯಂತಖಿನ್ನನಾಗಿ ಏತರಿಂದಲೂ ತೃಪ್ತಿಯಿಲ್ಲದೆ ಉನ್ಮತ್ತನಂತೆ ಇದ್ದರೆ **ವಿರಹ**ವೆಂದು ಹೆಸರು.

---

1. ಈ ಅಧ್ಯಾಯದ ಬಹುಭಾಗವನ್ನು ಶಾಂಡಿಲ್ಯಸೂತ್ರ (2-1-44) ದ ಆಧಾರದ ಮೇಲೆ ಬರೆದಿರುತ್ತದೆ. ಹಿಂದಿನ ಸಂಸ್ಕರಣದಲ್ಲಿ ನಾವು ಉಪಯೋಗಿಸಿದ್ದ ''ಸಮ್ಮಾನ''ವೆಂಬ ಶಬ್ದಕ್ಕಿಂತ ''ಬಹುಮಾನ''ವೆಂಬ ಶಬ್ದವೇ ಇಲ್ಲಿ ಹೆಚ್ಚು ಒಪ್ಪುವದೆಂತ ತೋರುತ್ತದೆ ; ಏಕೆಂದರೆ ಸಮ್ಮಾನವೆಂದರೆ ನೇರಾಗಿ ಪರಮಾತ್ಮನನ್ನೇ ಗೌರವಿಸುವದು, ಬಹುಮಾನವೆಂದು ಆತನ ಸಂಬಂಧವಿರುವ ಪದಾರ್ಥಗಳನ್ನೂ ಗೌರವಿಸುವದು.

ಈ ಸ್ಥಿತಿಯಲ್ಲಿ ತನ್ನ ಪ್ರಿಯವಸ್ತುವೊಂದನ್ನು ಬಿಟ್ಟು ಮತ್ತೆ ಯಾವದನ್ನು ಕಂಡರೂ ಮನಸ್ಸಿಗೆ ಅಸಮಾಧಾನವುಂಟಾಗುವದು. ಇದೇ **ಇತರ ವಿಚಿಕಿತ್ಸೆಯು.**[1] ಲೌಕಿಕಪ್ರೇಮದಲ್ಲಿಯೂ ಈ ಬಗೆಯ ಮನಃಸ್ಥಿತಿಯು ಎಷ್ಟೋ ಕಡೆಗಳಲ್ಲಿ ಕಾಣುತ್ತಿರುವದು. ಗಂಡಸರಲ್ಲಿ ಹೆಂಗಸರೂ ಹೆಂಗಸರಲ್ಲಿ ಗಂಡಸರೂ ನಿಜವಾಗಿಯೂ ಅತ್ಯಂತವಾಗಿಯೂ ಕಾಮಯುಕ್ತರಾಗಿರುವಾಗ ತಮ್ಮ ಪ್ರಿಯರಿಗಿಂತ ಬೇರೆಯಾಗಿ ಯಾರೊಬ್ಬರು ಎದುರಿಗೆ ಬಂದರೂ ಅವರಿಗೆ ಸ್ವಾಭಾವಿಕವಾಗಿ ಒಂದು ಬಗೆಯ ಅಸಮಾಧಾನವಾಗುತ್ತಿರುವದು. ಪರಭಕ್ತಿಗೆ ಮನಸ್ಸು ವಶವಾಯಿತೆಂದರೆ ತನಗೆ ಇಷ್ಟವಲ್ಲದ ವಸ್ತುಗಳು ಬಂದರೆ ಇಂಥ ಅಸಮಾಧಾನವೇ ಉಂಟಾ ಗುತ್ತಿರುವದು. ಆಗಿನ ಕಾಲದಲ್ಲಿ ದೇವರ ಹೊರತು ಉಳಿದ ವಿಚಾರದಲ್ಲಿ ಮಾತಾಡುವದು ಕೂಡ ಅಸಹ್ಯವಾಗುವದು. ''ಆತನನ್ನು ನೆನೆಯಿರಿ, ಆತನನ್ನೇ ನೆನೆಯಿರಿ, ಉಳಿದ ವ್ಯರ್ಥವಾದ ಹರಟೆಗಳನ್ನೆಲ್ಲ ಬಿಟ್ಟುಬಿಡಿ !''[57](ಮುಂ.) ಎಂಬ ವಚನದಂತೆ ಆ ಪರಮಾತ್ಮನ ವಿಷಯ ವಾಗಿಯೇ ಯಾರು ಮಾತನಾಡುತ್ತಿರುವರೋ ಅವರೇ ಭಕ್ತನಿಗೆ ಮಿತ್ರರಾಗಿ ತೋರುವರು ; ಮಿಕ್ಕ ವಿಷಯಗಳನ್ನು ಕುರಿತು ಮಾತನಾಡುವವರೇ ಶತ್ರುಗಳಾಗಿ ತೋರುವರು.

ಪ್ರೇಮವು ಇನ್ನೂ ಉತ್ಕೃಷ್ಟವಾದರೆ ಅದು **"ತದರ್ಥಪ್ರಾಣಸ್ಥಾನ"**[2] ಎಂಬ ರೂಪವನ್ನು ಹೊಂದುವದು. ಆಗ ಭಕ್ತನು ತನ್ನ ಪ್ರಿಯಧ್ಯೇಯಕ್ಕಾಗಿಯೇ ಪ್ರಾಣವನ್ನು ಧರಿಸಿರುವನು. ಆ ಪ್ರಿಯನಿಗಾಗಿಯೇ ಈ ಬಾಳ್ವೆಯು ಮನೋಹರವಾಗಿರುವದೆಂದೂ ಅವನಿಗೋಸ್ಕರವೇ ಈ ಬಾಳ್ವೆಯನ್ನು ಬಾಳುವದು ಯುಕ್ತವಾಗಿರುವದೆಂದೂ ಆತನಿಗೆ ತೋರುವದು. ಆತನ ಪ್ರೇಮವಿಲ್ಲದೆ ಇಂಥ ಪ್ರಾಣವು ಒಂದು ಕ್ಷಣವೂ ನಿಂತಿರಲಾರದು, ಆ ಪ್ರಿಯನ ಸ್ಮರಣೆ ಯಿಂದಲೇ ಈ ಜೀವನವು ಸುಖಕರವಾಗಿರುವದು.

ಭಕ್ತಿಯ ಮಾರ್ಗದಲ್ಲಿ ಸಾಧಕನು ಪೂರ್ಣವಾದಾಗ ಅದಕ್ಕೆ **ತದೀಯತೆ** ಎಂಬ ರೂಪವು ಬರುವದು. ಆಗ ಭಕ್ತನು ಧನ್ಯನಾದನು, ಭಗವಂತನನ್ನು ಸೇರಿದನು, ಅವನು ಆತನ ಚರಣಾರವಿಂದವನ್ನು ಮುಟ್ಟಿದಂತಾಯಿತು. ಆಗ ಭಕ್ತನ ಸ್ವರೂಪವೇ ಪರಿಶುದ್ಧವಾಗಿ ಬೇರೊಂದು ಸ್ಥಿತಿಯನ್ನೇ ಹೊಂದುವದು. ಆಗ ಅವನು ಈ ಜೀವನಯಾತ್ರೆಯಲ್ಲಿ ಮಾಡಬೇಕಾಗಿದ್ದ ಕೆಲಸವನ್ನೆಲ್ಲ

1. ಇಂಗ್ಲಿಷು ಪುಸ್ತಕಗಳಲ್ಲಿ ''ಏಕರತಿವಿಚಿಕಿತ್ಸೆ'' ಎಂದಿದೆ. ಇದನ್ನು ಸೂತ್ರಕ್ಕನುಗುಣವಾಗಿ 'ಇತರವಿಚಿಕಿತ್ಸೆ' ಎಂದು ತಿದ್ದಿದೆ.

2. ಇಲ್ಲಿ ಸೂತ್ರದಲ್ಲಿ 'ಮಹಿಮಖ್ಯಾತಿ' ಎಂಬ ರೂಪವೊಂದನ್ನು ಹೆಚ್ಚಾಗಿ ಕೊಟ್ಟಿರುತ್ತದೆ. ಅದಾದಮೇಲೆ ''ತದರ್ಥಪ್ರಾಣಸ್ಥಾನ''ವೆಂಬುದನ್ನು ಅಲ್ಲಿ ಕೊಟ್ಟಿದೆ.

ಮಾಡಿದಂತಾಯಿತು. ಆದರೂ ಎಷ್ಟೋ ಜನ ಇಂಥ ಭಕ್ತರು ಆ ಪರಮಾತ್ಮನ ಸೇವೆಯನ್ನು ಮಾಡಬೇಕೆಂದೇ ಪ್ರಾಣವನ್ನು ಧರಿಸಿಕೊಂಡಿರುವರು. ಈ ಲೋಕದಲ್ಲಿ ಅವರು ಬಿಡಲಾರದೆ ಇರುವದು ಇದೊಂದೇ ಸುಖ. ''ಮಿಕ್ಕದ್ದೇನೂ ಬೇಕಿಲ್ಲವೆಂದು ಯಾರು ನಿತ್ಯತೃಪ್ತರಾಗಿರುವರೋ, ಯಾರ ಹೃದಯ ಗ್ರಂಥಿಗಳೆಲ್ಲ ಭೇದವಾಗಿರುವವೋ ಅಂಥವರು ಕೂಡ ಆ ಪರಮಾತ್ಮನನ್ನು ಹೇತುವಿಲ್ಲದೆ ಪ್ರೇಮಕ್ಕಾಗಿಯೇ ಪ್ರೀತಿಸುತ್ತಿರುವರು. ಆ ಹರಿಯಲ್ಲಿ ಇಂಥ ಗುಣಗಳಿರುವವು''[1] ''ಆ ಪರಮೇಶ್ವರನನ್ನು ಎಲ್ಲಾ ದೇವತೆಗಳೂ ಮುಮುಕ್ಷುಗಳೂ ಬ್ರಹ್ಮಜ್ಞಾನಿಗಳೂ ನಮಸ್ಕರಿಸುತ್ತಿರುವರು''**58** (ನೃ.ಪೂ.)ಪ್ರೇಮದ ಶಕ್ತಿಯು ಇಂಥದ್ದು! ಯಾವನೇ ಆಗಲಿ, ತನ್ನನ್ನು ತಾನು ಸಂಪೂರ್ಣವಾಗಿ ಮರೆತುಬಿಟ್ಟು ತನ್ನದೆಂಬುದೇ ಯಾವುದೂ ಇಲ್ಲವೆಂದೂ ಯಾವಾಗ ಅವರಿಗೆ ತೋರುವದೋ ಆಗಲೇ ಅವನಿಗೆ **ತದೀಯತೆ** ಎಂಬ ಸ್ಥಿತಿಯು ಬಂದಂತಾಯಿತು. ಲೌಕಿಕಪ್ರೇಮದಲ್ಲಿ ಕೂಡ ತನ್ನ ಪ್ರಿಯನಿಗೆ ಸಂಬಂಧಪಟ್ಟ ವಸ್ತುವೆಲ್ಲವೂ ತನಗೂ ಪವಿತ್ರವಾಗಿ ಅತ್ಯಂತಪ್ರಿಯವಾಗಿರುವದು ; ತನ್ನ ಹೃದಯವಲ್ಲಭನಿಗೆ ಸೇರಿದ ಒಂದು ವಸ್ತ್ರದ ತುಂಡಿನ ಮೇಲೆ ಕೂಡ ಪ್ರೇಮವುಂಟಾಗಿರುವದು. ಅಲ್ಲವೆ ? ಇದೇ ರೀತಿಯಲ್ಲಿ ಒಬ್ಬ ಮನುಷ್ಯನಿಗೆ ಭಗವಂತನಲ್ಲಿ ಪ್ರೇಮವುಂಟಾಯಿತೆಂದರೆ ಈ ಇಡಿಯ ಜಗತ್ತೇ ಆತನಿಗೆ ಪ್ರಿಯವಾಗುವದು, ಏಕೆಂದರೆ ಆಗ ಇದೆಲ್ಲವೂ ಆ ಪರಮಾತ್ಮನದೇ ಆಗಿರುವದು.

---

1. ಹಿಂದೆ 14ನೆಯ ಪುಟದಲ್ಲಿ ಉದಾಹರಿಸಿರುವ 'ಭಾಗವತವಚನ'ವೇ ಇದು. ಇಂಗ್ಲಿಷುಪುಸ್ತಕದಲ್ಲಿ 'ಎಲೈ ರಾಜನೆ' ಎಂಬ ಮಾತುಗಳು ಇಲ್ಲಿಯೂ ಹೆಚ್ಚಾಗಿ ಬಿದ್ದಿವೆ.

# 15. ಸರ್ವಭೂತಪ್ರೇಮವೂ ಅದರಿಂದುಂಟಾಗುವ ಆತ್ಮನಿವೇದನವೂ [1]

'ಸಮಷ್ಟಿ' ಯನ್ನು ಎಂದರೆ ಒಟ್ಟನ್ನು ಪ್ರೀತಿಸದೆ 'ವ್ಯಷ್ಟಿ'ಯನ್ನು ಎಂದರೆ ಬಿಡಿಯನ್ನು ಪ್ರೀತಿಸುವದು ಹೇಗೆ ಸಾಧ್ಯವಾದೀತು ? ಪರಮಾತ್ಮನೇ ಸಮಷ್ಟಿಯು, ಎಂದರೆ ಎಲ್ಲವನ್ನೂ ತನ್ನೊಳಗೆ ಅಡಕಮಾಡಿಕೊಂಡಿರುವ ಸರ್ವಸಾಮಾನ್ಯರೂಪವಾದ ಒಟ್ಟು; ನಮಗೆ ಎದುರಿಗೆ ಕಾಣುತ್ತಿರುವ ಪ್ರಪಂಚವೇ ವ್ಯಷ್ಟಿಯು, ಎಂದರೆ ಅದರ ವಿಶೇಷರೂಪವು. ಆದ್ದರಿಂದ ಪ್ರಪಂಚವನ್ನೆಲ್ಲ ಪ್ರೀತಿಸಬೇಕಾದರೆ ಸಮಷ್ಟಿಯನ್ನು ಪ್ರೀತಿಸಬೇಕು. ಆ ಸಮಷ್ಟಿಯಲ್ಲಿ ಕೋಟ್ಯನುಕೋಟಿ ವ್ಯಷ್ಟಿವಿಶೇಷಗಳು ಅಂತರ್ಭೂತವಾಗಿರುವವು. ಭರತಖಂಡದ ತತ್ತ್ವಜ್ಞರು ಬರಿಯ ವಿಶೇಷಗಳನ್ನೇ ವಿಚಾರಮಾಡುತ್ತಾ ಕೂತುಕೊಳ್ಳುವದಿಲ್ಲ, ಅವರು ವಿಶೇಷಗಳನ್ನು ಒಂದು ಸಲ ಹೀಗೆ ನೋಡಿ ಆ ವಿಶೇಷಗಳನ್ನೆಲ್ಲ ಒಳಗೊಂಡಿರುವ ಸಾಮಾನ್ಯವು ಯಾವದೆಂಬುದನ್ನು ಕಂಡುಹಿಡಿಯುವದಕ್ಕೆ ಕೂಡಲೆ ಪ್ರಯತ್ನಮಾಡುವರು. ಭರತಖಂಡದ ತತ್ತ್ವಶಾಸ್ತ್ರದಲ್ಲಿಯೇ ಆಗಲಿ ಧರ್ಮದಲ್ಲಿಯೇ ಆಗಲಿ, ಎಲ್ಲಕ್ಕೂ **ಸಾಮಾನ್ಯವು** ಯಾವದೆಂಬುದನ್ನು ಗೊತ್ತುಪಡಿಸುವದೇ ಮುಖ್ಯಗುರಿಯಾಗಿರುವದು. ಪ್ರಪಂಚದ ಪೂರ್ಣತತ್ತ್ವವೇನು, ಯಾವದೊಂದನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವದು?- ಎಂಬುದನ್ನು ಕಂಡುಹಿಡಿಯುವದೇ **ಜ್ಞಾನಯೋಗಿ**ಯ ಉದ್ದೇಶವು. ಯಾವನೊಬ್ಬ ಪರಮಪುರುಷನು ಎಲ್ಲರ ಹೃದಯದಲ್ಲಿಯೂ ಇರುತ್ತಿರುವನೋ, ಯಾವಾತನೊಬ್ಬನನ್ನು ಪ್ರೀತಿಸಿದರೆ ಇಡಿಯ ವಿಶ್ವವನ್ನೇ ಪ್ರೀತಿಸಿದಂತಾಗುವದೋ-ಅವನನ್ನು ಸಾಕ್ಷಾತ್ಕಾರಮಾಡಿಕೊಳ್ಳ ಬೇಕೆಂಬುದೇ **ಭಕ್ತನ** ಅಭಿಲಾಷೆಯು. ಯಾವದೊಂದು ಶಕ್ತಿಯು ಎಲ್ಲರಿಗೂ ಸಮಾನವಾಗಿರುವದೋ, ಯಾವದೊಂದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡರೆ ಇಡಿಯ ಪ್ರಪಂಚವನ್ನೇ ಸ್ವಾಧೀನದಲ್ಲಿಟ್ಟುಕೊಂಡಂತಾಗುವದೋ- ಅದನ್ನು ಸಂಪಾದಿಸಿಕೊಳ್ಳ ಬೇಕೆಂಬುದು **ಯೋಗಿಯ** ಬಯಕೆ. ಭರತಖಂಡದ ಇತಿಹಾಸವೆಲ್ಲ ಇದೇ. ಭೌತಿಕಶಾಸ್ತ್ರದಲ್ಲಿಯೇ ಆಗಲಿ, ಮನಃಶಾಸ್ತ್ರದಲ್ಲಿಯೇ ಆಗಲಿ, ಭಕ್ತಿಯಲ್ಲಿಯೇ ಆಗಲಿ, ಜ್ಞಾನ ದಲ್ಲಿಯೇ ಆಗಲಿ, ಅಲ್ಲಿಯ ಜನರ ಮನಸ್ಸು ಸಾಮಾನ್ಯವಾದ ತತ್ತ್ವವೊಂದನ್ನು ಕಂಡು ಹಿಡಿದುಕೊಳ್ಳಬೇಕೆಂಬುದರಲ್ಲಿಯೇ ನಿರತವಾಗಿರುವದೆಂಬುದು ಕಂಡುಬರುತ್ತಿರುವದು.

---

1. ಹಿಂದಿನ ಅಧ್ಯಾಯದಲ್ಲಿ ಉದಾಹರಿಸಿದ ಶಾಂಡಿಲ್ಯಸೂತ್ರದಲ್ಲಿರುವ 'ಸರ್ವತದ್ಭಾವ', 'ಆಪ್ರಾತಿಕೂಲ್ಯ' ಎಂಬ ಭಕ್ತಿರೂಪಗಳನ್ನು ಈ ಅಧ್ಯಾಯದಲ್ಲಿ ವರ್ಣಿಸಿರುತ್ತದೆ.

ಇದಿರಲಿ. ಭಕ್ತನು ಮಾಡಿಕೊಂಡಿರುವ ತೀರ್ಮಾನವೇನೆಂದರೆ ಸುಮ್ಮನೆ ಒಬ್ಬೊಬ್ಬರನ್ನೇ ಪ್ರೀತಿಸುತ್ತಾಹೋದರೆ ಅನಂತಕಾಲವಾದರೂ ಇಡಿಯ ಪ್ರಪಂಚವನ್ನೇ ಪ್ರೀತಿಸುವದೆಂಬುದು ಶಕ್ಯವಾಗಲಾರದು. ಆದರೆ ಎಲ್ಲಾ ಪ್ರೇಮದ ಸಮಷ್ಟಿಯು ಪರಮಾತ್ಮನೇ ಎಂಬ, ಈ ಜಗತ್ತಿನಲ್ಲಿರುವ ಜೀವರು ಬದ್ಧರಾಗಲಿ, ಮುಕ್ತರಾಗಲಿ, ಮುಮುಕ್ಷುಗಳಾಗಲಿ - ಆ ಎಲ್ಲರ ಪ್ರವೃತ್ತಿಗಳ ಒಟ್ಟೇ ಪರಮಾತ್ಮನೆಂಬ, ಮೂಲರಹಸ್ಯವನ್ನು ಅರಿತುಕೊಂಡರೆ ಆಗ ಮಾತ್ರ ಸರ್ವತ್ರ ಪ್ರೇಮವನ್ನು ಮಾಡುವದು ಸಾಧ್ಯವಾಗುತ್ತದೆ. ಪರಮಾತ್ಮನೇ ಸಮಷ್ಟಿಯು, ನಾಮರೂಪಗಳಿಂದ ವ್ಯಾಕೃತವಾಗಿ ಅಭಿವ್ಯಕ್ತವಾಗಿರುವ ಆತನ ವ್ಯಷ್ಟಿಸ್ವರೂಪವೇ ಈ ಪ್ರಪಂಚವು. ಸಮಷ್ಟಿಯನ್ನು ಪ್ರೀತಿಸಿದರೆ ಎಲ್ಲವನ್ನೂ ಪ್ರೀತಿಸಿದಂತಾಯಿತು. ಪ್ರಪಂಚವನ್ನು ಪ್ರೀತಿಸುವದೂ **ಪರೋಪಕಾರ**ಮಾಡುವದೂ ಆಗ ಮಾತ್ರವೇ ಸುಲಭವಾಗುವದು. ಈ ಸಾಮರ್ಥ್ಯವು ಬರಬೇಕಾದರೆ ಮೊದಲು ಈಶ್ವರನಲ್ಲಿ ಭಕ್ತಿಯುಂಟಾಗಬೇಕು, ಹಾಗಿಲ್ಲದಿದ್ದರೆ ಪರೋಪಕಾರವನ್ನು ಮಾಡುವದೆಂಬುದೇನೂ ಬಿಟ್ಟಿಬಿದ್ದ ಕೆಲಸವಲ್ಲ. ಭಕ್ತನಾದವನು ''ಎಲ್ಲವೂ ಆ ಭಗವಂತನದೇ, ಆತನು ನನ್ನನ್ನು ಪ್ರೀತಿಸುತ್ತಾನೆ, ನಾನು ಆತನನ್ನು ಪ್ರೀತಿಸುತ್ತೇನೆ'' ಎನ್ನುತ್ತಿರುವನು. ಈ ರೀತಿಯಲ್ಲಿ ಭಕ್ತನ ದೃಷ್ಟಿಯಲ್ಲಿ ಎಲ್ಲಾ ವಸ್ತುಗಳೂ ಆ ಭಗವಂತನೇ ಆಗಿರುವವೆಂಬುದರ ಮೇಲೆ ಪರಮಪೂಜ್ಯವಾಗಿರುವವು. ಎಲ್ಲರೂ ಪರಮೇಶ್ವರನ ಮಕ್ಕಳು, ಆತನ ಶರೀರವು, ಆತನ ವಿಭೂತಿಯು. ಹೀಗಾದಮೇಲೆ ಯಾರನ್ನಾದರೂ ಹಿಂಸೆಮಾಡುವಕ್ಕಾದೀತೆ? ಯಾರೊಬ್ಬರನ್ನಾದರೂ ಪ್ರೇಮವಿಲ್ಲದೆ ಕಾಣುವದಕ್ಕಾದೀತೆ? ಭಗವದ್ಭಕ್ತಿಯೊಂದು ಉಂಟಾಯಿತೆಂದರೆ ಪ್ರಪಂಚದಲ್ಲಿರುವ ಪ್ರತಿಯೊಬ್ಬರನ್ನೂ ಪ್ರೀತಿಸುವದೆಂಬ ಫಲವು ಅವಶ್ಯವಾಗಿ ಆಗಿಯೇ ತೀರಬೇಕು. ಭಗವಂತನ ಸಾಮೀಪ್ಯಕ್ಕೆ ಹೋದಹಾಗೆಲ್ಲ ಎಲ್ಲಾ ಭೂತಗಳೂ ಆತನಲ್ಲಿಯೇ ಇರುವವೆಂಬುದು ಹೆಚ್ಚುಹೆಚ್ಚಾಗಿ ಗೊತ್ತಾಗುವದಕ್ಕೆ ಮೊದಲಾಗುವದು.

ಈ ಪರಭಕ್ತಿಯ ಆನಂದವು ಲಭಿಸುವಾಗ ಜೀವನಿಗೆ ಪ್ರತಿಯೊಂದು ವಸ್ತುವಿನಲ್ಲಿಯೂ ಆ ಪರಮಾತ್ಮನೇ ಕಾಣುವನು.[1] ಹೀಗೆ ನಮ್ಮ ಹೃದಯವೆಂಬುದು ನಿತ್ಯಪ್ರೇಮರಸದ ಉಕ್ಕಂದವಾಗುವದು. ಈ ಭಕ್ತಿಯ ಮೇಲುಮೇಲಿನ ಭೂಮಿಕೆಗಳನ್ನು ಸೇರಿದರೆ ಈ ಪ್ರಪಂಚದಲ್ಲಿರುವ ವಸ್ತುಗಳಿಗೆ ಪರಸ್ಪರವಾಗಿ ತೋರುವ ಸಣ್ಣಪುಟ್ಟ ತಾರತಮ್ಯಗಳು ಅದೃಶ್ಯವಾಗುವವು : ಆಮೇಲೆ ಮನುಷ್ಯನು ಮನುಷ್ಯನಾಗಿ ತೋರುವದಿಲ್ಲ, ಭಗವಂತನ ರೂಪವಾಗಿಯೇ ತೋರುವನು ; ಇನ್ನು ಪ್ರಾಣಿಯು ಪ್ರಾಣಿಯಾಗಿ ತೋರುವದಿಲ್ಲ

1. ಇದೇ ''ಸರ್ವತದ್ಭಾವ''ವೆಂಬ ಭಕ್ತಿರೂಪವು.

ಭಗವದ್ರೂಪವಾಗಿಯೇ ತೋರುವದು; ಕೊನೆಗೆ ಒಂದು ಹುಲಿಯು ಕೂಡ ಹುಲಿಯಾಗಿರುವದಿಲ್ಲ, ಭಗವಂತನ ವಿಭೂತಿ ವಿಶೇಷವೇ ಆಗಿರುವದು. ಹೀಗೆ ಈ ಭಕ್ತಿಯ ಉತ್ಕೃಷ್ಟಸ್ಥಿತಿಯಲ್ಲಿ ಪ್ರತಿಯೊಬ್ಬ ಮನುಷ್ಯನೂ ಪ್ರತಿಯೊಂದು ಪ್ರಾಣಿಯೂ ಪ್ರತಿಯೊಂದು ವಸ್ತುವೂ ಪೂಜ್ಯವಾಗಿರುವದು. "ಹೀಗೆ ಹರಿಪರಮಾತ್ಮನು ಸರ್ವಭೂತಗಳಲ್ಲಿಯೂ ಸನ್ನಿಹಿತನಾಗಿರುವನೆಂದರಿತುಕೊಂಡು ಜ್ಞಾನಿಗಳಾದವರು ಸಕಲಪ್ರಾಣಿಗಳಲ್ಲಿಯೂ ಒಂದಿಷ್ಟು ಹೆಚ್ಚು ಕಡಿಮೆಯೂ ಇಲ್ಲದ ಭಕ್ತಿಯನ್ನು ಮಾಡುತ್ತಿರಬೇಕು" (ವಿ.ಪು)[59]

ಹೀಗೆ ಎಲ್ಲವನ್ನೂ ಒಳಕೊಳ್ಳುವ ಈ ನಿರತಿಶಯಪ್ರೇಮದಿಂದ ಸಂಪೂರ್ಣವಾದ ಆತ್ಮನಿವೇದನವುಂಟಾಗುವದು ; ಏನು ಸಂಭವಿಸಿದರೂ ತನಗೆ ಪ್ರತಿಕೂಲವಾಗಿ ಸಂಭವಿಸಲಾರದೆಂಬ ಮನೋನಿಶ್ಚಯವುಂಟಾಗುವದು. ಇದೇ **ಅಪ್ರಾತಿಕೂಲ್ಯ**ವೆಂಬ ಭಕ್ತಿರೂಪವು. ಆಗ ಭಕ್ತನಿಗೆ ದುಃಖವು ಬಂದರೆ, "ದುಃಖವೆ, ಬಂದೆಯ, ಇತ್ತಬಾ" ಎನ್ನುವನು ; ಆಪತ್ತು ಬಂದರೆ 'ಆಪತ್ತೆ ಬಾ ಬಾ, ನೀನೂ ಆ ಪ್ರಿಯನ ಕಡೆಯಿಂದಲೇ ಬಂದಿರುವೆ' ಎನ್ನುವನು ; ಒಂದು ಹಾವು ಬಂದರೆ 'ಹಾವೆ, ಇತ್ತಬಾ' ಎಂದು ಕರೆಯುವನು.[1] ಮರಣವೇ ಬಂದರೂ ಇಂಥ ಭಕ್ತನು ಮುಗುಳುನಗೆಯಿಂದ ಅದಕ್ಕೆ ಸ್ವಾಗತವನ್ನು ಕೊಡುವನು ; 'ಇವೆಲ್ಲ ನನ್ನ ಬಳಿಗೆ ಬರುತ್ತಿರುವವಲ್ಲ, ನಾನೇ ಧನ್ಯನು ! ಅವಶ್ಯವಾಗಿ ಎಲ್ಲವೂ ಬರಲಿ !' ಎನ್ನುತ್ತಿರುವನು. ಪರಮಾತ್ಮನ ಪರಭಕ್ತಿಯುಂಟಾಗಿರುವ ಈ ಅಪ್ರಾತಿಕೂಲ್ಯವೆಂಬ ಸ್ಥಿತಿಯು ಬಂದಿರುವಾಗ ಭಕ್ತನಿಗೆ ತನಗೆ ಆಗುತ್ತಿರುವದು ಸುಖವು ಅಥವಾ ದುಃಖವು-ಎಂಬ ಭೇದಭಾವನೆಯೇ ಅಳಿಸಿಹೋಗಿರುವದು. ದುಃಖವಾಗಲಿ, ವಿಪತ್ತಾಗಲಿ, ತನಗೆ ಬಂತೆಂದು ಗೋಳಿಡುವದನ್ನೇ ಅವನು ಅರಿಯನು. ಈ ರೀತಿಯಲ್ಲಿ ಪ್ರೇಮಮಯನಾಗಿರುವ ಭಗವಂತನ ಸಂಕಲ್ಪಕ್ಕೆ ಸ್ವಲ್ಪವೂ ಪ್ರತಿಕೂಲವಾಗದೆ ಆತ್ಮಾರ್ಪಣೆಯನ್ನು ಮಾಡುವದೆಂಬುದೇ ಒಂದು ಪರಮಲಾಭವು ; ಭಾರಿಭಾರಿಯ ಜಯಪರಾಕ್ರಮಗಳಿಂದಾಗುವ ಕೀರ್ತಿಗಿಂತಲೂ ಅದು ನಿಜವಾಗಿಯೂ ಹೆಚ್ಚು ಅಮೂಲ್ಯವಾಗಿರುವದು.

ಲೋಕದಲ್ಲಿ ಬಹುಜನರಿಗೆ ಶರೀರವೇ ಸರ್ವಸ್ವವಾಗಿರುತ್ತದೆ. ಅವರಿಗೆ ಶರೀರವೇ ವಿಶ್ವ, ಶರೀರಭೋಗವೇ ಜೀವನದ ಸರ್ವಸ್ವ. ಶರೀರದ ಸೇವೆ, ಭೋಗ್ಯವಸ್ತುಗಳ ಸೇವೆ - ಎಂಬ ಈ ಪಿಶಾಚಿಯು ನಮ್ಮೆಲ್ಲರನ್ನೂ ಹಿಡಿದುಕೊಂಡಿರುವದು. ಮಹಾಮಹಾಪಾಂಡಿತ್ಯದ ಮಾತುಗಳನ್ನಾಡುತ್ತಿರುವೆವು, ಉನ್ನತವಾದ ವಿಚಾರದ ಆಕಾಶದಲ್ಲಿ ಹಾರಾಡುತ್ತಲೂ ಇರುವೆವು.

1. 'ಪವ್ಹಾರಿಬಾಬಾ' ಎಂಬ ಗಾಸ್ಸಿಪುರದ ಸಾಧುವನ್ನು ಸ್ವಾಮಿಗಳವರು ಇಲ್ಲಿ ಮನಸ್ಸಿಗೆ ತಂದುಕೊಂಡಿರ ಬಹುದು.

ಆದರೇನು ? ನಾವೆಲ್ಲ ಹಾಳೆಯ ಹದ್ದುಗಳಂತೆಯೇ[1] ಇರುವೆವು ; ಕೆಳಗೆ ಕಾಣಿಸುತ್ತಿರುವ ಕೊಳೆತ ಮಾಂಸದಲ್ಲಿಯೇ ನಮ್ಮ ಮನಸ್ಸೆಲ್ಲ ಕೂತಿರುವದು. ನಮ್ಮ ಶರೀರವು, ಮಸಲ ಒಂದು ಹುಲಿಗೆ ಸಿಕ್ಕಿದರೆ, ಆಗ ಅದನ್ನು ಆ ಪ್ರಾಣಿಗೆ ಸಿಕ್ಕದಂತೆ ಏತಕ್ಕೆ ರಕ್ಷಿಸಿಕೊಳ್ಳಬೇಕು?[2] ಕೊಟ್ಟರೆ ಹುಲಿಗೆ ತೃಪ್ತಿಯೂ ಆಗುವದು, ಅಸ್ವಾರ್ಥತೆಯಿಂದ ಮಾಡುವ ಭಗವತ್ಸೇವೆಗೂ ಈ ಕಾರ್ಯಕ್ಕೂ ಅಷ್ಟೇನೂ ಅಂತರವೂ ಇರುವದಿಲ್ಲ. ನಾನೆಂಬ ಅಭಿಮಾನವೇ ಹುಟ್ಟಡಗಿಹೋಗುವ ಇಂಥ ಸ್ಥಿತಿಯನ್ನು ಮನಸ್ಸಿನಿಂದಾದರೂ ತಂದುಕೊಳ್ಳುವದು ನಮ್ಮಿಂದಾದೀತೆ ? ಭಕ್ತಿಯೋಗದ ಶಿಖರದಲ್ಲಿರುವ ಈ ಸ್ಥಾನವನ್ನು ನೆನಸಿಕೊಂಡರೂ ನಮಗೆ ತಲೆತಿರುಗುವದು. ಇಷ್ಟು ಎತ್ತರಕ್ಕೆ ಏರಿರುವವರು ಈ ಲೋಕದಲ್ಲಿ ತೀರ ಕಡಿಮೆ. ಸ್ವಾರ್ಥತ್ಯಾಗಕ್ಕೆ ಯಾವಾಗಲೂ ಸಿದ್ಧರಾಗಿರುವ ಯಾವಾಗಲೂ ಮನಃಪೂರ್ವಕವಾಗಿ ಪ್ರವರ್ತಿಸುವ ಈ ಅತ್ಯಂತ ಉನ್ನತಸ್ಥಾನವನ್ನು ಮುಟ್ಟುವವರೆಗೆ ಯಾರೂ ಪೂರ್ಣಭಕ್ತರೆನಿಸಿಕೊಳ್ಳಲಾರರು. ಈ ನಮ್ಮ ದೇಹವನ್ನು ತಕ್ಕಮಟ್ಟಿನ ಆರೋಗ್ಯಸ್ಥಿತಿಯಲ್ಲಿ ಕೆಲವು ದಿನಗಳವರೆಗೆ ಇಟ್ಟುಕೊಳ್ಳುವದು ನಮ್ಮೆಲ್ಲರಿಗೂ ಸಾಧ್ಯವೆಂಬುದು ನಿಜ ; ಆದರೇನು ? ನಮ್ಮ ದೇಹಗಳು ಹೋಗಲೇಬೇಕು. ಅವು ಎಂದಿಗೂ ಶಾಶ್ವತವಲ್ಲ. ಪರೋಪಕಾರಕ್ಕಾಗಿಯೇ ಯಾವ ದೇಹವು ನಾಶವಾಗುವದೋ ಅವರೇ ಧನ್ಯರು. ''ಮಹಾತ್ಮನಾದವನು ತನ್ನ ಐಶ್ವರ್ಯವನ್ನೂ ಕೊನೆಗೆ ಪ್ರಾಣವನ್ನು ಕೂಡ, ಪರೋಪಕಾರಕ್ಕೆಂದೇ ಇಟ್ಟುಕೊಂಡಿರುವನು. ಈ ಲೋಕದಲ್ಲಿ ಮರಣವೆಂಬುದು ಒಂದಲ್ಲದಿದ್ದರೆ ಒಂದುದಿನ ಆಗುವದೆಂಬುದು ಖಂಡಿತ. ಆದ್ದರಿಂದ ಇದು ಪಾಪಕಾರ್ಯದಲ್ಲಿ ಮಡಿಯುವದಕ್ಕಿಂತಲೂ ಪುಣ್ಯಕಾರ್ಯದಲ್ಲಿ ಸಾಯುವದೇ ಮೇಲು''[3] ನಾವು ಐವತ್ತು ವರ್ಷಗಳವರೆಗೋ ನೂರು ವರ್ಷಗಳವರೆಗೋ ಹಾಗೂಹೀಗೂ ಬದುಕಿದ್ದೇವು ; ಆದರೆ ಆಮೇಲೆ? ಸಂಯೋಗವಾದದ್ದು ವಿಯೋಗವಾಗಲೇಬೇಕು, ಸಾಯಲೇಬೇಕು.**60** ಆದ್ದರಿಂದ ಅದು ವಿಯೋಗವಾಗುವ ಕಾಲವು ಬಂದೇ ಬರುವದು. ಏಸು, ಬುದ್ಧ ಮಹಮ್ಮದ - ಎಲ್ಲರೂ ಸತ್ತುಹೋದರು ; ಪ್ರಪಂಚದಲ್ಲಿದ್ದ ಮಹಾತ್ಮರು, ಗುರುಗಳು ಎಲ್ಲರೂ ತೀರಿಹೋದರು. ಈ ನಶ್ವರವಾದ ಪ್ರಪಂಚದಲ್ಲಿ ಎಲ್ಲವೂ

---

1. ಇದೊಂದು ಶ್ರೀರಾಮಕೃಷ್ಣಪರಮಹಂಸರ ಸೂಕ್ತಿಯು.

2. ಬುದ್ಧನು ತನ್ನ ಹಿಂದಿನ ಯಾವದೋ ಒಂದು ಜನ್ಮದಲ್ಲಿ ಹುಲಿಗೆ ಶರೀರವನ್ನರ್ಪಿಸಿದ್ದನೆಂದು ಬುದ್ಧಜಾತಕದಲ್ಲಿದೆ. ಯಾವನೋ ಮಹಾತ್ಮನು 'ಶಿವೋऽಹಮ್' ಎನ್ನುತ್ತಲೇ ಧೈರ್ಯದಿಂದ ಹುಲಿಯ ಬಾಯಿಗೆ ತುತ್ತಾದನೆಂದು ಸ್ವಾಮಿಗಳವರು ಮತ್ತೊಂದು ಕಡೆಯಲ್ಲಿ ಹೇಳಿರುತ್ತಾರೆ.'

3. ಇದರ ಮೂಲವಚನವು ಯಾವದೆಂಬುದು ತಿಳಿಯಲಿಲ್ಲ.

ನುಚ್ಚುನುರಿಯಾಗುತ್ತಿರುವದು, ಆದ್ದರಿಂದ ನಮ್ಮ ವಶದಲ್ಲಿರುವ ಕಾಲವನ್ನು ಆದಷ್ಟು ಉತ್ತಮರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು''[1] ಎಂಬುದೇ ಭಕ್ತನ ಅಭಿಪ್ರಾಯವು. ನಿಜವಾಗಿ ನೋಡಿದರೆ ಸರ್ವಭೂತಗಳ ಸೇವೆಗೆ ನಮ್ಮ ಜೀವನವನ್ನು ಸಜ್ಜುಗೊಳಿಸಿಡುವದೇ ಅದರ ಉತ್ತಮೋಪಯೋಗವು. ಈ ಅಸಹ್ಯವಾದ ಶರೀರಾಭಿಮಾನವೇ-ನಾವು ಈ ಸ್ಥೂಲಶರೀರಮಾತ್ರವೇ, ಕೈಲಾದಷ್ಟುಮಟ್ಟಿಗೂ ಪ್ರಯತ್ನಮಾಡಿ ಇದನ್ನು ಕಾಪಾಡಿಕೊಂಡು ಇದಕ್ಕೆ ಸುಖವನ್ನುಂಟುಮಾಡಿಕೊಳ್ಳಬೇಕು ಎಂಬ ಈ ಒಂದು ಭ್ರಮೆಯೇ-ಈ ಲೋಕದಲ್ಲಿ ರುವ ಸ್ವಾರ್ಥತೆಗೆಲ್ಲ ತೌರುಮನೆ. ನಿಶ್ಚಯವಾಗಿಯೂ ನಾವು ಈ ಶರೀರಕ್ಕಿಂತ ಭಿನ್ನರೇ ಸರಿ ಎಂಬ ತಿಳಿವು ಉಂಟಾದರೆ ನಾವು ಯಾರೊಡನೆಯೂ ಕಾದಾಡಬೇಕಾದದ್ದಿರುವದಿಲ್ಲ ಯಾರೊಡನೆಯೂ ಹೋರಾಡಬೇಕಾದದ್ದಿರುವದಿಲ್ಲ; ಸ್ವಾರ್ಥತೆಯ ಭಾವನೆಗಳೇ ನಮಗೆ ಹತ್ತದ ಹಾಗಾಗುವದು. ಆದ್ದರಿಂದ ಪ್ರಾಪಂಚಿಕವಿಚಾರಗಳಲ್ಲಿ ನಾವು ಸತ್ತವರಂತೆ ಇರಬೇಕೆಂದು ಭಕ್ತನು ಅನ್ನುತ್ತಿರುವನು. ಅವನು ''ಬಂದದ್ದೆಲ್ಲ ಬರಲಿ'' ಎನ್ನುತ್ತಿರುವನು. ಇದೀಗ ಆತ್ಮನಿವೇದನವು. ''ದೇವ, ನಿನ್ನ ಸಂಕಲ್ಪವಿದ್ದಂತೆ ಆಗಲಿ''**61** (ಬೈ.) ಎಂಬ ಪ್ರಾರ್ಥನೆಗೆ ಇದೇ ತಾತ್ಪರ್ಯವೇ ಹೊರತು, ಎಲ್ಲೆಲ್ಲಿಯೂ ಜಗಳವಾಡುತ್ತಲೂ ಹೋರಾಡುತ್ತಲೂ ಇದ್ದುಕೊಂಡು ಈ ನಮ್ಮ ಕ್ಷುದ್ರಬುದ್ಧಿಗಳೇ, ನಮ್ಮ ಲೌಕಿಕವಿಷಯೇಚ್ಛೆ ಗಳೇ, ಪರಮೇಶ್ವರನ ಸಂಕಲ್ಪವೆಂದು ತಿಳಿಯುವದಲ್ಲ. ಸ್ವಾರ್ಥತೆಯಿಂದ ನಾವು ಮಾಡುವ ಹೋರಾಟಗಳಿಂದಲೂ ಏನಾದರೂ ಒಳ್ಳೆಯದೇ ಆಗುತ್ತಿರಬಹುದು ; ಆದರೆ ಅದು ಈಶ್ವರನ ಅನುಗ್ರಹವು. ಪೂರ್ಣಭಕ್ತನಾದವನು ತನಗಾಗಿ ಯಾವದನ್ನೂ ಸಂಕಲ್ಪಿಸಬಾರದು, ಏನನ್ನೂ ತನಗಾಗಿ ಮಾಡಿಕೊಳ್ಳಬಾರದು. ''ದೇವ, ಜನರು ನಿನ್ನ ಹೆಸರಿನಲ್ಲಿ ದೊಡ್ಡದೊಡ್ಡ ಗುಡಿಗೋಪುರಗಳನ್ನು ಕಟ್ಟುವರು, ದೊಡ್ಡದೊಡ್ಡ ದಾನಧರ್ಮಗಳನ್ನು ಮಾಡುವರು ; ನಾನಾದರೋ ಬಡವನು, ನನ್ನಲ್ಲಿ ಏನೂ ಇಲ್ಲ. ಆದ್ದರಿಂದ ಇಗೋ, ಈ ನನ್ನ ಶರೀರವನ್ನು ನಿನ್ನ ಪಾದಕಮಲಕ್ಕೆ ಅರ್ಪಿಸಿರುತ್ತೇನೆ ದೇವ, ನನ್ನನ್ನು ಕೈಬಿಡಬೇಡ''[2] ಹೀಗೆಂಬ ಪ್ರಾರ್ಥನೆಯೇ ಭಕ್ತನ ಹೃದಯಕುಹರದಿಂದ ಬರುತ್ತಿರುವದು. ಪ್ರಿಯನಾದ ಪರಮೇಶ್ವರನಿಗಾಗಿ ಮಾಡುವ ಈ ನಿತ್ಯವಾದ ಆತ್ಮಾರ್ಪಣದ ಅನುಭವವು ಯಾವಾತನಿಗಿರುವದೋ ಅವನಿಗೆ ಎಲ್ಲಾ ಬಗೆಯ ಸಂಪತ್ತಿಗಿಂತಲೂ ಎಲ್ಲಾ ಅಧಿಕಾರಕ್ಕಿಂತಲೂ ನಿರತಿಶಯವಾದ ಕೀರ್ತಿಗಿಂತಲೂ ಭೋಗಕ್ಕಿಂತಲೂ ಅದೇ ಮಿಗಿಲೆನಿಸುತ್ತದೆ. ಈಶ್ವರ ಸಂಕಲ್ಪಾನುಸಾರಿಯಾದ ಭಕ್ತನ

1. ಇದರ ಮೂಲವು ಯಾವದೆಂಬುದು ತಿಳಿಯದು.
2. ಇದರ ಮೂಲವು ಯಾವದಾದರೂ ಇದೆಯೋ ಇಲ್ಲವೋ ತಿಳಿಯದು.

''ಮನಃಶಾಂತಿಯು ಮನಸ್ಸಿನಿಂದ ಚಿಂತಿಸುವದಕ್ಕೂ ಅಸದಳವಾಗಿರುವದು''[62]. ಅದರ ಯೋಗ್ಯತೆಯು ನಿರುಪಮಾನವಾಗಿರುವದು. ಭಕ್ತನಲ್ಲಿರುವ **ಅಪ್ರಾತಿಕೂಲ್ಯ**ವೆಂಬ ಮಾನಸಸ್ಥಿತಿಯಲ್ಲಿ ತನಗಾಗಿ ಆಗಬೇಕಾದದ್ದು ಏನೂ ಇರುವದಿಲ್ಲ. ತನ್ನ ಸ್ವಾರ್ಥಕ್ಕೆ ವಿರುದ್ಧವಾಗಿರುವದೂ ಯಾವದೂ ಇರುವದಿಲ್ಲ. ಪರಮಸ್ವಾರ್ಥತ್ಯಾಗದ ಈ ಸ್ಥಿತಿಯಲ್ಲಿ ಅಭಿಮಾನವೆಂಬುದು ಎಳ್ಳಷ್ಟೂ ಇಲ್ಲದಂತೆ ಹೋಗಿಬಿಟ್ಟಿರುತ್ತದೆ, ಎಲ್ಲಾ ಭೂತಗಳಿಗೂ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾಗಿರುವ ಆ ಭಗವಂತನಲ್ಲಿರುವ ಸರ್ವಾತ್ಮಕಪ್ರೇಮವೆಂಬುದೊಂದೇ ಉಳಿದುಕೊಳ್ಳುವದು. ಈ ಭಗವತ್‌ಪ್ರೇಮದ ಅಭಿಮಾನವು ಬಂಧಕವಲ್ಲ, ಅದಕ್ಕೆ ಬದಲು ಬಂಧನಗಳೆಲ್ಲವನ್ನೂ ಸಂಪೂರ್ಣವಾಗಿ ಕತ್ತರಿಸತಕ್ಕದ್ದಾಗಿರುತ್ತದೆ.

# 16. ನಿಜವಾದ ಭಕ್ತನಿಗೆ ಪರಜ್ಞಾನವೂ ಪರಭಕ್ತಿಯೂ ಒಂದೇ

ಉಪನಿಷತ್ತುಗಳಲ್ಲಿ ಪರವಿದ್ಯೆಯೆಂದೂ ಅಪರವಿದ್ಯೆಯೆಂದೂ ಎರಡು ವಿಧವಾದ ಜ್ಞಾನವು ಉಪದಿಷ್ಟವಾಗಿರುತ್ತದೆ. ಭಕ್ತನ ದೃಷ್ಟಿಯಲ್ಲಿ ಈ ಪರವಿದ್ಯೆಗೂ ತನ್ನ ಪರಭಕ್ತಿಯೆಂಬ ಉತ್ತಮತರದ ಭಕ್ತಿಗೂ ಯಾವ ಭೇದವೂ ಇರುವದಿಲ್ಲ. **ಮುಂಡಕೋಪನಿಷತ್ತಿ**ನಲ್ಲಿ ಹೇಳಿರುವದೇನೆಂದರೆ : ''ಎರಡು ವಿದ್ಯೆಗಳನ್ನು ತಿಳಿಯತಕ್ಕದ್ದೆಂದು ಬ್ರಹ್ಮಜ್ಞಾನಿಗಳು ಹೇಳುವರು ; ಪರವಿದ್ಯೆ, **ಅಪರವಿದ್ಯೆ** - ಇವೇ ಆ ಎರಡು ವಿದ್ಯೆಗಳು. ಇವೆರಡರಲ್ಲಿ ಅಪರವಿದ್ಯೆ ಯಾವದೆಂದರೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷೆ (ವರ್ಣಸ್ವರಗಳ ವಿಧಾನವನ್ನು ತಿಳಿಸುವ ಶಾಸ್ತ್ರ), ಕಲ್ಪ (ಕರ್ಮವಿಧಾನದ ಶಾಸ್ತ್ರ), ವ್ಯಾಕರಣ, ನಿರುಕ್ತ (ಶಬ್ದಗಳ ವ್ಯುತ್ಪತ್ತಿಯನ್ನೂ ಅರ್ಥವನ್ನೂ ತಿಳಿಸುವ ಶಾಸ್ತ್ರ), ಛಂದಸ್ಸು ಜ್ಯೋತಿಷ್ಯ - ಇವುಗಳು. ಇನ್ನು **ಪರವಿದ್ಯೆ** ಯಾವದೆಂದರೆ, ಯಾವದರಿಂದ ನಾಶರಹಿತವಾದ ಪರಮಾತ್ಮ ವಸ್ತುವನ್ನು ಅರಿಯಲಾಗುವದೋ ಅದು'' (ಮುಂ.)[63] ಈ ರೀತಿಯಲ್ಲಿ ಬ್ರಹ್ಮಜ್ಞಾನವೇ ಪರವಿದ್ಯೆಯೆಂದು ತಿಳಿಸಿದಂತಾಯಿತಷ್ಟೆ. 'ಪರಭಕ್ತಿ'ಯ ಲಕ್ಷಣವನ್ನು **ದೇವೀಭಾಗವತ**ದಲ್ಲಿ ಹೀಗೆಂದು ಹೇಳಿರುತ್ತದೆ: ''ಒಂದು ಪಾತ್ರೆಯಿಂದ ಮತ್ತೊಂದಕ್ಕೆ ಸುರಿದ ಎಣ್ಣೆಯು ವಿಚ್ಛಿತ್ತಿ ಯಿಲ್ಲದೆ ಹೇಗೆ ಧಾರೆಯಾಗಿ ಬೀಳುವದೋ, ಹಾಗೆ ಎಡೆಬಿಡದೆ ಪ್ರವಾಹರೂಪವಾಗಿ ಮನಸ್ಸು ಪರಮೇಶ್ವರನನ್ನು ಚಿಂತಿಸುತ್ತಿದ್ದರೆ ಅದಕ್ಕೆ ಪರಭಕ್ತಿಯೆಂದು ಹೆಸರು''.[1] ಹೀಗೆ ಎಡೆಬಿಡದೆ ಒಂದೇ ಸಮನೆ ಆಗಲುವಿಕೆಯರಿಯದ ಅನುರಾಗದಿಂದ ಮನೋಬುದ್ಧಿಗಳನ್ನು ಪರಮೇಶ್ವ ರನ ಕಡೆಗೆ ತಿರುಗಿಸಿಕೊಂಡಿರುವದೇ ಮನುಷ್ಯನು ದೇವರಲ್ಲಿ ತೋರಿಸಬಹುದಾದ ಪ್ರೇಮದ ಅತ್ಯಂತ ಕೊನೆಯ ರೂಪವು. ಭಕ್ತಿಯ ಮಿಕ್ಕ ರೂಪಗಳೆಲ್ಲ ಈ ಉತ್ತಮಸ್ವರೂಪದ ಭಕ್ತಿಗೆ ಸಾಧನವೇ ಹೊರತು ಬೇರೆಯಲ್ಲ. ಈ ಪರಭಕ್ತಿಗೆ **'ರಾಗಾನುಗ'**[2] ವೆಂದೂ ಹೆಸರುಂಟು. 'ರಾಗಾನುಗ' ವೆಂದರೆ ಪರಮಾತ್ಮನಲ್ಲಿರುವ ಅನುರಾಗದಿಂದ ಉಂಟಾದದ್ದೆಂದು ಅರ್ಥ.

---

1. ದೇವೀಭಾಗವತದಲ್ಲಿನ ಮೂಲವಾಕ್ಯವು ನಮಗೆ ದೊರಕಿಲ್ಲವಾದ್ದರಿಂದ ಅಲ್ಲಿ ಅಯತ್ನ ಸಿದ್ಧವಾದ ಪರಭಕ್ತಿಯನ್ನು ಹೇಳಿದೆಯೋ ಯತ್ನಸಾಧ್ಯವಾದ ಸಾಧನಭಕ್ತಿಯನ್ನೇ ಹೇಳಿದೆಯೋ ನಿಶ್ಚಯಿಸುವದಕ್ಕಾಗುವಂತಿಲ್ಲ.

2. ಈ ಹೆಸರನ್ನು ಸ್ವಾಮಿಗಳು ಉಪಯೋಗಿಸಿರುವ ರೀತಿಯನ್ನು ಕುರಿತು ಪೀಠಿಕೆಯಲ್ಲಿ ಚರ್ಚಿಸಿರುತ್ತದೆ.

ಈ ಉಚ್ಚತ್ತರದ ಭಕ್ತಿಯು ಮನುಷ್ಯನ ಹೃದಯವನ್ನು ಒಂದು ಸಲ ಹೊಕ್ಕರೆ ಸಾಕು, ಅವನ ಮನಸ್ಸು ಒಂದೇ ಸಮನೆ ಪರಮೇಶ್ವರನನ್ನೇ ಸ್ಮರಿಸುತ್ತಿರುವದು, ಇನ್ನು ಯಾವದೂ ಆದರ ನೆನಪಿಗೆ ಬರುವದೇ ಇಲ್ಲ. ದೇವರ ವಿಷಯವನ್ನು ಬಿಟ್ಟು ಮತ್ತೆ ಯಾವ ಯೋಚನೆಗಳಿಗೂ ಅವನು ಎಡೆಗೊಡುವದಿಲ್ಲ. ಅವನ ಮನಸ್ಸು ಏತಕ್ಕೂ ಜೋಲುಬೀಳದಷ್ಟು ಪರಿಶುದ್ಧವಾಗಿರು ವದರಿಂದ ಆಧ್ಯಾತ್ಮಿಕವಾದ ಮತ್ತು ಆಧಿಭೌತಿಕವಾದ ಬಂಧನಗಳನ್ನೆಲ್ಲ ಕಡಿದುಹಾಕಿ ಪೂರ್ಣಶಾಂತಿಯನ್ನು ಹೊಂದಿ ನಿತ್ಯಯುಕ್ತವಾಗಿರುವದು. ಇಂಥವನೊಬ್ಬನು ಮಾತ್ರ ಪರಮಾತ್ಮನನ್ನು ತನ್ನ ಹೃದಯದಲ್ಲಿಯೇ ಪೂಜಿಸುವದಕ್ಕೆ ಶಕ್ತನಾಗಿರುವನು. ಅವನಿಗೆ ಆಕೃತಿ ವಿಶೇಷಗಳು, ಮಂತ್ರತಂತ್ರಗಳು, ಗ್ರಂಥಗಳು, ವಾದವಿವಾದಗಳು-ಯಾವವೂ ಬೇಕಾಗಿ ರುವದಿಲ್ಲ. ಮತ್ತು ಇವುಗಳು ಯಾವ ರೀತಿಯಲ್ಲಿಯೂ ಅವನಿಗೆ ಪ್ರಯೋಜನಕಾರಿ ಗಳಾಗಲಾರವು. ಆದರೆ ಪರಮೇಶ್ವರನಲ್ಲಿ ಇಂಥ ಭಕ್ತಿಯನ್ನಿಟ್ಟುಕೊಳ್ಳುವದೇನೂ ಸುಲಭಸಾಧ್ಯವಲ್ಲ.

ಸಾಮಾನ್ಯವಾಗಿ ಮಾನವನ ಪ್ರೇಮವು ಪ್ರತಿಪ್ರೇಮವಿರುವ ಕಡೆಗಳಲ್ಲಿ ಮಾತ್ರ ಜೀವಿಸಿ ಕೊಂಡಿರುವದೆಂದು ಕಂಡುಬರುತ್ತದೆ ; ಎಲ್ಲಿ ಪ್ರೇಮಕ್ಕೆ ಪ್ರತಿಯಾಗಿ ಪ್ರೇಮವು ಕಾಣಿಸು ವದಿಲ್ಲವೋ ಅಲ್ಲಿ ಸಹಜವಾಗಿ ಬರಿಯ ಔದಾಸೀನ್ಯವೇ ಹುಟ್ಟುವದು. ಹೀಗಿದ್ದರೂ ಎಲ್ಲಿಯೋ ಕೆಲಕೆಲವು ಸಂದರ್ಭಗಳಲ್ಲಿ ಮಾತ್ರ ಪ್ರತಿಪ್ರೇಮವಿಲ್ಲದಿದ್ದರೂ ಪ್ರೇಮವು ಕಾಣಿಸಿಕೊಳ್ಳುವದೂ ಉಂಟು. ಈ ಬಗೆಯ ಪ್ರೇಮಕ್ಕೆ ದೀಪದಹುಳುವು ಬೆಂಕಿಯಲ್ಲಿ ತೋರಿಸುವ ಪ್ರೇಮವನ್ನು ಉಪಮಾನವಾಗಿ ಹೇಳಬಹುದು. ಈ ಹುಳುವು ಬೆಂಕಿಯ ಮೇಲಿನ ಪ್ರೇಮದಿಂದ ಅದರೊಳಕ್ಕೆ ಬಿದ್ದು ಪ್ರಾಣವನ್ನೇ ಕೊಟ್ಟುಬಿಡುತ್ತದೆ ; ಹಾಗೆ ಪ್ರೀತಿಸುವದೇ ಈ ಹುಳುವಿನ ಸ್ವಭಾವವಾಗಿರುತ್ತದೆ. ಪ್ರೇಮಕ್ಕೆ ಪ್ರೀತಿಯೇ ಸ್ವಭಾವವೆಂಬ ಕಾರಣದಿಂದ ಪ್ರೀತಿಸುವದೇ ಈ ಪ್ರಪಂಚದಲ್ಲಿ ತೋರಿಕೊಳ್ಳುವ ಪ್ರೇಮಗಳಲ್ಲೆಲ್ಲ ಅತ್ಯಂತ ಉತ್ಕೃಷ್ಟವಾದ, ಅತ್ಯಂತ ಅಸ್ವಾರ್ಥತೆಯಿಂದ ಕೂಡಿದ ರೂಪವಾಗಿರುತ್ತದೆ. ಅಧ್ಯಾತ್ಮಭೂಮಿಕೆಯಲ್ಲಿ ಇಂಥ ಪ್ರೇಮವು ತೋರಿಕೊಂಡರೆ ಮಾತ್ರ ಪರಭಕ್ತಿಯು ಕೈವಶವಾಗುವದು.

# 17. ಪ್ರೇಮತ್ರಿಕೋಣ

ಪ್ರೇಮವನ್ನು ಒಂದು ತ್ರಿಕೋಣವೆಂದು ಭಾವಿಸಿದರೆ ಅದರ ಒಂದೊಂದು ಕೋಣವೂ ಅದರ ಒಂದೊಂದು ಅಸಾಧಾರಣಧರ್ಮವಾಗಿರುವದು. ಮೂರು ಕೋಣಗಳಿಲ್ಲದೆ ಹೇಗೆ ತ್ರಿಕೋಣವಾಗಲಾರದೋ ಹಾಗೆಯೇ ಈ ಮೂರು ವಿಶೇಷ ಲಕ್ಷಣಗಳಿಲ್ಲದೆ ನಿಜವಾದ ಪ್ರೇಮವೂ ಇರಲಾರದು.

ಈ ನಮ್ಮ ಪ್ರೇಮತ್ರಿಕೋಣಕ್ಕೆ **ಪ್ರತ್ಯಾಶೆಯಿಲ್ಲದಿರುವದೆಂಬುದೇ ಮೊದಲನೆಯ ಕೋಣವು**. ಎಲ್ಲೆಲ್ಲಿ ಇದಕ್ಕೆ ಪ್ರತಿಯಾಗಿ ತನಗೆ ಏನಾದರೂ ಆಗಬೇಕೆಂದು ಅಭಿಲಾಷೆ ಯಿರುವದೋ ಅಲ್ಲಿ ನಿಜವಾದ ಪ್ರೇಮವಿರಲೇ ಆರದು. ಅಲ್ಲಿ ಅದು ಕೇವಲ ಅಂಗಡಿಯ ವ್ಯಾಪಾರವಾಗಿರುವದು. ಆದ್ದರಿಂದ ನಾವು ತೋರಿಸುವ ಗೌರವಕ್ಕೂ ಮಾಡುವ ಸೇವೆಗೂ ಪ್ರತಿಯಾಗಿ ಒಂದಲ್ಲದಿದ್ದರೊಂದು ಫಲವನ್ನು ದೇವರು ಕೊಡುವನೆಂಬ ಅಭಿಪ್ರಾಯವು ನಮ್ಮಲ್ಲಿ ಎಲ್ಲಿಯವರೆಗೆ ಇರುವದೋ, ಅಲ್ಲಿಯವರೆಗೂ ನಿಜವಾದ ಪ್ರೇಮವು ನಮ್ಮ ಹೃದಯದಲ್ಲಿ ಅಂಕುರಿಸಲಾರದು. ತಮಗೆ ಇಂಥಿಂಥ ಇಷ್ಟಾರ್ಥಗಳನ್ನು ನೆರವೇರಿಸಲೆಂದೇ ಯಾರು ದೇವರನ್ನು ಪೂಜಿಸುವರೋ, ಅಂಥವರು ಆ ಇಷ್ಟಾರ್ಥಗಳು ಈಡೇರದಿದ್ದರೆ ಖಂಡಿತವಾಗಿ ಅವನನ್ನು ಪೂಜಿಸುವದನ್ನು ಬಿಟ್ಟುಬಿಡುವರು. ಭಗವಂತನು ಪ್ರೇಮವನ್ನಿಡು ವದಕ್ಕೆ ತಕ್ಕಂಥ ಸ್ವರೂಪದವನಲ್ಲಿರುವ ದೈವಿಕಪ್ರೇಮವೆಂಬ ಭಾವಕ್ಕೆ ಕಾರಣವಾಗಿ ಅಥವಾ ಪ್ರೇರಕವಾಗಿ ಮತ್ತೆ ಯಾವ ಉದ್ದೇಶವೂ ಇರುವದಿಲ್ಲ.

ಒಂದಾನೊಂದು ಕಾಲದಲ್ಲಿ ಒಬ್ಬ ದೊಡ್ಡರಾಜನು ಒಂದು ಅರಣ್ಯಕ್ಕೆ ಹೋಗಲು ಅಲ್ಲಿ ಅವನಿಗೆ ಒಬ್ಬ ಮಹಾತ್ಮರ ದರ್ಶನವಾಯಿತಂತೆ. ಅವರೊಡನೆ ಸ್ವಲ್ಪಹೊತ್ತು ಮಾತುಕಥೆ ಯಾದಮೇಲೆ ಅವರ ಪರಿಶುದ್ಧತೆಯನ್ನೂ ಜ್ಞಾನವನ್ನೂ ನೋಡಿ ಅವನಿಗೆ ಬಹು ಸಂತೋಷ ವಾಯಿತು. ಆಗ ದೊರೆಯು ತನ್ನಿಂದ ಯಾವದಾದರೊಂದು ದಾನವನ್ನು ಸ್ವೀಕರಿಸಿ ತನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಅವರನ್ನು ಬೇಡಿಕೊಂಡನು. ಆ ಮಹಾತ್ಮರು ಇದಕ್ಕೊಪ್ಪದೆ ''ತಿನ್ನುವದಕ್ಕೆ ಕಾಡಿನಲ್ಲಿರುವ ಹಣ್ಣುಹಂಪಲುಗಳಿವೆ, ಕುಡಿಯುವದಕ್ಕೆ ಬೆಟ್ಟದ ಝರಿಗಳಿಂದ ಹರಿಯುವ ಶುದ್ಧವಾದ ನೀರಿದೆ, ಮೈಮೇಲೆ ಹಾಕಿಕೊಳ್ಳುವದಕ್ಕೆ ಮರಗಳ ತೊಪ್ಪಲು ಇದೆ, ವಾಸಕ್ಕೆ ಬೆಟ್ಟಗಳಲ್ಲಿ ಗುಹೆಗಳಿವೆ. ಹೀಗಿರುವಲ್ಲಿ ನಿನ್ನಿಂದಾಗಲಿ ಮತ್ತೊಬ್ಬರಿಂದಾಗಲಿ ನಾನೇಕೆ ಏನನ್ನಾದರೂ ತೆಗೆದುಕೊಳ್ಳಲಿ?'' ಎಂದರು. ದೊರೆಯು''ಮಹಾಸ್ವಾಮಿ, ನನಗೋಸ್ಕರವಾಗಿ ದಯವಿಟ್ಟು ನನ್ನಿಂದ ಏನನ್ನಾದರೂ ಸ್ವೀಕರಿಸಬೇಕು, ದಯವಿಟ್ಟು ನನ್ನೊಡನೆ ರಾಜಧಾನಿಗೆ

ಬಂದು ಅರಮನೆಯನ್ನು ಪವಿತ್ರಗೊಳಿಸಿ ಅನುಗ್ರಹಿಸಬೇಕು" ಎಂದು ಬಹಳವಾಗಿ ಹೇಳಿಕೊಂಡದ್ದರಿಂದ ಆ ಮಹಾತ್ಮರು ದೊರೆಯ ಮಾತಿಗೆ ಒಪ್ಪಿ ಅವನೊಡನೆ ಅರಮನೆಗೆ ಹೋದರು. ಅರಸನು ದಾನಕೊಡುವದಕ್ಕೆ ಮೊದಲು "ಭಗವಂತನೆ, ಪುತ್ರಸಂತಾನವೂ ಗಜಾಂತವಾದ ಐಶ್ವರ್ಯವೂ ವಿಸ್ತಾರವಾದ ರಾಜ್ಯವೂ ದೊರೆಯುವದಕ್ಕಾಗಿಯೂ, ಆಯುರಾರೋಗ್ಯಗಳು ಅಭಿವೃದ್ಧಿಯಾಗುವದಕ್ಕಾಗಿಯೂ....." ಇತ್ಯಾದಿಯಾಗಿ ಸಂಕಲ್ಪವನ್ನು ಹೇಳುವದಕ್ಕಾರಂಭಿಸಿದನು. ಈ ಸಂಕಲ್ಪವು ಮುಗಿಯುವದರೊಳಗಾಗಿ ಆ ಮಹಾತ್ಮರು ತಟ್ಟನೆ ಎದ್ದು ಅಲ್ಲಿಂದ ಸುಮ್ಮನೆ ಹೊರಟುಹೋಗಿ ಬಿಟ್ಟರು. ಇದನ್ನು ಕಂಡು ಏನೂ ತೋಚದೆ ರಾಜನು ಅವರ ಹಿಂದೆಯೇ ಓಡುತ್ತೋಡುತ್ತಾ "ಮಹಾಸ್ವಾಮಿ, ಇದೇನು? ನನ್ನ ದಾನವನ್ನು ಸ್ವೀಕರಿಸದೆ ಹೊರಟು ಹೋಗುತ್ತಿರುವಿರಲ್ಲ !" ಎಂದು ಗಟ್ಟಿಯಾಗಿ ಕೂಗಿಕೊಳ್ಳಲು ಆ ಮಹಾತ್ಮರು ಹಿಂತಿರುಗಿ "ನಾನು ತಿರುಕರಲ್ಲಿ ಭಿಕ್ಷೆ ತೆಗೆದುಕೊಳ್ಳುವ ದಿಲ್ಲ. ನೀನೇ ತಿರುಕನಾಗಿರುವಾಗ ನನಗೇನು ಕೊಟ್ಟೀಯೆ? ನಿನ್ನಂಥ ತಿರುಕನಲ್ಲಿ ದಾನವನ್ನು ತೆಗೆದು ಕೊಳ್ಳುವದಕ್ಕೆ ನಾನೇನು ಹುಚ್ಚನೆ? ಛೀ ! ನಡೆ, ನನ್ನ ಹಿಂದೆ ಬರಬೇಡ !" ಎಂದು ಗದರಿಸಿದರಂತೆ.

ಈ ಮೇಲಿನ ಕಥೆಯಲ್ಲಿ ಕೇವಲ ಧಾರ್ಮಿಕಭಿಕ್ಷುಕರಾದವರಿಗೂ ನಿಜವಾದ ಭಕ್ತರಿಗೂ ಇರುವ ತಾರತಮ್ಯವನ್ನು ಚೆನ್ನಾಗಿ ಎತ್ತಿತೋರಿಸಿರುತ್ತದೆ. ಪ್ರೇಮವು 'ನನಗೆ ಅದು ಬೇಕು, ಇದು ಬೇಕು' ಎನ್ನುವದಿಲ್ಲ. ಮುಕ್ತಿಗೇ ಆಗಲಿ, ಮತ್ತೆ ಯಾವ ಫಲಕ್ಕೇ ಆಗಲಿ, ದೇವರನ್ನು ಪೂಜಿಸಿದರೆ ಅದೂ ಕೀಳುತರದ ಭಕ್ತಿಯೇ ಆಗುವದು. ಪ್ರೇಮಕ್ಕೆ ಪ್ರತಿಫಲದ ಯೋಚನೆಯೇ ಇರುವದಿಲ್ಲ. ಪ್ರೇಮವು ಯಾವಾಗಲೂ ಪ್ರೇಮಕ್ಕಾಗಿಯೇ ತೋರಿಕೊಳ್ಳುವದು. ಭಕ್ತನು ಪ್ರೀತಿಸುವ ದೇತಕ್ಕೆಂದರೆ ಆತನಿಗೆ ಪ್ರೀತಿಸದೆ ಇರುವದಕ್ಕೆ ಆಗುವದೇ ಇಲ್ಲ. ಏನಾದರೊಂದು ರಮಣೀಯ ವಾದ ನೋಟವನ್ನು ಕಂಡರೆ ಆಗ ನಿಮಗೆ ಅದರಲ್ಲಿ ಉಂಟಾಗುವ ಪ್ರೇಮಕ್ಕೆ ಪ್ರತಿಯಾಗಿ ಆ ನೋಟದಿಂದ ನಿಮಗೆ ಮತ್ತೇನೂ ಆಗಬೇಕಾದದ್ದಿರುವದಿಲ್ಲ, ಆ ನೋಟಕ್ಕೂ ನಿಮ್ಮಿಂದ ಏನೂ ಆಗಬೇಕಾದದ್ದಿರುವದಿಲ್ಲ. ಹೀಗಿದ್ದರೂ ಆ ನೋಟವು ಕಣ್ಣಿಗೆ ಬಿದ್ದರೆ ಸಾಕು, ಮನಸ್ಸನ್ನು ಪರಮಾನಂದಸ್ಥಿತಿಗೆ ತಂದುಬಿಡುವದು, ಹೃದಯದಲ್ಲಿರುವ ಚಿಂತೆಯನ್ನೆಲ್ಲ ತೊಳೆದು, ಶಾಂತಿಯನ್ನು ಕೊಟ್ಟು ತತ್ಕಾಲಕ್ಕೆ ಮರ್ತ್ಯಸ್ಥಿತಿಯಿಂದ ಮೇಲಕ್ಕೆತ್ತಿ ಒಂದಾನೊಂದು ದಿವ್ಯಾ ನಂದದಲ್ಲಿ ಮಗ್ನರನ್ನಾಗಿಮಾಡಿಬಿಡುವದು. ಅಲ್ಲವೆ? ನಿಜವಾದ ಪ್ರೇಮದ ಈ ಸ್ವಭಾವವೇ ನಾವು ಹೇಳಿದ ತ್ರಿಕೋಣದ ಮೊದಲನೆಯ ಕೋಣವು. ಪ್ರೇಮಕ್ಕೆ ಪ್ರತಿಯಾಗಿ ಏನನ್ನೂ ಬಯಸಬಾರದು, ತಾನು ಯಾವಾಗಲೂ ಕೊಡುಗೈಯವನಾಗಿಯೇ ಇರಬೇಕು. ಪ್ರೇಮವನ್ನು ಭಗವಂತನಿಗೆ ಅರ್ಪಿಸಿಬಿಡಬೇಕು, ಆದರೆ ಇದಕ್ಕೆ ಬದಲಾಗಿ ಇಂಥದ್ದನ್ನು ಕೊಡೆಂದು ಆತನನ್ನು ಕೂಡ ಕೇಳಬಾರದು.

ಪ್ರೇಮತ್ರಿಕೋಣದ ಎರಡನೆಯ ಕೋಣವು ಯಾವದೆಂದರೆ **ಪ್ರೇಮಕ್ಕೆ ಭಯವೆಂಬುದೇ ಇರುವದಿಲ್ಲ.** ಯಾರು ದೇವರನ್ನು ಭಯದಿಂದ ಪ್ರೀತಿಸುವರೋ ಅವರು ಅಧಮತರಗತಿಯ ಜನರು, ಅವರು ಇನ್ನೂ ಪೂರ್ಣವಾದ ಮನುಷ್ಯತ್ವವನ್ನೇ ಪಡೆದವರಲ್ಲ. ಇಂಥವರು ತಮಗೆ ಏನಾದರೂ ಶಿಕ್ಷೆಯಾದೀತೆಂಬ ಭಯದಿಂದಲೇ ದೇವರನ್ನು ಪೂಜಿಸುವರು. ಅವರ ಭಾಗಕ್ಕೆ ದೇವರೆಂದರೆ ಒಂದು ಕೈಯಲ್ಲಿ ಕೋರಡೆಯನ್ನೂ ಇನ್ನೊಂದು ಕೈಯಲ್ಲಿ ಶಾಸನದಂಡವನ್ನೂ ಹಿಡಿದಿರುವ ಅದ್ಭುತಪ್ರಾಣಿಯು ; ಆತನು ಹೇಳಿದಂತೆ ಕೇಳದಿದ್ದರೆ ತಮ್ಮನ್ನು ಕೋರಡೆಯಿಂದ ತಾಡಿಸುವನೆಂದು ಅವರಿಗೆ ಹೆದರಿಕೆ. ಹೀಗೆ ಶಿಕ್ಷೆಗೆ ಹೆದರಿ ಪೂಜಿಸುವದು ಬಹು ನೀಚವಾದದ್ದು. ಸರಿಯಾಗಿ ನೋಡಿದರೆ ಇಂಥ ಪೂಜೆಯು ನಿಜವಾದ ಪೂಜೆಯೇ ಅಲ್ಲವೆನ್ನಬಹುದು. ಅದು ಅತ್ಯಂತ ಕೀಳುತರದ ಭಕ್ತಿಯಿಂದ ಮಾಡುವ ಪೂಜೆ. ಹೃದಯದಲ್ಲಿ ಒಂದಿಷ್ಟು ಭಯವಿದ್ದರೂ ಆದರ ಜೊತೆಗೆ ಪ್ರೇಮವು ಹೇಗೆ ಇದ್ದೀತು ? ಪ್ರೇಮದ ಸ್ವಭಾವವೇನೆಂದರೆ ಅದು ಎಂಥ ಭಯವನ್ನಾದರೂ ಜಯಿಸಿಬಿಡುವದು. ಒಂದು ಸಣ್ಣಮಗುವಿನ ತಾಯಿಯೊಬ್ಬಳು ಬೀದಿಯಲ್ಲಿರುವಾಗ ಒಂದು ನಾಯಿ ಬೊಗಳುತ್ತದೆ ಎಂದಿಟ್ಟುಕೊಳ್ಳಿ ; ಅವಳು ಅಂಜಿಕೆಯಿಂದ ಕೂಡಲೆ ಹತ್ತಿರವಿರುವ ಒಂದು ಮನೆಯೊಳಕ್ಕೆ ಓಡಿಹೋಗುತ್ತಾಳೆ. ಆದರೆ ಮಾರನೆಯ ದಿನ ಆಕೆಯೇ ತನ್ನ ಮಗುವನ್ನು ಎತ್ತಿಕೊಂಡು ಬೀದಿಯಲ್ಲಿ ಬರುತ್ತಿರುವಾಗ ಮಗುವಿನಮೇಲೆ ಒಂದು ಸಿಂಹವು ಹಾರಿದರೆ? ಈಗ ಆ ತಾಯಿಯೆಲ್ಲಿರುವಳು ? ತನ್ನ ಕಂದನ ಸಂರಕ್ಷಣೆಗಾಗಿ ಸಿಂಹದ ಬಾಯೊಳಕ್ಕೆ ಹೋಗುವದಕ್ಕೂ ಹಿಂಜರಿಯುವದಿಲ್ಲ , ಅಲ್ಲವೆ ? ಪ್ರೇಮವು ಎಂಥ ಅಂಜಿಕೆಯನ್ನಾದರೂ ಜಯಿಸುತ್ತದೆ. ಪ್ರಪಂಚವನ್ನು ಬಿಟ್ಟು ತಾನೊಬ್ಬನೇ ಬೇರೆ ಇರಬೇಕೆಂಬ ಸ್ವಾರ್ಥಬುದ್ಧಿಯೇ ಭಯಕ್ಕೆ ಕಾರಣ ; ನಾವು ಮನಸ್ಸನ್ನು ಎಷ್ಟೆಷ್ಟು ಸಂಕೋಚಪಡಿಸಿಕೊಂಡು ಎಷ್ಟೆಷ್ಟು ಸ್ವಾರ್ಥಪರರಾಗುವೆವೋ ಅಷ್ಟಷ್ಟು ಹೆದರಿಕೆಯೂ ಹೆಚ್ಚಾಗುವದು. ಯಾವನಾದರೂ ತಾನು ಏತಕ್ಕೂ ಬಾರದ ಕ್ಷುದ್ರಪ್ರಾಣಿಯೆಂದು ಇಟ್ಟುಕೊಂಡರೆ ಅಂಥವನಿಗೆ ಖಂಡಿತವಾಗಿ ಹೆದರಿಕೆಯಾಗಿಯೇ ತೀರುವದು, ತಾನು ಅಲ್ಪನೆಂಬ ತಿಳಿವಳಿಕೆಯು ಎಷ್ಟೆಷ್ಟು ಕಡಿಮೆಯಾದರೆ ಅಂಜಿಕೆಯೂ ಅಷ್ಟಷ್ಟು ಕಡಿಮೆಯಾಗುವದು. ನಿಮ್ಮಲ್ಲಿ ಎಳ್ಳಷ್ಟು ಭಯವಿದ್ದರೂ ಆಗ ಪ್ರೇಮವು ಇರಲೇ ಆರದು, ಏಕೆಂದರೆ ಪ್ರೇಮಕ್ಕೂ ಭಯಕ್ಕೂ ಸಹವಾಸವು ಹೊಂದುವದಿಲ್ಲ. ದೇವರನ್ನು ಪ್ರೀತಿಸುವವರು ಆತನಿಗೆ ಎಂದಿಗೂ ಹೆದರಲಾರರು. ''ಸುಮ್ಮಸುಮ್ಮನೆ ನಿನ್ನ ಒಡೆಯನಾದ ದೇವರ ನಾಮಗ್ರಹಣವನ್ನು ಮಾಡಬೇಡ''(ಬೈ.)[64] ಎಂಬ ನಿಷೇಧವನ್ನು ಕೇಳಿದರೆ ನಿಜವಾದ ಭಗವದ್ಭಕ್ತನಿಗೆ ನಗೆ ಬರುವದು. ಪ್ರೇಮವೆಂಬ ಧರ್ಮದಲ್ಲಿ ಪ್ರತ್ಯವಾಯವೆಲ್ಲಿಯದು ? ಆ ಪರಮೇಶ್ವರನ ನಾಮಗ್ರಹಣವನ್ನು ಯಾವ ರೀತಿಯಲ್ಲಿ ಮಾಡಿದರೂ ಸರಿಯೆ,[1] ಎಷ್ಟು ಸಲ

ಮಾಡಿದರೆ ಅಷ್ಟು ಒಳ್ಳೆಯದು. ಭಗವಂತನಮೇಲೆ ಪ್ರೇಮವಿರುವದರಿಂದಲೇ ಭಕ್ತನು ಆತನ ನಾಮಕೀರ್ತನೆಮಾಡುತ್ತಿರುತ್ತಾನೆ.

ನಮ್ಮ ಪ್ರೇಮ ಕೋಣದ ಮೂರನೆಯ ಕೋಣವು ಯಾವದೆಂದರೆ **ಪ್ರೇಮಕ್ಕೆ ಪ್ರತಿಕಕ್ಷಿಯಿಲ್ಲ.** ಪ್ರೀತಿಸುವವನಿಗೆ ಬೇಕಾದ ಸರ್ವೋತ್ತಮಗುಣಗಳಿಂದ ಕೂಡಿದ ವಸ್ತುವೇ ಪ್ರೇಮಕ್ಕೆ ವಿಷಯವಾಗಿರುವದು. ಸರಿಯಾಗಿ ನೋಡಿದರೆ ನಮ್ಮ ಪ್ರೇಮಕ್ಕೆ ವಿಷಯವಾದದ್ದು ಸರ್ವೋತ್ತಮವಾದದ್ದೆಂಬ ಭಾವನೆ ಹುಟ್ಟುವವರೆಗೂ ನಿಜವಾದ ಪ್ರೇಮವೇ ಹುಟ್ಟುವದಿಲ್ಲ. ಮನುಷ್ಯರ ಪ್ರೇಮವು ಅನೇಕ ಸಂದರ್ಭಗಳಲ್ಲಿ ತಪ್ಪುದಾರಿಯಲ್ಲಿ ಹೋಗಿ ಅಯೋಗ್ಯವಸ್ತುಗಳ ಮೇಲೆ ಕೂರುವದೂ ಉಂಟು. ಆದರೆ ಪ್ರೀತಿಸುವವನ ಭಾಗಕ್ಕೆ ತಾನು ಪ್ರೀತಿಸುವ ವಸ್ತು ಯಾವಾಗಲೂ ಸರ್ವೋತ್ತಮವಾಗಿಯೇ ಇರುವದು. ಒಬ್ಬನಿಗೆ ಅತ್ಯಂತ ನೀಚ ವಸ್ತುವೇ ಸರ್ವೋತ್ತಮವೆಂದು ತೋರಬಹುದು, ಮತ್ತೊಬ್ಬನಿಗೆ ಅತ್ಯಂತ ಮಹಿಮಾಯುಕ್ತವಾದ ವಸ್ತುವೇ ತನ್ನ ಇಷ್ಟದೈವವಾಗಬಹುದು. ಇದು ಹೇಗೇ ಇರಲಿ, ನಿರತಿಶಯವೆಂದು ತಿಳಿದದ್ದನ್ನು ಮಾತ್ರ ನಿಜವಾಗಿಯೂ ಉತ್ಕಟವಾಗಿಯೂ ಪ್ರೀತಿಸುವದಕ್ಕೆ ಸಾಧ್ಯವಾಗುವದು. ಪ್ರತಿಯೊಬ್ಬ ನಿಗೂ ಯಾವದು ನಿರತಿಶಯವಾಗಿರುವ ಧ್ಯೇಯವೆಂದು ತೋರುವದೋ ಅದರ ಸ್ವರೂಪವೇ 'ದೇವರು', 'ದೇವರು'-ಎಂದು ನಾವು ಕರೆಯುವದು. ಅಜ್ಞಾನಿಗಾಗಲಿ ತಜ್ಞನಿಗಾಗಲಿ, ಪಾಪಿಷ್ಠನಿಗಾಗಲಿ ಧರ್ಮಿಷ್ಠನಿಗಾಗಲಿ, ಗಂಡಸಿಗಾಗಲಿ ಹೆಂಗಸಿಗಾಗಲಿ, ಅಕ್ಷರಸ್ಥ ನಿಗಾಗಲಿ ನಿರಕ್ಷರಕುಕ್ಷಿಗಾಗಲಿ, ಸಂಸ್ಕಾರವಂತನಿಗಾಗಲಿ ಪ್ರಾಕೃತನಿಗಾಗಲಿ, ನಿರತಿಶಯವಾದ ಇಷ್ಟವಸ್ತುವು ಈಶ್ವರನೇ. ಪ್ರೇಮಕ್ಕೆ ಆಶ್ರಯನೂ ವಿಷಯನೂ ಆದ ಈಶ್ವರನೆಂಬ ಭಾವನೆಯು ಪರಿಪೂರ್ಣವಾಗಬೇಕಾದರೆ ಸೌಂದರ್ಯ, ಮಹತ್ತ್ವ, ವೀರ್ಯ-ಇವುಗಳಲ್ಲಿ ನಿರತಿಶಯ ವಾದವುಗಳನ್ನೆಲ್ಲ ಒಟ್ಟುಗೂಡಿಸಬೇಕು. ಇಂಥ ನಿರತಿಶಯಕಲ್ಪನೆಗಳು ಒಂದಲ್ಲದಿದ್ದರೆ ಒಂದು ರೂಪದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಸಹಜವಾಗಿ ಇದ್ದೇ ಇರುತ್ತವೆ. ನಮ್ಮೆಲ್ಲರ ಮನಸ್ಸಿನಲ್ಲಿಯೂ ಇವು ಯಾವಾಗಲೂ ಸೇರಿಕೊಂಡೇ ಇರುತ್ತವೆ. ಮನುಷ್ಯರಲ್ಲಿ ಕಾಣಬರುವ ಪ್ರವೃತ್ತಿಗಳೆಲ್ಲ ಈ ಕಲ್ಪನೆಗಳನ್ನೂ ವ್ಯವಹಾರದಲ್ಲಿ ಅನುಭವಕ್ಕೆ ತಂದುಕೊಳ್ಳುವ ಉದ್ದೇಶ ದಿಂದಾದ ಹೆಣಗಾಟಗಳೇ. ನಮ್ಮ ಸುತ್ತಲೂ ಜನಸಮಾಜದಲ್ಲಿ ಯಾವ ಯಾವ ವ್ಯವಹಾರ ಗಳು ಗೋಚರವಾಗುತ್ತಿರುವವೋ ಅವಕ್ಕೆಲ್ಲ ಆಯಾ ಜೀವರಲ್ಲಿರುವ ಆಯಾ ಧ್ಯೇಯಗಳು ಹೊರಕ್ಕೆ ಬಂದು ರೂಪುಗೊಳ್ಳಬೇಕೆಂದು ಮಾಡುವ ಪ್ರಯತ್ನದಿಂದಲೇ ಉಂಟಾಗಿರುವವು.

---

1. ಸಂಕೇತಪರಿಹಾಸಾದಿಗಳಿಂದ ನಾಮಗ್ರಹಣಮಾಡಿದರೂ ಒಳ್ಳೆಯದೇ ಎಂದು ಭಾಗವತಾದಿಗಳಲ್ಲಿ ಹೇಳಿದೆ.

ಮನಸ್ಸಿನ ಒಳಗೆ ಅಡಗಿರುವದೇ ಸ್ಥೂಲರೂಪದಿಂದ ಹೊರಬೀಳಬೇಕೆಂದು ಒತ್ತೊತ್ತಿಕೊಂಡು ಬರುತ್ತಿರುವದು. ಈ ರೀತಿಯಲ್ಲಿ ಅನಾದಿಕಾಲದಿಂದಲೂ ಈ ಧ್ಯೇಯವು ನಮ್ಮ ಮನಸ್ಸಿನಮೇಲೆ ಮಾಡುತ್ತಿರುವ ಬಲವಾದ ಪರಿಣಾಮವೇ ಜನರಲ್ಲೆಲ್ಲ ಎಡೆಬಿಡದೆ ತೋರಿಕೊಳ್ಳುವ ವ್ಯಾಪಾರಗಳ ಮೂಲಶಕ್ತಿಯು, ಮೂಲಪ್ರೇರಕವು. ಒಳಗಿನ ಧ್ಯೇಯದ ಕಲ್ಪನೆಗೆ ತಕ್ಕಂತೆ ಹೊರಗಿನ ಸನ್ನಿವೇಶಗಳನ್ನು ತಿದ್ದಿ ಎರಡಕ್ಕೂ ಹೊಂದುಗಡೆಮಾಡುವದಕ್ಕೆ ಹೋಗುವದು ವ್ಯಥಾ ಶ್ರಮವೆಂಬುದನ್ನು ತಿಳಿದುಕೊಳ್ಳಬೇಕಾದರೆ ನೂರಾರು ಜನ್ಮಗಳನ್ನು ಎತ್ತಿ ಸಾವಿರಾರು ವರ್ಷಗಳು ಒದ್ದಾಡಬೇಕಾಗಬಹುದು. ಆದರೆ ಈ ವಿಷಯವನ್ನು ಮನಗಂಡಮೇಲೆ ಜೀವನು ಒಳಗಿನ ಧ್ಯೇಯವನ್ನು ಹೊರಗಿನ ಪ್ರಪಂಚದ ಮೇಲೆ ಹಾಕುವ ಪ್ರಯತ್ನವನ್ನು ಕೈಬಿಟ್ಟು ಆ ಧ್ಯೇಯವನ್ನೇ ಧ್ಯೇಯವಾಗಿಟ್ಟುಕೊಂಡು ಅತ್ಯಂತ ಪ್ರೇಮದಿಂದ ಅದನ್ನು ಆರಾಧಿಸುವನು.

ಅತ್ಯಂತ ಪರಿಪೂರ್ಣವಾದ ಧ್ಯೇಯದಲ್ಲಿ ಮಿಕ್ಕ ಕಡಿಮೆಯ ಧ್ಯೇಯಗಳೆಲ್ಲವೂ ಅಂತರ್ಗತ ವಾಗಿರುತ್ತವೆ. ತನ್ನ ಪ್ರಿಯಳ ಮುಖವು ಕೋತಿಯಂತೆ ಎಷ್ಟೇ ಕುರೂಪವಾಗಿದ್ದರೂ ಕಾಮುಕನಾದವನು ಆಕೆಯನ್ನೇ ರತಿಯಂತೆ ಸುಂದರಿಯಾಗಿರುವಳೆಂದು ಭಾವಿಸುತ್ತಾನೆಂಬುದು ಎಲ್ಲರಿಗೂ ಗೊತ್ತೇ ಇದೆ. ದೂರ ನಿಂತು ನೋಡುವವರಿಗೆ ಈ ಸಂದರ್ಭದಲ್ಲಿ ಪ್ರೇಮವು ಸಲ್ಲದ ವಸ್ತುವಿನಮೇಲೆ ಬಿದ್ದಿರುವದೆಂದು ತೋರಬಹುದು, ಆದರೆ ಕಾಮುಕನ ಕಣ್ಣಿಗೆ ರತೀದೇವಿಯು ಕಾಣಿಸುವಳೇ ಹೊರತು ಕೋತಿದೇವಿಯು ಕಾಣಿಸುವದೇ ಇಲ್ಲ. ರತಿಯಾಗಲಿ ಕೋತಿಯಾಗಲಿ, ನಾವು ಯಾರನ್ನು ಪ್ರೀತಿಸುವೆವೋ ಅವರನ್ನೇ ಕೇಂದ್ರಸ್ಥಾನವಾಗಿ ಮಾಡಿಕೊಂಡು ನಮ್ಮ ಧ್ಯೇಯವು ಘನೀಭೂತವಾಗುವದು. ಸಾಮಾನ್ಯವಾಗಿ ಜನರು ಪೂಜಿಸುವದು ಏನನ್ನು? ಪರಮಭಕ್ತನು ಪೂರ್ಣಪ್ರೇಮದಿಂದ ಕಾಣುತ್ತಿರುವ ಸಕಲಗುಣಪರಿಪೂರ್ಣವಾದ ಪರಮಧ್ಯೇಯವನ್ನೆ?-ಎಂದಿಗೂ ಅಲ್ಲ. ಸಾಮಾನ್ಯವಾಗಿ ಪುರುಷರೂ ಸ್ತ್ರೀಯರೂ ಪೂಜಿಸು ತ್ತಿರುವದು ತಮ್ಮತಮ್ಮೊಳಗಿರುವ ಕಲ್ಪಿತಧ್ಯೇಯವನ್ನೇ. ಪ್ರತಿಯೊಬ್ಬನೂ ತನ್ನತನ್ನ ಕಲ್ಪಿತ ಧ್ಯೇಯವನ್ನೇ ಹೊರಗಿನ ಪ್ರಪಂಚದಲ್ಲಿ ಆವಾಹನೆಮಾಡಿಟ್ಟುಕೊಂಡು ಅದಕ್ಕೇ ಅಡ್ಡಬೀಳು ತ್ತಿರುವನು. ಕ್ರೂರಿಗಳೂ ರಕ್ತಪ್ರಿಯರೂ ಆದವರು ಈಶ್ವರನು ರಕ್ತಪ್ರಿಯನೆಂದು ಭಾವಿಸಿರು ವದಕ್ಕೆ ಇದೇ ಕಾರಣವು; ಏಕೆಂದರೆ ಅತ್ಯಂತೋತ್ತಮವೆಂದು ನಾವು ಕಲ್ಪಿಸಿಕೊಂಡಿರುವ ಧ್ಯೇಯವನ್ನು ಮಾತ್ರ ಪ್ರೀತಿಸುವದು ಅವರಿಗೆ ಸಾಧ್ಯವಾಗಿರುವದು. ಇದರಂತೆ ಸಜ್ಜನರಾದ ವರು ಭಗವಂತನು ಸಕಲಸದ್ಗುಣಪರಿಪೂರ್ಣನೆಂದು ಭಾವಿಸಿರುವದಕ್ಕೂ ಇದೇ ಕಾರಣವು. ಆದ್ದರಿಂದಲೇ ಅವರ ಧ್ಯೇಯಕ್ಕೂ ಉಳಿದವರ ಧ್ಯೇಯಕ್ಕೂ ಎಷ್ಟೋ ಅಂತರವಿರುವದು.

# 18. ಪ್ರೇಮರೂಪನಾದ ಈಶ್ವರನು ಸ್ವತಃಸಿದ್ಧನು

ಇದನ್ನು ಕೊಟ್ಟು ಅದನ್ನು ತೆಗೆದುಕೊಳ್ಳುವ, ಅಗ್ಗವಾಗಿ ಕೊಂಡು ತಗ್ಗಾಗಿ ಮಾರುವ, ಸ್ವಾರ್ಥಬುದ್ಧಿಯನ್ನು ದಾಟಿ ಭಯವೆಂದರೇನೆಂಬುದನ್ನೇ ಅರಿಯದ ಭಕ್ತನ ಧ್ಯೇಯವು ಹೇಗಿರುವದು? ಮಹೇಶ್ವರನೇ ಎದುರಿಗೆ ಬಂದರೂ ಇಂಥವನು ''ನಿನಗೆ ನನ್ನ ಸರ್ವಸ್ವ ವನ್ನೂ ಕೊಟ್ಟಿರುವೆನು, ನನಗೆ ನಿನ್ನಿಂದ ಏನೂ ಆಗಬೇಕಾದದ್ದು ಇರುವದಿಲ್ಲ ; ಅಷ್ಟೇಕೆ, ನನ್ನ ದೆನ್ನಬಹುದಾದ ಪದಾರ್ಥವೇ ಇಲ್ಲ'' ಎನ್ನುವನು. ಈ ಮನೋನಿಶ್ಚಯವು ಉಂಟಾದವನಿಗೆ ಪೂರ್ಣಪ್ರೇಮವೇ, ಒಂದಿಷ್ಟೂ ಭಯವನ್ನರಿಯದ ಪ್ರೇಮವೇ, ಧ್ಯೇಯವಾಗಿರುವದು. ಇಂಥವರ ಉಚ್ಚಧ್ಯೇಯದಲ್ಲಿ ಯಾವದೊಂದು ವಿಶೇಷರೂಪವಾದ ಸಂಕೋಚವೂ ಇರುವದಿಲ್ಲ; ಅದು ವಿಶ್ವವ್ಯಾಪಕ ಪ್ರೇಮವಾಗಿರುವದು; ಇಲ್ಲಿಗೆ ಆಯಿತೆಂಬ, ಇಷ್ಟಕ್ಕೆ ತೀರಿತೆಂಬ, ಗಡಿಮಿತಿಗಳನ್ನರಿಯದ ಪ್ರೇಮ, ಪ್ರೇಮವೆಂದರೆ ಪ್ರೇಮವೇ, ನಿರುಪಾಧಿಕ ಪ್ರೇಮವೇ ಆಗಿರುವದು. ಈ ಪ್ರೇಮಧರ್ಮದ ಉಚ್ಚಧ್ಯೇಯವನ್ನು ಪೂಜಿಸುವದಕ್ಕೂ ಪ್ರೀತಿಸುವದಕ್ಕೂ ಅದರ ಸ್ವರೂಪವೇ ಸಾಕು, ಯಾವ ಪ್ರತಿಮೆಗಳಾಗಲಿ ಪ್ರತೀಕಗಳಾಗಲಿ ಅವಶ್ಯವಿರುವದಿಲ್ಲ. ಸರ್ವವನ್ನೂ ತನ್ನೊಳಗೆ ಸೇರಿಸಿಕೊಳ್ಳುವ ಇಂಥ ಧ್ಯೇಯವನ್ನು ತತ್ಸ್ವರೂಪದಿಂದಲೇ ಪೂಜಿಸುವದೆಂಬುದೇ ಪರಭಕ್ತಿಯ ಸರ್ವೋತ್ತಮರೂಪವು. ಭಕ್ತಿಯ ಮಿಕ್ಕ ರೂಪಗಳೆಲ್ಲ ಈ ರೂಪವನ್ನು ಮುಟ್ಟುವದಕ್ಕೆ ಹೋಗುವ ದಾರಿಯಲ್ಲಿ ಸಿಕ್ಕುವ ಮಜಲುಗಳು. ಭಕ್ತಿಮಾರ್ಗದ ಅವಲಂಬನೆಯಲ್ಲಿ ನಮಗೆ ಆಗುವ ಸೋಲುಗೆಲವುಗಳೆಲ್ಲ ಇದೊಂದು ಧ್ಯೇಯವನ್ನು ಸಾಧಿಸುವ ದಾರಿಯಲ್ಲಿಯೇ ಒದಗುವವು. ಭಕ್ತನು ಒಂದಾಗುತ್ತ ಲೊಂದು ವಿಷಯವನ್ನು ತೆಗೆದುಕೊಂಡು ಅದರಲ್ಲಿ ತನ್ನ ಒಳಗಿನ ಧ್ಯೇಯವನ್ನು ಆರೋಪಿಸುತ್ತಾ ಹೋಗುತ್ತಿರುವನು; ಆದರೆ ಆ ಒಳಗಿನ ಧ್ಯೇಯವು ಒಂದೇ ಸಮನೆ ವಿಕಾಸ ವಾಗುತ್ತಲೇ ಇರುವದರಿಂದ ಈ ಹೊರಗಿನ ವಿಷಯಗಳು ಯಾವವೂ ಅದಕ್ಕೆ ಚಿಹ್ನೆಗಳಾಗ ಲಾರವೆಂದು ತಿಳಿದು ಅವುಗಳನ್ನು ಸಹಜವಾಗಿಯೇ ಒಂದೊಂದಾಗಿ ಕೈಬಿಡುತ್ತಾ ಬರುತ್ತಾನೆ. ಕೊನೆಗೆ ಬಾಹ್ಯವಸ್ತುಗಳಲ್ಲಿ ತನ್ನ ಧ್ಯೇಯದ ಸಾಕ್ಷಾತ್ಕಾರವಾಗುವದು ಅಸಾಧ್ಯವೆಂದೂ ಆ ಪರಮವಸ್ತುವಿಗೆ ಯಾವ ಬಾಹ್ಯವಸ್ತುವನ್ನು ಹೋಲಿಸಿದರೂ ಅಜಗಜನ್ಯಾಯವಾಗುವದೆಂದೂ ಆ ಮುಮುಕ್ಷುವಿಗೆ ತೋರಹತ್ತುತ್ತದೆ. ಕಾಲಕ್ರಮದಲ್ಲಿ ಸರ್ವೋತ್ತಮವಾಗಿಯೂ ಸರ್ವಾನು ಸ್ಯೂತವಾಗಿಯೂ ಇರುವ ಆ ನಿರುಪಾಧಿ ಕವಾದ ಧ್ಯೇಯವನ್ನು ನಿರಪೇಕ್ಷವಾದ ಧ್ಯೇಯ ರೂಪದಿಂದಲೇ ಸಾಕ್ಷಾತ್ಕಾರಮಾಡಿಕೊಳ್ಳುವ ಶಕ್ತಿಯನ್ನು ಅವನು ಸಂಪಾದಿಸಿಕೊಳ್ಳುತ್ತಾನೆ ; ಆಗ ಅದು ಅವನಿಗೆ ಸಜೀವವಾಗಿಯೂ ಪರಮಾರ್ಥ ಸತ್ಯವಾಗಿಯೂ ಇರುವದು.

ಭಕ್ತನು ಈ ಸ್ಥಿತಿಯನ್ನು ಮುಟ್ಟಿದಾಗ ಅವನಿಗೆ ದೇವರಿದಾನೆಂಬುದಕ್ಕೆ ಪ್ರಮಾಣವಿದೆಯೊ ಇಲ್ಲವೊ, ಆತನು ಸರ್ವಜ್ಞನೂ ಸರ್ವಶಕ್ತನೂ ಹೌದೊ ಅಲ್ಲವೊ? - ಮುಂತಾದ ಪ್ರಶ್ನೆಗಳನ್ನು ಕೇಳಬೇಕೆನಿಸುವದೇ ಇಲ್ಲ. ಅವನಿಗೆ ಆ ಪರಮೇಶ್ವರನು ಕೇವಲ ಪ್ರೇಮರೂಪನಾದ ಭಗವಂತನಾಗಿರುವನು, ಪ್ರೇಮದ ಪರಕಾಷ್ಠೆಯೇ ಆಗಿರುವನು; ಭಕ್ತನಿಗೆ ಇಷ್ಟೇ ಸಾಕಾಗಿರು ವದು. ಪ್ರೇಮರೂಪದಲ್ಲಿ ಅವನಿಗೆ ಭಗವಂತನು ಸ್ವತಃಸಿದ್ಧನಾಗಿರುವನು, ಏಕೆಂದರೆ ಕಾಮಿಯಾದವವನಿಗೆ ತನ್ನ ಪ್ರಿಯವಸ್ತುವಿದೆಯೆಂಬುದನ್ನು ತೋರಿಸಿಕೊಡುವ ಪ್ರಮಾಣವೇನೂ ಬೇಕೇ ಇರುವದಿಲ್ಲ. ಮಿಕ್ಕ ಯೋಗಗಳಲ್ಲಿ ಹೇಳುವ ನ್ಯಾಯಾಧೀಶರಂತಿರುವ ದೇವರುಗಳನ್ನು ಸಿದ್ಧಮಾಡುವದಕ್ಕೆ ಬೇಕಾದರೆ ಎಷ್ಟೋ ಪ್ರಮಾಣವು ಅವಶ್ಯವಾಗಬಹುದು. ಆದರೆ ಭಕ್ತನಿಗೆ ಈ ಸ್ಥಿತಿಯಲ್ಲಿ ಅಂಥ ದೇವರುಗಳಗೊಡವೆಯೇ ಬೇಕಾಗಿರುವದಿಲ್ಲ. ಅವನಿಗೆ ದೇವರೆಂದರೆ ಕೇವಲ ಪ್ರೇಮರೂಪನು. ಆತನೇ ಎಲ್ಲರಿಗೂ ಸರ್ವಾಂತರನಾದ ಪರಮಾತ್ಮ ನೆಂಬುದನ್ನು ಕಂಡುಕೊಂಡು ಅವನು ಆನಂದದಿಂದ ಹೀಗೆಂದು ಸಾರುತ್ತಿರುವನು : ''ಎಲೆ ಪ್ರಿಯಳೆ, ಪತಿಯನ್ನು ಯಾರೂ ಪತಿಯ ಸಲುವಾಗಿ ಪ್ರೀತಿಸುವದಿಲ್ಲ, ಆ ಪತಿಯಲ್ಲಿರುವ ಆತ್ಮನಿಗಾಗಿಯೇ ಪ್ರೀತಿಸುವರು. ಎಲೆ ಪ್ರಿಯಳೆ, ಪತ್ನಿಯನ್ನು ಯಾರೂ ಪತ್ನಿಯ ಸಲುವಾಗಿ ಪ್ರೀತಿಸುವದಿಲ್ಲ ಆ ಪತ್ನಿಯಲ್ಲಿರುವ ಆತ್ಮನಿಗಾಗಿಯೇ ಪತ್ನಿಯನ್ನು ಪ್ರೀತಿಸುವರು''[1] (ಬೃ.2- 4-5).

ಮನುಷ್ಯರ ಪ್ರವೃತ್ತಿಗಳಿಗೆಲ್ಲ ಸ್ವಾರ್ಥವೊಂದೇ ಉತ್ತೇಜಕವೆಂದು ಕೆಲವರು ಅನ್ನುವ ದುಂಟು. ಆದರೆ ಸ್ವಾರ್ಥತೆಯೆಂಬುದೂ ಪ್ರೇಮವೇ; ಅದನ್ನು ಒಂದಾನೊಂದು ವಿಶೇಷ ರೂಪಕ್ಕೆ ತಂದಿರುವದರಿಂದ ಅದು ಕೀಳುಸ್ಥಿತಿಗೆ ಬಂದಿರುತ್ತದೆ, ಅಷ್ಟೆ . ನಾನೇ ಸಮಷ್ಟಿಯೆಂಬ ಯೋಚನೆಯು ಬಂತೆಂದರೆ ಯಾವ ಸ್ವಾರ್ಥತೆಗೂ ಒಂದಿಷ್ಟೂ ಅವಕಾಶವಿರುವದಿಲ್ಲ; ಆದರೆ ನಾನು ಯಾವದೋ ಒಂದು ಸಣ್ಣವ್ಯಕ್ತಿಯೆಂದು ತಪ್ಪಾಗಿ ತಿಳಿದುಕೊಂಡರೆ ಆಗ ನನ್ನ ಪ್ರೇಮವು ವ್ಯಕ್ತೀಕರಿಸಿ ಸಂಕುಚಿತವಾಗಿಬಿಡುತ್ತದೆ ; ಪ್ರೇಮದ ಕಾರ್ಯಕ್ಷೇತ್ರವನ್ನು ಇಷ್ಟೆಂದು ಸಂಕೋಚ ಗೊಳಿಸಿರುವದೇ ಇಲ್ಲಿ ಮಾಡಿರುವ ತಪ್ಪು . ಸರಿಯಾಗಿ ನೋಡಿದರೆ ಈ ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳೂ ಪರಮಾತ್ಮನಿಂದಲೇ ಜನಿಸಿರುವದರಿಂದ ಅವುಗಳೆಲ್ಲವೂ ಪ್ರೇಮಕ್ಕೆ ತಕ್ಕವಾಗಿಯೇ ಇರುತ್ತವೆ ; ಆದರೆ ಸಮಷ್ಟಿಯ ಪ್ರೀತಿಯಲ್ಲಿ ವ್ಯಷ್ಟಿಯ ಪ್ರೀತಿಯೂ ಸೇರಿರುವ ದೆಂಬುದನ್ನು ನೆನಪಿನಲ್ಲಿಡಬೇಕು. ಈ ಸಮಷ್ಟಿಯೇ ಭಕ್ತರ ದೇವರು. 'ಪರಲೋಕದ ತಂದೆ', 'ಈಶ್ವರ', 'ಸೃಷ್ಟಿಕರ್ತ' - ಮುಂತಾದ ಹೆಸರಿನ ಮಿಕ್ಕ ಯಾವ ದೇವರುಗಳಿಂದಲಾಗಲಿ, ಯಾವ ಸಿದ್ಧಾಂತಗಳಿಂದಲಾಗಲಿ, ಮತಗ್ರಂಥಗಳಿಂದಾಗಲಿ ಭಕ್ತರಿಗೆ ಆಗಬೇಕಾದದ್ದಿರುವದಿಲ್ಲ.

1. 60ನೆಯ ಪುಟದ 1ನೆಯ ಟಿಪ್ಪಣಿಯನ್ನು ನೋಡಿ.

ಏಕೆಂದರೆ ಅವರು ಪರಮಪ್ರೇಮದ ಭಕ್ತಿಯ ಭರದಲ್ಲಿ ಅವುಗಳೆಲ್ಲವನ್ನೂ ಸಂಪೂರ್ಣವಾಗಿ ದಾಟಿ ಹೋಗಿರುತ್ತಾರೆ. ಹೃದಯವು ಶುದ್ಧವಾಗಿ ಚೊಕ್ಕಟವಾಗಿ ಅದರಲ್ಲಿ ಪ್ರೇಮವೆಂಬ ದಿವ್ಯಾಮೃತವು ತುಂಬಿತುಳುಕುತ್ತಿರುವಾಗ ಈಶ್ವರನ ವಿಷಯವಾದ ಮಿಕ್ಕ ಕಲ್ಪನೆಗಳೆಲ್ಲ ತುಚ್ಛವಾಗುವವು ; ಅವುಗಳೆಲ್ಲವೂ ಅಸಂಪೂರ್ಣವೆಂದೂ ಅಯೋಗ್ಯವೆಂದೂ ಭಕ್ತನು ತಿರಸ್ಕರಿಸುವನು.

ಪರಭಕ್ತಿಯ ಮಹಿಮೆಯು ಇಂಥದ್ದು. ಪೂರ್ಣಭಕ್ತನಾದವನು ದೇವರಿಗಾಗಿ ಗುಡಿ ಗೋಪುರಗಳನ್ನು ಹುಡುಕಿಕೊಂಡು ಹೋಗುವದಿಲ್ಲ. ಏಕೆಂದರೆ ಅವನಿಗೆ ಆ ಪರಮೇಶ್ವರ ನಿಲ್ಲದ ಸ್ಥಳವೇ ಕಾಣಿಸದು. ಅವನಿಗೆ ಗುಡಿಯ ಒಳಗೂ ಆತನೇ, ಗುಡಿಯ ಹೊರಗೂ ಆತನೇ ಕಾಣಿಸುವನು. ಅವನಿಗೆ ಧರ್ಮಿಷ್ಠನ ಧರ್ಮದಲ್ಲಿಯೂ ಆತನೇ ಕಾಣಿಸುವನು, ಪಾಪಿಷ್ಠನ ಪಾಪದಲ್ಲಿಯೂ ಆತನೇ ಕಾಣಿಸುವನು. ಏಕೆಂದರೆ ಆ ಭಗವಂತನು ಎಂದೆಂದಿಗೂ ಆರಿಸುವದಕ್ಕಾಗದ ಅನಂತಶಕ್ತಿಯುಳ್ಳ ನಿತ್ಯನಿರಂತರವಾಗಿ ಪ್ರಜ್ವಲಿಸುತ್ತಿರುವ ಪ್ರೇಮಜ್ಯೋತಿಯಾಗಿ ಆ ಭಕ್ತನ ಹೃದಯದಲ್ಲಿಯೇ ಪ್ರತಿಷ್ಠಿತನಾಗಿ ಝುಗಝುಗಿಸುತ್ತಿರುವನು !

# 19. ಭಗವದ್ಭಕ್ತಿಗೆ ಕೊಟ್ಟಿರುವ ವ್ಯಾವಹಾರಿಕೋಪಮಾನಗಳು

ಈ ನಿರುಪಾಧಿಕವಾದ ಪರಭಕ್ತಿಯ ಸ್ವರೂಪವನ್ನು ಮಾನವಭಾಷೆಯಲ್ಲಿ ತಿಳಿಸುವದು ಅಸಾಧ್ಯವು. ಮನುಷ್ಯರು ಎಷ್ಟೇ ಕಲ್ಪನೆಮಾಡಿಕೊಳ್ಳಲಿ, ಅದರ ಪರಿಪೂರ್ಣ ಸ್ವರೂಪವನ್ನೂ ಮಾಧುರ್ಯವನ್ನೂ ಇದ್ದದ್ದು ಇದ್ದಹಾಗೆ ಅರಿಯುವದು ಆಗಲೇ ಆರದು. ಹೀಗಿದ್ದರೂ ಬಹು ಕಾಲದಿಂದಲೂ ಎಲ್ಲಾ ದೇಶಗಳಲ್ಲಿಯೂ ಗೌಣಭಕ್ತಿಯನ್ನೂ ಪರಭಕ್ತಿಯನ್ನೂ ಅನುಸರಿಸುವ ಭಕ್ತಿಪಂಥದ ಜನರು ಅವರವರು ನಿರತಿಶಯಪ್ರೇಮವೆಂದಿಟ್ಟುಕೊಂಡಿರುವ ಧ್ಯೇಯವನ್ನು ಗ್ರಹಿಸಿ ಅದರ ಸ್ವರೂಪವಿವರಣೆಯನ್ನು ಮಾಡುವಾಗ ಗತ್ಯಂತರವಿಲ್ಲದೆ ಈ ಅಸಂಪೂರ್ಣ ವಾದ ಮಾನವಭಾಷೆಯನ್ನೇ ಉಪಯೋಗಿಸುತ್ತಾಬಂದಿರುವರು. ಇಷ್ಟೇ ಅಲ್ಲ, ಆ ಅನಿರ್ವ ಚನೀಯವಾದ ಭಗವತ್ಪ್ರೇಮವನ್ನು ತಿಳಿಸುವದಕ್ಕೆ ವ್ಯಾವಹಾರಿಕಪ್ರೇಮದ ಬೇರೆಬೇರೆಯ ರೂಪಗಳನ್ನೇ ಅದಕ್ಕೂ ಉಪಮಾನವಾಗಿ ಹೇಳುತ್ತಾಬಂದಿರುವರು. ದೈವಿಕವಿಷಯಗಳನ್ನು ಕೂಡ ಮಾನುಷರೀತಿಯಲ್ಲಿ ಭಾವನೆಮಾಡಿಕೊಳ್ಳುವದೊಂದೇ ಮನುಷ್ಯನಿಗೆ ಸಾಧ್ಯ, ನಿತ್ಯ ನಿರುಪಾಧಿ ಕವಾದ ಬ್ರಹ್ಮವನ್ನು ಕೂಡ ಅವನು ಸಾಪೇಕ್ಷವಾದ ವ್ಯಾವಹಾರಿಕಭಾಷೆಯಿಂದಲೇ ತಿಳಿಸಬೇಕಾಗಿರುವದು.[1] ನಮ್ಮ ಪಾಲಿಗೆ ಇಡಿಯ ವಿಶ್ವವೇ ಅಪರಿಚ್ಛಿನ್ನವಾದ ಪರವಸ್ತುವನ್ನು ಪರಿಚ್ಛಿನ್ನಭಾಷೆಯಲ್ಲಿ ಬರೆದ ಬರಹವಾಗಿರುವದು. ಆದಕಾರಣ ಸಾಮಾನ್ಯವಾಗಿ ಮನುಷ್ಯ ಪ್ರೇಮಕ್ಕೆ ಜನರು ಬಳಕೆಮಾಡುವ ಪದಗಳನ್ನೆಲ್ಲ ಭಕ್ತರು ಭಗವಂತನ ಮತ್ತು ಭಗವದ್ಭಕ್ತಿಯ ವಿಷಯದಲ್ಲಿಯೂ ಉಪಯೋಗಿಸಿರುತ್ತಾರೆ.

ಭಕ್ತಿಯ ವಿಷಯವಾಗಿ ಬರೆದಿರುವ ಆಚಾರ್ಯರುಗಳಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಿಂದ ಈ ದೈವಿಕಪ್ರೇಮವನ್ನು ತಿಳಿವಳಿಕೆಗೂ ಅನುಭವಕ್ಕೂ ತಂದುಕೊಳ್ಳುವದಕ್ಕೆ ಪ್ರಯತ್ನಮಾಡಿದವರಾಗಿರುತ್ತಾರೆ. ಈ ಪ್ರೇಮವು ತೋರಿಕೊಳ್ಳುವ ತೀರ ಕಡಿಮೆಯ ತರದ ಸ್ವರೂಪಕ್ಕೆ **ಶಾಂತಭಕ್ತಿ**ಯೆಂದು ಹೆಸರು. ಭಕ್ತಿಯ ಬಿಸಿಯೇಳದೆ, ಭಕ್ತಿಯ ಹುಚ್ಚು ತಲೆಗೇರದೆ, ಸಾಮಾನ್ಯವಾದ ಗದ್ದಲವಿಲ್ಲದ ಶ್ರದ್ಧೆಯಿಂದ ಬರಿಯ ಕರ್ಮಗಳಿಂದಲೂ ಮಂತ್ರತಂತ್ರ ಗಳಿಂದಲೂ ಪೂಜಿಸುವದಕ್ಕಿಂತ ಸ್ವಲ್ಪ ಹೆಚ್ಚಿನ ಭಕ್ತಿಯಿಂದ, ಪ್ರೇಮದ ಜೋರಿಲ್ಲದೆ ಆರಾಧಿ

---

1. 33ನೆಯ ಪುಟದಲ್ಲಿ ಸ್ವಾಮಿಗಳು ಈ ವಿಷಯದಲ್ಲಿ ಹೇಳಿರುವದನ್ನು ನೋಡಿರಿ.

ಸುವ ಭಕ್ತಿಯು **ಶಾಂತ**ವೆನಿಸುವದು.[1] ಈ ಪ್ರಪಂಚದಲ್ಲಿ ಕೆಲವರಿಗೆ ಮೆಲ್ಲಮೆಲ್ಲಗೆ ಸಾಗುವದೇ ಇಷ್ಟ ; ಮತ್ತೆ ಕೆಲವರಿಗೆ ಸುಂಟರಗಾಳಿಯ ಹಾಗೆ ಭರ್‍ರನೆ ಬಂದು ಮರೆಯಾಗುವದೇ ಹೊಂದುವದು. ಶಾಂತಭಕ್ತನು ಮೆಲ್ಲಗೆ ಸಮಾಧಾನವಾಗಿ ಆಡಂಬರವಿಲ್ಲದೆ ಇರುವ ಮೊದಲನೆಯ ತರಗತಿಗೆ ಸೇರಿದವನು.

ಇದಕ್ಕಿಂತ ಹೆಚ್ಚಿನ ತರಗತಿಯು **ದಾಸ್ಯಭಕ್ತಿ**. ಇದು ತಾನು ಭಗವಂತನ ಆಳೆಂದು ತಿಳಿದುಕೊಂಡಾಗ ಬರುವ ಭಕ್ತಿ. ನಂಬಿಕೆಯುಳ್ಳ ಸೇವಕನು ತನ್ನ ಯಜಮಾನನಲ್ಲಿ ತೋರಿಸುವ ಆಸಕ್ತಿಯೇ ದಾಸ್ಯಭಕ್ತಿಯ ಗುರಿಯಾಗಿರುವದು.

ಇನ್ನೂ ಮೇಲಿನ ತರಗತಿಯ ಭಕ್ತಿಯೆಂದರೆ **ಸಖ್ಯವು**. ''ಎಲೈ ಪರಮಾತ್ಮನೆ, ನೀನೇ ನಮ್ಮ ಪ್ರಿಯಸ್ನೇಹಿತನು'' ಎನ್ನುವ ಭಕ್ತಿ. ಸ್ನೇಹಿತನಾದವನಲ್ಲಿ ನಾವು ನಮ್ಮ ಹೃದಯವನ್ನೇ ಬಿಚ್ಚುವೆವು; ಅವನು ನಮ್ಮ ದೋಷಗಳಿಗಾಗಿ ನಮ್ಮನ್ನು ದೂರುವದಿಲ್ಲವೆಂದೂ ಎಂದೆಂದಿಗೂ ಸಹಾಯ ವನ್ನೇ ಮಾಡುವನೆಂದೂ ನಮಗೆ ಗೊತ್ತು , ಅಲ್ಲವೆ? ಇದರಂತೆಯೇ ಈ ಭಕ್ತಿಯಲ್ಲಿ ಭಕ್ತ ಅವನ ಸಖನಾದ ಉಪಾಸ್ಯದೇವತೆ-ಈ ಇಬ್ಬರಲ್ಲಿ ಒಬ್ಬರಿಂದೊಬ್ಬರಿಗೆ ಸಮಾನಭಾವದಿಂದ ಪ್ರೇಮವು ಹರಿದಾಡುತ್ತಿರುವದು. ಹೀಗಿರುವದರಿಂದ ದೇವರು ನಮ್ಮ ಬಳಿಯಲ್ಲಿಯೇ ಇರುವ ಸಖನಾಗಿಬಿಡುವನು. ಆತನಿಗೆ ನಮ್ಮ ಜೀವನವೃತ್ತಾಂತವನ್ನೆಲ್ಲ ಬಿಚ್ಚಿಹೇಳಬಹುದು. ನಮ್ಮ ಹೃದಯದ ಕೇವಲ ಅಂತಃಪ್ರದೇಶದಲ್ಲಿರುವ ಪರಮರಹಸ್ಯಗಳನ್ನೂ ಆತನ ಮುಂದೆ ತೆಗೆದಿಟ್ಟರೂ ಭಯವಿಲ್ಲ, ಅವು ಬಯಲಾಗುವ ಸಂಭವವಿಲ್ಲ ; ಅವುಗಳ ವಿಷಯದಲ್ಲೆಲ್ಲ ಖಂಡಿತವಾಗಿಯೂ ಆತನು ಬೆಂಬಲವನ್ನೇ ಕೊಡುವನು. ಹೀಗೆ ಈ ಭಕ್ತಿಯಲ್ಲಿ ಈಶ್ವರನು ತನಗೆ ಸಮಾನಸಾದವನೆಂದು ಭಕ್ತನು ಇಟ್ಟುಕೊಂಡಿರುವನು. ದೇವರೆಂದರೆ ನಮ್ಮ ಅತ್ಯಂತ ಪ್ರೀತಿಯ ಆಟದ ಗೆಳೆಯನೆಂಬುದೇ ಈ ಭಕ್ತಿಯ ದೃಷ್ಟಿ

ಒಂದು ಬಗೆಯಿಂದ ನೋಡಿದರೆ ನಾವೆಲ್ಲರೂ ಈಶ್ವರನೊಡನೆ ಆಟವನ್ನಾಡುತ್ತಿರುವೆವು. ಮಕ್ಕಳು ಆಟವಾಡುವಂತೆಯೂ, ಪರಮವಿಖ್ಯಾತರಾದ ರಾಜರು ಚಕ್ರವರ್ತಿಗಳು ಕೂಡ ತಮತಮಗೆ ಅನುರೂಪವಾದ ಆಟಗಳನ್ನು ಆಡುವಂತೆಯೂ, ನಮ್ಮ ಪರಮಪ್ರಿಯನಾದ ಭಗವಂತನೂ ಈ ಲೋಕವನ್ನು ತನ್ನ ಲೀಲೆಯ ಕ್ಷೇತ್ರವಾಗಿ ಮಾಡಿಕೊಂಡಿರುತ್ತಾನೆ. ಆತನು ಆಪ್ತಕಾಮನು. ಅವನಿಗೆ ಆಗಬೇಕಾದದ್ದೇನೂ ಇರುವದಿಲ್ಲ. ಅಂಥ ಭಗವಂತನು

---

1. ಉಲ್ಲಾಸವೊಂದೇ ತೋರಿಕೊಳ್ಳುವ ಪ್ರೀತಿಯು ಶಾಂತಭಕ್ತಿರಸವೆನಿಸುವದು ; ಶಾಂತ ಭಕ್ತರಿಗೆ ಮಿಕ್ಕವಸ್ತುಗಳಲ್ಲಿ ತುಚ್ಛಬುದ್ಧಿಯುಂಟಾಗಿರುತ್ತದೆ-ಎಂದು ಗೌಡೀಯವೈಷ್ಣವ ಗ್ರಂಥಗಳಲ್ಲಿ ವರ್ಣಿಸಿರುತ್ತದೆ.

ಸೃಷ್ಟಿಯನ್ನೇಕೆ ಮಾಡಬೇಕು? ಕಾರ್ಯವೆಂಬುದು ಇರಬೇಕಾದರೆ ಯಾವದಾದರೊಂದು ಇಚ್ಛೆಯು ಪೂರ್ತಿಯಾಗತಕ್ಕದ್ದಿರಬೇಕು, ಇಚ್ಛೆಯೆಂಬುದಿರಬೇಕಾದರೆ ಏನಾದರೊಂದು ಕೊರತೆಯಿರಬೇಕು. ಭಗವಂತನಾದರೋ ಪರಿಪೂರ್ಣನು, ಆತನಿಗೆ ಯಾವದೊಂದು ಕೊರತೆಯೂ ಇರುವದಿಲ್ಲ. ಹೀಗಿರುವಲ್ಲಿ ಆತನು ನಿರಂತರವೂ ಈ ಸೃಷ್ಟಿಯ ಕಾರ್ಯದಲ್ಲಿ ಏತಕ್ಕೆ ಪ್ರವೃತ್ತನಾಗಬೇಕು? ಆತನಿಗೇನುದ್ದೇಶವಿರುವದು? ಈ ಪ್ರಪಂಚವನ್ನು ಏನಾದರೊಂದು ಉದ್ದೇಶದಿಂದ ದೇವರು ಸೃಷ್ಟಿಸಿರುವನೆಂದು ಕಲ್ಪಿಸುವದು ಹೇಳುವದಕ್ಕೆ ತಕ್ಕ ಕಥೆಯೇನೋ ಆಗುತ್ತದೆ, ಆದರೆ ಆದರಲ್ಲೇನೂ ಹುರುಳಿರುವದಿಲ್ಲ. ನಿಜವಾಗಿ ನೋಡಿದರೆ ಎಲ್ಲವೂ ಆತನ ಲೀಲೆ. ಈ ಪ್ರಪಂಚವೂ ಆತನು ಪ್ರಕಟಗೊಳಿಸಿರುವ ಲೀಲೆಯೇ. ಎಷ್ಟೇ ನೋಡಿದರೂ ಈ ಮಹಾ ಪ್ರಪಂಚವೆಂಬುದೆಲ್ಲವೂ ಆತನಿಗೆ ಕೇವಲ ವಿನೋದಸ್ಥಾನವಾಗಿರಬೇಕೆಂದೇ ತೋರುವದು.

ಆದ್ದರಿಂದ ಆತನು ನಿಮ್ಮ ನಿತ್ಯಸಖನೆಂದೂ ಬಂದದ್ದೆಲ್ಲ ಆತನ ಲೀಲೆಯೆಂದೂ ಭಾವಿಸು ವದನ್ನು ಕಲಿತುಕೊಳ್ಳಿರಿ-ಎಂದು ಭಕ್ತನು ಹೇಳುವನು. ನೀವು ಬಡವರಾಗಿದ್ದರೆ ಅದನ್ನು ಒಂದು ಆಟವೆಂದೇ ತಿಳಿಯಿರಿ. ಐಶ್ವರ್ಯವಂತರಾಗಿದ್ದರೆ ಅದೂ ಒಂದು ಆಟವೇ ಎಂದು ತಿಳಿದು ವಿನೋದಗೊಳ್ಳಿರಿ. ವಿಪತ್ತುಗಳು ಬಂದೊದಗಿದರೆ ಅದೂ ಆಟವೇ, ಸುಖವು ಪ್ರಾಪ್ತವಾದರಂತೂ ಮತ್ತೂ ಸೊಗಸಾದ ಆಟವು. ಈ ಲೋಕವೆ ಆಟದ ಬಯಲು, ನಾವೆಲ್ಲರೂ ಆಟವಾಡುತ್ತಿರುವೆವು. ಯಾವಾಗಲೂ ಭಗವಂತನು ನಮ್ಮೊಡನೆ ಆಡುತ್ತಿರುವನು, ನಾವೂ ಆತನೊಡನೆ ಆಟವಾಡುತ್ತಲೇ ಇರುವೆವು. ಈ ರೀತಿಯಲ್ಲಿ ದೇವರು ನಮ್ಮನ್ನು ಎಂದಿಗೂ ಬಿಡದೆ ಜೊತೆಯಲ್ಲಿಯೇ ಆಡುತ್ತಿರುವ ಗೆಳೆಯನಾಗಿರುತ್ತಾನೆ. ಆಹಾ ! ಆತನ ಆಟವು ಎಷ್ಟು ಸೊಗಸು ! ಇಗೋ, ಆಟವು ಮುಗಿಯಿತು, ಕಲ್ಪಾಂತವಾಯಿತು ; ಸ್ವಲ್ಪ ಹೊತ್ತು ವಿಶ್ರಾಂತಿ, ಆಮೇಲೆ ಎಲ್ಲರೂ ಹೊರಕ್ಕೆ ಬಂದು ಮತ್ತೆ ಆಟವನ್ನು ಪ್ರಾರಂಭಿಸುವರು. ಹೀಗೆಯೇ ನಡೆಯುತ್ತಿರುವದು. ಇದೆಲ್ಲವೂ ಹೀಗೆ ಕೇವಲ ಲೀಲೆಯಾಗಿರುವದೆಂಬುದನ್ನೂ ನಾವು ಕೂಡ ಇದರಲ್ಲಿ ಪಾತ್ರವನ್ನು ವಹಿಸಿರುವೆವೆಂಬುದನ್ನೂ ಮರೆತಾಗ ಮಾತ್ರ ದುಃಖವೂ ಚಿಂತೆಯೂ ಬರುವದು. ಆಗ ನಮ್ಮ ಹೃದಯವು ಭಾರೈಸುವದು, ಆಗ ಈ ಲೋಕವೆಂಬುದು ನಾವು ಯಾವಾಗಲೂ ಹೊತ್ತುಕೊಂಡಿರುವ ಒಂದು ದೊಡ್ಡ ತಲೆಹೊರೆ ಎಂದು ತೋರುವದು. ಆದರೆ ಮೂರುಗಳಿಗೆಯ ಬಾಳಿನ ಈ ಲೋಕದಲ್ಲಿರುವ ವಿಕಾರಿವಸ್ತುಗಳು ಪರಮಾರ್ಥವಾಗಿರುವವೆಂಬ ದೃಢ ಭಾವನೆಯನ್ನು ಒತ್ತಲಿಸಿ ಈ ಲೋಕವೆಲ್ಲ ಒಂದು ಆಟದ ರಂಗಸ್ಥಳವೆಂದೂ ನಾವೆಲ್ಲ ಆ ಪರಮಾತ್ಮನ ಲೀಲೆಗೆ ಸಹಕಾರಿಗಳೆಂದೂ ತಿಳಿದುಕೊಂಡೊಡನೆಯೇ ನಮ್ಮ ಭಾಗಕ್ಕೆ ದುಃಖವೆಂಬುದು ಮಾಯವಾಗುವದು.

ಈ ಭಗವಂತನು ಪ್ರತಿಯೊಂದು ಪರಮಾಣುವಿನಲ್ಲಿಯೂ ಆಡುತ್ತಿರುವನು. ಆ ಪರಮಾಣುಗಳಿಂದ ಭೂಲೋಕಗಳನ್ನೂ ಸೂರ್ಯರನ್ನೂ ಚಂದ್ರರನ್ನೂ ಸೃಷ್ಟಿಸುವಾಗಲೂ ಆಡುತ್ತಿರುವನು. ಮನುಷ್ಯರ ಹೃದಯದಲ್ಲಿಯೂ ಆಡುತ್ತಿರುವನು, ಪ್ರಾಣಿಗಳೊಡ ನೆಯೂ, ಸಸ್ಯಗಳೊಡನೆಯೂ ಆಡುತ್ತಿರುವನು. ನಾವೆಲ್ಲರೂ ಆತನ ಚದುರಂಗದಾಟದ ಕಾಯಿಗಳು. ಆತನು ಈ ಕಾಯಿಗಳನ್ನು ಹಾಸಿನಮೇಲೆ ಒಡ್ಡುತ್ತಾನೆ, ನಡೆಸುತ್ತಾನೆ, ಸ್ವಲ್ಪ ಹೊತ್ತಿನಲ್ಲಿಯೇ ಅವುಗಳನ್ನೆಲ್ಲ ಕಲಸಿಬಿಡುತ್ತಾನೆ. ಒಂದುಸಲ ಒಂದು ಬಗೆಯಾಗಿ ಒಡ್ಡುತ್ತಾನೆ; ಇನ್ನೊಂದು ಸಲ ಮತ್ತೊಂದು ಬಗೆಯಾಗಿ ಒಡ್ಡುತ್ತಾನೆ. ತಿಳಿದೋ ತಿಳಿಯದೆಯೋ ನಾವೆಲ್ಲರೂ ಆತನ ಆಟಕ್ಕೆ ಸಹಕಾರಿಗಳಾಗಿರುವೆವು. ಆಹಾ! ಏನು ಪರಮಾನಂದ! ನಾವೆಲ್ಲರೂ ಆತನ ಆಟದ ಗೆಳೆಯರಾಗಿದ್ದೇವಲ್ಲ!

**ವಾತ್ಸಲ್ಯ**ವೆಂಬುದು ಇದಕ್ಕೂ ಮೇಲಿನ ಭಕ್ತಿಯು. ಇದರಲ್ಲಿ ದೇವರನ್ನು ತಂದೆಯೆಂಬ ಭಾವನೆಯಿಂದ ಪ್ರೀತಿಸುವದಿಲ್ಲ, ಮಗುವೆಂದು ಭಾವಿಸಿ ಪ್ರೀತಿಸುವರು. ಇದು ಕೆಲವರಿಗೆ[1] ವಿಲಕ್ಷಣವಾಗಿ ತೋರಬಹುದು; ಆದರೆ ದೇವರು ಮಹಾಶಕ್ತಿವಂತನೆಂಬ ಭಾವನೆಯು ಅಳಿಸಿಹೋಗಬೇಕಾದರೆ ಈ ಭಾವನೆಯ ಸಾಧನವು ಅವಶ್ಯವಾಗಿರುತ್ತದೆ. ಶಕ್ತಿಯ ಯೋಚನೆ ಬಂದೊಡನೆಯೇ ಭಯವೂ ಅಂಕುರಿಸುವದು; ಆದರೆ ಪ್ರೇಮದಲ್ಲಿ ಯಾವ ಭಯವೂ ಇರಕೂಡದು. ಒಳ್ಳೆಯ ನಡತೆಯು ರೂಢಮೂಲವಾಗುವದಕ್ಕೆ ಶ್ರದ್ಧೆಯೂ ಭಯಭಕ್ತಿಯೂ ಆವಶ್ಯಕವೇ ಸರಿ ; ಆದರೆ ನಡತೆಯು ರೂಪುಗೊಂಡಮೇಲೆ, ಭಕ್ತನಿಗೆ ಶಾಂತಭಕ್ತಿಯ ಸವಿಯೂ ಭಕ್ತಿಪರವಶತೆಯ ಸ್ವಾರಸ್ಯವೂ ಸ್ವಲ್ಪಮಟ್ಟಿಗೆ ಗೊತ್ತಾದಮೇಲೆ, ಇನ್ನೂ ನೀತಿಶಿಕ್ಷಣದ ಮಾತನ್ನೂ ಸಾಧನದ ಮಾತನ್ನೂ ಆಡುತ್ತಾ ಕೂತುಕೊಳ್ಳಬೇಕಾದದ್ದೇನೂ ಇರುವದಿಲ್ಲ. ಪರಮಾತ್ಮನು ಸರ್ವಶಕ್ತನೆಂದೂ ಮಹಾಪ್ರಭುವೆಂದೂ ಮಹಾಮಹಿಮನೆಂದೂ ಸರ್ವ ಲೋಕಾಧೀಶ್ವರನೆಂದೂ ದೇವಾಧಿದೇವನೆಂದೂ ಭಾವಿಸುವದು ಭಕ್ತನ ಮನಸ್ಸಿಗೆ ಬಾರದು. ದೇವರಲ್ಲಿ ಈ ಭಯೋತ್ಪಾದಕವಾದ ಶಕ್ತಿಯ ಸಂಬಂಧವು ತೋರದೆ ಇರಲೆಂದೇ ಅವನು ಆತನನ್ನು ತನ್ನ ವತ್ಸನೆಂದೆಣಿಸಿ ಆರಾಧಿಸುತ್ತಿರುವನು. ತಾಯಿತಂದೆಗಳು ಮಗುವಿಗೆ ಹೆದರಿ ನಡೆಯುವದಿಲ್ಲ ; ಮಗುವಿನಲ್ಲಿ ಅವರಿಗೆ ಶ್ರದ್ಧಾಭಕ್ತಿಯೇನೂ ಉಂಟಾಗುವ ಸಂಭವ ವಿರುವದಿಲ್ಲ; ಮಗುವಿನಿಂದ ತಮಗೆ ಏನಾದರೂ ಆಗಬೇಕೆಂಬ ಪ್ರತ್ಯಾಶೆಯೂ ಅವರಿಗಿ ರುವದಿಲ್ಲ. ಮಗುವು ಎಂದೆಂದಿಗೂ ತಮ್ಮಿಂದ ಪರಿಗ್ರಹಮಾಡುತ್ತಲೇ ಇರಬೇಕು; ತಮ್ಮ ಕಂದನ ಮೇಲಿನ ಪ್ರೇಮಕ್ಕಾಗಿ ಸಾವಿರ ಬಾರಿಯಾದರೂ ಪ್ರಾಣವನ್ನು ಕೊಡುವದಕ್ಕೂ ಅವರು ಸಿದ್ಧರಾಗಿರುವರು. ದೇವರಲ್ಲಿ

---

1. ಮಹಮ್ಮದೀಯರೇ ಮುಂತಾದ ಕೆಲವು ಮತಗಳವರಿಗೆ,

ವಾತ್ಸಲ್ಯಭಕ್ತಿಯಿರುವವರೂ ಹೀಗೆಯೇ. ಯಾವ ಮತಪ್ರಭೇದಗಳಲ್ಲಿ ದೇವರು ಅವತಾರಮಾಡುವನೆಂಬ ನಂಬಿಕೆಯಿರುವದೋ ಅಂಥ ಪ್ರಭೇದಗಳಲ್ಲಿಯೇ ಸ್ವಾಭಾವಿಕವಾಗಿ ಈ ವಾತ್ಸಲ್ಯಭಕ್ತಿಯು ಹುಟ್ಟಿ ಬೆಳೆಯುವದು. ಉದಾ ಹರಣೆಗೆ ಮಹಮ್ಮದೀಯರಿಗೆ ಹೀಗೆ ದೇವರನ್ನು ಕೂಸೆಂದು ಭಾವಿಸುವದು ಸಾಧ್ಯವಿಲ್ಲ; ಅವರಿಗೆ ಇದನ್ನು ಕೇಳಿದರೇ ಅಸಹ್ಯವಾಗುವದು. ಆದರೆ ಕ್ರಿಸ್ತಿಜನರಿಗೂ ಹಿಂದುಗಳಿಗೂ ಈ ಭಾವನೆಯು ಸುಲಭವಾಗಿ ಬಂದುಬಿಡುವದು, ಏಕೆಂದರೆ ಅವರ ಮತಗಳಲ್ಲಿ ಬಾಲಏಸುವಿನ ಮತ್ತು ಬಾಲಕೃಷ್ಣನ ಅವತಾರವು ಆಗಿರುವದೆಂಬ ನಂಬಿಕೆ ಇದೆ. ಹಿಂದೂದೇಶದ ಹೆಂಗಸರು ಕೆಲವು ವೇಳೆ ತಾವೇ ಕೃಷ್ಣನ ತಾಯಿಯೆಂದು ಭಾವಿಸಿಕೊಳ್ಳುವದುಂಟು. ಹೀಗೆಯೇ ಕ್ರಿಸ್ತಿ ಜನನಿಯರೂ ತಾವು ಕ್ರಿಸ್ತನ ತಾಯಿಯರೆಂದು ಭಾವಿಸಿಕೊಳ್ಳಬಹುದಾಗಿದೆ. ಇದರಿಂದ ದೇವರು **ಜಗದಂಬೆ**ಯೆಂಬ[1] ಭಾವನೆಯೂ ಪಶ್ಚಿಮದೇಶದವರಿಗೆ ದೊರೆತಂತಾಗುವದು. ಈ ಭಾವನೆಯ ಆವಶ್ಯಕತೆಯು ಅವರಿಗೆ ಹೆಚ್ಚಾಗಿರುತ್ತದೆ. ದೇವರ ವಿಷಯದಲ್ಲಿ ಭಯಭಕ್ತಿ ಯೆಂಬ ಮೂಢನಂಬಿಕೆಯು ನಮ್ಮಗಳ ಹೃದಯಕುಹರದಲ್ಲಿ ರೂಢಮೂಲವಾಗಿಬಿಟ್ಟಿರುವದ ರಿಂದ ಪರಮೇಶ್ವರನ ಸಂಬಂಧದಲ್ಲಿ ನಮಗುಂಟಾಗಬಹುದಾದ ಶ್ರದ್ಧೆ ಗೌರವ, ಹೆದರಿಕೆ, ಮಹಾಪ್ರಭಾವದ ಮತ್ತು ಮಹಾ ಮಹಿಮತ್ವದ ಭಾವನೆಗಳು-ಮುಂತಾದವುಗಳನ್ನೆಲ್ಲ ಪ್ರೇಮ ವೊಂದರಲ್ಲಿಯೇ ಮುಳುಗಿಸಿಬಿಡುವದಕ್ಕೆ ಎಷ್ಟೆಷ್ಟೋ ವರ್ಷಗಳು ಬೇಕಾಗುವವು.

ಈ ಭಗವದ್ಭಕ್ತಿಗೆ ಇನ್ನೂ ಒಂದು ವ್ಯಾವಹಾರಿಕೋಪಮಾನದ ಹೆಸರುಂಟು. ಇದೇ **ಮಧುರಭಕ್ತಿ**. ಇದು ಭಕ್ತಿಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದದ್ದು. ಈ ಪ್ರಪಂಚದಲ್ಲಿ ಕಂಡಿರುವ ಪ್ರೇಮರೂಪಗಳಲ್ಲೆಲ್ಲ ಅತ್ಯಂತ ಹೆಚ್ಚಿನದೆನಿಸಿರುವ, ಮನುಷ್ಯರಿಗೆ ತಿಳಿದಿರುವ ಪ್ರೇಮಗಳಲ್ಲೆಲ್ಲ ಅತ್ಯಂತ ಬಲವಾದದಾಗಿರುವ ಪ್ರೇಮ ವಿಶೇಷದ ಆಧಾರದಮೇಲೆ ಈ ಮಧುರ ಭಕ್ತಿಯು ತೋರಿಕೊಳ್ಳುವ ಮನುಷ್ಯ ಸ್ವಭಾವವನ್ನೇ ಬುಡಮುಟ್ಟ ಅಲ್ಲಾಡಿಸುವ ಪ್ರೇಮವು ಯಾವದು ? ಅವನ ರೋಮಕೂಪಗಳನ್ನೆಲ್ಲ ವ್ಯಾಪಿಸಿ, ಅವನಿಗೆ ಹುಚ್ಚುಹಿಡಿಸಿ, ತನ್ನ ಸ್ವಭಾವವನ್ನೇ ತಾನು ಮರೆಯುವಂತೆಮಾಡಿ, ಮಾರ್ಪಡಿಸಿ, ಅವನನ್ನು ದೇವರನ್ನಾಗಿಯೋ ದೆವ್ವನನ್ನಾಗಿಯೋ ಮಾಡುವ ಪ್ರೇಮವು ಯಾವದು ? ಸ್ತ್ರೀಪುರುಷರ ಪ್ರೇಮವಲ್ಲವೆ ? ಈ ಮನೋಹರ ಮಧುರಭಕ್ತಿಯಲ್ಲಿ ದೇವರೇ ನಮ್ಮ ಪತಿಯು, ನಾವೆಲ್ಲರೂ ಹೆಂಡಂದಿರು. ಈ ಪ್ರಪಂಚದಲ್ಲಿ ಪುರುಷರೇ ಇಲ್ಲ, ಒಬ್ಬನೇ ಒಬ್ಬ ಪುರುಷನಿರುವನು ; ಆತನೇ ನಮ್ಮ ಪ್ರಿಯಪತಿಯು.

1. ಶ್ರೀರಾಮಕೃಷ್ಣಪರಮಹಂಸರು ಈ ಭಾವನೆಯಿಂದ ಸಾಕ್ಷಾತ್ಕಾರವನ್ನು ಪಡೆದ ಇತ್ತೀಚಿನ ಕಾಲದ ಸುಪ್ರಸಿದ್ಧ ಭಕ್ತರು.

ಗಂಡಸಾದವನು ಹೆಂಗಸಿನಲ್ಲಿಯೂ ಹೆಂಗಸಾದವಳು ಗಂಡಸಿನಲ್ಲಿಯೂ ತೋರಿಸುವ ಪ್ರೇಮವನ್ನೆಲ್ಲ ಈ ಭಕ್ತಿಯಲ್ಲಿ ಪರಮಾತ್ಮನಿಗೆ ಅರ್ಪಣೆಮಾಡಬೇಕಾಗಿರುವದು. ಈ ಪ್ರಪಂಚದಲ್ಲಿ ನಾವು ನೋಡುತ್ತಿರುವ ಪ್ರೇಮವಿಶೇಷಗಳು ಯಾವಯಾವವು ಇರುವವೋ ನಾವು ಆ ಪ್ರೇಮಗಳನ್ನಿಟ್ಟುಕೊಂಡು ಸುಮ್ಮನೆ ಆಡುತ್ತಿರುವೆವು. ನಿಜವಾಗಿ ನೋಡಿದರೆ ಆ ಪ್ರೇಮಗಳಿಗೆಲ್ಲ ಪರಮಾತ್ಮನೇ ಪರಮವಿಷಯನು. ಆದರೆ ದುರ್ದೈವದಿಂದ ಮನುಷ್ಯನಿಗೆ ಈ ಪ್ರೇಮವೆಂಬ ಮಹಾಪ್ರವಾಹವು ಸೇರಬೇಕಾಗಿರುವ ಅನಂತಸಾಗರವು ಇಂಥದ್ದೆಂಬುದು ಗೊತ್ತಿರುವದಿಲ್ಲ. ಆದ್ದರಿಂದ ಅವನು ಅವಿವೇಕಿಯಾಗಿ ಈ ನದಿಯನ್ನು ಮನುಷ್ಯರೆಂಬ ಪುಟ್ಟಪುಟ್ಟ ಬೊಂಬೆಗಳ ಕಡೆಗೆ ತಿರುಗಿಸುವದಕ್ಕೆ ಹೋಗುತ್ತಿರುವನು. ಮನುಷ್ಯರು ಸ್ವಭಾವ ವಾಗಿ ಮಗುವಿನಮೇಲೆ ತೋರಿಸುವ ಆ ಅಗಾಧವಾದ ಪ್ರೇಮವು ಮಗುವೆಂಬ ಆ ಸಣ್ಣ ಬೊಂಬೆಗೋಸ್ಕರವಲ್ಲ ; ಮೋಹಾಂಧರಾಗಿ ಆ ಮಗುವಿನಮೇಲೆಯೇ ಅದನ್ನು ಇಟ್ಟರೆ ಆ ಅಪರಾಧಕ್ಕೆ ತಕ್ಕ ಫಲವನ್ನು ಅನುಭವಿಸಲೇಬೇಕಾಗುವದು. ಆದರೆ ಆ ಅನುಭವದಿಂದ ಒಂದು ಬೋಧವು ಉದಯವಾಗುವದು. ನಮ್ಮಲ್ಲಿರುವ ಪ್ರೇಮವನ್ನು ಯಾವ ಮನುಷ್ಯ ಜೀವಿಗೆ ಕೊಟ್ಟರೂ ಇಂದಲ್ಲದಿದ್ದರೆ ನಾಳೆ ಸಂಕಟವನ್ನೂ ವ್ಯಥೆಯನ್ನೂ ತಪ್ಪದೆ ಕೊಡುವ ದೆಂದು ಖಂಡಿತವಾಗಿ ಗೊತ್ತಾಗುವದು. ಆದ್ದರಿಂದ ನಮ್ಮ ಪ್ರೇಮವನ್ನು ಯಾವಾತನು ನಿರ್ವಿಕಾರನೂ ಮರಣರಹಿತನೂ ಆಗಿರುವನೋ, ಯಾವಾತನ ಪ್ರೇಮಸಾಗರದಲ್ಲಿ ಉಬ್ಬರ ವಾಗಲಿ ಇಳಿತವಾಗಲಿ ಇರುವದಿಲ್ಲವೋ, ಆ ಪರಮಪುರುಷನಿಗೆ ಸಲ್ಲಿಸಬೇಕು. ಪ್ರೇಮವು ತಾನು ಮುಟ್ಟಬೇಕಾದ ಸ್ಥಾನವನ್ನು ಸೇರಿಕೊಳ್ಳಬೇಕು, ಯಾವಾತನು ನಿಜವಾಗಿ ಅನಂತ ಪ್ರೇಮಸಾಗರನೇ ಆಗಿರುವನೋ ಆತನನ್ನೇ ಸೇರಬೇಕು. ಎಲ್ಲಾ ನದಿಗಳೂ ಸಾಗರವನ್ನೇ ಸೇರುವವು. ಬೆಟ್ಟದ ಕಿಬ್ಬೆಯಲ್ಲಿ ಹರಿಯುವ ನೀರಿನಲ್ಲಿ ಒಂದು ತೊಟ್ಟೋ, ಅದು ಎಷ್ಟೇ ದೊಡ್ಡ ತೊರೆಯನ್ನು ಅಥವಾ ನದಿಯನ್ನು ಸೇರಿರಲಿ - ಅಲ್ಲಿಯೇ ನಿಂತುಕೊಳ್ಳಲಾರದು ; ಆ ತೊಟ್ಟು ಕೂಡ ಕೊನೆಗೆ ಹೇಗೋ ಸಾಗರಕ್ಕೇ ಹೋಗಿ ಸೇರಿಬಿಡುವದು.

ನಮ್ಮ ರಾಗದ್ವೇಷಾದಿಮನೋಭಾವಗಳಿಗೆಲ್ಲ ದೇವರೊಬ್ಬನೇ ಗಂತವ್ಯಸ್ಥಾನವು.[65] ಸಿಟ್ಟು ಮಾಡಿಕೊಳ್ಳಬೇಕೆ, ಆತನೊಡನೆ ಸಿಟ್ಟಾಗಿರಿ. ಆ ಪ್ರಿಯನೊಡನೆಯೇ ಆ ಸಖನಮೇಲೆಯೇ ಸಿಟ್ಟುಮಾಡಿಕೊಳ್ಳಿ; ಇನ್ನಾರನ್ನಾದರೂ ಗದರಿಸಿದರೆ ಅವರು ಸುಮ್ಮನೆ ಇರುವರೆ? ಮರ್ತ್ಯನಾದ ಮಾನವನು ನಿಮ್ಮ ಮುನಿಸನ್ನು ತಾಳ್ಮೆಯಿಂದ ತಡೆದುಕೊಳ್ಳಲಾರನು. ಅವನಮೇಲೆ ನೀವು ಸಿಟ್ಟುಮಾಡಿದರೆ ಇಂದಲ್ಲ ನಾಳೆ ಸಿಟ್ಟಿಗೆ ಸಿಟ್ಟು ಪ್ರತಿಯಾಗಿ ಬಂದೀತು. ನೀವು ನನ್ನ ಮೇಲೆ ಸಿಟ್ಟಾದರೆ ಈಗಲೋ ಇನ್ನು ಸ್ವಲ್ಪಹೊತ್ತಿನಮೇಲೋ ನಾನು ಪ್ರತೀಕಾರಕ್ಕೆ ಪ್ರಾರಂಭಿಸಿಯೇ

ಬಿಡುವೆನು, ಏಕೆಂದರೆ ನನಗೆ ನಿಮ್ಮ ಸಿಟ್ಟನ್ನು ತಡೆದುಕೊಳ್ಳುವಷ್ಟು ತಾಳ್ಮೆಯಿರುವದಿಲ್ಲ, ಆದ್ದರಿಂದ ಆ ಪರಮಪ್ರಿಯನಾದ ಭಗವಂತನಮೇಲೆಯೇ ಸಿಟ್ಟಾಗಿ. "ನೀನು ನನ್ನ ಬಳಿಗೆ ಏಕೆ ಬಾರದೆ ಇರುವೆ, ಹೀಗೆ ನನ್ನನ್ನು ಒಂಟಿಯಾಗಿ ಏತಕ್ಕೆ ಬಿಟ್ಟಿರುವೆ ?" ಎಂದು ಕೇಳಿರಿ. ಆತನನ್ನು ಬಿಟ್ಟರೆ ಮತ್ತೆಲ್ಲಿ ಭೋಗವಿರುವದು? ಸಣ್ಣಸಣ್ಣ ಮಣ್ಣುಹೆಂಟೆಗಳಲ್ಲಿ ಭೋಗವೆಲ್ಲಿಂದ ಬಂದೀತು? ಘನೀಭೂತವಾದ ಅನಂತಾನಂದದ ಸಾರವಲ್ಲವೆ, ನಮಗೆ ಬೇಕಾದದ್ದು? ಅಂಥ ಸಾರವು ಭಗವಂತನಲ್ಲಿದೆ. ಆದ್ದರಿಂದ ನಮ್ಮ ಮನೋಭಾವಗಳೆಲ್ಲ ಆತನ ಕಡೆಗೇ ಹೋಗಲಿ. ಅವು ಆತನಿಗೆಂದೇ ಹುಟ್ಟಿರುವವು ; ಏಕೆಂದರೆ ಅವು ಆ ಗುರಿಯನ್ನು ಬಿಟ್ಟು ಒಂದಿಷ್ಟು ಕೆಳಕ್ಕೆ ಇಳಿದರೂ ಅವು ದುಷ್ಟವೃತ್ತಿಗಳಾಗಿಬಿಡುವವು. ಅತ್ಯಂತ ತುಚ್ಛವೃತ್ತಿಗಳು ಕೂಡ ಇಟ್ಟ ಗುರಿಯನ್ನು ತಪ್ಪದೆ ಭಗವಂತನನ್ನೇ ಯಾವಾಗ ಸೇರುವವೋ ಆಗ ಬೇರೊಂದು ಉತ್ತಮ ರೂಪವನ್ನೇ ಹೊಂದಿಬಿಡುವವು. ಮನುಷ್ಯನ ದೇಹಶಕ್ತಿಗಳಾಗಲಿ ಮನಶ್ಶಕ್ತಿಗಳಾಗಲಿ, ಅವು ಹೇಗೇ ತೋರಿಕೊಳ್ಳುತ್ತಿರಲಿ, ಅವಕ್ಕೆಲ್ಲ ಪರಮಾತ್ಮನೇ ಏಕಾಯನವು, ಅವು ಮುಟ್ಟಬೇಕಾದ ಸ್ಥಾನವು. ಆದ್ದರಿಂದ ಮನುಷ್ಯನ ಹೃದಯದಲ್ಲಿರುವ ಎಲ್ಲಾ ವಿಧವಾದ ಪ್ರೇಮವೂ ಮಿಕ್ಕ ಕಾಮ ಕ್ರೋಧವೇ ಮುಂತಾದ ಎಲ್ಲಾ ಬಗೆಯ ವೃತ್ತಿಗಳೂ ದೇವರಕಡೆಗೇ ತಿರುಗಬೇಕು.

ಆತನೊಬ್ಬನೇ ನಮ್ಮ ಪ್ರಿಯನು. ಆತನನ್ನು ಬಿಟ್ಟು ಮತ್ತೆ ಯಾರನ್ನು ತಾನೇ ನಮ್ಮ ಹೃದಯವು ಪ್ರೀತಿಸುವದಕ್ಕೆ ಸಾಧ್ಯವಾದೀತು? ಆತನೇ ದಿವ್ಯಸುಂದರವಿಗ್ರಹನು. ಮಹಾ ಮನೋಹರಮೂರ್ತಿಯು, ಮೂರ್ತಿಮಂತ ಸೌಂದರ್ಯವೇ ಆತನು, ಕೇವಲ ರಾಮಣೀಯಕತ್ವವೇ ಆತನು. ಈ ಬ್ರಹ್ಮಾಂಡದಲ್ಲಿ ಆತನಿಗಿಂತ ಸುಂದರರಾದವರು ಯಾರಿರುವರು? ಈ ಪ್ರಪಂಚದಲ್ಲಿ ಪತಿಯಾಗುವದಕ್ಕೆ ಆತನಿಗಿಂತ ಯೋಗ್ಯರು ಮತ್ತೆ ಯಾರಿರುವರು? ಈ ಪ್ರಪಂಚದಲ್ಲಿ ಆತನಿಗಿಂತಲೂ ಪ್ರೇಮಕ್ಕೆ ಪಾತ್ರರಾದವರು ಯಾರಿರುವರು? ಆದ್ದರಿಂದ ಆತನೇ ನಮ್ಮ ಪತಿಯಾಗಿರಲಿ, ಆತನೇ ನಮ್ಮ ಪ್ರಿಯನಾಗಿರಲಿ.

ಈ ಬಗೆಯ ಪ್ರೇಮವನ್ನು ಹಾಡಿ ಹೊಗಳುವ ಭಕ್ತರು ಈ ವ್ಯಾವಹಾರಿಕ ಪ್ರೇಮದ ಯಾವ ರೂಪವನ್ನೂ ಬಿಡದೆ ಎಲ್ಲಾ ಬಗೆಯಿಂದಲೂ ಇದನ್ನು ಆಗಾಗ ಬಣ್ಣಿಸುವರು. ಮೂಢಜನರಿಗೆ ಇದರ ಗುಟ್ಟು ತಿಳಿಯದು, ತಿಳಿಯುವಹಾಗೂ ಇಲ್ಲ. ಅವರು ಅದನ್ನು ಕೇವಲ ಚರ್ಮಚಕ್ಷುಸ್ಸಿನಿಂದಲೇ ನೋಡುವರು, ಈ ಉನ್ಮಾದದ ದೈವಿಕಪ್ರೇಮದ ಪಾರವಶ್ಯತೆಯನ್ನು ಅವರು ಅರಿಯಲಾರರು. ಹೇಗೆತಾನೆ ಅರಿತಾರು? "ಎಲೈ ಕಾಂತನೆ, ಒಂದೇ ಒಂದುಸಲ ನಿನ್ನ ತುಟಿಗಳಿಂದ ಯಾವನಿಗೆ ಮುತ್ತು ಕೊಡುವೆಯೋ ಅವನಿಗೆ ನಿನ್ನ ಮೇಲಿನ ತೃಷ್ಣೆಯು ಇನ್ನಷ್ಟು ಹೆಚ್ಚುವದು, ಸಕಲ

ದುಃಖಗಳೂ ಬಯಲಾಗುವವು, ನಿನ್ನ ಹೊರತು ಮಿಕ್ಕದ್ದೆಲ್ಲವನ್ನೂ ಮರೆತು ಬಿಡುವಂತಾಗುವದು (ಭಾಗ)."66 ಆ ಪ್ರಿಯನ ಇಂಥ ಮುತ್ತನ್ನು ಪಡೆಯಬೇಕೆಂಬ ಬಯಕೆಯನ್ನು ಕಂಡುಕೊಳ್ಳಬೇಕು; ಭಕ್ತನಿಗೆ ಹುಚ್ಚು ಏರಿಸಿ ಮನುಷ್ಯತ್ವವನ್ನು ತೊಲಗಿಸಿ ದೇವತ್ವವನ್ನು ಕೊಡುವ ಆ ತುಟಿಗಳ ಸ್ಪರ್ಶವಾಗಲೆಂದು ಹಂಬಲಿಸುತ್ತಿರಬೇಕು. ಯಾವನಿಗೆ ಈ ಬಗೆಯ ಮುತ್ತಿನ ಅನುಗ್ರಹವು ಉಂಟಾಗಿರುವದೋ ಅವನಿಗೆ ಸೃಷ್ಟಿಗೆ ಸೃಷ್ಟಿಯೇ ಬೇರೆಯಾಗಿ ತೋರುವದು. ಲೋಕಗಳೂ ಮಾಯವಾಗುವವು. ಸೂರ್ಯರೂ ಚಂದ್ರರೂ ಇಲ್ಲವಾಗುವರು, ಇಡಿಯ ಬ್ರಹ್ಮಾಂಡವೇ ಕರಗಿ ಪ್ರೇಮರೂಪವಾದ ಅನಂತವಾದ ಏಕಾರ್ಣವವಾಗಿ ಬಿಡುವದು !

ಇದನ್ನು ಪ್ರೇಮಪಾರವಶ್ಯದ ಪರಾಕಾಷ್ಠೆಯೆಂದು ಅವಶ್ಯವಾಗಿ ಕರೆಯಬಹುದಷ್ಟೆ. ಆದರೆ ನಿಜವಾದ ಭಕ್ತನು ಇಲ್ಲಿಗೂ ನಿಲ್ಲುವದಿಲ್ಲ. ಗಂಡಹೆಂಡಿರ ಪ್ರೇಮದಲ್ಲಿ ಕೂಡ ತನ್ನ ಮನೋಭಾವವನ್ನು ಚೆನ್ನಾಗಿ ತಿಳಿಸುವಷ್ಟು ಉನ್ಮಾದವು ಇರುವದಿಲ್ಲವೆಂದು ಅವನ ಭಾವನೆ. ಆದ್ದರಿಂದ ಅವನು ಜಾರರ ಪ್ರೇಮವನ್ನು ಉದಾಹರಣೆಗೆ ತೆಗೆದುಕೊಳ್ಳುತ್ತಾನೆ; ಏಕೆಂದರೆ ಅದರಲ್ಲಿ ಭಾವದ ಆವೇಶವು ಅಷ್ಟು ಪ್ರಬಲವಾಗಿರುತ್ತದೆ. ಅದು ಅಯುಕ್ತವಾದ ಪ್ರೇಮವೆಂಬುದರ ಕಡೆಗಲ್ಲ ಅವನ ಲಕ್ಷ್ಯವಿರುವದು, ಅದರ ಜೋರಿನ ಕಡೆಗೆ. ಈ ಪ್ರೇಮದ ಸ್ವಭಾವವೇನೆಂದರೆ ಅದರ ಸ್ವೇಚ್ಛಾಪ್ರವೃತ್ತಿಗೆ ಎಷ್ಟೆಷ್ಟು ಅಡ್ಡಿಗಳಾದರೆ ಅದು ಅಷ್ಟಷ್ಟು ಬಲವಾಗುತ್ತಾ ಹೋಗುವದು. ಗಂಡಹೆಂಡಿರ ಪ್ರೇಮಕ್ಕೆ ಯಾವ ಅಡ್ಡಿಯೂ ಇರುವದಿಲ್ಲ, ಆದ್ದರಿಂದ ಅದು ಸಲೀಸಾಗಿ ಸಾಗುತ್ತಿರುವದು. ಈ ಪ್ರೇಮವು ಹಾಗಲ್ಲ. ಆದ್ದರಿಂದ ಯಾವಳಾದರೊಬ್ಬ ಹುಡುಗಿಯು ತನ್ನ ಪ್ರಾಣಕಾಂತನ ಮೇಲೆ ಇಟ್ಟುಕೊಂಡಿರುವ ಪ್ರೇಮಕ್ಕೆ ಅವಳ ತಾಯಿಯೋ ತಂದೆಯೋ ಗಂಡನೋ ಆಕ್ಷೇಪಣೆಮಾಡುವಾಗ ಇರುವ ಭಾವವನ್ನೇ ಭಕ್ತರು ತಮ್ಮ ಮನಸ್ಸಿಗೆ ತಂದುಕೊಳ್ಳುವರು. ಇಂಥ ಸ್ತ್ರೀಯಳ ಪ್ರೇಮಪ್ರಸಾರಕ್ಕೆ ಎಷ್ಟೆಷ್ಟು ಎಡರುಗಳು ಬರುವವೋ ಅಷ್ಟಷ್ಟೂ ಆಕೆಯ ಅನುರಾಗವು ಪ್ರಗಾಢವಾಗುತ್ತಿರುವದು. **ಶ್ರೀಮದ್ಭಾಗವತ**ದಲ್ಲಿ ಗೋಪಿಯರು ಶ್ರೀಕೃಷ್ಣನಲ್ಲಿ ತೋರಿಸಿದ ಭಕ್ತಿಯನ್ನು ವರ್ಣಿಸುವಾಗ ಈ ಬಗೆಯ ಅನುರಾಗವನ್ನು ಪ್ರತಿಪಾದಿಸಿರುತ್ತದೆ. **ಬೃಂದಾವನ**ದೆಡೆಯಲ್ಲಿ ಧನ್ಯೆಯರಾದ ಗೋಪಿಯರು ಮೈಮರೆತು ಶ್ರೀಕೃಷ್ಣನನ್ನೇ ಪ್ರೀತಿಸುತ್ತಿದ್ದ ರೀತಿಯನ್ನೂ ಆತನ ವೇಣುನಾದವು ಕಿವಿಗೆ ಬಿದ್ದೊಡನೆಯೇ ಈ ಸಂಸಾರವನ್ನೂ ಇಲ್ಲಿರುವ ಬಂಧುಗಳನ್ನೂ ಕರ್ತವ್ಯಕರ್ಮಗಳನ್ನೂ ಸುಖದುಃಖಗಳನ್ನೂ ಎಲ್ಲವನ್ನೂ ಒಂದೇ ಸಲಕ್ಕೆ ಮರೆತು ಪರವಶರಾಗಿ ಆತನನ್ನು ನೋಡುವ ತವಕದಿಂದ ಮನೆಯನ್ನು ಬಿಟ್ಟು ಓಡುತ್ತಿದ್ದದ್ದನ್ನೂ ಈ ನಮ್ಮ ಲೌಕಿಕಭಾಷೆಯಿಂದ ಬಣ್ಣಿಸುವದು ಎಂದಿಗೂ ಆಗಲಾರದು.

ಮಾನವಾ, ಮಾನವಾ! ಭಕ್ತಿಭಕ್ತಿಯೆನ್ನುತ್ತಲೂ ಇರುವೆ, ಈ ಸಂಸಾರದ ಕ್ಷುಲ್ಲಕ ವಿಚಾರಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳುವದಕ್ಕೆ ಶಕ್ತನಾಗಿಯೂ ಇರುವೆಯಲ್ಲ! ನಿನ್ನ ಭಕ್ತಿಯು ನಿಜವಾಗಿಯೂ ಅಂತಃಕರಣಶುದ್ಧಿಯಿಂದ ಹುಟ್ಟಿದ್ದೀತೆ ? ನೀನೇ ಹೇಳು. "ಎಲ್ಲಿ ರಾಮನಿರು ವನೋ ಅಲ್ಲಿ ಕಾಮನಿಗೆ ಅವಕಾಶವಿರುವದಿಲ್ಲ. ಎಲ್ಲಿ ಕಾಮನಿರುವನೋ ಅಲ್ಲಿ ರಾಮನಿಗೆ ಅವಕಾಶವಿರುವದಿಲ್ಲ; ಕತ್ತಲೆಯೂ ಬೆಳಕೂ ಒಕ್ಕಡೆಯಲ್ಲಿ ಹೇಗೆ ಇರಲಾರವೋ ಹಾಗೆಯೇ ಇವೆರಡೂ ಜೊತೆಯಲ್ಲಿರುವದು ಅಸಂಭವ !"(ತು.)[67]

# 20. ಉಪಸಂಹಾರ

ಈ ಪರಭಕ್ತಿಯ ಕೊನೆಯ ಮೆಟ್ಟಿಲನ್ನು ಸೇರಿದಾಗ ತತ್ತ್ವವಿಚಾರವು ಬೇಡವಾಗುವದು, ಆಗ ಶಾಸ್ತ್ರವಿಚಾರವು ಯಾರಿಗೆ ಬೇಕು? **ಮುಕ್ತಿ ಉದ್ಧಾರ, ನಿರ್ವಾಣ**-ಇವೆಲ್ಲವೂ ಅರ್ಥಶೂನ್ಯವೆಂದು ಆಗ ಒತ್ತಲಿಸಿಬಿಡುವೆವು. ಇಂಥ ದಿವ್ಯಪ್ರೇಮದ ಸಮಾಧಿಯಲ್ಲಿರುವಾಗ ಮುಕ್ತನಾಗುವದು ಯಾರಿಗೆ ಬೇಕಾದೀತು? "ಜಗದೀಶನೆ, ನನಗೆ ಧನಧಾನ್ಯಗಳಾಗಲಿ, ಬಂಧುಬಾಂಧವರಾಗಲಿ, ರೂಪಲಾವಣ್ಯಗಳಾಗಲಿ, ವಿದ್ಯಾಬುದ್ಧಿಗಳಾಗಲಿ, ಕೊನೆಗೆ ಮುಕ್ತಿಯಾಗಲಿ ಬೇಕಿರುವದಿಲ್ಲ; ಜನ್ಮ ಜನ್ಮದಲ್ಲಿಯೂ ನಿನ್ನ ಭಕ್ತಿಯೊಂದು ಮಾತ್ರ ಇರಲಿ!" (ಶೀ.)[68] ಸಕ್ಕರೆಯಾಗುವದು ಯಾರಿಗೆ ಬೇಕು ? ನಾನು ಸಕ್ಕರೆಯ ರುಚಿಯನ್ನು ನೋಡಬೇಕು"[1] ಎಂಬುದೇ ಭಕ್ತನ ಅಭಿಪ್ರಾಯವು. ಮುಕ್ತನಾಗಿ ಪರಮಾತ್ಮನೊಡನೆ ಐಕ್ಯವನ್ನು ಹೊಂದ ಬೇಕೆಂಬ[2] ತವಕವು ಯಾರಿಗಿರುವದು? "ನಾನೇ ಆತನೆಂಬ ಅರಿವೂ ಬರಬಹುದು, ಆದರೂ ನಾನು ಬೇರೆಯಾಗಿಯೇ ಇದ್ದುಕೊಂಡು ಆ ಕಾಂತನ ಪ್ರೇಮಸುಖವನ್ನನುಭವಿಸುತ್ತಿರುವೆನು"[3] ಹೀಗೆಂದು ಭಕ್ತನು ನುಡಿಯುತ್ತಿರುವನು. ಪ್ರೇಮಕ್ಕಾಗಿ ಪ್ರೇಮಮಾಡುವದೆಂದರೆ ಅವನಿಗೆ ಪರಮಾನಂದವಾಗಿರುವದು ; ಆ ಪರಮಪ್ರಿಯನ ಸಂದರ್ಶನಸುಖವನ್ನನುಭವಿಸುವದಕ್ಕಾಗಿ ಸಾವಿರಾರು ಸಲವಾದರೂ ಸರಿಯೆ, ಯಾವನುತಾನೆ ಕೈಕಾಲುಗಳನ್ನು ಕಟ್ಟಿಸಿಕೊಳ್ಳುವದಕ್ಕೆ ಸಿದ್ಧನಾಗದೆ ಇದ್ದಾನು ?

ಭಕ್ತನಾದವನಿಗೆ ಪ್ರೇಮವೊಂದನ್ನು ಬಿಟ್ಟರೆ ಮತ್ತೇನೂ ಸೊಗಸುವದಿಲ್ಲ. ಪ್ರೀತಿಸುವದು, ಪ್ರೀತಿಗೆ ಪಾತ್ರನಾಗಿರುವದು-ಇವೆರಡೇ ಅವನಿಗೆ ಇಷ್ಟ. ಅವನ ಅಲೌಕಿಕಪ್ರೇಮವು ನದಿಗೆ ಪ್ರತಿಕೂಲವಾಗಿ ನುಗ್ಗುತ್ತಿರುವ ಪ್ರವಾಹದಂತಿರುವದು. ಲೋಕವು, ಅವನನ್ನು ಹುಚ್ಚನೆನ್ನುವದು. ಹೀಗೆ ಜನರು ಹುಚ್ಚನೆನ್ನುತ್ತಿದ್ದ ಒಬ್ಬಾತನನು[4] ನಾನು ನೋಡಿದೇನೆ. ಆತನು ಅವರಿಗೆ ಹೀಗೆಂದು ಉತ್ತರವನ್ನು ಕೊಡುತ್ತಿದ್ದನು : "ಅಣ್ಣಗಳಿರ, ಇಡಿಯ ಪ್ರಪಂಚವೇ ಒಂದು ಹುಚ್ಚರ ಆಸ್ಪತ್ರೆಯಾಗಿರುವದು. ಇದರಲ್ಲಿ ಕೆಲವರಿಗೆ ವಿಷಯಾಸಕ್ತಿಯ ಹುಚ್ಚು, ಕೆಲವರಿಗೆ ನಾವು ಉದ್ಧಾರವಾಗಬೇಕೆಂಬ ಹುಚ್ಚು , ಕೆಲವರಿಗೆ ಸ್ವರ್ಗಲೋಕಕ್ಕೆ

---

1. ಇದರ ಮೂಲವಚನವು ಎಲ್ಲಿರುವದೋ ತಿಳಿಯದು.

2. ವಿದೇಹಮುಕ್ತನಾಗಿ ಪರಮಾತ್ಮನ ಸಾನ್ನಿಧ್ಯವನ್ನು ಹೊಂದಬೇಕೆಂಬ.

3. ಇದಕ್ಕೆ ಯಾವದಾದರೂ ಮೂಲವಚನವಿದೆಯೋ ಇಲ್ಲವೋ ತಿಳಿಯದು.

4. ಶ್ರೀರಾಮಕೃಷ್ಣಪರಮಹಂಸರು.

ಹೋಗಬೇಕೆಂಬ ಹುಚ್ಚು. ಈ ದೊಡ್ಡ ಆಸ್ಪತ್ರೆಯಲ್ಲಿ ನಾನೂ ಒಬ್ಬ ಹುಚ್ಚನು. ನನಗೆ ದೇವರ ಹುಚ್ಚು ಹಿಡಿದಿದೆ. ನಿಮಗೆ ಹಣದ ಹುಚ್ಚಾದರೆ ನನಗೆ ದೇವರ ಹುಚ್ಚು. ನೀವೂ ಹುಚ್ಚರೇ, ನಾನೂ ಹುಚ್ಚನೇ. ಸರಿಯಾಗಿ ನೋಡಿದರೆ ನನ್ನ ಹುಚ್ಚೇ ಉತ್ತಮವೆಂದು ನನಗೆ ತೋರುತ್ತದೆ.'' ನಿಜವಾದ ಭಕ್ತನ ಭಕ್ತಿಯೆಂಬುದು ಇಂಥ ಮಹೋನ್ಮಾದವಾಗಿರುವದು. ಇದರ ಆವೇಶದಲ್ಲಿ ಯಾವದೊಂದೂ ಅವನಿಗೆ ಬೇಕೆನಿಸುವಹಾಗಿರುವದಿಲ್ಲ. ಅವನಿಗೆ ಇಡಿಯ ಪ್ರಪಂಚವೇ ಪ್ರೇಮಮಯವಾಗಿ, ಕೇವಲ ಪ್ರೇಮಮಯವಾಗಿ ತೋರುವದು. ನಿಜವಾದ ಭಕ್ತನ ದೃಷ್ಟಿಯಿದು. ಇಂಥ ಪ್ರೇಮವು ಯಾವಾತನಿಗೆ ಬರುವದೋ ಅವನು ಎಂದೆಂದಿಗೂ ಧನ್ಯನು, ಎಂದೆಂದಿಗೂ ಸುಖಿಯು. ನಿಜವಾಗಿಯೂ ಈ ದಿವ್ಯಪ್ರೇಮದ ಧನ್ಯತಮವಾದ ಹುಚ್ಚೇ ನಮ್ಮ ಭವರೋಗವನ್ನು ಅತ್ಯಂತವಾಗಿ ನಿವಾರಣೆಮಾಡುವ ಮಹೌಷಧವು. ಇದು ಬಂದಾಗ ಕಾಮವೂ ಸ್ವಾರ್ಥತೆಯೂ ಮೈಗರೆಯುವವು, ಪರಮಾತ್ಮನ ಸಾಮೀಪ್ಯವು ದೊರೆತಿರುವದರಿಂದ ಮೊದಲು ನಮ್ಮಲ್ಲಿ ತುಂಬಿತುಳುಕುತ್ತಲಿದ್ದ ಕ್ಷುದ್ರವಿಷಯಕವಾದ ಕಾಮಗಳೆಲ್ಲವೂ ತೊಲಗಿಹೋಗುವವು.

**ಭಕ್ತಿಮಾರ್ಗ**ದಲ್ಲಿ ನಾವೆಲ್ಲರೂ ಮೊದಲು ದ್ವೈತಿಗಳಾಗಿಯೇ ಹೊರಡುವೆವು ; ಆಗ ನಮಗೆ ಈಶ್ವರನು ಭಿನ್ನನಾಗಿ ಕಾಣುತ್ತಿರುವನು, ನಾವೂ ಆತನಿಗಿಂತ ಭಿನ್ನರೆಂದೇ ತೋರುತ್ತಿರು ವದು. ಆಮೇಲೆ ಇಬ್ಬರಿಗೂ ನಡುವೆ ಪ್ರೇಮವು ಬರುವದು ; ಆಗ ಮನುಷ್ಯನು ದೇವರನ್ನೂ ದೇವರು ಮನುಷ್ಯನನ್ನೂ ಸಮೀಪಿಸುವದಕ್ಕೆ ಪ್ರಾರಂಭಿಸುವರು. ಮನುಷ್ಯನು ತನ್ನ ವ್ಯವಹಾರದಲ್ಲಿರುವ ತಂದೆ, ತಾಯಿ, ಪುತ್ರ, ಬಂಧು, ಒಡೆಯ, ಪ್ರಿಯಕಾಂತಳು - ಮೊದಲಾದ ಸಂಬಂಧಗಳನ್ನೆಲ್ಲ ತನ್ನ ಪ್ರೇಮಕ್ಕೆ ವಿಷಯನಾದ ಇಷ್ಟದೈವದಲ್ಲಿ ಆರೋಪಿಸುತ್ತಾ ಬರುವನು. ಅವನಿಗೆ ದೇವರು ನಿಜವಾಗಿ ಇವೆಲ್ಲವೂ ಆಗುವನು. ಈ ಸಾಧನದಲ್ಲಿ ಹೋಗುತ್ತಾ ಹೋಗುತ್ತಾ ತಾನೇ ತನ್ನ ಆರಾಧ್ಯವಸ್ತುವಾದ ಭಗವಂತನಲ್ಲಿ ಐಕ್ಯನಾದೆನೆಂಬ ಕೊನೆಯ ಸ್ಥಿತಿಯು ಬರುವದು. ನಾವೆಲ್ಲರೂ ಮೊದಮೊದಲು ನಮ್ಮ ನಮ್ಮಮೇಲೆಯೇ ಪ್ರೇಮವನ್ನು ಇಟ್ಟುಕೊಂಡಿರುವದರಿಂದ ಈ ಕ್ಷುದ್ರಹಂಕಾರದ ಅಧಿಕಾರದಲ್ಲಿ ಪ್ರೇಮವುಕೂಡ ಸ್ವಾರ್ಥಪರ ವಾಗಿಬಿಟ್ಟಿರುತ್ತದೆ. ಆದರೆ ಕೊನೆಗೆ ಪ್ರೇಮದ ದಿವ್ಯಪ್ರಕಾಶವು ಉದಯಿಸಲಾಗಿ ಈ ಕ್ಷುದ್ರಾತ್ಮವು ಪರಿಚ್ಛೇದಶೂನ್ಯವಾದ ಪರಮಾತ್ಮನಲ್ಲಿಯೇ ಐಕ್ಯವಾಯಿತೆಂದು ಕಂಡುಬರುವದು. ಈ ಪ್ರೇಮವೆಂಬ ದಿವ್ಯತೇಜಸ್ಸಿನ ಸನ್ನಿಧಿಯಿಂದ ಇಡಿಯ ಮನುಷ್ಯನೇ ರೂಪಾಂತರವನ್ನು ಹೊಂದುವನು. ಪ್ರೇಮ, ಪ್ರೇಮವನ್ನು ಮಾಡುವವನು, ಪ್ರೇಮವಿಷಯ-ಇವೆಲ್ಲವೂ ಒಂದೇ ವಸ್ತುವೆಂಬ ಮಧುರವಾದ ಸ್ಫೂರ್ತಿಪ್ರದವಾದ ದಿವ್ಯತತ್ತ್ವವನ್ನು ತನ್ನ ಪ್ರತ್ಯಕ್ಷಾನುಭವದಲ್ಲಿ ಕಂಡುಕೊಳ್ಳುವನು.''

# ಪರಿಶಿಷ್ಟ

## ಪ್ರಮಾಣವಚನಗಳು

ಸೂಚನೆ :- ಇಲ್ಲಿ ಮೊದಲು ಕೊಟ್ಟಿರುವ ಇಂಗ್ಲಿಷು ಅಂಕೆಗಳು ಭಕ್ತಿಯೋಗ ಗ್ರಂಥದ ಅನುವಾದದಲ್ಲಿ ಆಯಾ ಇಂಗ್ಲಿಷು ಅಂಕೆಗಳಿಂದ ತೋರಿಸಿರುವ ಭಾಗಗಳನ್ನು ಸೂಚಿಸುತ್ತವೆ.

**1. ನಾರದ ಭಕ್ತಿಸೂತ್ರ :** **ಈ ಗ್ರಂಥದ ಪುಟ 2.**

"ಸಾ ತ್ವಸ್ಮಿನ್ ಪರಮಪ್ರೇಮರೂಪಾ ॥ಸೂತ್ರ 2॥ ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತ್ಯಮೃತೋ ಭವತಿ, ತೃಪ್ತೋ ಭವತಿ ॥ಸೂ. 4॥ ಯತ್ಪ್ರಾಪ್ಯ ನ ಕಿಂಚಿದ್ವಾಞ್ಛತಿ, ನ ಶೋಚತಿ, ನ ದ್ವೇಷ್ಟಿ, ನ ರಮತೇ, ನೋತ್ಸಾಹೀ ಭವತಿ ॥5॥ ಸಾ ನ ಕಾಮಯಮಾನಾ ನಿರೋಧರೂಪತ್ವಾತ್ ॥6॥ ಸಾ ತು ಕರ್ಮಜ್ಞಾನ ಯೋಗೇಭ್ಯೋಽಪ್ಯಧಿಕತರಾ ॥25॥ ಫಲರೂಪತ್ವಾತ್ ॥26॥ ಸ್ವಯಂಫಲರೂಪತೇತಿ ಬ್ರಹ್ಮಕುಮಾರಃ ॥30॥"

**2. ಬ್ರಹ್ಮಸೂತ್ರ - ಶಾಂಕರಭಾಷ್ಯ (4 - 1 - 1) :** **ಪುಟ 6.**

"(ಅಪಿ ಚೋಪಾಸನಂ ನಿದಿಧ್ಯಾಸನಂ ಚೇತ್ಯನ್ತರ್ಣೀತಾವೃತ್ತಿಗುಣೈವ ಕ್ರಿಯಾಭಿಧೀಯತೇ। ತಥಾ ಹಿ-)ಲೋಕೇ 'ಗುರುಮುಪಾಸ್ತೇ ರಾಜಾನಮುಪಾಸ್ತೇ' ಇತಿ ಚ ಯಸ್ತಾತ್ಪರ್ಯೇಣ ಗುರ್ವಾದೀನನುವರ್ತತೇ ಸ ಏವಮುಚ್ಯತೇ । ತಥಾ ಧ್ಯಾಯತಿ ಪ್ರೋಷಿತನಾಥಾ ಪತಿಮಿತಿ ಯಾ ನಿರನ್ತರಸ್ಮರಣಾ ಪತಿಂ ಪ್ರತಿ ಸೋತ್ಕಣ್ಠಾ ಸೈವಮಭಿಧೀಯತೇ ।"

**3. ಬ್ರಹ್ಮಸೂತ್ರ - ರಾಮಾನುಜಭಾಷ್ಯ (1-1-1) :** **ಪುಟ 7.**

"ಧ್ಯಾನಂ ಚ ತೈಲಧಾರಾವದವಿಚ್ಛಿನ್ನಸ್ಮೃತಿಸನ್ತಾನರೂಪಮ್- 'ಧ್ರುವಾ ಸ್ಮೃತಿಃ' ಸ್ಮೃತಿಲಮ್ಭೇ ಸರ್ವಗ್ರನ್ಥೀನಾಂ ವಿಪ್ರಮೋಕ್ಷಃ" ಇತಿ ಧ್ರುವಾಯಾಃ ಸ್ಮೃತೇರಪವರ್ಗೋಪಾ -ಯತ್ವಶ್ರವಣಾತ್ । ಸಾ ಚ ಸ್ಮೃತಿರ್ದರ್ಶನಸಮಾನಾಕಾರಾ-'ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ । ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ ॥" ಇತ್ಯೇನೇನೈಕಾರ್ಥ್ಯಾತ್ । ಏವಂ ಚ ಸತಿ 'ಆತ್ಮಾ ವಾ ಅರೇ ದ್ರಷ್ಟವ್ಯಃ' ಇತ್ಯನೇನ ನಿದಿಧ್ಯಾಸನಸ್ಯ ದರ್ಶನಸಮಾನಾಕಾರತಾ ವಿಧೀಯತೇ । ಭವತಿ ಚ ಸ್ಮೃತೇರ್ಭಾವನಾಪ್ರಕರ್ಷಾದ್ದರ್ಶನರೂಪತಾ...... 'ಉಪಾಸನಂ ಸ್ಯಾದ್ಧ್ರುವಾನುಸ್ಮೃತಿರ್ದರ್ಶನಾತ್, ನಿರ್ವಚನಾಚ್ಚ ಇತಿ ವೇದನಸ್ಯೋಪಾಸನರೂಪಸ್ಯಾಸಕೃದಾವೃತ್ತಸ್ಯ ಧ್ರುವಾನುಸ್ಮೃತಿ ತ್ವಮುಪವರ್ಣಿತಮ್॥ ಸೇಯಂ ಸ್ಮೃತಿರ್ದರ್ಶನರೂಪಾ ಪ್ರತಿಪಾದಿತಾ । ದರ್ಶನರೂಪತಾ ಚ ಪ್ರತ್ಯಕ್ಷತಾಪತ್ತಿಃ । ಏವಂ ಪ್ರತ್ಯಕ್ಷತಾಪನ್ನಾಮಪವರ್ಗಸಾಧನಭೂತಾಂ ಸ್ಮೃತಿಂ ವಿಶಿನಷ್ಟಿ - 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾವಿವೃಣುತೇ ತನೂಂ ಸ್ವಾಮ್॥' ಅನೇನ ಕೇವಲಶ್ರವಣ ಮನನನಿಧಿಧ್ಯಾಸನಾನಾಮಾತ್ಮ ಪ್ರಾಪ್ತ್ಯನುಪಾಯತ್ವಮುಕ್ತ್ವಾ ಯಮೇವೈಷ ಆತ್ಮಾವೃಣುತೇ ತೇನೈವ ಲಭ್ಯ ಇತ್ಯುಕ್ತಮ್ । ಪ್ರಿಯತಮ ಏವ ಹಿ ವರಣೀಯೋ ಭವತಿ । ಯಸ್ಯಾಯಂ ನಿರತಿಶಯಪ್ರಿಯಸ್ಯ ಏವಾಸ್ಯ ಪ್ರಿಯತಮೋ ಭವತಿ। ಯಥಾಯಂ ಪ್ರಿಯತಮ ಆತ್ಮಾನಂ

ಪ್ರಾಪ್ನೋತಿ ತಥಾ ಸ್ವಯಮೇವ ಭಗವಾನ್ ಪ್ರಯತತ ಇತಿ ಭಗವತೈವೋಕ್ತಮ್-'ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ । ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ" ಇತಿ । ......... ಅತಃ ಸಾಕ್ಷಾತ್ಕಾರರೂಪಾ ಸ್ಮೃತಿಃ ಸ್ಮರ್ಯಮಾಣಾತ್ಯರ್ಥ ಪ್ರಿಯತ್ವೇನ ಸ್ವಯಮತ್ಯರ್ಥ ಪ್ರಿಯಾ ಯಸ್ಯ ಸ ಏವ ಪರೇಣಾತ್ಮನಾ ವರಣೀಯೋ ಭವತೀತಿ ತೇನೈವ ಲಭ್ಯತೇ ಪರ ಆತ್ಮೇತ್ಯುಕ್ತಂ ಭವತಿ । ಏವಂ ರೂಪಾ ಧ್ರುವಾನುಸ್ಮೃತಿರೇವ ಭಕ್ತಿಶಬ್ದೇನಾಭಿಧೀಯತೇ॥"

4. ಯೋಗಸೂತ್ರವೃತ್ತಿ ಭೋಜದೇವಕೃತ (1 - 23) : ಪುಟ 8.

"(ಈಶ್ವರೋ ವಕ್ಷ್ಯಮಾಣಲಕ್ಷಣಃ)ತತ್ರ ಪ್ರಣಿಧಾನಂ ಭಕ್ತಿವಿಶೇಷೋ ವಿಶಿಷ್ಟಮುಪಾಸನಂ ಸರ್ವಕ್ರಿಯಾಣಾಂ ತತ್ರಾರ್ಪಣಮ್ । ವಿಷಯಸುಖಾದಿಕಂ ಫಲಮನಿಚ್ಛನ್ ಸರ್ವಾಃ ಕ್ರಿಯಾಸ್ತಸ್ಮಿ ಪರಮಗುರಾವರ್ಪಯತಿ ತತ್ಪ್ರಣಿಧಾನಂ ಸಮಾಧೇಸ್ತತ್ಫಲಲಾಭಸ್ಯ ಚ ಪ್ರಕೃಷ್ಟ ಮುಪಾಯಃ ॥"

5. ಯೋಗಸೂತ್ರಭಾಷ್ಯ, ವ್ಯಾಸಕೃತ (1 - 2 - 3) : ಪುಟ 8.

"ಪ್ರಣಿಧಾನಾದ್ಭಕ್ತಿವಿಶೇಷಾದಾವರ್ಜಿತ ಈಶ್ವರಸ್ತಮನುಗೃಹ್ಣಾತ್ಯಭಿಧ್ಯಾನಮಾತ್ರೇಣ"

6. ಶಾಂಡಿಲ್ಯಭಕ್ತಿಸೂತ್ರ (1 - 1 - 2) : ಪುಟ 8.

"ಸಾ ಪರಾನುರಕ್ತಿರೀಶ್ವರೇ ॥"

7. ಭವಿಷ್ಯತ್ಪುರಾಣ ವಿಷ್ಣುಧರ್ಮ, ಶ್ರೀಭಾಷ್ಯೋದಾಹೃತ (104-23, 24) ಪುಟ 9.

"ಆಬ್ರಹ್ಮಸ್ತಮ್ಬಪರ್ಯನ್ತಾ ಜಗದನ್ತರ್ವ್ಯವಸ್ಥಿತಾಃ ।

ಪ್ರಾಣಿನಃ ಕರ್ಮಜನಿತಸಂಸಾರವಶವರ್ತಿನಃ ॥23॥

